ಸಾಯಿಸುತೆ

# ಬಣ್ಣದ ಚಂಚಕ



894.814 308_3
SAI N91
ಗ್ರಂಥ ಸ್ವಾಮ್ಯ ವಿಭಾಗ

# ಬಣ್ಣದ ಚುಂಬಕ

(ಸಾಮಾಜಿಕ ಕಾದಂಬರಿ)

ಸಾಯಿಸುತೆ

META ENTERED

BANNADA CHUMBAKA—A Social Novel by Smt. Saisuthe, First Edn : Jan. 1991, Published by Karnataka Sahithya Prakashana, Tumkur. All rights reserved by the Authoress. Price Rs. 28/-

894.814 308 3
SAI N91
ಸಾಮಾಜಿಕ ಕಾದಂಬರಿ

ಪ್ರಥಮ ಮುದ್ರಣ : ಜನವರಿ 1991
ಹಕ್ಕುಗಳು : ಲೇಖಕಿಯದು

ಅಧಿಕೃತ ಮಾರಾಟಗಾರರು :

**ಗೀತಾ ಏಜನ್ಸೀಸ್**
ಸಗಟು ಪುಸ್ತಕ ವ್ಯಾಪಾರಿಗಳು
**ಬಳೇಪೇಟೆ ಚೌಕ, ಬೆಂಗಳೂರು-53**
ದೂರವಾಣಿ : 24226

**ಬೆಲೆ : ರೂ. 28-00**

**ಲಕ್ಷ್ಮಿ ಮುದ್ರಣಾಲಯ**
ಚಾಮರಾಜಪೇಟೆ, ಬೆಂಗಳೂರು-18
ದೂರವಾಣಿ : 627645

# ಮುನ್ನುಡಿ

ಆತ್ಮೀಯ ಓದುಗರಲ್ಲಿ

ಬದುಕು ಭಾವನೆಯೊಂದಿಗೆ ರಾಜಿಯಾದಷ್ಟು ವಿಚಾರದೊಂದಿಗೆ ರಾಜಿ ಮಾಡಿಕೊಳ್ಳುವುದಿಲ್ಲ. ವ್ಯಕ್ತಿಗಳಲ್ಲಿನ ಬದಲಾವಣೆ ಮುಖ್ಯವಾಗಿ ಪರಿಸರ, ಬದಲಾಗುವ ಸ್ಥಾನ–ಮಾನಗಳು, ಆಸೆ, ಆಕಾಂಕ್ಷೆಗಳನ್ನು ಅವಲಂಭಿಸಿರುತ್ತದೆ. ಇಂಥ ಆಕರ್ಷಣೆ ಭಾವನೆಗಳ ಜೊತೆ ನಿರಂತರ ಘರ್ಷಣೆಯಿಂದ ಸೋಲನ್ನು ಅನುಭವಿಸುತ್ತದೆ.

ಇಂಥ ಸೂಕ್ಷ್ಮ ಕಥಾವಸ್ತು ಕಾದಂಬರಿಯ ರೂಪದಲ್ಲಿ ನಿಮ್ಮ ಮುಂದಿದೆ ಈ ಕಾದಂಬರಿಗೂ ನಿಮ್ಮ ಪ್ರೀತಿ, ವಿಶ್ವಾಸ ಸಿಕ್ಕುತ್ತದೆಯೆಂದು ನನಗೆ ಭರವಸೆ.

ನನ್ನ ಕಾದಂಬರಿಗಳ ಪ್ರಕಟಣೆಯಲ್ಲಿ ಅಪಾರವಾದ ಶ್ರದ್ಧೆ ವಹಿಸಿರುವ ಕೆ. ರಾಮಚಂದ್ರಯ್ಯನವರಿಗೂ, ಪ್ರಕಾಶಕರಿಗೂ, ಮುದ್ರಕರಾದ ಲಕ್ಷ್ಮಿ ಮುದ್ರಣಾಲಯ ಮಾಲೀಕರಾದ ಶ್ರೀ ಅಶೋಕ್ ಕುಮಾರ್ ಮತ್ತು ಮುಖ ಚಿತ್ರದ ಕಲಾವಿದರಿಗೂ ಕೃತಜ್ಞತೆಗಳು.

ತಾ॥ 10–12–90
ಸಾಯಿಸದನ, ವಿದ್ಯಾನಗರ
ತುಮಕೂರು–3

**ಸಾಯಿಸುತೆ**

DEPARTMENT OF PUB... STATE CENTRAL LIBRARY COPY RIGHT BUREAU

# ಸಾಯಿಸುತೆಯವರ ಕಾದಂಬರಿಗಳು

| | | |
|---|---|---|
| ಬಣ್ಣದ ಚುಂಬಕ | ಕರಗಿದ ಕಾರ್ಮೋಡ | ನಲಿದ ಸಿಂಧೂರ |
| ಸುಪ್ರಭಾತದ ಹೊಂಗನಸು | ಧವಳ ನಕ್ಷತ್ರ | ನಿಶೆಯಿಂದ ಉಷೆಗೆ |
| ನಿಶಾಂತ್ | ನಮ್ರತಾ | ಸುಮಧುರ ಭಾರತಿ |
| ಶ್ರಾವಣ ಪೂರ್ಣಿಮಾ | ಶುಭಮಿಲನ | ಸ್ವರ್ಣಮಂದಿರ |
| ಅಪೂರ್ವ ಮೈತ್ರಿ | ಮಧುರ ಗಾನ | ಮಂದಾರ ಕುಸುಮ |
| ಸುಮಧುರ ಸಂಗಮ | ಸಪ್ತಪದಿ | ಪ್ರೇಮ ಸಾಫಲ್ಯ |
| ರಾಗ ಬೃಂದಾವನ | ನಾಟ್ಯಸುಧಾ | ಸೊಬಗಿನ ಪ್ರಿಯದರ್ಶಿನಿ |
| ನವಚೈತ್ರ | ವಸುಂಧರ | ಬರಿದ ನೈದಿಲೆ |
| ವಸಂತದ ಚಿಗುರು | ಗಂಧರ್ವಗಿರಿ | ಮಮತೆಯ ಸಂಕೋಲೆ |
| ಬಾಂದಳದ ನಕ್ಷತ್ರ | ಬಿಳಿ ಮೋಡಗಳು | ಅಮೃತ ಸಿಂಧು |
| ಮಿಂಚು | ಮಾನಸ ವೀಣಾ | ಆರಾಧಿತೆ |
| ಭಾವ ಸರೋವರ | ಚೈತ್ರದ ಕೋಗಿಲೆ | ಮುಗಿಲ ತಾರೆ |
| ಬಾನು ಮಿನುಗಿತು | ಸ್ವಪ್ನ ಸಂಭ್ರಮ | ಬೆಳ್ಳಿ ದೋಣಿ |
| ಬೆಳದಿಂಗಳ ಚೆಲುವೆ | ಮಿಡಿದ ಶೃತಿ | ಕಲ್ಯಾಣ ರೇಖೆ |
| ಪಸರಿಸಿದ ಶ್ರೀಗಂಧ | ಚಿರ ಬಾಂಧವ್ಯ | ಶ್ರೀರಸ್ತು ಶುಭಮಸ್ತು |
| ಕಾರ್ತೀಕದ ಸಂಜೆ | ಮೂಡಿ ಬಂದ ಶಶಿ | ಆಶಾ ಸೌರಭ |
| ಮೇಘವರ್ಷಿಣಿ | ಅಭಿಲಾಷ | ಮಂಜಿನಲ್ಲಿ ಮಿಂದ ಪುಷ್ಪ |
| ಹೊಂಬೆಳಕು | ಸ್ನೇಹ ಮಾಧುರಿ | ಮುಂಜಾನೆಯ ಮುಂಬೆಳಕು |
| ವಿವಾಹ ಬಂಧನ | ಶರದೃತುವಿನ ಚಂದ್ರ | ಸಮ್ಮಿಲನ |
| ಬಾಡದ ಹೂ | ಮಂಗಳ ದೀಪ | ಪ್ರೀತಿಯ ಹೂಬನ |
| ವಿಧಿವಂಚಿತೆ | ಶ್ವೇತ ಗುಲಾಬಿ | ಇಬ್ಬನಿ ಕರಗಿತು |
| ಹೃದಯರಾಗ | ಜೀವನ ಸಂಧ್ಯ | ಗಿರಿಧರ |
| ಡಾ॥ ವಸುಧಾ | ರಜತಾದ್ರಿಯ ಕನಸು | |

ಮುಂದಿನ ಕಾದಂಬರಿ : **'ರಾಧ ಮೋಹನಾ'**

# ಬಣ್ಣದ ಚುಂಬಕ

ನಿವೇದಿತಾ ಮನೆ ಬಿಟ್ಟಾಗ ಎಂಟು ಗಂಟೆ. ದಿನ ನಡೆದು ಹೋಗುತ್ತಿದ್ದರೂ ಇಂದು ಆಟೋ ಹತ್ತಿದ ಮೇಲೆ ಯೋಚಿಸಿದಳು. ಇಂಥ ದುಂದು ಸಾಧ್ಯವೇ ? ಎಲ್ಲಾದರೂ ಮಾತಾಡಲು ಹೋದಾಗ ಪ್ರಸನ್ನ ಮೌನವಹಿಸುತ್ತಿದ್ದ. ತನ್ನ ಸಂಸಾರದ ಆರ್ಥಿಕ, ಸಾಮಾಜಿಕ ಬೆಳವಣಿಗೆಯ ಬಗ್ಗೆ ಅವನಿಗೆ ಆಸಕ್ತಿ ಇಲ್ಲವೇ ?

ಆಟೋದವನಿಗೆ ಮೂರೂಇಪ್ಪತ್ತು ಪೈಸೆ ಕೊಟ್ಟಾಗ ಅವಳ ಎದೆ ಹಾರಿತು. ಇಷ್ಟು ಹಾದಿಯನ್ನು ಹಲವು ವರ್ಷಗಳಿಂದ ನಡದೇ ಕ್ರಮಿಸುತ್ತಿದ್ದಳು.

ಅಲೋಕ್‌ನ ತುಂಬು ಬಸುರಿಯಲ್ಲಿ ಪ್ರಸನ್ನ ರೇಗಿದ್ದ. "ಬೇಕಾದ್ರೆ.... ನಾನು ಉಪವಾಸ ಮಾಡ್ತೀನಿ. ಈ ಎಂಎಸ್‌ಸಿಗೆ ಗೋಲಿ ಹೊಡಿ, ನಿಂಗಿಂತ ನಂಗೆ ಮಾಸ್ಟರ್ ಡಿಗ್ರಿ ಮುಖ್ಯವಲ್ಲ" ಕಾಲೇಜಿಗೆ ಹೋಗುವುದನ್ನು ನಿಲ್ಲಿಸಿದ್ದ ಕೂಡ.

"ಪ್ಲೀಸ್ ಬೇಡ, ಇದಿಷ್ಟು ಬದ್ಕಿನಿಂದ ನಾವು ಸಂತೃಪ್ತಿಗೊಳ್ಳೊದ್ಬೇಡ. ನಿಮ್ಮ ಆಸೆ ಖಂಡಿತ ಪೂರೈಸ್ಬೇಕು. ಈ ಕಷ್ಟವೆಲ್ಲ ಸ್ವಲ್ಪ ದಿನ ಮಾತ್ರ" ಸಮಾಧಾನಿಸಲು ಹೆಣಗಾಡಿದ್ದಳು.

ಚಿಲ್ಲರೆಯನ್ನು ಪರ್ಸ್‌ಗೆ ಹಾಕಿದಳು.

ಶಾಲೆಯ ಆವರಣದೊಳಕ್ಕೆ ಪ್ರವೇಶಿಸುತ್ತಿದ್ದಂತೆ ಚೈತ್ರ ಹೇಳಿದಳು "ನಿಂಗೋಸ್ಕರ ಸೋಮೇಶ್ವರ್ ಅನ್ನೋರು ಬಂದು ಐದು ನಿಮಿಷ ಕಾದು ಹೋದರು. ಫೋನ್ ಮಾಡ್ತೀನೀಂತ ತಿಳಿಸಿದ್ರು. ಅವ್ರು ನಿಮ್ಮ ಬಂಧುಗಳ ?" ನಿವೇದಿತಾ ತಲೆಯಾಡಿಸಿದಳು. ಮದುವೆಯಾದ ಮೇಲೆ ಅವಳ, ಪ್ರಸನ್ನನ ಸಂಬಂಧಿಕರಾರು ಅವರ ಬದುಕಿನಲ್ಲಿ ಹೆಜ್ಜೆ ಇಟ್ಟಿರಲಿಲ್ಲ.

ಆದರೆ ಲಂಚ್ ಬ್ರೇಕ್ ಮೊದಲೇ ಅವಳಿಗೆ ಫೋನ್ ಬಂದಿರುವ ವಿಷಯ ಜವಾನ ಬಂದು ತಿಳಿಸಿದ. ಅವಳ ಮನ ಹಕ್ಕಿ ಆಯಿತು. ಎಷ್ಟೋ ದಿನಗಳ ನಂತರ ಪ್ರಸನ್ನನ ಫೋನ್. ದಾಪುಗಾಲಲ್ಲಿ ತಲುಪಿ ಫೋನ್ ಎತ್ತಿದಳು.

"ಹಲೊ........" ಎಂದಳು.

ಪ್ರಸನ್ನನ ಸ್ವರವಲ್ಲ "ನಾನು ಸೋಮೇಶ್ವರ್ ಅಂತ ತೇಜಾ ಕಾಲೇಜಿನ ರಿಟೈರ್ಡ್ ಪ್ರಿನ್ಸಿಪಾಲ್. ಸ್ವಲ್ಪ ಮಾತಾಡ್ಬೇಕಿತ್ತಲ್ಲ" ಎಂದರು. ಅವಳು ಅಂಥ ಹೆಸರಿನ ವ್ಯಕ್ತಿಯ ವಿಷಯವನ್ನೇ ಕೇಳಿರಲಿಲ್ಲ. ಯಾರು ಈ ಸೋಮೇಶ್ವರ್ ?

"ಭಾನುವಾರ ಬನ್ನಿ, ರಜಾ ಇರುತ್ತೆ" ಹೇಳಿದಳು.

"ತುಂಬ ಮುಖ್ಯವಾದ ವಿಷಯ. ಭಾನುವಾರ ಬೇಡ ನಾಳೆ ಒಂದು ದಿನ ರಜ ಹಾಕೋಕೆ ಸಾಧ್ಯನಾ ?" ಕೇಳಿದರು. ಅವರ ಸ್ವರದಿಂದಲೇ ಅವರೊಬ್ಬ ಗೌರವಾನ್ವಿತ ವ್ಯಕ್ತಿಯೆಂದು ತಿಳಿದಳು "ನಾಳೆ ಮನೆಯಲ್ಲೇ ಇರ್ತೀನಿ. ಬನ್ನಿ, ಸರ್" ರಿಸೀವರ್ ಇಟ್ಟಳು. ಒಂದು ರೀತಿಯ ಕುತೂಹಲ. ಈ ಸೋಮೇಶ್ವರ್ ಯಾರು ? ಅವರಿಗೆ ತನ್ನ ಬಳಿ ಮಾತಾಡುವಂಥ ವಿಷಯವೇನು ? ತಲೆ ಕೆಡಿಸಿಕೊಳ್ಳದೆ ನಾಳೆಯವರೆಗೂ ಕಾಯಲು ನಿಶ್ಚಯಿಸಿದಳು.

ಸಂಜೆ ಎದುರಾದ ಚೈತ್ರ ಹಾಸ್ಯ ಮಾಡಿದಳು "ಲೆಕ್ಚರರ್ ಸಾಹೇಬ್ರರದ ಫೋನ್ ?" ಅವಳಿಗೆ ಒಂದು ತರಹ ಆಯಿತು "ಅಲ್ಲ, ನಮ್ಮ ರಿಲೆಟೀವದು ಫೋನ್. ಒಂದೇ ಮನೆಯಲ್ಲಿರೋ ನಮ್ಗೆ ಫೋನ್‌ನಲ್ಲಿ ಮಾತಾಡಿಕೊಳ್ಳುವಂಥ ಅರ್ಜೆಂಟ್ ಏನಿರುತ್ತೆ ?"

ಅವಳು ಸುಮ್ಮನಾಗಲಿಲ್ಲ "ವರ್ಷಗಳ ಹಿಂದೆ ಕೂಡ ಒಂದೇ ಮನೆಯಲ್ಲಿದ್ರಿ. ಆಗ........ "ಘೊಳ್ಳನೆ ನಕ್ಕಳು. ಕಾಸಿಗೆ ಪರದಾಡುವ ದಿನಗಳಲ್ಲಿ" ಕೂಡ ಪ್ರಸನ್ನ ಒಮ್ಮೆಯಾದರೂ ಹತ್ತರಿಂದ ಐದರ ಒಳಗೆ ಫೋನ್ ಮಾಡಿ ಸಮಾಧಾನ ಪಟ್ಟುಕೊಳ್ಳುತ್ತಿದ್ದ.

ಎಷ್ಟೋ ದಿನ ಇವಳೇ ತಿಳಿ ಹೇಳುತ್ತಿದ್ದಳು "ಅದೇನು ಹೇಳ್ಬೇಕೋ ಅದನ್ನೆಲ್ಲ ಮನೆಯಲ್ಲೇ ಹೇಳ್ಬಿಡಿ. ಫೋನ್ ಮಾಡಿ ಎರ್ಡು ರೂಪಾಯಿ ಯಾಕೆ ವೇಸ್ಟ್ ಮಾಡ್ತೀರಾ? ಅದು ನಿಮ್ಗೆ ಯಾತಕ್ಕಾದ್ರೂ....ಆಗುತ್ತೆ" ಪ್ರಸನ್ನ ಅವಳನ್ನು ತನ್ನೆದೆಯಲ್ಲಿ ಅವಚಿಕೊಂಡು "ಯೂನಿವರ್ಸಿಟಿ ಬಿಲ್ಡಿಂಗ್‌ವರ್ಗೆ ನಡೆಯಬಲ್ಲೆ. ಆದರೆ....ಫೋನ್ ಮೇಲೆ ಮಾತ್ರ ನಿರ್ಬಂಧವೇರ ಬೇಡ" ವಿನಂತಿಸಿಕೊಂಡಿದ್ದ.

ಸಂಜೆ ಅವಳು ಮನೆಗೆ ಬಂದಾಗ ಅವಳ ತಲೆಯಲ್ಲಿ ಸೋಮೇಶ್ವರ್ ತುಂಬಿಕೊಂಡಿದ್ದರು. ಮೊದಲೇ ಬಂದಿದ್ದ ಪ್ರಸನ್ನ ಒಂದು ಕಡೆ ಕೂತು ನಿರ್ಲಿಪ್ತವಾಗಿ ಪೇಪರ್ ನೋಡುತ್ತಿದ್ದ. ಬಿಗಿದ ಅವನ ತುಟಿಗಳ ಮೇಲೆ ಕಿರು ನಗು ಕಂಡು ಬಹಳ ದಿನಗಳಾಗಿತ್ತು.

"ಎಷ್ಟೊತ್ತು ಆಯ್ತು, ಬಂದು ?" ಕೇಳಿದಳು.

ಪ್ರಶ್ನೆಗೆ ಉತ್ತರವೇ ಇಲ್ಲ. ಇಂಥದ್ದು ಈಚೆಗೆ ಹೊಸದಲ್ಲ. ಒಂದು ರೀತಿಯ ರಾಜೀ ಸೂತ್ರ ಅವಳದು.

ಪಾಕೆಟ್ ಹಾಲನ್ನು ಕೂಡ ಕಾಯಲು ಇಟ್ಟಿರಲಿಲ್ಲ. ಮೂರು ವರ್ಷದ ಹಿಂದೆ ಮುಸುರೆ ಪಾತ್ರೆಗಳನ್ನು ತಿಕ್ಕಿ ಕಾಫೀ ತಂದು ಕೊಟ್ಟು ಅವಳ ಮುಖದ ಬೆವರು ತೊಡೆಯುತ್ತಿದ್ದ. ಈಗ ಏನಾಗಿದೆ ? ಅದನ್ನೆಲ್ಲ ಅವಳೆಂದು ಬಯಸಿರಲಿಲ್ಲ, ಇಂದು ಕೂಡ ಅವಳು ನಿರೀಕ್ಷಿಸಿಲ್ಲ.

ಕಾಫಿಯ ಲೋಟ ಒಯ್ದು ಅವನ ಮುಂದಿಟ್ಟಳು.

"ತಗೊಳ್ಳಿ...." ಅಲ್ಲೇ ಕೂತಳು. ಇವಳತ್ತ ನೋಟ ಕೂಡ ಹರಿಸಲಿಲ್ಲ.

"ಪ್ಲೀಸ್, ನಿಮ್ಗೇನಾಗಿದೆ ತಿಳಿಸಿ ? ಅಂಥ ಪ್ರಾಬ್ಲಮ್ ಏನಾದ್ರೂ ಇದ್ಯಾ ? ಕಷ್ಟ, ಸುಖ ಹಂಚಿಕೊಳ್ಳಲು ತಾನೆ ಮದುವೆಯ ಸಾಂಗತ್ಯ" ಅವನ ಕೈ ಹಿಡಿದುಕೊಂಡಳು. ಕಾಫಿ ಕಪ್‌ನತ್ತ ಕೂಡ ನೋಡದೆ ಎದ್ದು ಹೋದ.

ಅವಳ ಪ್ರೀತಿ, ಪ್ರೇಮ, ಸಂಗಾತಿಯ ಪಟ್ಟಕ್ಕೆ ಅವಮಾನ. ಮಗು ಅಲೋಕ್‌ನ ಜೊತೆಗೆ ಬಿಗಿಯಾಗಿ ವರ್ತಿಸಿ ಅವಳ ತಾಯ್ತನವನ್ನು ಕೂಡ ನೋಯಿಸಿದ್ದ.

ನಿವೇದಿತಾಗೆ ದಿಗ್ಭ್ರಾಂತಿ. ಪ್ರಸನ್ನ ತುಂಬ ರೋಮಾಂಟಿಕ್ ಎಂದು ಅವಳಿಗೆ ಗೊತ್ತು. ಮನೆಗೆ ಬಂದರೆ ಹಿಂದೆ ಹಿಂದೆಯೇ ಓಡಾಡುತ್ತಿದ್ದ. ಅಲೋಕ್‌ನ ಕಂಡರೆ ಅವನಿಗೆ ಪಂಚಪ್ರಾಣ. ಅವೆಲ್ಲ ಏನಾಯಿತು ?

ತಲೆಯಲ್ಲಿ ಸೋಮೇಶ್ವರ್ ಇದ್ದುದರಿಂದ ಈ ವಿಷಯಕ್ಕೆ ವಿರಾಮ ಸಿಕ್ಕಿತು. ಅಲೋಕ್‌ನ ಕಾನ್ವೆಂಟ್ ಬಸ್ಸಿಗೆ ಹತ್ತಿಸಿ, ಪ್ರಸನ್ನ ಹೊರಟಾಗ ಹೊರಗೆ ಬಂದು ನಿಂತಳು. ವಿಚಾರಿಸುವುದಿರಲಿ ಅವಳತ್ತ ನೋಡಲು ಕೂಡ ಇಲ್ಲ.

ಸ್ಕೂಟರ್ ಹೋದ ದಿಕ್ಕನ್ನೆ ನೋಡಿ ನಿಟ್ಟುಸಿರು ಚೆಲ್ಲಿದಳು. ಪ್ರಸನ್ನ ಸಂಪೂರ್ಣವಾಗಿ ಬದಲಾಗಿದ್ದ. ಅವನಿಗೆ ಸಂಸಾರದ ಜೀವನದಲ್ಲಿ ಯಾವುದೇ ಆಸಕ್ತಿ ಇಲ್ಲ.

ಒಳಗೆ ಬಂದು ಒಂದು ಕಡೆ ಕೂತು ಬಿಟ್ಟಳು.

ತೆರೆದ ಬಾಗಿಲಿನ ಮುಂದೆ ನೆರಳಾಡಿದಾಗ ಅವಳ ನೋಟ ಅತ್ತ ಹೊರಳಿತು. ಅರವತ್ತರ ವಯಸ್ಸಿನ ವ್ಯಕ್ತಿ, ತಲೆಯಲ್ಲಿ ಸ್ವಲ್ಪ ಎಣಿಸುವಷ್ಟು ಬಿಳಿ ಕೂದಲು. ಧರಿಸಿದ್ದ ಉಡುಪುಗಳಿಂದಲೇ ಶ್ರೀಮಂತರೆಂದು ಗುರ್ತಿಸಿದಳು.

"ನಾನೇ....ಸೋಮೇಶ್ವರ್...." ಪರಿಚಯದೊಂದಿಗೆ ಕೈಗಳನ್ನು ಜೋಡಿಸಿದರು.

ಬನ್ನಿ...." ಗೌರವದಿಂದ ಆಹ್ವಾನಿಸಿದಳು.

ಒಳಗೆ ಬಂದ ಸೋಮೇಶ್ವರ್ ಟಿ.ವಿ. ಮೇಲಿದ್ದ ಜೋಡಿ ಫ್ರೇಮ್‌ನಲ್ಲಿನ ಫೋಟೋಗಳನ್ನು ನೋಡಿ ವಿಚಲಿತರಾದರು. ಬೆವರಿನ ಹನಿಗಳು ಹಣೆಯ ಮೇಲೆ ಸಾಲುಗಟ್ಟಿದವು.

"ನಮ್ಮ ಮನೆಯವ್ರು....ಗೊತ್ತಾ ?" ಕೇಳಿದಳು.

"ಗೊತ್ತು....ಗೊತ್ತು...." ಕರ್ಚೀಫ್‌ನಿಂದ ಮುಖದ ಬೆವರನ್ನು ತೊಡೆದುಕೊಂಡರು. "ಒಂದ್ಲೋಟ ನೀರು ಕೊಡಮ್ಮ" ಅವರಿಗೆ ಸುಧಾರಿಸಿಕೊಳ್ಳುವ ಅಗತ್ಯವಿತ್ತು.

ನಿವೇದಿತಾನ ನೋಡಿದ ಮೇಲೆ ಅವರ ಊಹೆ ಸುಳ್ಳಾಗಿತ್ತು. ಒಂದು ರೀತಿಯ ಷಾಕ್. ಇಷ್ಟು ಸರಳವಾಗಿ ಕಾಣುವ ಮುದ್ದಾದ ಹುಡುಗಿಯಲ್ಲಿ ಪ್ರಸನ್ನ ಏನು ಲೋಪ ಕಂಡ ? ಬಿಡಿಸಲಾರದ ಪ್ರಶ್ನೆ.

ನೀರು ಕುಡಿದಿಟ್ಟ ಮೇಲೆ ಏನೋ ಮುಖ್ಯವಾದ ವಿಷಯವೇ ಇರಬೇಕೆಂದು ಕಾಫಿ ತರಲು ಹೋದಳು. ಸೋಮೇಶ್ವರ್‌ನ ಅವಳೆಂದು ನೋಡಿರಲಿಲ್ಲ,

ಕಾಫಿ ಕುಡಿದಿಟ್ಟ ಮೇಲೆಯೇ ಅವರು ಹೇಳಿದ್ದು "ನಾನು ನೀಲಿಮಾ ತಂದೆ." ಅವಳೆದೆಯಲ್ಲಿ ಅಪಸ್ವರದ ನಾದ ಕೇಳಿಸಿದರೂ ತುಟಿಗಳ ಮೇಲೆ ನಗುವನ್ನು ತಂದುಕೊಂಡಳು.

"ತುಂಬ ಸಂತೋಷ. ಅವ್ರು ಜೊತೆಯಲ್ಲಿ ನೀಲಿಮಾ ಒಂದ್ಸಲ.... ಬಂದಿದ್ರು. ಮಾತು ತುಂಬ ಕಡ್ಮೆ" ಸಹಜ ಸ್ವರದಲ್ಲಿ ನುಡಿಯಲು ಸಮರ್ಥಳಾದಳು.

ಕಳವಳವಿಲ್ಲದ ಅವಳ ಮುಖವನ್ನ ದಿಟ್ಟಿಸಿದರು.

"ಅವರಿಬ್ರು ಜೊತೆ ಜೊತೆಯಲ್ಲಿ ಓಡಾಡ್ತ ಇದ್ದಾರೆ. ತೀರಾ ಹರೆಯದವರಂತೆ ಪಾರ್ಕ್, ಸಿನಿಮಾ ಸುತ್ತದಿದ್ದರೂ, ಲೈಬ್ರರಿ, ಹೋಟಲ್‌ಗಳಲ್ಲಿ ಸಮಯ ವ್ಯಯಿಸುತ್ತಾರೆ. ನೀಲಿಮಾ ಮದ್ವೆಯಾಗದ ಹೆಣ್ಣು. ಈ ಒಡನಾಟಕ್ಕೆ ಅರ್ಥವೇನು ?" ಅವಳನ್ನ ಕೇಳಿದರು.

ಮೊದಲು ಅವಳ ಮುಖದಲ್ಲಿ ಆತಂಕ ಮಿನುಗಿದರೂ ಬಿಳಿಯ ಮೋಡದಂತೆ ಕರಗಿ ಹೋಯಿತು.

"ಸ್ನೇಹ ಅನ್ನಬಹುದು ; ಒಂದು ರೀತಿಯ ಬೌದ್ಧಿಕ ಸಾಮರಸ್ಯ, ನೋಡುವವರ ಕಣ್ಣುಗಳಲ್ಲಿ ನೂರು ರಂಗುಗಳು ತುಂಬಿಕೊಳ್ಳಬಹುದು. ಗಂಡಸಿಗೆ ಸಮಾನವಾಗಿ ಎಲ್ಲಾ ಕ್ಷೇತ್ರದಲ್ಲಿ ದುಡಿಯುವ ಹೆಣ್ಣನ್ನು ಸಹಜವಾಗಿ ಕಾಣದೆ ಅವರ ಚರಿತ್ರೆಯನ್ನು ಕುರೂಪಗೊಳಿಸುತ್ತಾರೆ."

ಸೋಮೇಶ್ವರ್ ಅವಳ ಒಳ್ಳೆಯ ಮನಸ್ಸಿಗೆ ನೊಂದರು.

"ಅದು ಸುಂದರ ಚಿತ್ರವಾಗಿದ್ದರೆ ನಾನು ಸಂತೋಷಗೊಳ್ಳುತ್ತಿದ್ದೆ. ಅವರೇ ಸುಂದರವಾಗಬಹುದಾದ ಬದುಕನ್ನು ಕುರೂಪಗೊಳಿಸಿದ್ದಾರೆ. ಅವರಿಬ್ರು ಮದ್ವೆ ಆಗ್ತಾ ಇದ್ದಾರೆ."

ಅವಳಿಗೇನೂ ಅರ್ಥವಾಗಲಿಲ್ಲ. ಸುತ್ತಲಿನ ವಸ್ತುಗಳೆಲ್ಲ ತಿರುಗುವಂತೆ ಭಾಸವಾಯಿತು. ಬಾಯಿ ಒಣಗಿತು. ಎದೆಯ ಬಡಿತ ಒಮ್ಮೆಲೆ ಏರಿತು.

"ಪ್ಲೀಸ್, ಅದನ್ನ ಇನ್ನೊಂದ್ಸಲ ಹೇಳಿ.ನಂಗ್ಯಾಕೋ ಕನ್‌ಫ್ಯೂಷನ್." ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡಳು. "ಅಮರ ಪ್ರೇಮಕ್ಕಿಂತ ನಮ್ಮ ಪ್ರೇಮ ಕಡಿಮೆ ಇರ್ಲಿಲ್ಲ. ಪ್ರಸನ್ನ ನನಗೋಸ್ಕರ ಅರಬ್ಬಿ ಸಮುದ್ರಕ್ಕೆ ಧುಮುಕೋಕೆ ಕೂಡ ಹಿಂಜರಿಯುತ್ತಿರಲಿಲ್ಲ. ಪ್ರೇಮದ ತೀವ್ರತೆ ಅಷ್ಟಿತ್ತು."

ಒಂದು ಪತ್ರ ಬಿಡಿಸಿ ಸಹಿಯ ಕಡೆ ಅವರ ಗಮನ ಸೆಳೆದಳು. "ಇದು

ಅವ್ರ ಕೈಯ ಬೆರಳನ್ನ ಬ್ಲೇಡಿನಿಂದ ಕುಯ್ದು, ಅದೇ ರಕ್ತದಲ್ಲಿ ಸಹಿ ಮಾಡಿ ಕಳಿಸಿದ ಪತ್ರ. ಅಮೂಲ್ಯವಾದ ಪ್ರೇಮ ಪತ್ರ."

ಸೋಮೇಶ್ವರ್ ಅಲ್ಲಾಡದೆ ಕಲ್ಲಿನಂತೆ ಕೂತಿದ್ದರು. ತೀವ್ರ ಪ್ರೇಮದ ನಂತರ ಆದ ವಿವಾಹ. ಅಸಹಾಯಕತೆಯ ನೋಟ ಬೀರಿದರು ಅವಳೆಡೆಗೆ.

"ಓದಿದ ಪ್ರಬುದ್ಧಳಾದ, ದುಡಿಯುವ ಹೆಣ್ಣು ತಾಯ್ತಂದೆಯರ ಮಾತು ಕೇಳೋಲ್ಲ. ನೀಲಿಮಾ ಕೂಡ ಒಪ್ಪಿದ್ದಾಳೆ. ನಮ್ಗೆ ಮಾತ್ರ ಸಮ್ಮತವಿಲ್ಲ. ಪ್ರಸನ್ನ ಅವರೊಂದಿಗೆ ಮಾತಾಡಿ ಒಲಿಸಿಕೊಳ್ಳುವ ಪ್ರಯತ್ನ ಮಾಡು. ನಿನಗೆ ತಿಳಿಸಿದಷ್ಟೇ ನಾನು ಮಾಡಿದ್ದು" ಮೇಲೆದ್ದರು.

ಬಾಗಿಲವರೆಗೂ ಹೋಗಿ ಬೀಳ್ಕೊಟ್ಟು ಬಂದಳು. ಭಯಂಕರ ಹೋರಾಟ. ಅದನ್ನ ಅನುಭವಿಸಿದ ಹೆಣ್ಣು ಮಾತ್ರ ಬಲ್ಲಳು ಅದರ ತೀವ್ರತೆಯನ್ನ.

ಊಟದ ಯೋಚನೆ ಕೂಡ ಬರಲಿಲ್ಲ ಅವಳಿಗೆ. ಪತ್ರದ ಕಟ್ಟನ್ನು ಬಿಡಿಸಿದಳು. ಹೃದಯದ ಮಾತುಗಳು, ಭಾವ ತೀವ್ರತೆಯ ವಾಕ್ಯಗಳು. 'ನೀನು ಧೈರ್ಯವಾಗಿ ಹೊರಟು ಬರದಿದ್ದರೇ ಆತ್ಮಹತ್ಯೆ ಮಾಡಿಕೋತೀನಿ' ಪತ್ರದ ಮೇಲೆ ಕಣ್ಣಂಚಿನ ಬಿಂದುಗಳು ಜಾರಿ ಪ್ರೇಮಕ್ಕೆ ಅಶ್ರುತರ್ಪಣ ನೀಡಿತು.

"ಅವ್ನ ಜೊತೆ ನಿಂಗೆ ಸ್ನೇಹ ಬೇಡ. ಹದಿನೆಂಟು ತುಂಬದ ನಿಂಗೆ ಮದ್ವೆಯಾಗುವ ವಯಸ್ಸಾ ?" ತಂದೆ ವಿಷಯ ತಿಳಿದಾಗ ಚಾವಣಿ ಹಾರುವಂತೆ ಕೂಗಾಡಿದ್ದರು.

"ಬೇಡ ಕಣೆ, ನಿನಗೂ ಒಬ್ಬ ಅಕ್ಕ, ಒಬ್ಳು ತಂಗಿ ಇದ್ದಾಳೆ. ನಾಳೆ ಅವ್ರ ಬದ್ಕು ನರಕವಾಗುತ್ತೆ" ತಾಯಿಯ ಕಣ್ಣೀರು.

ಅವೆರಡನ್ನು ದಾಟಿ ಬರುವಂಥ ವೇಗವಿತ್ತು ಪ್ರೇಮಕ್ಕೆ. ಇಡೀ ಜಗತ್ತು ಬರೀ ಪ್ರೇಮಮಯವಾಗಿತ್ತು. ಊಟ, ತಿಂಡಿ, ನಿದ್ದೆ ಕೂಡ ಬೇಡವಾಗಿತ್ತು. 'ವ್ಹಾ....ಅದರ ಅಮಲೆ....ಅಮಲು'. ಗಂಟೆಗಟ್ಟಲೆ ನೋಡುತ್ತ ಕೂತಿರುತ್ತಿದ್ದರು. ಸುಳ್ಳು, ಕಷ್ಟಗಳನ್ನು ಎದುರಿಸಿಯೇ ಸಂಧಿಸುತ್ತಿದ್ದರು. ಅವೆಂಥ ಕ್ಷಣಗಳು. ಗಂಟೆಗಟ್ಟಲೇ ನೋಡುತ್ತ ಕೂಡುತ್ತಿದ್ದ

ಮುಖವನ್ನು ಈಗ ಐದು ನಿಮಿಷ ನೋಡಲು ಕೂಡ ಪುರಸತ್ತಿಲ್ಲ—ಅವಳ ಕಣ್ಣಂಚಿನ ಕಂಬನಿ ಪತ್ರಗಳ ಮೇಲೆ ಬಿತ್ತು. ಎತ್ತಿರಿಸಿ ಬಂದಳು.

ನಿಮಿಷಗಳು ಕಳೆಯುವುದು ಕೂಡ ಚಿತ್ರ ಹಿಂಸೆಯೆನಿಸಿತು. ಅಂದು ಪ್ರೇಮದ ಅಮಲಿನಲ್ಲಿ ಪ್ರಸನ್ನ ಕವಿಯಾಗಿದ್ದ, ಸಾಹಿತಿಯಾಗಿದ್ದ.

ಅಲೋಕ್ ಬಂದಾಗ ಐದು ಐವತ್ತು ಆಗಿತ್ತು. ಪ್ರಸನ್ನ ಬರುವ ವೇಳೆ ನಿಗದಿತವಿಲ್ಲ. ಹಿಂದೆ ಕೇಳಿದಾಗ ಕೆಲಸ ಇತ್ತು, ಮೀಟಿಂಗ್ ಇತ್ತು ಇಂಥಹ ಉತ್ತರಗಳೆ.

ಒಮ್ಮೆ ರೇಗಿದ್ದ "ನನ್ನ ಫ್ಯೂಚರ್ ಬಗ್ಗೆ ಯೋಚ್ಸಬೇಕಿದೆ. ಡಾಕ್ಟರೇಟ್, ಸಂಶೋಧನೆ....ಸಾಕಷ್ಟು ಚಿಂತನೆಗಳು ಇವೆ. ನಿಂಗೆ ಇವೆಲ್ಲ ಅರ್ಥವಾಗದು, ಕೆಲ್ಸ ಇದೆ, ಮಗು ಇದೆ....ನಂಗೆ ತೊಂದರೆ ಕೊಡ್ಬೇಡ" ಅಂದು ಬಾಯಿ ಮುಚ್ಚಿಕೊಂಡಿದ್ದಳು. ತೆಳ್ಳನೆಯ ಪರದೆ ಅವರಿಬ್ಬರ ಮಧ್ಯೆ ಹರಡಿದ ಅನುಭವವಾಗಿತ್ತು.

ಬಟ್ಟೆ ಬದಲಾಯಿಸಿ ಅಲೋಕ್‌ಗೆ ಹಾಲು ಕುಡಿಸಿ ಆಡಲು ಕಳಿಸಿದಳು.

ಅಲೋಕನನ್ನು ಮಡಲಿನಲ್ಲಿ ತುಂಬಿಕೊಂಡಾಗ ಗಾಬರಿಯಾಗಿದ್ದಳು. "ನಮ್ಗೆ, ಈಗ ಬೇಡವಾಗಿತ್ತು. ನಿಮ್ಮ ಓದು ಪೂರ್ತಿಯಾಗ್ಬೇಕು. ನನ್ನ ಸಂಬಳದಲ್ಲೀ ಹೇಗಾಗುತ್ತೆ ?"

ಅವಳನ್ನ ಅಪ್ಪಿಕೊಂಡು ಮುಖದ ತುಂಬ ಮುತ್ತಿನ ಮಳೆ ಕರೆದಿದ್ದ "ಇದು ನಮ್ಮ ಪ್ರೇಮದ ಫಲ. ಕೊಡಲಿ ಪೆಟ್ಟು ಹಾಕೋಡ್ಬೇಡ. ನಾನು ನಿನ್ನ ಜೊತೆಯುಲ್ಲಿರುವಾಗ ಭಯವೇಕೆ ?" ಎದೆಯಲ್ಲಿ ಹುದುಗಿಸಿಕೊಂಡಿದ್ದ.

ಆ ದಿನಗಳಲ್ಲಿ ಮಗುವಿನಂತೆ ಜೋಪಾನ ಮಾಡಿದ್ದ, ಅವಳ ಸೀರೆ, ಲಂಗಗಳನ್ನ ಒಗೆದು ಹರವುತ್ತಿದ್ದ. ಹೆಜ್ಜೆ ಎತ್ತಿಟ್ಟರೆ ಎಲ್ಲಿ ಆಯಾಸ ಗೊಳ್ಳುತ್ತಾಳೋ, ಎಂದು ಚಡಪಡಿಸುತ್ತಿದ್ದ. ಆರ್ಥಿಕ ಸಂಕಷ್ಟಗಳ ಸರಮಾಲಿಯಲ್ಲೂ ಅವಳನ್ನ ಓಲೈಸಿದ್ದು ಪ್ರಸನ್ನನ ಪ್ರೀತಿಯೇ.

ಅಲೋಕನ ಓದು, ಊಟ ಮುಗಿದಾಗಲೂ ಪ್ರಸನ್ನ ಬರಲಿಲ್ಲ. ಮನೆಯ ಆಕರ್ಷಣೆಯನ್ನು ಮೀರಿಸುವಂಥ ಪ್ರಬಲವಾದ ಆಕರ್ಷಣೆಯಲ್ಲಿ ಬಿದ್ದಿದ್ದ.

ಹತ್ತರ ವೇಳೆಗೆ ಕಾಲಿಂಗ್ ಬೆಲ್ ಸದ್ದಾಯಿತು. ಪ್ರಸನ್ನ ಅವಳತ್ತ

ನೋಡದೆಯೇ ಸ್ಕೂಟರ್ ಒಳಗೆ ತಳ್ಳಿ ನಡೆದ. ಬದುಕಿನ ಕನಸ್ಸಿನ ಗೋಪುರ ವೆಲ್ಲ ಶಿಥಿಲವಾಗಿತ್ತು—ನಿರಾಶೆಯ ನಿಟ್ಟುಸಿರು ಚೆಲ್ಲಿದಳು.

ಬಟ್ಟೆ ಬದಲಾಯಿಸಿ ರಾತ್ರಿಯುಡುಪು ತೊಟ್ಟ ಪ್ರಸನ್ನ ಮುಂದಿನ ತನ್ನ ಅಧ್ಯಯನ ಕೋಣೆಗೆ ಹೋದಾಗ ಹಿಂಬಾಲಿಸಿದಳು.

"ಊಟ....ಮಾಡ್ಬನ್ನಿ" ಬಾಗಿಲ ಬಳಿಯಲ್ಲಿಯೇ ನಿಂತಳು.

"ನಂದು ಆಯ್ತು. ನನ್ನ ಊಟ, ತಿಂಡಿಗಳ ಬಗ್ಗೆ ಕಾಳಜಿ ಬೇಡ" ನೀರಸವಾಗಿತ್ತು ದನಿ, ತುಟಿ ಕಚ್ಚಿ ಅಳು ನುಂಗಿದಳು "ಬೇರೆಯವ್ರು ಪೂರ್ತಿ ವಹಿಸಿಕೊಳ್ಳೋವರ್ಗ್ಗೂ....ನನ್ನ ಕರ್ತವ್ಯ ನಾನು ಮಾಡ್ಬೇಕು" ಎಂದವಳೇ ಬೆಡ್‌ರೂಮಿಗೆ ಹೋಗಿ ದಿಂಬಿನಲ್ಲಿ ಮುಖ ಹುದುಗಿಸಿ ಬಿಕ್ಕಿದಳು. ಎಲ್ಲಿ ಹೆಚ್ಚು ಸದ್ದಾದರೆ ಆಲೋಕ ಎಚ್ಚರಗೊಂಡಾನೋಂತ....ಬಾಯಿಗೆ ಕೈ ಅಡ್ಡ ಹಿಡಿದಳು.

"ನಿನ್ನ ಕಣ್ಣಲ್ಲಿ ನೀರು ಕಂಡ್ರೆ....ನನ್ನೆದೆ ಒಡೆದು ಹೋಗುತ್ತೆ" ಎಂದ ದಿನಗಳಿತ್ತು, ಇಂದು ಅವಳ ಕಣ್ಣೀರಿಗೆ ಕಾರಣ ಮಾತ್ರವಲ್ಲ ಕಲ್ಲು ಕೂಡ ಆಗಿದ್ದ.

ಮಲಗಲು ಪ್ರಸನ್ನ ಬಂದಾಗ ಇನ್ನು ಅವಳು ಎಚ್ಚರವಾಗಿಯೇ ಇದ್ದಳು. ಸುಖದ ರಾತ್ರಿಗಳಿಗೆ ತಿಲಾಂಜಲಿ ಇತ್ತು ಬಹಳಷ್ಟು ದಿನಗಳೇ ಆಗಿದ್ದವು. ನೀಲಿಮಾ ನೆನಪಾಯಿತು. ಎಂಎಸ್‌ಸಿ ಮಾಡಿದ ವಿದ್ಯಾವಂತೆ. ಸ್ಥಿತಿವಂತೆ. ವಯಸ್ಸಿನಲ್ಲಿ ಅವಳಿಗಿಂತ ಹಿರಿಯಳು.

ಅವನೆದೆಯಲ್ಲಿ ತಲೆ ಇಡಲು ಹಂಬಲಿಸುತ್ತಿದ್ದ ಅವಳು ಇಂದು ಜಿಗುಪ್ಸೆ ಯಿಂದ ಎದ್ದು ಹೋಗಿ ಮಗುವಿನ ಪಕ್ಕ ಮಲಗಿದಳು.

ಇಡೀ ರಾತ್ರಿ ನಿದ್ರಿಸಲಾಗಲಿಲ್ಲ ಅವಳಿಗೆ. ಬೆಳಿಗ್ಗೆ ಎದ್ದು ಬೇಗ ಬೇಗ ಕೆಲಸಗಳನ್ನು ಮುಗಿಸಿ ಆಲೋಕನನ್ನು ರೆಡಿ ಮಾಡಿ ಶಾಲೆಯ ಬಸ್ಸು ನಿಲ್ಲುವ ಕಾರ್ನರ್ ಬಳಿ ಹೋಗಿ ಬಿಟ್ಟು ಬಂದಳು.

ಆ ಕೆಲಸವನ್ನ ಪ್ರಸನ್ನ ಮೊದಲು ಬಹಳ ಅಕ್ಕರೆಯಿಂದ ಮಾಡುತ್ತಿದ್ದ. ಅದನ್ನ ಬಿಟ್ಟು ಬಹಳ ದಿನಗಳಾಗಿತ್ತು. ಮೊದಲು ಒತ್ತಾಯಿಸಿ, ಸಿಡುಕಿ ಸುಮ್ಮನಾಗಿ ತಾನೇ ವಹಿಸಿಕೊಂಡಿದ್ದಳು.

ಮಗುವನ್ನ ಬಹಳ ಅಕ್ಕರೆಯಿಂದ ಎತ್ತಿ ಮುದ್ದಾಡುತ್ತಿದ್ದ ಪ್ರಸನ್ನ

ತಾನಾಗಿ ಅವನನ್ನ ಮಾತಾಡಿಸುತ್ತಿರಲಿಲ್ಲ. ಅವನಾಗಿ ಮಾತಾಡಿಸಿದರೆ ಗದರಿ ಬಿಡುತ್ತಿದ್ದ. ಅದರಿಂದ ಅಲೋಕ ತಂದೆಯ ಬಳಿ ಹೋಗುವ, 'ಪಪ್ಪ, ಪಪ್ಪ....' ಎನ್ನುವ ಜಪವನ್ನ ನಿಲ್ಲಿಸಿದ್ದ.

ಮನೆಗೆ ಬರುವ ವೇಳೆಗೆ ಆಗಲೇ ಉಡುಪು ತೊಟ್ಟು ಪ್ರಸನ್ನ ರೆಡಿ ಯಾಗಿದ್ದ. ವಾರೆಗಣ್ಣಿಂದ ಅವನತ್ತ ನೋಡಿದಳು.

"ಊಟ, ತಿಂಡಿ....ಏನೂ ಬೇಡ್ವಾ ?" ಕೇಳಿದಳು.

"ಸ್ವಲ್ಪ ಬೇಗ....ಹೋಗ್ಬೇಕಾಗಿದೆ" ಎನ್ನುತ್ತ ಷೂ ಕಟ್ಟುತ್ತಿದ್ದವನತ್ತ ನೋಡಿದಳು "ನಾನು ಮನೆ ಬಿಟ್ಟು ಬಂದು ನಿಮ್ಜೊತೆ ಮದ್ವೆ ಮಾಡಿ ಕೊಂಡಾಗ... ನಂಗೆ ಹದಿನೆಂಟು ವರ್ಷ ಎರ್ಡು ತಿಂಗ್ಳು...."ಎಂದಳು.

"ಈಗ ಅದೆಲ್ಲ....ಯಾಕೆ ?" ಟೇಬಲ್ಲು ಮೇಲಿನ ಪುಸ್ತಕ ಕೈಗೆತ್ತಿಕೊಂಡ "ರಾತ್ರಿ ಲೇಟಾಗ್ಬಹ್ದು...." ಎಂದ. ಅವಳಿಗೆ ನಗು ಬಂತು. ಅದೇನು ಈ ದಿನಗಳಲ್ಲಿ ಹೊಸದಾಗಿರಲಿಲ್ಲ.

"ನಂಗೇ ಒಬ್ಬಳಿಗೆ ಭಯವಾಗುತ್ತೆ !" ಅದಕ್ಕೆ ಅವನಲ್ಲಿ ಉತ್ತರವಿಲ್ಲ. ಹಿಂದೆ ಕತ್ತಲಾಗುವ ಮುನ್ನ ಮನೆಗೆ ಹಾರಿ ಬರುತ್ತಿದ್ದ. "ನಿನ್ನ ನೆನಪಾದ್ರೆ.... ನಂಗೆ ಹೊರಗಿನ ಜಗತ್ತೇ ಬೇಡವೆನ್ನಿಸಿಬಿಡುತ್ತೆ" ಕಿವಿಯಲ್ಲಿ ಉಸುರಿದ್ದ ದಿನಗಳು ಈಗ ಬರೀ ನೆನಪಷ್ಟೆ.

"ನಿಮ್ಹತ್ರ ಸ್ವಲ್ಪ ಮಾತಾಡ್ಬೇಕಿತ್ತು. ನೆನ್ನೆ ದಿನ ಸೋಮೇಶ್ವರ್.... ಅಂದರೆ ನೀಲಿಮಾ ತಂದೆ ಬಂದಿದ್ದರು" ಎಂದಳು.

ಅವಳ ಮಾತಿಗೆ ಸ್ವಲ್ಪ ವಿಚಲಿತನಾದಂತೆ ಕಂಡ ಪ್ರಸನ್ನ. ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತೆಂದುಕೊಂಡ.

"ನನ್ನ ಕೆಲ್ಸ ಹಗುರವಾಯ್ತು !" ಉಸಿರು ದಬ್ಬಿದ.

"ನೋ....ನೋ....ನಿಮ್ಮ ಕೆಲ್ಸ ನೀವೇ ಮಾಡ್ಬೇಕು. ನೀಲಿಮಾ ಜೊತೆ ಮದ್ವೆಯಾಗುವ ಸುದ್ದಿ ನಿಜ್ವಾ ? ಯಾಕೇಂದ್ರೆ ಯಾರ ಒತ್ತಾಯಕ್ಕು ಮಣಿದು ಮದ್ವೆಯಾದವರಲ್ಲ ನಾವು. ಪ್ರೇಮಿಸಿ, ಕಡೆಗೆ ಸತ್ತು ತಮ್ಮ ಪ್ರೇಮ ವನ್ನು ಅಮರ ಮಾಡುವ ಸ್ಥಿತಿಯಲ್ಲಿದ್ದ ಜೋಡಿ. ನನಗೋಸ್ಕರ ಇಡೀ ಜಗತ್ತನ್ನೆ ಬಿಡಲು ಸಿದ್ಧವಿದ್ದ ನೀವು ಯಾರೋ ಒಬ್ಬ ನೀಲಿಮಾಗೋಸ್ಕರ ನನ್ನನ್ನ ಬಿಡ್ತೀರಾಂದ್ರೆ....ಹೇಗೆ ನಂಬಲೀ ?" ಎಷ್ಟೇ ಪ್ರಯತ್ನಿಸಿದರೂ

ದುಃಖ ಬೆರೆತ ಉದ್ವಿಗ್ನತೆಯನ್ನು ಹತ್ತಿಕ್ಕಲು ಅವಳಿಂದಾಗಲಿಲ್ಲ. ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು.

ಮಾತಿನಿಂದ ಕೂಡ ಸಂತೈಯಿಸುವ ಪ್ರಯತ್ನ ಪ್ರಸನ್ನ ಮಾಡಲಿಲ್ಲ. ಬಾಗಿಲು ಮುಚ್ಚಿಕೊಂಡು ಹೋಗಿಬಿಟ್ಟ.

ಅಡಿಗೆಯ ಪ್ರಯತ್ನವನ್ನೇ ಬಿಟ್ಟು ಶಾಲೆಗೆ ಬಂದಳು. ಎಲ್ಲಾ ಮಧ್ಯಮ ದರ್ಜೆಯ ಕುಟುಂಬದಿಂದ ಬಂದವರಲ್ಲ. ಈಚೆಗೆ ಇಬ್ಬರು ಯುವತಿಯರು ಟೈಂಪಾಸ್‌ಗೆ ಸೇರಿಕೊಂಡಿದ್ದರು.

ಗಣಿತದ ಟೀಚರ್ ಚೈತ್ರ ಬಂದು ಅವಳ ಭುಜದ ಮೇಲೆ ಕೈ ಹಾಕಿದಳು "ಲೆಕ್ಚರರ್ ಸಾಹೇಬ್ರು....ಗರ್ಲ್‌ಫ್ರೆಂಡ್ ಜೊತೆ ಹೋಗ್ತಾ ಇದ್ದರಲ್ಲ" ಎಂದಿನಂತೆ ತಮಾಷೆಯಾಗಿ ತೆಗೆದುಕೊಳ್ಳುವುದು ಅವಳಿಂದಾಗಲಿಲ್ಲ "ಯಾವ್ದೋ....ಮೀಟಿಂಗ್ ಇದೆಯೆಂದ್ರು...."

"ಹೋಟೆಲ್ ಸಾರಥಿಯಲ್ಲಾ ಮೀಟಿಂಗ್ ?" ಚೈತ್ರ ಘೊಳ್ಳನೆ ನಕ್ಕು ಬಿಟ್ಟಳು. "ಸಾರಥಿಯಲ್ಲಿ ಅಲ್ಲದಿದ್ರೆ.... ಭಾರತಿಯಲ್ಲಾಗ್ಲೀ ಬಿಡಿ...." ತನ್ನ ಕ್ಲಾಸ್‌ರೂಮಿಗೆ ನಡೆದುಬಿಟ್ಟಳು.

ಇಡೀ ದಿನ ಅವಳಿಂದ ಪಾಠ ಮಾಡಲಾಗಲಿಲ್ಲ. ಮಧ್ಯಾಹ್ನದ ತಿಂಡಿ ಕೂಡ ತಗೊಂಡು ಹೋಗಿರಲಿಲ್ಲ. ಚೈತ್ರ ರೇಗಿ ತನ್ನ ಡಬ್ಬಿಯಲ್ಲಿನ ಉಪ್ಪಿಟ್ಟನ್ನ ಮುಚ್ಚಳಕ್ಕೆ ಬಗ್ಗಿಸಿ ಅವಳಿಗೆ ಕೊಟ್ಟಳು.

"ಸಾರಿ ಕಣೇ, ತಮಾಷೆಗೆ ಅಂದೆ ಅಷ್ಟೆ. ತಪ್ಪು ಮಾಡೋಕೆ ಅವರೇನು ಸಣ್ಣ ಜನನಾ ! ಪ್ರೀತಿ ಮಾಡಿ ಮದ್ವೆಯಾದವ್ರು ನೀವು" ಒಳ್ಳೆಯ ಮಾತುಗಳನ್ನ ಆಡಿದಳು. ಅದರತ್ತ ನಿವೇದಿತಾಳ ಗಮನವಿಲ್ಲ.

ಮಧ್ಯಾಹ್ನ ಲೀವ್ ಹಾಕಿ ಮನೆಗೆ ಬಂದುಬಿಟ್ಟಳು. ಬಾಗಿಲಿನಿಂದ ಹೊರ ಬಂದ ಮೇಲೆ ಅಪ್ಪ, ಅಮ್ಮ ಅವಳನ್ನು ಪೂರ್ತಿಯಾಗಿ ತೊರೆದು ಕೊಂಡು ಬಿಟ್ಟಿದ್ದರು. ಅವಳ ಅಕ್ಕನ ಮದುವೆಗೆ ಕರೆಯುವುದಿರಲಿ, ಅವಳಮ್ಮ ತೀರಾ ಹಾಸಿಗೆ ಹಿಡಿದಾಗಲೂ ಕೂಡ ನಿವೇದಿತಾಗೆ ತಿಳಿಸಿರಲಿಲ್ಲ.

ರಕ್ತ ಹಂಚಿಕೊಂಡ, ಸಾಕಿದ, ಹೆತ್ತವರಿಂದ ದೂರವಾಗುವ ಹರೆಯದ ಆಕರ್ಷಣೆಗೆ ಏನ್ನನ್ನುತ್ತಾರೆ ? ಅದಕ್ಕೆ ಎಂಥ ಪ್ರಬಲ ಶಕ್ತಿ ಇದೆ. ಅವಳಿಗೆ ನಗು ಬಂತು.

ಹಾಸಿಗೆಯ ಮೇಲೆ ಉರುಳಿಕೊಂಡಳು. ಪ್ರಸನ್ನನ ಒಂದು ನಗು, ಮಾತಿಗೆ ಜೀವ ಕೂಡ ತೆತ್ತುಬಿಡಬೇಕೆನ್ನುವಂಥ ಹುಮ್ಮಸ್ಸು. ಇಡೀ ಬೆಳಗಿನಿಂದ ಸಂಜೆಯವರೆಗೂ ಪ್ರಸನ್ನ ತನ್ನ ಮುಖದರ್ಶನಕ್ಕೆ ಕಾದಿದ್ದುಂಟು. ಆ ಮುಖಕ್ಕೆ ಈಗ ಏನಾಗಿದೆ ?

ಕನ್ನಡಿಯ ಮುಂದೆ ಕೂತಳು. ಅಂದಿನ ಚೆಂದದ ಬಣ್ಣ ತುಸು ಮಾಸಿರಬಹುದು. ಎರಡನ್ನ ಹಿಂದೆ ಹಿಂದೆಯೇ ಹೆತ್ತ ಹೆಣ್ಣು. ದುಡಿಮೆ, ಬದುಕಬೇಕೆಂಬ ಛಲ ಮುಖದ ಮಾರ್ದವತೆಯನ್ನು ಮಾಸಿ ಹಾಕಿರಬಹುದೇ ?

ಬಾಗಿಲ ಬಳಿ ಸದ್ದಾಯಿತು. ಕಿಟಕಿಯಿಂದ ಹೊರಗೆನೋಡಿದಳು. ಪ್ರಸನ್ನನ ಸ್ಕೂಟರ್ ನಿಂತಿತ್ತು. ತನ್ನನ್ನು ಸಮಾಧಾನಿಸಲು, ಸಂತೈಯಿಸಲು, ಕ್ಷಮೆ ಕೇಳಲು ಬಂದಿರಬಹುದೆಂದುಕೊಂಡವಳ ಮನ ಹಕ್ಕಿ ಆಯಿತು.

ಬಾಗಿಲು ತೆಗೆವ ಕೂಡಲೇ ಕೆಂಪು ಕನ್ನಡಕ ತೆಗೆದು ಅವಳತ್ತ ನೋಡದೆಯೇ ಒಳಗೆ ನಡೆದ.

"ಊಟ.......ಮಾಡ್ತೀರಾ ?" ಕೇಳಿದಳು.

"ಇಲ್ಲ, ಆಯ್ತು...." ಕೋಣೆಗೋಗಿಬಿಟ್ಟ.

ತಪ್ಪಿಲ್ಲದೇ ಶಿಕ್ಷೆ ವಿಧಿಸಿದ್ದ. ಬಹುಶಃ ಪ್ರೇಮಕ್ಕೆ ನೀಡಿದ ಬೆಲೆಗಾಗಿ ಇಂಥ ಶಿಕ್ಷೆಯೇನೋ !

ಆರಾಮಾಗಿ ಒಂದು ಕಡೆ ಕೂತಳು, ನೂರು ಕನಸುಗಳು ಒಡೆದು ಹೋಗಿತ್ತು. ಇಂದು ಧೈರ್ಯ ಪೂರ್ತಿ ಕುಸಿದಂತಾಯಿತು ಭಾವಣೆಯತ್ತ ದಿಟ್ಟಿಸತೊಡಗಿದಳು.

"ನಿನ್ಹತ್ರ ಮಾತಾಡ್ಬೇಕೂಂತಲೇ....ಬಂದಿದ್ದು" ಅವಳಿಗೆ ಸ್ವಲ್ಪ ದೂರದಲ್ಲಿ ಕೂತ "ನಿಂಗೆ ಸೋಮೇಶ್ವರ್ ವಿಷ್ಯ ತಿಳಿಸಿರುತ್ತಾರೆ. ನೇರವಾಗಿ ಮಾತಾಡಲು ನಿಶ್ಚಯಿಸಿದೆ. ನೀಲಿಮಾ ನನ್ನಷ್ಟೆ ಓದಿದವಳು....ನನ್ನ ಮಾತು ಭಾವನೆ, ಕೆಲಸಗಳಿಗೆ ಅವಳಲ್ಲಿ ಸ್ಪಂದನವಿದೆ. ಸಹಾಯ ಸಹಕಾರ ಸಿಕ್ಕುತ್ತೆ. ಅದ್ರಿಂದ ನಾವಿಬ್ರೂ ಮದ್ವೆ ಆಗ್ಬೇಕೂಂತ ತೀರ್ಮಾನ ಮಾಡಿದ್ದೀವಿ" ಎಂದ.

ಸಮುದ್ರದ ಮಧ್ಯೆ ಅವಳನ್ನ ಒಂಟಿ ನಾವೆಯಲ್ಲಿ ಕೂಡಿಸಿ ದೊಡ್ಡ ನೌಕೆಯೇರಿ ಪ್ರಸನ್ನ ಕೈ ಬೀಸಿದಂತಿತ್ತು.

ನೋಟವೆತ್ತಿದ. ಗೊಂಬೆಯಂತೆ ಕೂತಿದ್ದಳು. ಎದುರಿಸಲಾರದೆ ಹೋದ.

"ಹೇಳಿ, ನೀವು ಹೇಳಬೇಕಾದವ್ರು. ನಾನು ಕೇಳ್ತೀನಿ" ನಿರ್ಲಿಪ್ತ ಭಾವದಿಂದ ನುಡಿದಳು.

"ಎಂ. ಎಸ್. ಸಿ. ಪೂರ್ತಿ ಮಾಡುವ ವೇಳೆಗೆ ನನ್ನಲ್ಲಿ ಜಡತ್ವ ಷುರುವಾಗಿತ್ತು. ಬಣ್ಣ ಬಣ್ಣವಾಗಿ ಕಾಣುವ ಪ್ರಪಂಚ ಮನೆಗೆ ಬಂದ ಕೂಡಲೆ ಮಂಕಾಗಿ ಬಿಡುತಿತ್ತು. ಅದೇ ಮಾತು, ಅದೇ ಸಾನಿಧ್ಯ....ಇಂಥ ಬದ್ಕು ಬದುಕ ಬೇಕೇಕೆ, ಅಂತ ಅನ್ನಿಸಿಬಿಡ್ತು. ಎಷ್ಟು ವಿಧವಾಗಿ ನನ್ನನ್ನೆ ನಾನು ಸಮಾಧಾನ ಮಾಡ್ಕೊಂಡ್ರು....ಜೀವನದ ಬಗ್ಗೆ ಉತ್ಸಾಹವೇ ಮುರುಟಿ ಹೋಗ್ತಾ ಇತ್ತು ನಿನ್ಕಂಡ ಕೂಡ್ಲೇ ಒಂದು ರೀತಿಯ ಭಯ, ಮುಜುಗರಮಾತ್ರ ಮೂಡ್ತಾ ಇತ್ತು. ದಿನಗಳು ದೂಡೋದು ಪ್ರಯಾಸವೆನಿಸಿತು ಕುಡಿದೋ, ಆತ್ಮಹತ್ಯೆ ಮಾಡಿಕೊಳ್ಳೀವರ್ಗೂ ಮನಸ್ಸು ಓಡ್ತಾ ಇತ್ತು. ಎಷ್ಟೋ ದಿನ ಎಲ್ಲಾದ್ರೂ ಓಡಿಬಿಡೋಣಾಂತ ಯೋಚಿಸಿದ್ದುಂಟು. ಆದರೆ ಕಟ್ಟಿಕೊಂಡ ಬಂಧನ ಕಾಲಿಗೆ ತೊಡರಾಗಿತ್ತು. ಅಲ್ಲಿ ಹುಡುಕಿದ್ರು ಪ್ರೀತಿ, ಪ್ರೇಮ ಮತ್ತೇನು....ಇಲ್ಲ" ತಲೆ ಎತ್ತಲಾರದೆ ನಿಧಾನವಾಗಿ ಉಸುರಿದ.

ನಿವೇದಿತಾಳಲ್ಲಿನ ಚಲನೆ ನಿಂತು ಹೋಯಿತು. ಹತ್ತುನಿಮಿಷಗಳ ದೀರ್ಘ ಮೌನದನಂತರ ತುಟಿ ತೆರೆದಳು.

"ನನ್ನಿಂದ....ನೀವೇನು ಬಯಸ್ತೀರಾ ?" ಬತ್ತಿಬರುವ ಅಳುವನ್ನು ನುಂಗಿದಳು "ಬಿಡುಗಡೆ...." ಎಂದ. ಕೆಳತುಟಿಯನ್ನ ಹಲ್ಲಿನಡಿಯಲ್ಲಿ ಸಿಗಿಸಿ ನೋಯಿಸಿದಳು. ಈ ತುಟಿಗಳ ಮಧು ಹೀರಿ ಜಗತ್ತಿನ ಸೌಂದರ್ಯವನ್ನೆಲ್ಲ ತನ್ನಲ್ಲಿ ಕಂಡಂತೆ ಹರ್ಷಿಸಿ ಮೈಮರೆತು ಹೊಗಳುವಿಕೆಗೆ ಸಾಕ್ಷಿಯಾಗಿದ್ದ ಪ್ರಸನ್ನನ ತುಟಿಗಳು ಬಿಗಿದು ಕೂತಿದ್ದವು.

"ಖಂಡಿತ ಸಿಗುತ್ತೆ. ಆದರೆ ಮಗು ಬಗ್ಗೆ ಏನು ಯೋಚಿಸಿದ್ದೀರಾ ? ಅಲೋಕನ ವಯಸ್ಸು ಚಿಕ್ಕದು. ನೀವು ಹೇಳೋ ವಿಷ್ಯನ ಅರ್ಥ ಮಾಡಿಕೊಳ್ಳಲು ಹಲವಾರು ವರ್ಷ ಬೇಕು. ಆಗಲೂಸಾಧ್ಯವೋ ಇಲ್ಲವೋ ಗೊತ್ತಿಲ್ಲ. ಮಗುವಿನ ಬೆಳವಣಿಗೆಗೆ ತಾಯ್ತಂದೆಯರ ಪ್ರೀತಿ ಅಗತ್ಯ"

ಮಡದಿಯ ಮಾತುಗಳಿಗೆ ತಲೆ ಬಗ್ಗಿಸಿಬಿಟ್ಟ ಪ್ರಸನ್ನ, 'ಪಪ್ಪ...'

ಅಲೋಕ ಕೂಗಿದಂತಾಯಿತು. ಮೊದಲು ಅವನು ಬಹಳ ಹೊಂದಿಕೊಂಡಿದ್ದು ಪ್ರಸನ್ನನಿಗೆಯೇ.ಈಚೆಗಿನ ನಿರಾಸಕ್ತಿ ತಾಯಿಗೆ ಅಂಟಿಕೊಳ್ಳುವಂತೆ ಮಾಡಿತ್ತು.

"ಪ್ಲೀಸ್, ನಿವೇದಿತಾ ನಾನೇನು ಹೇಳ್ಲಾರೆ. ನನ್ನ ತೊಡಕಿನಲ್ಲಿ ಸಿಕ್ಕಿಸ್ಲಾರೆ !" ಮುಖ ಕಿವಿಚಿದ.

ನೋವಿನ ನಗೆ ನಕ್ಕಳು "ಅರರೇ, ಯಾಕೆ ಅಷ್ಟೊಂದು ವರೀ ಮಾಡ್ತೀರಾ ? ಅಂದು ಹೆತ್ತ ತಾಯಿ, ಜನ್ಮ ಕೊಟ್ಟ ತಂದೆ, ಒಡ ಹುಟ್ಟಿದವರನ್ನ ಬಿಟ್ಟು ನೀವೇ ಸಮಸ್ತವೆಂದು ತಿಳಿದು ಬಂದೆ. ನಿಮಗೋಸ್ಕರ ಆತ್ಮಹತ್ಯೆ ಮಾಡಿಕೊಳ್ಳೋಕೂ ರೆಡಿ ಅಂದಿದ್ದೆ ಅಂದು. ಅದರ ಜ್ಞಾಪ್ಕ ನನಗಿದೆ. ಈಗ ನಿಮಗಾಗಿ ನನ್ನದೇ ಮಗುವಿನ ಜವಾಬ್ದಾರಿ ಹೊರೋಕೆ ಹಿಂಜರಿತೀನಾ ! ಅಲೋಕ್ ಬಗ್ಗೆ ನಿಮ್ಗೆ ಚಿಂತೆ ಬೇಡ" ಮೇಲೆದ್ದವಳು ಅಡಿಗೆಯ ಮನೆಗೆ ಹೋದಳು.

ಎರಡು ಕಪ್ ಕಾಫೀ ಮಾಡಿ ತಂದು ಪ್ರಸನ್ನನ ಮುಂದೆ ಒಂದು ಲೋಟ ಇಟ್ಟಳು.

"ತಗೊಳ್ಳಿ, ಡೈವೋರ್ಸ್‌ಗೆ ನನ್ನ ಒಪ್ಗೇ ಇದೆ. ನೀವೇ ಪೇಪರ್ಸ್ ರೆಡಿ ಮಾಡ್ಸಿ ತನ್ನಿ. ಲಾಯರ್ ಅಲ್ಲಿಗೆ ಬೇಕಾದ್ರೆ ಬರ್ತೀನಿ. ಕೋರ್ಟು ಎಂದಾದ್ರೂ ಘೋಷಿಸಲಿ, ಇಂದಿನಿಂದ ನಾವು ಪತಿ ಪತ್ನಿಯರಲ್ಲ. ಪ್ರೀತಿಸಿ ಮದ್ವೆಯಾದ ನಮ್ಮಿಬ್ಬರ ತೀರ್ಮಾನವೇ ಇಲ್ಲಿ ಮುಖ್ಯ. ಅಂದು ಯಾವ ಕಾನೂನು ನಮ್ಮನ್ನ ಮದ್ವೆಯಾಗಲೂ ಪ್ರೇರೇಪಿಸಲಿಲ್ಲ. ಈಗ ಒಂದು ರೀತಿಯ ಅನುಕೂಲ. ಭದ್ರತೆಗಾಗಿ ಈ ಏರ್ಪಾಟು" ಇನ್ನ ಹೊರಡಬಹುದೆಂದು ತಾನೇ ಎದ್ದು ಹೊರಗೆ ಹೋದಳು.

ಪ್ರಸನ್ನನ ಮೈಯಲ್ಲಿನ ಶಕ್ತಿಯೆಲ್ಲ ಹರಿದು ಹೋದಂತಾಯಿತು. ಅವಳು ಅತ್ತರೆ ಏನಾದರೂ ಹೇಳುತ್ತಿದ್ದನೇನೋ, ಚಂಡಿಯಾಗಿದ್ದರೆ ಹೇಗೆ ವರ್ತಿಸುತಿದ್ದನೋ, ಅವೆಲ್ಲಕ್ಕಿಂತ ಭಿನ್ನವಾಗಿ ನಡೆದುಕೊಂಡಿದ್ದಳು.

ಎದ್ದು ಹೊರಗೆ ಬಂದವನು ಸ್ಕೂಟರ್‌ನತ್ತ ನಡೆದ. ಬಗ್ಗಿ ಕುಂಡದಲ್ಲಿನ ಕಸ ತೆಗೆಯುತ್ತಿದ್ದವಳು ಸರಿಯಾಗಿ ನಿಂತು "ಒಂದು ವಿಷ್ಯ, ನಿಮ್ಮ ಸಾಮಾನುಗಳ್ನ ಆದಷ್ಟು ಬೇಗ ತಗೊಂಡ್ಹೋಗಿ, ನನ್ನ ಬಗ್ಗೆ ನಿಮ್ಮಲ್ಲಿ ಅಂಥ ಭಾವನೆಗಳು ಇತ್ತು ಅಂತ ತಿಳಿದ್ಮೇಲೆ, ಇಂಥ ವ್ಯಕ್ತಿಯ ಜೊತೆ ಇದ್ದೇನಲ್ಲ ಅಂತ,

ನೀವು ಯೋಚಿಸಿದ ಪ್ರಕಾರ ದೂರ ಹೋಗಿಯೋ, ಆತ್ಮಹತ್ಯೆ ಮಾಡಿಕೊಂಡೋ ಅಲೋಕನನ್ನ ಅನಾಥನನ್ನಾಗಿ ಮಾಡಿಬಿಡ್ತೀನೋಂತ ಭಯ. ನಾಳೆ ಬೆಳಿಗ್ಗೆ ಬಂದು ತಗೊಂಡ್ಹೋದ್ರೆ....ಅನ್ಕೂಲ" ತನ್ನ ಕೆಲಸದತ್ತ ಗಮನ ಹರಿಸಿದಳು.

ಬಾಡಿಗೆಗೆ ಮನೆ ಕೊಟ್ಟು ಬಿಡಿಸಿ ಕಳುಹಿಸುವ ಓನರ್‌ನಂತೆ ಕಂಡಳು. 'ಸರಿ'ಯೆನ್ನುವಂತೆ ತಲೆದೂಗಿ ಸ್ಕೂಟರ್ ಹತ್ತಿದ.

ಅವಳೆದೆ ಅಗ್ನಿಕುಂಡವಾಗಿತ್ತು. ಈಗ ಹುಚ್ಚಿಯಂತೆ ಅಳಬೇಕೆನಿಸಿತು. ಆತ್ಮಹತ್ಯೆಯವರೆಗೂ ಯೋಚಿಸಿ ಸುಮ್ಮನಾದಳು.

ಆಗಲೇ ಅವನ ಎಲ್ಲಾ ಸಾಮಾನುಗಳನ್ನ ಸೂಟುಕೇಸ್‌ಗಳಿಗೆ ತುಂಬಿ ಹಾಲ್‌ನಲ್ಲಿ ತಂದಿಟ್ಟಳು. ಅವನು ಕೆಲಸಕ್ಕೆ ಸೇರಿದ ಮೇಲೆ ಅವನಿಗಾಗಿಯೇ ತಂದುಕೊಂಡಿದ್ದ ಎಲ್ಲಾ ವಸ್ತುಗಳನ್ನ ತಂದು ಒಂದೆಡೆ ಸೇರಿಸಿದಳು.

ಅವಳೆದೆಯಲ್ಲಿ ಸ್ತಬ್ಧವಾಗಿದ್ದ ದುಃಖ, ನೋವು, ಸಂಕಟ ಹತ್ತಿ ಉರಿಯಿತು. ಭೋರೆಂದು ಅಳತೊಡಗಿದಳು ಅತ್ತು ಅತ್ತು ಸಾಕಾದಳು.

ಮುಖ ತೊಳೆದು ಬರುವ ವೇಳೆಗೆ ಅಲೋಕ ಬಂದ. ಕಣ್ತುಂಬಿದ ಕಂಬನಿಯನ್ನು ಪಕ್ಕಕ್ಕೆ ತಿರುಗಿ ಒರೆಸಿಕೊಂಡಳು.

"ಮಮ್ಮಿ...." ಓಡಿ ಬಂದು ಅವಳ ಕುತ್ತಿಗೆಗೆ ಹಾರವಾದ "ಅತ್ತಿದ್ದೀಯಾ...." ಒದ್ದೆಯಾದ ಕೆನ್ನೆಗಳನ್ನ ಮುಟ್ಟಿ ನೋಡಿದ "ಪಪ್ಪ.... ಬಯ್ದುರಾ ?" ಬಲವಂತವಾಗಿ ನಕ್ಕಳು "ಎಂದಾದ್ರೂ ನಿನ್ನ ಪಪ್ಪ ಬಯ್ದಿದ್ದಾರ ?" ಷೂ ಬಿಚ್ಚಿ ಯೂನಿಫಾರಂ ಬದಲಾಯಿಸಿ "ಹೋಗಿ ಮುಖ ತೊಳ್ಕೊಂಡ್ಬಾ. ಹೊರ್ಗಡೆ ಹೋಗೋಣ" ಕೆನ್ನೆ ತಟ್ಟಿ ಕಳುಹಿಸಿದಳು.

ಕೆಲಸಕ್ಕೆ ಬಿಟ್ಟು ಅವಳು ಹೊರಗೆ ಹೋಗುತ್ತಲೇ ಇರಲಿಲ್ಲ. ಪ್ರತಿಯೊಂದಕ್ಕೂ ಪ್ರಸನ್ನನಿಗಾಗಿ ಕಾಯುತ್ತಿದ್ದಳು. ಬದುಕಿನುದ್ದಕ್ಕೂ ಅವನಿಗೆ ಜೊತೆಯಾಗಿ ನಡೆಯಲು ಬಂದಿದ್ದಳು. ಆರು ವರ್ಷದ ದಾಂಪತ್ಯ ಜೀವನ ಹುಸಿಯಾಗಿತ್ತು.

ಒಮ್ಮೆಲೆ ಎಲ್ಲಾ ಬಂಧನಗಳು ಕಡಿದು ಹೋದಂತಾಯಿತು. ಈಗ ಸ್ವತಂತ್ರದ ಹಕ್ಕಿ ಅಲ್ಲಿಗೆ ಹೋಗ್ಲಾ ? ಇದು ಚೆನ್ನಾಗಿದ್ಯಾ ? ಇದ್ನ ತೆಗೆದುಕೊಳ್ಲಾ ? ತಿಂಡಿ ಏನು ಮಾಡ್ಲಿ ? ಅಡಿಗೆಗೆ ಏನು ಹಾಕ್ಲಿ ? ಅವೆಲ್ಲ ಕೇಳುವ

ಹಾಗೆಯೇ ಇಲ್ಲ. 1947ರ ಆಗಸ್ಟ್ ಹನ್ನೆರಡರ ರಾತ್ರಿಯಂತೆ ಕಂಡಿತು. ಅಂದು ಕೂಡ ದೇಶ ಇಬ್ಭಾಗವಾದ ನೋವಿನಲ್ಲೂ ಸ್ವತಂತ್ರದ ಸುಖ.

ಆಲೋಕನೊಂದಿಗೆ ಅಡ್ಡಾಡಿ ಹೋಟಲ್‌ನಲ್ಲಿಯೇ ತಿಂಡಿ ಕೊಡಿಸಿ ಮನೆಗೆ ಬಂದಾಗ ಬರಿದೋ ಬರಿದು. ಇನ್ನು ಕಾಯುವ ಅಗತ್ಯವಿಲ್ಲ ಪ್ರಸನ್ನನಿಗಾಗಿ.

"ಮಮ್ಮಿ, ಪಪ್ಪ ಯಾಕೆ ನಂಗೆ ಪಾಠ ಹೇಳಿಕೊಡೋಲ್ಲ ?" ಪುಸ್ತಕ ಹಿಡಿದು ಬಂದ ಆಲೋಕನತ್ತ ಕರುಣೆಯಿಂದ ನೋಡಿದಳು. ತಂದೆಯ ಪ್ರೀತಿಯ ಸಿಂಚನ, ಮಮತೆಯ ಸ್ಪರ್ಶ ಎಲ್ಲರ ಪಾಲಿಗೂ ಅಲ್ಲ. ಅವನ ಕೆನ್ನೆ ತಟ್ಟಿದಳು "ಪಪ್ಪ, ದೊಡ್ಡ ಹುಡುಗರಿಗೆ ಮಾತ್ರ ಪಾಠ ಮಾಡೋದು. ಈಗ ನೀನ್ಹೋಗಿ ಹೋಂವರ್ಕ್ ಮಾಡು" ಕಳಿಸಿದಳು.

ತುಂಬ ಚುರುಕು ಆಲೋಕ್. ವಯಸ್ಸಿಗೆ ಮೀರಿದ ಬುದ್ಧಿ. ತನಗಿಂತ ನಾಲ್ಕು ವರ್ಷ ಹಿರಿಯನಂತೆ ಅರ್ಥ ಮಾಡಿಕೊಳ್ಳುತ್ತಿದ್ದ, ಹೇಳುತ್ತಿದ್ದ. ತಂದೆಯ ಉದಾಸೀನ, ಬೇಸರ ಕಂಡ ಮೇಲೆ ಅತ್ತ ಸುಳಿಯುವುದನ್ನ ಬಿಟ್ಟಿದ್ದ.

ಮಗುವನ್ನ ಮಲಗಿಸಿ ಮೌನವಾಗಿ ಹಾಸಿಗೆಯ ಮೇಲೆ ಕೂತಳು. ತಾನಿನ್ನು ಒಂಟಿ. ರೆಕ್ಕೆ ಕಳೆದುಕೊಂಡರೂ ಒಂದು ರೆಕ್ಕೆಯಲ್ಲಿಯೇ ಹಾರಬೇಕು. ಅಂದು ಏಕಾಕಿಯಾಗಿ ಮನೆ ಬಿಟ್ಟಾಗ ಪ್ರಸನ್ನ ಜೊತೆಯಾದ. ಜಗತ್ತನ್ನೆ ಎದುರಿಸುವ ಧೈರ್ಯ, ಉತ್ಸಾಹ ಇತ್ತು. ಇಂದು ಆರಾಮಾಗಿ ಬಿಟ್ಟು ಹೊರಟುಬಿಟ್ಟ. ತನ್ನ ಬಗ್ಗೆ ಎಂದಾದರೂ ಯೋಚಿಸಿದ್ದಾನೆಯೆ ? ಮೌನವಾಗಿ ಕಣ್ಣೀರು ಸುರಿಸಿದಳು.

ನಾಳಿನ ಪ್ರಶ್ನೆಗಳ ಜೊತೆ ಆಲೋಕನ ಭವಿಷ್ಯದ ಚಿಂತೆಯು ಅವಳನ್ನ ಕಾಡುತ್ತಿತ್ತು. ಅವನ ಯಾವ ತಪ್ಪಿಗೆ ಈ ಶಿಕ್ಷೆ ?

ಬೆಳಕಾಗಿದೆಯೆಂದು ಅರಿಯುವ ವೇಳೆಗೆ ಏಳು ಗಂಟೆ ಆಗಿಹೋಗಿತ್ತು. ತಲೆ ಸಿಡಿಯುತ್ತಿತ್ತು. ತಾನು ಅತ್ತು, ಚಿಂತಿಸಿ ಆರೋಗ್ಯ ಕೆಡಿಸಿಕೊಂಡರೆ ಆಲೋಕನನ್ನು ನೋಡಿಕೊಳ್ಳುವವರಾರು ?

ಕಾಫಿ ಮಾಡಿ ಕುಡಿದು ತಿಂಡಿಗಿಟ್ಟು ಆಲೋಕನನ್ನ ಎಬ್ಬಿಸಿದಳು. ಬಟ್ಟೆಗಳಿಗಾಗಿಯಾದರೂ ಪ್ರಸನ್ನ ಬರಬೇಕು, ಬರುತ್ತಾನೆ ಮನಸ್ಸು ಹೇಳಿತು.

ಬೇಗ ತಗುಲಿಸಿ ಆಲೋಕನನ್ನ ಬಸ್ಸು ಹತ್ತಿಸುವ ವೇಳೆಗೆ ಮನೆಯ

ಮುಂದೆ ಟ್ಯಾಕ್ಸಿ ಬಂದು ನಿಂತಿತು. ಇಳಿದ ಪ್ರಸನ್ನ ಅಲೋಕನನ್ನು ಕೂಡ ದಿಟ್ಟಿಸಲಾರದೆ ಹೋದ.

"ತಗೊಳ್ಳಿ....ಮಗುನ ಬಿಟ್ಟು ಬರ್ತೀನಿ" ಬೀಗದ ಕೀಯನ್ನು ಅವನಿಗೆ ಕೊಟ್ಟು "ಅಲೋಕ್, ಪಪ್ಪನಿಗೆ ಟಾಟಾ ಮಾಡ್ಬಿಡು" ಎಂದಳು. ಅವಳ ಹೃದಯ ಒಡೆದು ಹೋದಂತಾಯಿತು,

ತಂದೆಯ ಬಳಿ ಓಡಿದ ಅಲೋಕ್ ನಿಂತ. ನಾಲ್ಕು ದಿನದ ಮುಂದೆ ಪ್ರಸನ್ನ, ನೀಲಿಮಾನ ಸ್ಕೂಟರ್‌ನಲ್ಲಿ ಕೂಡಿಸಿಕೊಂಡು ಹೋಗುತ್ತಿದ್ದುದ್ದನ್ನು ಕಂಡಿದ್ದ.

"ಟಾಟಾ....ಪಪ್ಪ...." ತಾಯಿಯ ಹಿಂದೆ ಓಡಿಬಿಟ್ಟ. ಪ್ರಸನ್ನ ಕೂಡ ಸಂಕಟದಿಂದ ಒದ್ದಾಡಿ ಹೋದ.

ಬೀಗ ತೆಗೆದು ಒಳಗೆ ಅಡಿಯಿಟ್ಟಾಗ ಅವನ ಎಲ್ಲಾ ಸಣ್ಣಪುಟ್ಟ ಸಾಮಾನುಗಳ ರಾಶಿ ಇತ್ತು. ಇಷ್ಟೆಲ್ಲ ತಗೊಂಡು ಹೋಗುವ ಉದ್ದೇಶ ಅವನಿಗೇನೂ ಇರಲಿಲ್ಲ.

ಹತ್ತು ನಿಮಿಷದಲ್ಲಿ ಹಿಂದಿರುಗಿದ. ನಿವೇದಿತಾ ಅವನಿಗೆ ಸಹಾಯ ಮಾಡಿದಳು, ಮಾತು ಬಾರದ ಮೂಕನಾಗಿದ್ದ ಪ್ರಸನ್ನ. ನೀಲಿಮಾ ಮನೆಯ ಆಳು ಎಲ್ಲಾ ಒಯ್ದು ಟ್ಯಾಕ್ಸಿಗೆ....

ಟಿ.ವಿ. ಕನೆಕ್ಷನ್ ತೆಗೆದಳು. "ಇದ್ನ ಕೂಡ ತಗೊಂಡ್ಹೋಗಿ...."ಸ್ಪಷ್ಟವಾಗಿ ಹೇಳಿದಳು.

ಪ್ರಸನ್ನ ಕೋಪ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. "ಇಲ್ಲೇ.... ಇರಲೀ...." ಎಂದ.

"ಬೇಡ. ಅಲ್ಲಿ ಎಲ್ಲಾ ಇರ್ಬಹುದ್ದು. ಆದರೂ ನಿಮ್ಮ ಅಸ್ತಿತ್ವನ ಉಳಿಸೋಕೆ ಇವೆಲ್ಲ ಇರಲಿ. ಪ್ಲೀಸ್, ತಗೊಂಡ್ಹೋಗಿ" ಆಳನ್ನು ಕರೆದು ಕೊಂಡೊಯ್ಯಲು ಸಹಾಯ ಮಾಡಿದಳು.

ತಿಂಡಿ ತಂದಿತ್ತಳು. "ತಗೊಳ್ಳಿ...." ಅವಳು ಈಗ ಆರಾಮಾಗಿದ್ದಳು. ಒಂದು ರೀತಿಯ ಮುಕ್ತತೆಯ ಭಾವ ಅವಳಲ್ಲಿ. "ಸೇರಿದಷ್ಟು ತಿನ್ನಿ. ಇನ್ಮುಂದೆ ಇಂಥ ಉಸಿರು ಕಟ್ಟುವ ವಾತಾವರಣವಿಲ್ಲ. ಬೇಡದ ಮುಖ ನೋಡುವ ಕರ್ಮ ನಿಮಗಿಲ್ಲ. ನಿಮ್ಮ ಕನಸ್ಸುಗಳೆಲ್ಲ ನನಸಾಗಲು, ನೀಲಿಮಾ

ಸ್ಫೂರ್ತಿಯಾಗ್ಲಿ" ಎಂದವಳು ಅಡಿಗೆಯ ಮನೆಗೆ ಹೋಗಿ ಕಣ್ಣೀರು ಸುರಿಸಿದಳು.

ಬೇಡ ಬೇಡವೆಂದರೂ ಬರುವ ಕಣ್ಣೀರಿನ ಬಗ್ಗೆ ಅವಳಿಗೆ ರೋಷ. ಅವಳಿಗೆ ಒಂದು ರೀತಿಯ ಆಶ್ಚರ್ಯ ಕೂಡ. ಪ್ರಸನ್ನನಿಗೆ ಹೇಗೆ ಸಾಧ್ಯವಾಯಿತು ? ಹೆಚ್ಚು ಹೆಚ್ಚು ಓದಿಕೊಂಡಂತೆ ವಿಶಾಲವಾದ ವಿಚಾರಗಳ ನಡುವೆ ಮನಸ್ಸು, ಹೃದಯ ಭೂಗತವಾಗಿ ಮಿದುಳು ಮಾತ್ರ ವಿಜೃಂಭಿಸುತ್ತದೆಯೇನೋ !

* * *

ಅಂದು ಅಲೋಕ ಬಂದಾಗ ತುಂಬ ಗಂಭೀರವಾಗಿದ್ದ. ವಯಸ್ಸಿಗೆ ಮೀರಿದ ಗಾಂಭೀರ್ಯ—ನಿವೇದಿತಾಗೆ ನಗು ಬಂತು.

"ಇದೇನು ನಮ್ಮ ಅಲೋಕ್‌ಗೆ ರಾಜ ಗಾಂಭೀರ್ಯ" ಕ್ರಾಪ್ ಸರಿ ಮಾಡಿದಳು.

"ಇನ್ಮೇಲೆ, ಪಪ್ಪ ನಮ್ಮ ಮನೆಗೆ ಬರೋಲ್ವಂತೆ. ಡೈವೋರ್ಸ್.... ತಗೋತಾರಂತೆ" ಕಾನ್ವೆಂಟ್‌ನಲ್ಲಿ ಓದುವ ಐದೂವರೆ ವರ್ಷದ ಚುರುಕು ಹುಡುಗ.

ಸುಳ್ಳಿನಿಂದ ಯಾವ ಸಾಧನೆಯು ಆಗದು. ಎಳೆಯ ಮೃದು ಮನಸ್ಸು ಇದನ್ನ ತಡೆದುಕೊಂಡೀತಾ ?

"ನಿಂಗೆ, ಇದೆಲ್ಲ ಯಾರು ಹೇಳಿದ್ರೂ?" ಯೂನಿಫಾರಂ ಷರಟಿನ ಗುಂಡಿ ಬಿಚ್ಚಿದಳು.

"ಪರೇಶ ಹೇಳ್ದ, ಚೈತ್ರ ಆಂಟೀ ಹೇಳಿದಳಂತೆ" ಅಳುವ ಸ್ವರ ಮಾಡಿದ. ಭದ್ರವಾಗಿ ಅಪ್ಪಿಕೊಂಡು ಬಿಟ್ಟಳು. ಈಗ ಪ್ರಸನ್ನ ನಿರ್ದಯಿಯಾಗಿ ಕಂಡ. ಕಟುಕ....

ಅವನು ಕೇಳಿದಾಗಲೆಲ್ಲ ಟೂರ್, ಸೆಮಿನಾರ್, ಮೀಟಿಂಗ್ ಏನೇನೋ ಹೇಳಿ ಸಮಾಳಿಸಿಕೊಳ್ಳುತ್ತಿದ್ದಳು. ಮದುವೆ ಮಾತ್ರವಲ್ಲ, ಮಕ್ಕಳು ಡೈವೋರ್ಸ್ ಬಗ್ಗೆಯು ತಿಳಿಯಬಲ್ಲರು !

"ಪಪ್ಪ, ಬರೋಲ್ವಾ ?" ಅಳತೊಡಗಿದ.

ಈ ಪ್ರಶ್ನೆಗೆ ಅವಳು ಹೇಗೆ ಉತ್ತರಿಸಿಯಾಳು ? ಉತ್ತರಿಸಬೇಕಾದ ಪ್ರಸನ್ನ ಕಲ್ಲಾಗಿದ್ದ. ಅವನು ಸಂಬಂಧಗಳನ್ನು ಮೀರಿದ ವಿಚಾರವಾದಿ. ಮಗುವಿನ ಮನಸ್ಸು, ಹೇಗೆ ಅರ್ಥವಾದೀತು ?

"ನೆನಪಾದ್ರೆ....ಬರ್ಬಹುದ್ದು. ನಾನಿಲ್ವಾ....ನಿನ್ನೊತೆ" ಮತ್ತಷ್ಟು ಬಿಗಿಯಾಗಿ ಅಪ್ಪಿಕೊಂಡಳು ನಿವೇದಿತಾ 'ಪ್ರಸನ್ನ ನೀನು ಖಂಡಿತ ಕ್ಷಮೆಗೆ ಕೂಡ ಯೋಗ್ಯನಲ್ಲ. ಸೃಷ್ಟಿಯ ಮಹತ್ವವನ್ನೇ ಮರೆತು ಮಗುವನ್ನೇ ಉದಾಸೀನ ಮಾಡ್ಬಿಟ್ಟೆ' ಎಷ್ಟೋ ಹೊತ್ತು ಅದೇ ಸ್ಥಿತಿಯಲ್ಲಿದ್ದಳು.

ಅವನನ್ನ ಮಾಮೂಲಿ ಸ್ಥಿತಿಗೆ ತರಲು ಅವಳು ಬಹಳ ಪ್ರಯತ್ನ ಪಡಬೇಕಾಯಿತು. ಆದರೂ ಆಗಾಗ ಮಂಕಾಗಿ ಶೂನ್ಯದಲ್ಲಿ ನೋಟ ನೆಟ್ಟು ಕೂಡುವ ಎಳೆಯ ಕಂದಮ್ಮನನ್ನ ಕಂಡರೆ ಕಾಳಿಯಾಗಿ ಬಿಡಬೇಕೆನಿಸುತಿತ್ತು. ಕತ್ತಿ ಹಿಡಿದು ಇದಕ್ಕೆ ಕಾರಣರಾದ ಪ್ರಸನ್ನ, ನೀಲಿಮಾರನ್ನು ಸಂಹರಿಸಿ ಬಿಡಬೇಕೆನಿಸಿತು.

ಮಧ್ಯಾಹ್ನದ ಲಂಚ್ ಬ್ರೇಕ್‌ನಲ್ಲಿ ಚೈತ್ರ ಶಾಲೆಯ ಆವರಣದ ಮೂಲೆಗೆ ಕರೆದೊಯ್ದಳು. ಅವಳ ಮುಖದಲ್ಲಿ ಆತಂಕ.

"ನಾನು ಕೇಳಿದ್ದು ನಿಜನಾ ? ಲೆಕ್ಚರರ್ ಸಾಹೇಬ್ರು ನಿಂಗೆ ಡೈವೋರ್ಸ್ ಕೊಟ್ಟು ಬೇರೆಯವರನ್ನ ಮದ್ವೆ ಆಗ್ತಾರಂತೆ "ಕೇಳಿದಳು. ಆ ವೇಳೆಗೆ ಸ್ವಲ್ಪ ಚೇತರಿಸಿಕೊಂಡಿದ್ದಳು ನಿವೇದಿತಾ, "ಹೌದು, ಅದೇನು ದೊಡ್ಡ ವಿಷ್ಯವಲ್ಲ. ನಾಯಿ, ಬೆಕ್ಕುಗಳ ಹಾಗೇ ಒಂದೇ ಮನೆಯಲ್ಲಿದ್ದುಕೊಂಡು ಕಿತ್ತಾಡೋ ಬದ್ಲು....ಇಷ್ಟವಿಲ್ಲದಿದ್ದಾಗ ದೂರವಾಗೋದು....ಸರಿ" ತಣ್ಣಗೆ ನುಡಿದಳು.

ಕಾಂಪೌಂಡ್‌ನಲ್ಲಿ ಗೋಡೆಗೆ ಆತು ನಿಂತ ಚೈತ್ರ ಕುಸಿದು ಬಿದ್ದಳು. ಬೇರೆಯವ್ರ ಬಾಯಿಂದ ಕೇಳಿದ್ದರು. ಮನೆಯಲ್ಲು ಕೂಡ ಎಲ್ಲರೊಂದಿಗೆ ಹೇಳಿದ್ದಳು. ಆದರೆ....ಅದೇ ಸತ್ಯವೆಂದಾಗ ಅವಳಿಗೆ ಸಂಕಟವಾಯಿತು.

"ನೀನು ಸುಮ್ಮನಿದ್ಯಾ ?" ರೋಷಗೊಂಡಳು.

"ಏನ್ಮಾಡ್ಲಿ ? ಇಷ್ಟವಿಲ್ಲದವ್ರ ಜೊತೆ ಬಾಳ್ವೆ ನರ್ಕ. ಅದ್ಕಿಂತ ಇದು ಆರಾಮ್. ಕೆಲ್ಸ ಇದೆ, ಮಗು ಇದೆ. ಇನ್ನ ಸವೆಸಬೇಕಾದ ಕಾಲ ಬಹಳ ಇರೋದ್ರಿಂದ ಅಳುತ್ತ ಕೂಡೊಕಾಗೋಲ್ಲ."

"ಛಿ, ಅವನೆಂಥ ಮನುಷ್ಯ ! ಗಂಡಸರನ್ನೇ ನಂಬಬಾರ್ದು. ನಂಬಿಕೆಗೆ

ಅರ್ಹವಲ್ಲದ ಜನ. ನಾಳೆ ಮಹಿಳೆಯರ್ನ ಸಂಘಟಿಸಿ ಕಾಲೇಜಿಗೆ ಮೆರವಣಿಗೆ ಕೊಂಡೊಯ್ದು ಅನ್ಯಾಯಕ್ಕಾಗಿ ಧಿಕ್ಕಾರ ಹಾಕ್ತೀನಿ" ಆವೇಶದಿಂದ ನುಡಿದಳು.

ನಿವೇದಿತಾ ತುಟಿಗಳ ಮೇಲೆ ನಗು ಅರಳಿಸಿದಳು. "ಇದು ಒಬ್ಬ ಗಂಡಿನಿಂದ ಆದ ಅನ್ಯಾಯವಲ್ಲ. ಅಲ್ಲೂ ಒಬ್ಬ ಹೆಣ್ಣು ಇದ್ದಾಳೆ....ಪ್ರತಿಯೊಬ್ಬ ಗಂಡಿನ ಯಶಸ್ಸಿನ ಹಿಂದೆ ಒಂದು ಹೆಣ್ಣು ಇರುವಂತೆ, ಅವನ್ನೆಲ್ಲ ದುಷ್ಕೃತ್ಯದ ಹಿಂದೆಯೂ ಒಬ್ಳು ಹೆಣ್ಣು ಇರ್ತಾಳೆ. ಇದ್ನ ಯಾರೂ ಮರೀಬಾರ್ದು" ಅವಳ ಭುಜದ ಮೇಲೆ ಕೈ ಹಾಕಿದಳು. ತುಟಿ ಕಚ್ಚಿ ದುಃಖ ನುಂಗಿದಳು.

ಹೆಡ್ ಮೇಡಮ್ ಗೋದಾವರಿ ಸಂಜೆ ಅವಳನ್ನ ಆಫೀಸ್ ರೂಂಗೆ ಕರೆಸಿಕೊಂಡರು. ಕನ್ನಡಕದ ಹಿಂದಿನ ನೋಟ ಮಂಕಾಗಿದೆಯೆನಿಸಿತು. "ಪ್ರಸನ್ನ ಮನೆ ಬಿಟ್ಟಿರೋ ವಿಷ್ಯ ನಿಜನಾ ?" ಕನ್ನಡಕ ತೆಗೆದು ಮೇಜಿನ ಮೇಲಿಟ್ಟರು.

ಎರಡು ನಿಮಿಷದ ಮೌನದ ನಂತರ ತಲೆಯೆತ್ತಿದಳು. "ನೀವು ಕೇಳಿರೋದು ನಿಜ. ಅವ್ರು, ಅವ್ರ ಕೊಲೀಗ್‌ನ ಮದ್ವೆ ಆಗ್ತಾ ಇದ್ದಾರೆ" ಎಷ್ಟು ಮೆಲುವಾಗಿ ಸಾಧ್ಯವೋ ಅಷ್ಟು ಮೆಲುವಾಗಿ ಉಸುರಿದಳು.

"ವ್ಹಾಟ್...."ಆಕೆಯ ಮುಖದ ನರಗಳು ಬಿಗಿದುಕೊಂಡವು. "ಇಂಥ ಕೆಟ್ಟ ಮನುಷ್ಯ ಅಂದ್ಕೊಂಡಿರ್ಲಿಲ್ಲ. ನೀನು ಕೆಲ್ಸಕ್ಕೆ ಸೇರಿ ಓದಿಸ್ದೆ. ಅದ್ಕೆ ನಿಂಗೆ ಸಿಕ್ಕ ಪ್ರತಿಫಲ. ಸುಮ್ನೇ ಬಿಡ್ಬೇಡ. ಒಂಟಿ ಅನ್ನೋ ಹೆದ್ರಿಕೆ ಬೇಡ. ನಾವೆಲ್ಲ ನಿನ್ನ ಜೊತೆ ಇರ್ತೀವಿ" ಕೋಪದಿಂದ ನುಡಿದರು.

"ಬೇಡ ಮೇಡಮ್, ಅದ್ರಿಂದ ಯಾವ ಪ್ರಯೋಜನವೂ ಇಲ್ಲ. ಅವ್ರ ಜೊತೆ ಉಸಿರು ಕಟ್ಟಿ ಬದುಕೋಕೆ ನನ್ಕೈಯಲಾಗೋಲ್ಲ. ಬೇರೆಯಾಗೋದು ಎಲ್ಲಾ ರೀತಿಯಲ್ಲೂ ಒಳ್ಳೆಯದು" ತಲೆ ತಗ್ಗಿಸಿದಳು.

ಗೋದಾವರಿ ಕರುಣೆಯಿಂದ ಅವಳತ್ತ ನೋಡಿದಳು. "ಈಗ ನಿನ್ನ ವಯಸ್ಸೆಷ್ಟು ?" ಕನ್ನಡಕ ಹಾಕಿಕೊಂಡರು. "ಇಪ್ಪತ್ತೈದು...." ಅವರ ಮುಖವನ್ನೇ ನೋಡಿದಳು. "ಇದು ಸರಿಯಾದ ಮದ್ವೆಯ ವಯಸ್ಸು. ಆದ್ರೆ....ಆರು ವರ್ಷದ ಮಗ, ಡೈವೋರ್ಸ್‌ನ ಪ್ರಸ್ತಾಪ. ಇನ್ನೂ ಬದ್ಕು ಉದ್ದವಾಗಿದೆ. ಜೀವ್ನ ಸಾಗಿಸೋದು ಕಷ್ಟವಾಗುತ್ತೆ. ಡೈವೋರ್ಸ್‌ಗೆ ಒಪ್ಕೋಬೇಡ" ಅಧಿಕಾರದ ದನಿಯಲ್ಲಿ ಹೇಳಿದರು.

ನಿವೇದಿತಾ ಭಾರವಾದ ನಿಟ್ಟುಸಿರು ದಬ್ಬಿದಳು "ನಾವಿಬ್ರೂ ಬೇರೆಯಾಗಿ ಬಹುಶಃ...." ಅವಳ ಕಂಠ ಗದ್ಗದವಾಯಿತು. "ಒಂದೆರಡ್ವರ್ಷಗಳೇ ಆಯ್ತು. ಜೊತೆಗಿದ್ವಿ. ಈಗ ಒಂದೇ ಸೂರಿನ ನಡುವೆಯಿಂದಲೂ ಬೇರೆಯಾಗಿದ್ದೀವಿ. ಈಗ ಕಾನೂನಿನ ಡೈವೋರ್ಸ್ ಮುದ್ರೆ ನೀಲಿಮಾನ ಸಮಾಜಕ್ಕೆ ತನ್ನ ಸಂಗಾತಿಯೆಂದು ತಿಳಿಸುವುದಕೊಸ್ಕರ ಅಷ್ಟೆ. ನಿರ್ಣಯ, ನಿರ್ಧಾರ ಯಾವ್ದೂ ಇಲ್ಲ" ಅತ್ತೇಬಿಟ್ಟಳು.

ಗೋದಾವರಿ ಬೆಣ್ಣೆಯಂತೆ ಕರಗಿ ಹೋದರು. ಷೋಡಶಿಯಂತೆ ಕಾಣುವ ನಿವೇದಿತಾ ಅವರ ಮುಂದೆ ಬಂದು ಕೆಲಸ ಕೇಳಿದಾಗ, ಪ್ರಸನ್ನ ವಿವರಿಸಿದಾಗ ಅವರುಗಳ ಧೈರ್ಯಕ್ಕೆ ಮೆಚ್ಚಿ ಹೊಸದಾಗಿ ಪ್ರಾರಂಭವಾದ ಶಾಲೆಯಲ್ಲಿ ನಿಯಮಗಳನ್ನು ಮುರಿದು ಕೆಲಸ ಕೊಟ್ಟಿದ್ದರು.

"ನೀವೇನು....ಮಾಡ್ತೀರಾ ?" ಪ್ರಸನ್ನನ ಕಡೆ ತಿರುಗಿದಾಗ ತಟ್ಟನೇ ನಿವೇದಿತಾ ನುಡಿದಿದ್ದಳು. "ಪ್ರಸನ್ನ ಮುಂದಕ್ಕೆ ಓದ್ತಾರೆ ಮೇಡಮ್. ಅವ್ರ ಆಸೆ ಬರೀ ಕನಸ್ಸಾಗೋದ್ಬೇಡ" ಅವಳ ಕಣ್ಣುಗಳಲ್ಲಿನ ಬೆಳಕಿಗೆ ಆಶ್ಚರ್ಯಗೊಂಡಿದ್ದರು.

ಆಕೆಯ ಕಣ್ಣುಗಳು ಕೂಡ ತೇವಗೊಂಡವು. ನಿವೇದಿತಾ, ಪ್ರಸನ್ನ ನಡುವಿನ ಸಾಮರಸ್ಯ, ಒಡಂಬಡಿಯ ಬಗೆಗೆ ಹೆಮ್ಮೆಪಡುತ್ತಿದ್ದ ಜೀವ—ಗಂಡಿನ ವಿಷಯದಲ್ಲಿ ಆಕೆಯ ಮನ ಕಲ್ಲಾಯಿತು.

"ನೀಲಿಮಾ....ಯಾರು ?" ಪ್ರಶ್ನಿಸಿದರು.

"ತೇಜಾ ಕಾಲೇಜಿನ ರಿಟೈರ್ಡ್ ಪ್ರಿನ್ಸಿಪಾಲ್ ಸೋಮೇಶ್ವರ್ ಅವರ ಮಗ್ಳು. ಆಕೆ ಅವ್ರಿಗೊಬ್ಬೇ ಮಗ್ಳು. ಅವ್ರ ಮಗ ಇರಾಕ್‌ನಲ್ಲಿ ಕೆಲ್ಸ ಮಾಡ್ತಾ ಇದ್ದಾರೆ. ತುಂಬಾ ವಿದ್ಯಾವಂತ ಕುಟುಂಬ" ಅವಳ ಸ್ವರ ಮಾಮೂಲಿಯಾಗಿತ್ತು. ಯಾವುದೇ ಆಕ್ರೋಶ ಅವಳಲ್ಲಿ ಇರಲಿಲ್ಲ.

ಗೋದಾವರಿ ಮುಖದ ಮೇಲಿನ ನೆರಿಗೆಗಳು ಮತ್ತಷ್ಟು ಆಳವಾದವು.

"ಎಂಥ ವಿದ್ಯಾವಂತರು ! ಅವ್ರಿಗೆ ಸೆನ್ಸ್ ಅನ್ನೋದು ಕಡ್ಮೆ ! ಪ್ರಸನ್ನನ ವೈವಾಹಿಕ ಜೀವನದ ಬಗ್ಗೆ ಏನು ಗೊತ್ತಿಲ್ವಾ ?" ಏನಾದರೂ ಮಾಡಬಹುದೇನೋ ಎನ್ನುವ ಆಸೆ ಆಕೆಯದು.

ನಿವೇದಿತಾ ಮುಖದ ಮೇಲೆ ವಿಷಾದ ಮಿನುಗಿತು. "ಎಲ್ಲಾ ಗೊತ್ತು

ಮೇಡಮ್, ಮನೆಗೆ ಕರ್ಕೊಂಡ್ಬಂದು ನನ್ನನ್ನ ಅವ್ರೆ ಪರಿಚಯಿಸಿದ್ದಾರೆ. ಏನೂ ಮುಚ್ಚಿಟ್ಟಿಲ್ಲ."

ಆಕೆ ಸೋತ ಮುಖ ಮಾಡಿಕೊಂಡು ಹಿಂದಕ್ಕೆ ಒರಗಿದರು. ವಿಚಿತ್ರ ವಾಗಿ ಕಂಡಿತು. ಗಂಡನ್ನೇ ದೂರಲು ಆಕೆಯ ಮನ ಒಪ್ಪಲ್ಲಿಲ್ಲ. ಹೆಣ್ಣಿನ ಮೇಲೆ ನಡೆಯುವ ಪ್ರತಿಯೊಂದು ದೌರ್ಜನ್ಯದ ಮುಂದೆ ಒಬ್ಬ ಹೆಣ್ಣು ಇದ್ದೇ ಇರುತ್ತಿದ್ದಳು! ಅವಳ ಜಾತಿಯ ಬಗೆಗೆ ಪ್ರೀತಿ, ಅಭಿಮಾನ ಕನಿಷ್ಟ ಅನುಕಂಪವು ಇಲ್ಲ. ಇದೊಂದು ಕಹಿಯಾದ ಸತ್ಯ.'

"ಇದೊಂದು ವಿಚಿತ್ರ ನಿವೇದಿತಾ. ನೀನು ದುಡಿದು ಪ್ರಸನ್ನನ ಓದಿಸಿದ್ದೇ ತಪ್ಪಾಯಿತೇನೋ! ಹಿಂದೆ ಗಂಡಸರು ಅವಿವೇಕಿಗಳಾಗಿ, ಬುದ್ಧಿ ಹೀನರಾಗಿ ತಪ್ಪು ಮಾಡ್ತಾ ಇದ್ದರು. ಇಂದಿನ ವಿದ್ಯಾವಂತರು ಬೌದ್ಧಿಕ ನೆಲೆಗಟ್ಟಿನ ಮೇಲೆ ತಪ್ಪು ಮಾಡ್ತಾ ಇದ್ದಾರೆ. ಕೆಲವು ನಟರು, ಲೇಖಕರು, ರಾಜಕಾರಣಿಗಳು, ಬುದ್ಧಿಜೀವಿಗಳೆಂದು ಹೆಸರಿಸಿಕೊಂಡಿರುವ ಪುರುಷರ ಬದುಕಿನಲ್ಲಿ ಇನ್ನೊಬ್ಬ ಹೆಣ್ಣಿನ ಪ್ರವೇಶ, ಇಲ್ಲೂ ಕೂಡ ಅದೇ ಸ್ಥಿತಿ" ನೊಂದು ನುಡಿದರು.

ಮೌನವಾಗಿ ಕೂತ ನಿವೇದಿತಾ ಮೇಲೆದ್ದಳು. "ಬರ್ತೀನಿ.... ಮೇಡಮ್...." ಗೋದಾವರಿ ಅಕ್ಕರೆಯಿಂದ ನೋಡಿದರು. "ಆಲೋಕ್.... ಬಗ್ಗೆ ಏನು ನಿರ್ಧಾರ?" ಕೇಳಿದರು.

"ಏನಿಲ್ಲ, ಅವ್ನು ನನ್ಹತ್ರನೇ ಇರ್ತಾನೆ. ಅವ್ರಿಗೆ ನನ್ನ ಜೊತೆಗಿನ ಜೀವನ ಒಂದು ರೀತಿ ಜಿಗುಪ್ಸೆ ತಂದಿದೆ. ಅದರ ಫಲದ ಬಗ್ಗೆ ಅವ್ರಿಗೆ ಆಸಕ್ತಿ ಇಲ್ಲ. ನನ್ನ ಪಾಲಿಗೆ ಅದೊಂದು ವರ" ಕಣ್ಣೀರು ತೊಡೆದುಕೊಂಡು ಹೊರಗೆ ಹೋಗಿ ಬಿಟ್ಟಳು.

ನಿಶ್ಯಬ್ಧವಾಗಿ ಕೂತರು ಗೋದಾವರಿ. ಇದೆಂಥ ತಿರುವು ನಿವೇದಿತಾಳ ಬದುಕಿನಲ್ಲಿ.

ಒಂದು ಚೂರು ಡಬ್ಬಿಗೆ ತಿಂಡಿ ಹಾಕಿಕೊಂಡು ಬರುತ್ತಿದ್ದ ನಿವೇದಿತಾ ಕಾಫೀ ಕುಡಿಯಲು ಕೂಡ ಹಿಂಜರಿಯುತ್ತಿದ್ದಳು.

"ಗೊತ್ತಿಲ್ಲ ಮೇಡಮ್, ಹಣ ಸಾಲೋಲ್ಲ. ಎಲ್ಲಾದ್ರೂ ಪಾರ್ಟ್ ಟೈಮ್ ಮಾಡ್ಬೇಕು. ಹೇಗೂ ಕ್ಲರ್ಕ್ ಮೇರಿ ಬರ್ತಾ ಇಲ್ಲ. ಅವರ ಕೆಲ್ಸ

ನಾನೇ ಮಾಡ್ತೀನಿ. ಅಲ್ಪ ಸ್ವಲ್ಪ ಕೊಟ್ಟರೂ....ಸಾಕು" ಅವರ ಮುಂದೆ ನಿಂತು ಕೇಳಿದಾಗ ಆಕೆ ದಂಗು ಬಡಿದು ಹೋಗಿದ್ದರು.

ಮನೆ ಕೆಲಸ, ಮಗು ಪಾಲನೆ, ಗಂಡನ ಪೂರೈಕೆಗಳ ನಡುವೆ ಮನೆಯಲ್ಲಿ ಹುಡುಗರಿಗೆ ಟ್ಯೂಷನ್ ಇಟ್ಟುಕೊಂಡಿದ್ದಳು. ಒಂದು ರೀತಿಯ ನಿರಂತರ ದುಡಿತ.

"ದೇಹ, ಮನಸ್ಸಿಗೆ ರೆಸ್ಟ್ ಬೇಕು. ಈ ಹುಚ್ಚು ದುಡಿತದಿಂದ ನೀನು ಕಂಗೆಟ್ಟು ಹೋಗ್ತೀಯಾ" ಬುದ್ಧಿ ಹೇಳಿದ್ದರು.

"ಇಲ್ಲ ಮೇಡಮ್, ಇದೆಷ್ಟು ದಿನದ್ದು. ಅವ್ರು ತುಂಬ ಇಂಟಲಿಜೆಂಟ್ ಎಂ.ಎಸ್.ಸಿ ಕನಿಷ್ಟ ಕ್ಲಾಸ್‌ನಲ್ಲಾದ್ರೂ ಮುಗಿಸ್ತಾರೆ. ಆಮೇಲೆ ಕೆಲ್ಸ ಸಿಕ್ಕೋದು ತಡವಲ್ಲ. ಆಮೇಲೆ ನೀನು ಕೆಲ್ಸ ಬಿಟ್ಟು ಆರಾಮಾಗಿ ಮನೆಯಲ್ಲಿ ರೂಂತ ಹೇಳಿದ್ದಾರೆ. ಇಂಥ ದುಡಿತಾ....ಕೆಲವು ದಿನಗಳು....ಮಾತ್ರ" ನೂರು ಆಸೆಗಳು ಭವಿಷತ್‌ನ ಬಗೆಗೆ ಅವಳ ಕಣ್ಣುಗಳಲ್ಲಿ ಕುಣಿಯುತ್ತಿತ್ತು.

ಗೋದಾವರಿ ಸಾಕಷ್ಟು ಸಹಾಯ ಮಾಡಿದ್ದರು. ಪ್ರಸನ್ನನಿಗೆ ಕೆಲಸ ಸಿಕ್ಕ ಹೊಸದರಲ್ಲಿ ಹಾಸ್ಯ ಮಾಡಿದ್ದರು.

"ಯಾವಾಗ ಕೆಲ್ಸ ಬಿಡ್ತೀಯಾ ! ನಿನ್ನಂಥ ಒಳ್ಳೆ ಮೇಡಮ್‌ನ ನಮ್ಮ ಶಾಲೆ ಕಳ್ದುಕೊಳ್ಳತ್ತೆ."

ಆಗ ಸುಮ್ಮನೆ ಸರಿದು ಹೋಗಿದ್ದಳು. ಅವರ ನಿರೀಕ್ಷೆ ಸುಳ್ಳಾಗಿತ್ತು. ಮಾಮೂಲಾಗಿ ಕೆಲಸಕ್ಕೆ ಬರುತ್ತಿದ್ದಳು.

ಒಮ್ಮೆ ಪ್ರಸನ್ನ ಸಿಕ್ಕಾಗಲೇ ಪ್ರಸ್ತಾಪಿಸಿ ಬಿಟ್ಟಿದ್ದರು.

"ನಿವೇದಿತಾ ತುಂಬ ಕಷ್ಟಪಟ್ಟಿದ್ದಾಳೆ. ಅವ್ಳಿಗೆ ವಿರಾಮಬೇಕು. ಎರಡನೇ ಮಗು ಹುಟ್ಟಿ ಸತ್ತ ಮೇಲಂತೂ ಸವೆದು ಹೋಗಿದ್ದಾಳೆ. ಆರಾಮಾಗಿ ಅಲೋಕ್‌ನ ನೋಡಿಕೊಂಡು ಮನೆಯಲ್ಲಿರಲಿ."

ಇಪ್ಪತ್ತೈದು ಕ್ಷಣಗಳ ಮೌನದ ನಂತರ ಪ್ರಸನ್ನ ಮಾತಾಡಲೋ ಬೇಡವೋ ಎನ್ನುವಂತೆ ನುಡಿದಿದ್ದ.

"ಈ ವಿಷ್ಯದಲ್ಲಿ ನಾನು ಒತ್ತಾಯ ಮಾಡಲ್ಲಾರೆ. ಸ್ವಂತ ಡಿಸಿಷನ್ ತಗೋಬಹುದು"

ಅಂದೇ ಅವನಲ್ಲಿನ ಬದಲಾವಣೆಯನ್ನು ಗುರ್ತಿಸಿದ್ದರು. ದುಡಿಯುವ

ಹೆಣ್ಣು ಯಾರಿಗೆ ಬೇಡ? ಹಣದ ಅಗತ್ಯ ಸದಾ ಇರುವಂಥದ್ದೆ ಅಂದು ಕೊಂಡಿದ್ದರೂ, ಆದರೆ ಇಂಥ ಒಂದು ರೂಪ ತಾಳಬಹುದೆಂಬ ಕಲ್ಪನೆಯು ಕೂಡ ಅವರಿಗೆ ಇರಲಿಲ್ಲ.

ಆಕೆ ಶಾಲೆಯಿಂದ ನೇರವಾಗಿ ಮನೆಗೆ ಹೋಗದೆ ಸೋಮೇಶ್ವರ್ ಮನೆ ಹುಡುಕಿಕೊಂಡು ಹೋದರು. ಸಣ್ಣ ಬಂಗ್ಲೆಯೇ ಹೌದು ಅವರದು. ವಿದೇಶ ದಲ್ಲಿರೋ ಮಗ, ದುಡಿಯುವ ಮಗಳು– ಒಂದು ರೀತಿಯ ನಿಶ್ಚಿಂತೆಯ ಬದುಕು ಅವರದು ಎಂದುಕೊಂಡರು.

ಕಾಲಿಂಗ್ ಬೆಲ್ ಒತ್ತಿ ಐದು ನಿಮಿಷ ಕಾದ ನಂತರವೇ ಬಾಗಿಲು ತೆಗೆದಿದ್ದು. ಮಧ್ಯ ವಯಸ್ಸು ದಾಟಿದ ಹೆಣ್ಣು. ಕತ್ತು, ಕೈಗಳಲ್ಲಿ ಚಿನ್ನ, ಕಿವಿಯಲ್ಲಿ ವಜ್ರದೋಲೆ, ಮುಖದಲ್ಲಿ ಗಾಂಭೀರ್ಯ.

"ಯಾರು....ಬೇಕಾಗಿತ್ತು ? ಕೇಳಿದರು.

"ಸೋಮೇಶ್ವರ್ ಅವ್ರನ್ನ ನೋಡ್ಬೇಕಿತ್ತು........ಶಾಲೆಯ ಹೆಡ್ ಮೇಡಮ್" ಸರಳವಾಗಿ ಹೇಳಿಕೊಂಡರು. "ಬಂದು....ಕೂತ್ಕೊಳ್ಳಿ.... ಬರ್ತಾರೆ" ಸಿಟ್ಟಿಂಗ್ ರೂಮು ತೋರಿಸಿ ಹೋದರು.

ಉತ್ತಮ ಪತ್ರಿಕೆಗಳ ಸಂಗ್ರಹವೇ ಟೀಪಾಯಿ ಮೇಲೆ ಬಿದ್ದಂತಿತ್ತು. ಅವೆಲ್ಲ ಆಂಗ್ಲ ಭಾಷೆಯವು. ಒಮ್ಮೆ ತಿರುವಿ ಇಟ್ಟು ಕಾದರು.

ಹತ್ತು ನಿಮಿಷಗಳ ನಂತರ ಬಂದ ಸೋಮೇಶ್ವರ್ ಕ್ಷಮೆ ಯಾಚಿಸಿದರು. "ಸಾರಿ, ಸ್ವಲ್ಪ ನಿಧಾನವಾಯ್ತು" ಎಂದೇ ಕೂತರು. ಮತ್ತೆ ಪರಿಚಯ ಹೇಳಿಕೊಂಡರೂ ಗೋದಾವರಿ.

"ತಾವು ಬಂದ ಕಾರಣ...."ನೇರವಾಗಿಯೇ ವಿಷಯಕ್ಕೆ ಬಂದರು "ಪ್ರಸನ್ನ ಮಿಸೆಸ್ ನಿವೇದಿತಾ ನಮ್ಮ ಶಾಲೆಯಲ್ಲೇ ಕೆಲ್ಸ ಮಾಡ್ತಾ ಇರೋದು. ಅವ್ಳು ಹೆಸರಿಗೆ ಸರಿಯಾಗಿ ನಿವೇದಿತಾಳೇ. ಅವ್ಳು ಕಳಿಸಿಲ್ಲ, ನಾನಾಗಿಯೇ ಬಂದಿರೋದು. ಅವ್ರ ಫ್ಯಾಮಿಲಿಯ ವೆಲ್‌ವಿಷರ್...."ಎಂದರು ಗೋದಾವರಿ.

ಸೋಮೇಶ್ವರ್ ಮುಖದ ಬಣ್ಣವೇ ಬದಲಾಯಿತು. ಮುಖದ ಗಾಂಭೀರ್ಯ ಕರಗಿತು. ಕಣ್ಣಿನ ಸುತ್ತಿನ ಕಪ್ಪು ಮತ್ತಷ್ಟು ದಟ್ಟವಾಯಿತು.

"ಅವ್ಳ ಕುಟುಂಬದ ವೆಲ್ ವಿಷರ್....ಹಿತಚಿಂತಕರು ನೀವಿರಬಹುದು.

ಆದರೆ ನಾನೇನೂ ವಿರೋಧಿಯಲ್ಲ. ಐಯಾವ್ ಹೆಲ್ಪಲೆಸ್, ಪ್ರಬುದ್ಧ ಜನರ ಡಿಸಿಷನ್ ಬದಲಾಯಿಸೋದು ಕಷ್ಟ" ನೋಟ ಕೆಳಗೆ ಹಾಕಿದರು.

ಅಂದರೆ ಅವರಿಗೂ ಇದು ಸಮ್ಮತವಲ್ಲ.

"ನಂಗೆ ಚೆನ್ನಾಗಿ ನೆನಪಿದೆ. ಪ್ರಸನ್ನ ಕೈ ಹಿಡಿದಾಗ ನಿವೇದಿತಾ ಕೆನ್ನೆಗಳಲ್ಲಿ ಮಗುತನ ಕೂಡ ಕಡಮೆಯಾಗಿರಲಿಲ್ಲ. ಹದಿನೆಂಟು ವಯಸ್ಸಿಗೆ ಹಿಂದೆ ಮೂರು ನಾಲ್ಕು ಮಕ್ಕಳನ್ನ ಹೆತ್ತು ಮುದ್ಕಿಯಾಗಿರುತ್ತಿದ್ದ ದಿನಗಳು ಇದ್ದವು. ಈಗ ಅಂಥದ್ದು ಅಪರೂಪವೇ ! ಅದ್ಕೆ ಸಾಕಷ್ಟು ಕಾರಣಗಳು ಇವೆ. ಬಹಳ ಕಷ್ಟಪಟ್ಟಿದ್ದಾಳೆ. ಆ ಹುಡ್ಗ ಪ್ರಸನ್ನನ ಆ್ಯಂಬಿಷನ್‌ಗಾಗಿ. ಈಗ ಬದ್ಕು ಒಂದು ನೆಲೆಗೆ ಬಂತು ಅನ್ನೋವಾಗ ಇಂಥ ನಿರ್ಧಾರ ಎಷ್ಟು ಸರಿ ?" ಆಕೆ ವಿವರಿಸಿದರು.

ಆತ ತೀರಾ ಮಂಕಾಗಿ ಬಿಟ್ಟರು. ಅಕ್ಕರೆಯ ಮಗಳು ಅವಳ ಬುದ್ಧಿವಂತಿಕೆಯ ಬಗ್ಗೆ ಅಪಾರವಾದ ಮೆಚ್ಚಿಕೆ. ಹುಡುಕಿ ಅವಳ ಮುಂದೆ ನಿಲ್ಲಿಸಿದ ಗಂಡುಗಳನ್ನು ನೋಡಿ ತಲೆಯಾಡಿಸಿ ಬಿಟ್ಟಾಗ ಕೂಡ ಒತ್ತಾಯ ಮಾಡದ ಸ್ಥಿತಿ.

"ಏನು ಪ್ರಯೋಜನವಿಲ್ಲ ಗೋದಾವರಿಯವರೇ. ಪ್ರಸನ್ನ ನೀಲಿಮಾ ನಡುವೆ ಬೌದ್ಧಿಕ ಸಮಾನತೆಯ ಸೌಹಾರ್ದತೆ—ನಾನು ಹೇಳಿ ಮುಗಿಸಿದ್ದಾಗಿದೆ. ಇನ್ನೇನೂ ಮಾಡೋಕೆ ಸಾಧ್ಯವಿಲ್ಲ" ಕೈ ತೊಳೆದುಕೊಂಡು ಬಿಟ್ಟರು.

"ಈಗ ಪ್ರಸನ್ನ ಎಲ್ಲಿದ್ದಾರೆ ?" ಗೋದಾವರಿ ಕೇಳಿದರು.

"ಇಲ್ಲೇ ಇದ್ದಾರೆ. ಮುಂದು ಕೂಡ ಇಲ್ಲೇ ಇರ್ತಾರೆ. ಇಲ್ಲಿ ನಮ್ಗೆ ತಾನೇ ಯಾರಿದ್ದಾರೆ ? ನೀಲಿಮಾ ಇಷ್ಟಪಟ್ಟಿದ್ದರೆ ಮದ್ವೆಯಾಗಿ ವಿದೇಶಕ್ಕೆ ಹೋಗಬಹುದಿತ್ತು. ಅಂಥ ಅದೃಷ್ಟ ಅವ್ಳ ಪಾಲಿಗಿತ್ತು. ನಿರಾಕರಿಸಿ ಬಿಟ್ಲು" ಸಂಕಟಪಟ್ಟರು.

ಇಲ್ಲಿ ಸಮಸ್ಯೆ ಮತ್ತಷ್ಟು ಜಟಿಲವಾದುದ್ದಾಗಿ ಕಂಡು ಬಂತು ಗೋದಾವರಿಗೆ. ಮಾತಾಡಿ ಮತ್ತಷ್ಟು ಮುಜುಗರವನ್ನುಂಟು ಮಾಡಲಾರದೆ ಎದ್ದರು.

"ನಮಸ್ಕಾರ, ಅವರಿಬ್ಬರ ಮಧ್ಯೆ ಒಂದ್ಮಗು ಇದೆ. ಆ ಬಗ್ಗೆಯಾದ್ರೂ ಪ್ರಸನ್ನ ಯೋಚ್ಸಬಹುದಿತ್ತು. ಡೈವೋರ್ಸ್ ಕಲ್ಚರ್ ನಮ್ಮದಲ್ಲ.

ವಿವಾಹಕ್ಕೆ ಒಂದು ಪವಿತ್ರತೆಯೇ ಇದೆ. ಅದ್ರ ಅರಿವು ಇಬ್ಬರಿಗೂ ಇರ್ಬೇಕು ಇಂಥ ಕೆಟ್ಟ ನಿರ್ಧಾರದಿಂದ ಮಗುವಿನ ಮಾನಸಿಕ ಸ್ಥಿತಿ ಮೇಲೆ ಎಂಥ ಕೆಟ್ಟ ಪರಿಣಾಮ ಬೀರುತ್ತೆ. ಸಮಾಜಕ್ಕೆ ಇದ್ರಿಂದ ಕೆಡಕು ಕೂಡ. ಪ್ರಸನ್ನ, ನೀಲಿಮಾರ ಮಧ್ಯೆ ಬೌದ್ಧಿಕ ಸಮಾನತೆ ಇದ್ದ ಮಾತ್ರಕ್ಕೆ ಪತಿ, ಪತ್ನಿಯರಾಗಿ ದೇಹಸಂಬಂಧ ಬೆಳೆಸಿಯೇ ಕೆಲ್ಸ ಮಾಡ್ಬೇಕಾಗಿರಲಿಲ್ಲ. ಯಾವುದೇ ವ್ಯಕ್ತಿ ವ್ಯಕ್ತಿಯಲ್ಲಿ ತನ್ನ ವ್ಯಯುಕ್ತವನ್ನು ಬೆರಸಬೇಕೆಂದೇನು ಇಲ್ಲ" ಎಂದವರು ಹೊರಟರು.

ಹಿಂದಿನಿಂದ ಅವರ ಹೆಂಡತಿ ಕೂಗಿಕೊಂಡರು. "ಕಾಫಿ ತಗೊಂಡ್ಹೋಗಿ...." ನಿಂತು ಹಿಂದಿರುಗಿ ವಿನಯದಿಂದ ನಿರಾಕರಿಸಿದರು.

"ಇಂದು ಬೇಡ, ಇನ್ನೊಂದು ದಿನ ಬರ್ತೀನಿ. ನಿವೇದಿತಾಗೆ ಅನ್ಯಾಯವಾಗೋದು....ನಂಗೆ ಸಂಕಟ" ನಿಲ್ಲದೆ ಬಾಲ್ಕನಿಯ ಮೆಟ್ಟಲು ಇಳಿಯುವ ವೇಳೆಗೆ ಕಾರು ಬಂದು ನಿಂತಿತು.

ಭುಜದವರೆಗೂ ಕೂದಲು ಕತ್ತರಿಸಿದ, ಸ್ಲೀವ್‌ಲೆಸ್ ಬ್ಲೌಸ್‌ನ ಹೆಣ್ಣು ಸ್ಟೈರಿಂಗ್ ವ್ಹೀಲ್ ಮುಂದೆ ಕೂತಿದ್ದಳು. ಪ್ರಸನ್ನ ಅವಳ ಪಕ್ಕದಲ್ಲಿ ಕೂತಿದ್ದರಿಂದ ಆಕೆಯೇ ನೀಲಿಮಾ ಎಂದುಕೊಂಡರು.

ಗೋದಾವರಿ ನಿಲ್ಲದೆ ಹೊರಟು ಬಿಟ್ಟರು. ಆಕೆಯ ಕಣ್ಣಂಚು ಒದ್ದೆಯಾಗಿತ್ತು. ವಿದ್ಯಾವಂತೆ, ತಿಳಿವಳಿಕೆಯುಳ್ಳ ಈ ಹೆಣ್ಣಿಗೆ ಬೇರೊಂದು ಹೆಣ್ಣಿಗೆ ಅನ್ಯಾಯವಾಗುತ್ತಿದೆಯೆಂಬ ಅರಿವಿಲ್ಲವೇ ? ಅರಿತು ಅರಿಯದಂತೆ ನಟಿಸುವುದೋ ! ಮನಸ್ಸು ಹೃದಯದ ಬೆಲೆಯರಿದಷ್ಟು ಮಿದಳು ಪ್ರಬಲವಾಗಿರಬೇಕು.

ಮನೆಗೆ ಬಂದ ಗೋದಾವರಿ ಸುಸ್ತಾದವರಂತೆ ಮಲಗಿಬಿಟ್ಟರು. ಅವರು ಕೂಡ ತಮ್ಮ ಯೌವನದಲ್ಲಿ ಪ್ರೇಮ ಪ್ರಕರಣದಲ್ಲಿ ಬಿದ್ದವರೇ. ಹಿರಿಯರ ನಿರಾಕರಣೆ ಅವರನ್ನು ಜೀವನ ಪೂರ್ತಿ ಒಂಟಿಯಾಗಿರುವಂತೆ ಮಾಡಿತ್ತು. ಆ ನೋವು ಇಂದಿಗೂ ಅವರೆದೆಯಲ್ಲಿ ಉರಿಯುತ್ತಿತ್ತು. ಇದೀಗ ತಣ್ಣಗಾಯಿತು, 'ಅದು ಬರೀ ಇನ್‌ಫ್ಯಾಚುಯೇಷನ್' ಬಹಳ ದಿನ್ಸ ಉಳಿಯೋಲ್ಲ. ಆಮೇಲೆ ಮಾಮೂಲಿ ನಾಯಿ ಬೆಕ್ಕುಗಳ ಕಚ್ಚಾಟ. ಅದನ್ನೇ ಪ್ರೀತಿ, ಪ್ರೇಮ

'ಅನ್ನಬಾರದು' ಅವರ ತಂದೆ ಹೇಳಿದ ಮಾತುಗಳನ್ನು ನೆನಪಿಸಿಕೊಂಡರು. ಅವರ ಬಗೆಗಿನ ಕಹಿಯೆಲ್ಲ ಕರಗಿ ಹೋಯಿತು.

ಆ ಪ್ರೇಮದ ಗುಂಗು ಅವರ ಹೃದಯದಲ್ಲಿ ಹಸಿರಾಗಿತ್ತು. ಅದರ ನೆನಪು ಆಹ್ಲಾದವನ್ನುಂಟು ಮಾಡುತಿತ್ತು. ಅಷ್ಟೇ—ಸಾಕು ಎಂದುಕೊಂಡರು.

ಕಾಫೀ ತಂದು ಕೊಟ್ಟ ಕೆಲಸದವಳು "ಚೈತ್ರಮ್ಮನೋರು.......ಬಂದಿದ್ದಾರೆ" ಹೇಳಿ ಹೋದಳು. ಅದರ ಹಿಂದೆನೇ ಬಂದ ಚೈತ್ರ "ನಮಸ್ಕಾರ ಮೇಡಮ್, ಇವತ್ತು ಇನ್ನು ಬಟ್ಟೆ ಬದಲಾಯಿಸಿದಂಗಿಲ್ಲ. ನನ್ನಿಂದ ತೊಂದರೆಯಾಯಿತೇನೋ" ಎಂದಳು ಸಂಕೋಚದಿಂದ.

"ಏನಿಲ್ಲ ಕೂತ್ಕೋ...." ಕಾಫಿ ಕಪ್‌ನ ಟೀಪಾಯಿ ಮೇಲಿಟ್ಟರು. "ಎಲ್ಲೋ ಹೋಗಿದ್ದೆ ಬಂದೇ....ಈಗ. ನನ್ನ ಹರೆಯದ ಉತ್ಸಾಹವನ್ನು ದೇಹ ವಯಸ್ಸಾಗಿದೇಂತ ಆಗಾಗ ನೆನಪಿಸುತ್ತೆ" ನಗೆ ಬೀರಿದರು.

ಕೂತ ಚೈತ್ರ ಚಿಂತಿಸುವಂತೆ ಕಂಡಳು.

"ಏನು....ವಿಷ್ಯ? ಪರ್ವಾಗಿಲ್ಲ....ಹೇಳು. ಕಷ್ಟ, ಸುಖ ಹಂಚಿಕೊಳ್ಳೋಕೆ ಸಂಬಂಧಿಕರಿರಬೇಕಿಲ್ಲ. ಮನುಷ್ಯ ಮನುಷ್ಯರಲ್ಲಿನ ಸಂಬಂಧ ಚೆನ್ನಾಗಿರಬೇಕೆಂತಲೇ ಪ್ರಕೃತಿಯ ಸಂದೇಶ. ಈಗ್ಹೇಳು...." ಸರಿಯಾಗಿ ಕೂತರು. ಕಾಫಿ ಅವರಿಗೆ ಬೇಡವೆನಿಸಿತು.

"ಮೇಡಮ್, ನೀವು ಸ್ವಲ್ಪ ಪ್ರಸನ್ನ ಅವರ್ಹತ್ರ ಮಾತಾಡಿ" ರಿಕ್ವೆಸ್ಟ್ ಮಾಡಿಕೊಂಡಳು. ಪ್ರಯೋಜನವಿಲ್ಲವೆನ್ನುವಂತೆ ತಲೆಯಾಡಿಸಿದರು "ಕೇಳೋಲ್ಲ, ಗಂಡ-ಹೆಂಡಿರ ಮಧ್ಯದ ಸಂಬಂಧ ತೀರಾ ವೈಯುಕ್ತಿಕ. ಮೂರನೆಯವರ ಪ್ರವೇಶವನ್ನು ನಿವೇದಿತಾ ಕೂಡ ಇಷ್ಟಪಡಲಾರಳು."

ಚೈತ್ರ ಅತ್ತಿದ್ದಲ್ಲದೇ ಇಡೀ ಗಂಡು ಕುಲಕ್ಕೆ ಶಾಪ ಹಾಕಿದಳು.

"ಆದರೆ....ನೀಲಿಮಾ ಗಂಡಲ್ಲ, ಹೆಣ್ಣು. ಅವ್ಳು ಮದ್ವೆಯಾಗ್ಬೇಕೆಂದರೆ ಪ್ರಸನ್ನನಿಗಿಂತ ಉತ್ತಮ ವರಗಳು ಸಿಕ್ತಾ ಇದ್ರು. ಇಂಥ ಆಯ್ಕೇ.... ಯಾಕೆ? ಅವಳಲ್ಲಿ ಕೂಡ ಉತ್ತರ ಇದೆಯೋ, ಇಲ್ಲವೋ. ಎಷ್ಟೋ ಬುದ್ಧಿಜೀವಿಗಳ ಉದಾಹರಣೆ ಕೊಡಬಹ್ದು" ತರ್ಕಕ್ಕೆ ಸಿಕ್ಕದ ವಿಷ್ಯವೆನ್ನುವಂತೆ ನಿಟ್ಟುಸಿರುಬಿಟ್ಟರು.

ಎಷ್ಟೋ ಹೊತ್ತು ಗೋದಾವರಿ ಅದೇ ಸ್ಥಿತಿಯಲ್ಲಿ ಕೂತಿದ್ದರು.

ಬಹಳ ವರ್ಷಗಳ ನಿರಾಸೆ, ನೋವು ಮಾಯುವಾಗಿ ಹಗುರವಾಗಿ ಉಸಿರಾಡಿದರು. ಅಂದಿನ ಪ್ರೇಮ, ಪ್ರೀತಿಯ ಭ್ರಮೆ ತೊಡೆದು ನಿಶ್ಚಲಸ್ಥಿತಿಗೆ ಮರಳಿದರು.

*　　　*　　　*

ಇಬ್ಬರ ಸಮ್ಮತದಿಂದಲೇ ಕೋರ್ಟು ಪ್ರಸನ್ನ ಮತ್ತು ನಿವೇದಿತಾ ಮದುವೆಯನ್ನ ರದ್ದುಗೊಳಿಸಿತ್ತು. ಕಾನೂನು ದಾಂಪತ್ಯ ಬಂಧನದಿಂದ ಅವರನ್ನ ಬಿಡುಗಡೆ ಮಾಡಿತ್ತು. ಆಲೋಕ್ ಅವಳಿಗೆ ಉಳಿದಿದ್ದ....ಜೀವನಾಂಶ ಕೊಡಲು ಪ್ರಸನ್ನ ಸಿದ್ಧವಿದ್ದರೂ ನಿವೇದಿತಾ ಪಡೆಯಲಿಚ್ಛಿಸಲಿಲ್ಲ.

ಅಂದು ಮನೆಗೆ ಬಂದ ನಿವೇದಿತಾ ದಿಂಬಿನಲ್ಲಿ ಮುಖ ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತಳು. 'ಜನ್ಮ ಜನ್ಮದ ಬಂಧನ', 'ಜನ್ಮಾಂತರ ಸಂಬಂಧ', ಏಳು ಜನ್ಮಗಳ ಅನುಬಂಧ' ವಿವಾಹದ ಬಗೆಗಿನ ಅವಳ ಪವಿತ್ರ ಕಲ್ಪನೆಗಳೆಲ್ಲ ಗಾಳಿಗೆ ತೂರಿ ಹೋಗಿದ್ದವು. ಇಂದು ಅವಳು ಒಂಟಿ !

ಮನೆ ಬಿಟ್ಟು ಹೊರಡುವಾಗ ಅವಳಪ್ಪ ರೌದ್ರಾವತಾರ ತಾಳಿ ಹೇಳಿದ್ದರು "ಇಂದಿಗೆ ನಿನ್ನೆಲ್ಲ ಸಂಬಂಧಗಳು ಈ ಮನೆಯಿಂದ ತೊಡೆದು ಹೋದವು ಎಂದೂ ಇಲ್ಲಿಗೆ ಬರ್ಬೇಡ. ಜೀವನವೆಲ್ಲ ನಿನ್ನ ಪ್ರೇಮ, ಪ್ರೀತಿಯಿಂದ್ಲೇ ಬದ್ಕುತಿಯೇನೋ... ನೋಡ್ತೀವಿ" ಅಂದು ಮಗಳೆಂಬ ಅಂತಃಕರಣ ಮರೆತಿದ್ದರು.

ಬೆಚ್ಚಗಿನ ತೋಳಿನಾಸರೆಯಲ್ಲಿ ಅವಳನ್ನ ಹುದುಗಿಸಿಕೊಂಡು ಪ್ರಸನ್ನ ನುಡಿದಿದ್ದ "ಡ್ಯಾಮಿಟ್, ಎಲ್ಲರೂ ನಮ್ಮ ಪಾಲಿಗೆ ಸಾಯ್ಲಿ. ನಮ್ಮ ಪ್ರೇಮವೇ ಸತ್ಯ. ಸಾವಿರ ಕಷ್ಟ ಬರಲಿ, ಸಮಾಜವೇನು ಇಡೀ ಜಗತ್ತೇ ಎದುರು ನಿಂತರೂ ನಮ್ಮ ಪ್ರೀತಿಯೆಂದೂ ಸಡಿಲವಾಗೋಲ್ಲ. ನೂರು ಕಷ್ಟ ಎದುರಿಸಿ ನಿನ್ನ ಸುಖವಾಗಿ ಇಟ್ಕೋತೀನಿ. ಸಾವು ಕೂಡ ನಮ್ಮನ್ನು ಅಗಲಿಸಲು ಅಂಜಬೇಕು" ಈ ಉದ್ವೇಗದ ಮಾತುಗಳನ್ನು ಮನಃಪೂರ್ವಕವಾಗಿ ಅವನಾಗಿ ಹೇಳುವವರೆಗೂ ನಂಬಿದ್ದಳು.

ಅತ್ತು ಅತ್ತು ಸಾಕಾಗಿ ಎದ್ದು ಮುಖ ತೊಳೆದು ಬಂದಳು. ಬದುಕಿಗಾಗಿ ಅವಳ ಹೋರಾಟ. ಆಲೋಕನಿಗಾಗಿ ಬಾಗಿಲಿಗೆ ಬಂದು ಕಾದಳು.

"ಪ್ರಸನ್ನ ಬಿಟ್ಟುಬಿಟ್ಟರಂತೆ...."ಒಬ್ಬರು ಕೇಳಿದರೆ, ಮತ್ತೊಬ್ಬರು

"ಕೆಲ್ಸ ಬೇಡಾಂದ್ರೆ ಬಿಟ್ಟು ಬಿಡಬೇಕಿತ್ತು. ಡೈವೋರ್ಸ್ ಯಾಕೆ ಬೇಕಿತ್ತು ?" ಮತ್ತೊಬ್ಬರ ಪ್ರಶ್ನೆ. ಅವಳ ಬಳಿಯಲ್ಲಿ ಯಾವುದಕ್ಕೂ ಉತ್ತರವಿಲ್ಲ.

ಅಲೋಕ್ ಬಂದಾಗ ಸ್ವಲ್ಪ ಮಂಕಾಗಿದ್ದ. ಬಟ್ಟೆ ಬದಲಾಯಿಸುವಾಗ ಅವನ ಮೈ ಬೆಚ್ಚಗಿದ್ದ ಅನುಭವವಾಯಿತು.

"ಜ್ವರ.... ಬಂದಿದೆಯಲ್ಲ !" ಆತಂಕಗೊಂಡಳು.

ಒಯ್ದು ಮಲಗಿಸಿ ಬೆಚ್ಚಗೆ ಹೊದ್ದಿಸಿದಳು. ಮನೆ ಬಿಟ್ಟು ಹೋದ ಮೇಲೆ ಒಮ್ಮೆ ಕೂಡ ಪ್ರಸನ್ನ ಮಗನನ್ನು ನೋಡಲು ಬಂದಿರಲಿಲ್ಲ. ಅವನಲ್ಲಿನ ಪಿತೃ ಪ್ರೇಮ ಹೇಗೆ ಸತ್ತು ಹೋಯಿತು ? ಅದನ್ನೆಲ್ಲ ಮರೆಸುವಂತೆ ನೀಲಿಮಾ ನೋಡಿಕೊಂಡಿರಬಹುದೇ ?

ಹಾಲು ಒಯ್ದು ಕುಡಿಸಿ ಬಂದಳು. ಡಾಕ್ಟರ್ ಷಾಪ್‌ಗೆ ಹೋಗಿ ಬರೋಣವೆಂದುಕೊಂಡರೆ, ಆಕಾಶದಲ್ಲಿ ದಟ್ಟವಾದ ಮೋಡಗಳು ಕವಿದು ಕೊಂಡಿದ್ದವು. ಅವಳೆದೆ ಹೊಡೆದುಕೊಳ್ಳತೊಡಗಿತು. ಹಿಂದೆ ಪ್ರಸನ್ನ ಅವಳ ಜೊತೆಗಿದ್ದ. ಯಾವುದೇ ಕಷ್ಟಕ್ಕೆ ಅಂಜುತ್ತಿರಲಿಲ್ಲ.

"ಮಮ್ಮಿ...." ಅಲೋಕ್ ಕೂಗಿಕೊಂಡ.

ಹತ್ತಿರ ಹೋಗಿ ಕೂತು ಅವನ ಕೈಯನ್ನ ತನ್ನ ಕೈಯೊಳಗೆ ತಗೊಂಡಳು. "ಪಪ್ಪ, ಇನ್ನ ನಮ್ಮ ಮನೆಗೆ ಬರೋದಿಲ್ಲ ಅಲ್ವಾ" ಕೇಳಿದ. ಸುಳ್ಳು ಹೇಳಲಿಲ್ಲ, ಮೌನವಾಗಿ ಹೌದೆನ್ನುವಂತೆ ತಲೆದೂಗಿದಳು. "ಯಾಕೆ ?" ಎಷ್ಟೋ ಸಲ ಕೇಳಿದ ಪ್ರಶ್ನೆಯೇ, ಅವನಿಗೆ ಅರ್ಥವಾಗುವಂತೆ ಉತ್ತರ ಹೇಳಲು ಅವಳಿಂದ ಸಾಧ್ಯವಿಲ್ಲ. "ಗೊತ್ತಿಲ್ಲ, ಈಗ ಮಾತಾಡ್ದೇ ಸುಮ್ನೇ ಮಲಕ್ಕೋ" ಇನ್ನಷ್ಟು ಹೊದ್ದಿಸಿ ತಟ್ಟತೊಡಗಿದಳು.

"ಪಪ್ಪ, ಇನ್ನೊಂದು ಮದ್ವೆ ಮಾಡ್ಕೋತಾರಂತೆ" ಎಂದ. ಅವಳ ಕಣ್ಣಲ್ಲಿ ಕಂಬನಿ ಥಳಕ್ಕೆಂದಿತು "ನಿಂಗೆ ಇದೆಲ್ಲ ಯಾರು ಹೇಳಿದ್ರು ?" ಕಣ್ಣೊರೆಸಿ ಕೊಂಡು ರೇಗಿದಳು.

"ನಿತೀಶ್, ವೇದನ, ಪಲ್ಲವಿ ಎಲ್ಲಾ ಹೇಳ್ತಾರೆ" ಅಳುಕದೆ ಹೇಳಿದ. ಆ ಪುಟ್ಟ ಮಕ್ಕಳ ಮೇಲೆ ಅವಳಿಗೇನು ಕೋಪ ಬರಲಿಲ್ಲ. "ಆಯ್ತು.... ಮಲಕ್ಕೋ" ಕೂದಲಲ್ಲಿ ಕೈಯಾಡಿಸಿದಳು.

"ಯಾಕೆ.... ಮಾಡ್ಕೋತಾರೆ ?" ಮತ್ತದೇ ಪ್ರಶ್ನೆ.

"ನಂಗೆ ಗೊತ್ತಿಲ್ಲ, ಎಂದಾದ್ರೂ ನಿಮ್ಮ ಪಪ್ಪ ಸಿಕ್ಕರೇ....ಕೇಳು" ಸಿಡುಕಿ ಎದ್ದು ಹೋದಳು.

ತಂದೆ, ಮಕ್ಕಳ ಸಂಬಂಧ ಮುರಿದು ಹಾಕುವಂಥ ಕಾನೂನು ಇಲ್ಲವೇ ? ಇದ್ದರೂ....ಸಾಧ್ಯವೇ ? ಅಡಿಗೆಯ ಮನೆಯ ಗೋಡೆಗೆ ನಿಂತು ಕಣ್ಣೀರು ಸುರಿಸಿದಳು.

ಕಾಲಿಂಗ್ ಬೆಲ್ ಸದ್ದಾಯಿತು.

ತಣ್ಣೀರನ್ನ ಮುಖಕ್ಕೆ ಎರಚಿಕೊಂಡಳು. ಕಣ್ಣು, ಕೆನ್ನೆಗಳು ಉರಿದವು.

ಬಾಗಿಲು ತೆಗೆದಾಗ ಒಬ್ಬ ಕಾಲೇಜು ವಿದ್ಯಾರ್ಥಿಯಂತೆ ಕಾಣುವ ಯುವಕ ನಿಂತಿದ್ದ. ಒಂದು ಸಣ್ಣ ಲೆದರ್ ಬ್ಯಾಗ್ ಅವಳಿಗೆ ಕೊಟ್ಟ.

"ಇದ್ನ ಮಾಸ್ಟರ್ ಕಳ್ಸಿ....ಕೊಟ್ರು" ಎಂದವ ಅತ್ತಿತ್ತ ತಿರುಗಿಸಿ ನೋಡುವ ವೇಳೆಗೆ ಹೊರಟು ಬಿಟ್ಟ "ಸ್ವಲ್ಪ .. ನಿಂತ್ಕೋ...." ಕೂಗಿದಳು. ನಿಂತವ ಹಿಂದಿರುಗಿ "ಬರೀ....ಕೊಟ್ಟು ಬಾ ಅಂದ್ರು...." ಹೊರಟು ಬಿಟ್ಟ.

ಲೆದರ್ ಬ್ಯಾಗ್ ಜಿಪ್ ತೆಗೆದು ನೋಡಿದಳು. ನೋಟಿನ ಕಂತೆಗಳು. ಇಪ್ಪತ್ತೈದು ಸಾವಿರ ಮೊತ್ತದಷ್ಟು ನೋಟುಗಳು. ಒಂದು ಸಣ್ಣ ಚೀಟಿ ಇತ್ತು. 'ಇದು ಅಲೋಕ್‌ನ ಭವಿಷ್ಯಕ್ಕಾಗಿ'

ಅವಳನ್ನ ಪ್ರಸನ್ನ ಅವಮಾನ ಪಡಿಸಿದ್ದ. ಪಡೆದ ಪ್ರೇಮದ ಕಾಣಿಕೆಗೆ ಇಪ್ಪತ್ತೈದು ಸಾವಿರದ ಬೆಲೆ. ಕಣ್ಣಂಚಿಗೆ ಬಂದ ಕಂಬನಿಯನ್ನ ಅಲ್ಲಿಯೇ ತಡೆದಳು ನಿವೇದಿತಾ, ಯಾಕಾಗಿ ಕಣ್ಣೀರು ?

"ನಾನು ಜೀವನಾಂಶ ಕೊಡೋಕೆ ಸಿದ್ಧ" ಎಂದಾಗ ಲಾಯರ್ ಮುಂದೆ ಅವಳಿಗೆ ನಗು ಬಂದಿತ್ತು "ಬೇಡ, ನಂಗೆ ಸ್ವಾಭಿಮಾನ ಇದೆ. ಬೇರೆಯವ್ರ ಹಣ ನಂಗೆ ಬೇಡ" ಅವನು ತನಗೇನು ಅಲ್ಲವೆನ್ನುವಂತೆ ಹೇಳಿದ್ದಳು. ಅಂಥದ್ದರಲ್ಲಿ....ಈ ಹಣ.

ನೋಟಿನ ಕಂತೆಗಳನ್ನ ಅದರಲ್ಲಿಯೇ ಇಟ್ಟು ಬೀರುವಿನಲ್ಲಿಟ್ಟಳು. ತಾನು ಸೀರೆ ಕೊಳ್ಳದಿದ್ದರೂ ಅವನಿಗಾಗಿ ಬಟ್ಟೆ ಖರೀದಿಸಿ ತರುತ್ತಿದ್ದಳು. ತನಗಾಗಿ ಅವನು ತರುವ ದಿನಕ್ಕಾಗಿ ಕಾದಳು ಅಷ್ಟೆ.

ಮಳೆಯ ಸದ್ದು, ಮುಂಬಾಗಿಲು ಹಾಕಿಕೊಂಡು ಅಲೋಕ್‌ನ ಬಳಿಯಲ್ಲಿ ಹೋಗಿ ಕೂತಳು. ಕಣ್ಣು ಮುಚ್ಚಿದ್ದವನು ತೆಗೆದ.

"ಮಮ್ಮಿ, ನಂಗೆ ಯಾರು ಪಾಠ ಹೇಳಿ ಕೊಡ್ತಾರೆ ?" ಅದನ್ನು ಪ್ರಸನ್ನ ವರ್ಷಗಳ ಹಿಂದೆಯೇ ನಿಲ್ಲಿಸಿದ್ದರೂ ನೆನಪಿಸಿಕೊಂಡು ಕೇಳಿದ "ಈಗ ನಾನೇ ಹೇಳಿಕೊಡೋಲ್ವಾ ! ಇನ್ಮೇಲೂ ನಾನೇ ಹೇಳಿಕೊಡ್ತೀನಿ" ಸಮಾಧಾನಿಸಿದಳು.

"ನಾವು ಪಿಕ್‌ನಿಕ್‌ಗೆ....ಹೋಗೋದು...." ಮತ್ತೆ ಕೇಳಿದ. ಕರುಣೆ ಯಿಂದ ಅವನ ಕೆನ್ನೆ ಸವರಿದಳು. "ಖಂಡಿತ....ಹೋಗೋಣ...." ಕಂಠ ತುಂಬಿ ಹೇಳಿದಳು.

"ನಮ್ಗೆ....ಭಯ ಆಗೋಲ್ವಾ ?" ಅವನು ಸಮಾಧಾನಗೊಳ್ಳುವಂತೆ ಕಾಣಲಿಲ್ಲ "ಯಾಕೆ ಭಯ ಆಗುತ್ತೆ? ಮುಂದೆ ಪೈಲಟ್ ಆಗ್ತೀನಿ ಅಂತೀಯಲ್ಲ, ಈಗ್ನಿಂದ ಧೈರ್ಯವಾಗಿರೋದ್ನ ಕಲಿತರೇ ತಾನೇ ಆಕಾಶದಲ್ಲಿ ಹಾರಾಡೋದು. ಟೆರರಿಸ್ಟ್ ಪ್ಲೇನ್‌ನ ಹೈಜಾಕ್ ಮಾಡಿದ್ರು. ಪೈಲಟ್ ಧೈರ್ಯಸ್ಥನಾಗಿದ್ರೆ, ಚತುರಮತಿಯಾಗಿದ್ರೆ....ಪ್ರಯಾಣಿಕರನ್ನ ಪಾರು ಮಾಡ್ಬಹ್ದು. ಪುಕ್ಕಲತನ ಇರೋರು ಪೈಲಟ್ ಆಗ್ಬಾರ್ದು" ಹೇಳಿದಳು.

"ಇಲ್ಲ. ನಾನು ಪೈಲಟ್ ಆಗ್ತೀನಿ" ಎಂದ.

"ಗುಡ್, ಇನ್ನ ಭಯಪಡಬಾರ್ದು. ಪಪ್ಪ, ಮನೆಗೆ ಬರೋಲ್ಲಾಂತ. ಗೊತ್ತಿದ್ದು ಕೂಡ ಅದೇ ಪ್ರಶ್ನೆಗಳ್ನ ಹಾಕ್ಬಾರ್ದು. ಚೆನ್ನಾಗಿ ಓದ್ಕೋಬೇಕು. ಈಗ ಮಲಕ್ಕೋ...."ಸಮಾಧಾನಿಸಿ ತಟ್ಟಿ ಮಲಗಿಸಿದಳು.

ತಟ್ಟನೇ ಲೈಟುಗಳು ಹೋದವು. ಬೆಚ್ಚಿ ಬಿದ್ದಳು. ಭಯ ಅವಳ್ನ ಆವರಿಸಿಕೊಂಡಿತು. ಸರಸರ ಪ್ರಸನ್ನನ ಬಳಿ ಓಡಿತು ಅವಳ ಮನಸ್ಸು. ಅವನೆದೆಯ ಅಪ್ಪುಗೆಯಲ್ಲಿ ಹುದುಗಿ ಎಲ್ಲಾ ಮರೆತು ಬಿಡಬೇಕು.

'ಛಿ' ಎದ್ದು ಹೋಗಿ ಕಿಟಕಿಯ ಬಳಿಯಲ್ಲಿ ನಿಂತಳು. 'ಮನೆಗೆ ಬಂದರೆ ಬೆಳಕಿನಿಂದ ಕತ್ತಲಿಗೆ ಬಂದ ಅನುಭವ ಆಗ್ತಾ ಇತ್ತು' ಪ್ರಸನ್ನನ ಮಾತು ನೆನಪಾಯಿತು. ಅಷ್ಟು ನಿಕೃಷ್ಟವಾಗಬೇಕೇ ಬದುಕು ?

ಮಗನ ಪಕ್ಕ ಹೋಗಿ ಉರುಳಿಕೊಂಡಳು. ಮಧ್ಯರಾತ್ರಿಯ ವೇಳೆಗೆ ಕರೆಂಟ್ ಬಂತು. ಆದರೆ ಸುರಿಯುವ ಮಳೆಯ ಸದ್ದು ಕೇಳಿಸುತಿತ್ತು.

ಎದ್ದು ಅಲೋಕನ ಹಣೆ, ಕತ್ತು ಮುಟ್ಟಿ ನೋಡಿದಳು. ಜ್ವರದ ಪ್ರಮಾಣ ಏರಿತ್ತು.

"ನಾನು ಅವನನ್ನ ನೋಡ್ಕೊತೀನಿ. ನೀನು ಮಲಕ್ಕೋ" ಪ್ರಸನ್ನ ಹೇಳಿದಂತಾಯಿತು, "ಎಂಥಾ....ಭ್ರಮೆ" ಅಡಿಗೆಯ ಮನೆಗೆ ಹೋಗಿ ಹಾಲು ಬಿಸಿಗಿಟ್ಟಳು.

ಇಂಥ ಕಷ್ಟದ ಪರಿಸ್ಥಿತಿಯಲ್ಲಿ ಪ್ರಸನ್ನ ಇರುತ್ತಿದ್ದ. ಅಲೋಕ್‌ನಿಗೆ ವರ್ಷವಾಗಿದ್ದಾಗ ಬಂದ ಜ್ವರ ಸೀರಿಯಸ್ ಆದಾಗ ಅವನನ್ನ ನೋಡಿಕೊಂಡಿದ್ದು ಪ್ರಸನ್ನನೇ.

"ಅಲೋಕ್‌ನ ಜವಾಬ್ದಾರಿ ನಂಗೆ ಬಿಡು. ಹೊರಗ್ಗಿನ ದುಡಿತವೇ ನಿಂಗೆ ಸಾಕು" ಅನ್ನ ಕಳಿಸಿಕೊಟ್ಟು ಅವಳನ್ನ ಬಲವಂತದಿಂದ ಮಲಗಿಸಿ ಹೊದ್ದಿಸುತ್ತಿದ್ದ.

ಅವು ಬದುಕಿನ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥ ದಿನಗಳು ಅಳಿಸಿ ಹೋಗಲಾರವು ಜೀವನದಲ್ಲಿ.

ಮೂರು ದಿನ ಎಡಬಿಡದ ಜ್ವರ. ಕ್ಲಿನಿಕ್, ಮನೆಗೆ ಓಡಾಡಿ ಸುಸ್ತಾದಳು. ಶಾಲೆ, ಟ್ಯೂಷನ್ ಎಲ್ಲಕ್ಕು ರಜೆ. ಬಂದ ಹೆಡ್ ಮೇಡಮ್ ಗೋದಾವರಿ ಒಂದು ಸಲಹೆ ಅವಳ ಮುಂದಿಟ್ಟರು.

"ಔಟ್‌ಹೌಸ್ ಖಾಲಿ ಮಾಡೋಕೆ ಹೇಳಿದ್ದೀನಿ. ನಿನ್ನಂಥ ಪ್ರಾಯದ ಚೆಲುವೆ ಹೆಣ್ಣು ಒಂಟಿಯಾಗಿರೋದು ಎಷ್ಟು ಅಪಾಯಂತ ನಂಗೆ ಗೊತ್ತು. ಅಲ್ಲಿಗೆ ಬಂದ್ಬಿಡು."

ಏನು ಹೇಳಲಾರದ ಸ್ಥಿತಿ ಅವಳದು. ಅವಳಿಗೆ ಅಂದೇ ಆ ಬಗ್ಗೆ ಯೋಚನೆ ಬಂದಿದ್ದು. ನೀರಸವಾಗಿ ನಕ್ಕಳು.

"ಅಂಥ ಅಪಾಯದ ಭಯವಿಲ್ಲ, ಮೇಡಮ್ ಆದರೆ....ಒಂಟಿತನ.... ತುಂಬ....ಭಯಂಕರ !" ಆಕೆಯ ಮಡಿಲಲ್ಲಿ ತಲೆ ಇಟ್ಟು ಅತ್ತುಬಿಟ್ಟಳು. ತುಂಬು ಅಂತಃಕರಣದಿಂದ ಅವಳ ಬೆನ್ನನ್ನ ಸವರಿದರು. ಆಕೆಯು ಒಬ್ಬ ಪ್ರೇಮಿ. ಪ್ರೇಮವನ್ನು ಬೆನ್ನಟ್ಟಿದ ವಿರಾಗಿಣಿ. ಆದರೆ ಪ್ರೇಮದಲ್ಲಿ ಭಸ್ಮವಾಗಿ ಹೋದ ಹೆಣ್ಣು ನಿವೇದಿತಾ.

ನಿವೇದಿತಾ ಬಳಿಯಲ್ಲಿ ಉಳಿದುಕೊಂಡ ಹಣವ ಲೆದರ್‌ಬ್ಯಾಗ್‌ನ ಪ್ರಸನ್ನಗೆ ವಾಪಸ್ಸು ಮಾಡಬೇಕಿತ್ತು. ಹೇಗೆ ? ಮನೆಗೆ ಹೋಗಿ ಇನ್ನೊಂದು ಹೆಣ್ಣಿನ ಮನ ಕಲುಕಲಾರಳು. ಕಾಲೇಜಿಗೆ ಹೋಗಿ ಒಂದು ರೀತಿಯ

ಅಪಹಾಸ್ಯಕ್ಕೆ ತಾನು ಗುರಿಯಾಗುವುದರ ಜೊತೆಗೆ ಪ್ರಸನ್ನನ ಅಪಮಾನ ಗೊಳಿಸುವುದು ಅವಳಿಗೆ ಬೇಕಿರಲಿಲ್ಲ.

ಅರ್ಧ ದಿನ ರಜ ಹಾಕಿ ಕಾಲೇಜಿನ ಬಳಿ ಬರುವ ವೇಳೆಗೆ ಪ್ರಸನ್ನ ಎದುರಾದ.

"ನಮಸ್ತೆ...." ಎಂದಳು. ಪರಿಚಿತರ ಬಳಿ ವ್ಯವಹರಿಸುವಂತಿತ್ತು ಅವಳ ಮುಖಭಾವ "ಇದ್ನ ನಿಮ್ಗೆ ಹಿಂದಿರುಗಿಸಬೇಕಿತ್ತು...." ಎಂದಳು.

ಅತ್ತಿತ್ತ ನೋಡಿದ ಪ್ರಸನ್ನ ದೀರ್ಘವಾಗಿ ಅವಳತ್ತ ನೋಡಿದ. "ಹಿಂದಿರುಗಿಸೋಕ್ಕಲ್ಲ....ಕಳಿಸಿರೋದು" ಎಂದ "ಸಾರಿ...." ಲೆದರ್ ಬ್ಯಾಗ್‌ನ ಅವನ ಮುಂದೆ ಹಿಡಿದಳು. ತೆಗೆದುಕೊಳ್ಳುವುದು ಅವನಿಗೆ ಅನಿವಾರ್ಯ.

"ನಿನ್ಹತ್ರ ಸ್ವಲ್ಪ ಮಾತಾಡ್ಬೇಕಿತ್ತು" ಎಂದ.

"ಈಗ ನಂಗೆ ಪುರಸತ್ತಿಲ್ಲ. ಎಂದಾದ್ರೂ ಸಿಕ್ಕಾಗ ನೋಡೋಣ ನಮಸ್ತೆ" ಹೊರಟು ಬಿಟ್ಟಳು.

ಅತ್ತಲೆ ನೋಡಿದ. ಬೆನ್ನ ಮೇಲಿದ್ದ ತೂಗಿ ಅತ್ತಿತ್ತ ಆಡುತ್ತಿದ್ದ ಜಡೆ ಯನ್ನೆ ನೋಡಿದ. ಕೈಗೇನು, ಗತ್ತಿಗೂ ಸುತ್ತಿಕೊಳ್ಳುತ್ತಿದ್ದ. "ನೀನು ನಂಗೆ ಒಪ್ಗೆ ಕೊಡದಿದ್ರೆ....ಇದೇ ಜಡೆಯಲ್ಲಿ ನೇಣು ಹಾಕಿಕೊಂಡ್ ನನ್ನ ಪ್ರೇಮ ಎಷ್ಟು ಉಜ್ವಲವೆಂದು ಸಾಬೀತು ಮಾಡ್ತೀನಿ" ಮದುವೆಗೆ ಮುನ್ನ ಪ್ರೇಮದ ಅಮಲಿನಲ್ಲಿ ನುಡಿಯುತ್ತಿದ್ದ. ಆ ನೆನಪು ಇಂದು ಅವನನ್ನು ಹರ್ಷ ಚಿತ್ತನನ್ನಾಗಿಸಿತು.

ಆವರಣದಲ್ಲಿ ಪಾರ್ಕ್ ಮಾಡಿದ್ದ ಫಿಯೆಟ್ ಕಾರಿನತ್ತ ನಡೆದ. ಇಂದು ನೀಲಿಮಾ ಕಾಲೇಜಿಗೆ ಬಂದಿರಲಿಲ್ಲ.

"ನನ್ನ ಫ್ರೆಂಡ್ ಒಬ್ರು....ಬರೋರಿದ್ದಾರೆ. ಅವ್ರನ್ನ ಮಿಸ್ ಮಾಡಿ ಕೊಳ್ಳೋಕ್ಕಾಗೋಲ್ಲ" ಎಂದಿದ್ದಳು ಯಾರು, ಏನು ಎಂದು ವಿಚಾರಿಸುವುದು ಪ್ರಬುದ್ಧರ ಲಕ್ಷಣವಲ್ಲ.

ಗೇಟಿನ ಬಳಿಯೇ ಎದುರಾದ ಸೋಮೇಶ್ವರ್ ಕಿರು ನಗೆ ಬೀರಿದರು "ನಿಮ್ಮ ಫ್ರೆಂಡ್ ಒಬ್ರು ಬಂದು ಕಾಯ್ತಾ ಇದ್ದಾರೆ. ಸಿಟ್ಟಿಂಗ್ ರೂಮಿ ನಲ್ಲಿಯೇ ಇದ್ದಾರೆ" ಅವರು ಹೊರಗೆ ನಡೆದರು.

ಯಾರಿರಬಹುದು ? ಈಚೆಗೆ ಪರಿಚಿತರು ಮಾತ್ರ ಇದ್ದರು. ಪರಿಚಯ

ದಿಂದ ಗೆಳೆತನದ ಮೆಟ್ಟಲಿಗೆ ಇಳಿದು ಆತ್ಮೀಯರಾದವರು ಇಲ್ಲವೇ ಇಲ್ಲ. ಅಂಥವರು ಇದ್ದರೂ ದೂರವೇ ಉಳಿದಿದ್ದ.

ಉಡುಪು ಬದಲಾಯಿಸಿಯೇ ಸಿಟ್ಟಿಂಗ್ ಅಥವಾ ಗೆಸ್ಟ್‌ರೂಂಗೆ ಬಂದಿದ್ದು. ಕೂತ ಪಟೇಲ್ ಮ್ಯಾಗಝೀನ್ ತಿರುವುತ್ತಿದ್ದವನು ತಲೆಯೆತ್ತಿ "ಓ...." ಎಂದು ಸಂತೋಷದಿಂದ ಉದ್ಗರಿಸಿದವನು ಎದ್ದು ಬಂದು ಅಪ್ಪಿಕೊಂಡ. ಆತ್ಮೀಯತೆ ಕೂಡ ಕಬ್ಬಿಣದ ಹಿಡಿತದಂತಿತ್ತು.

ಸೈನ್ಯದಲ್ಲಿದ್ದ ವ್ಯಕ್ತಿ, ದಷ್ಟಪುಷ್ಟವಾಗಿ ಬೆಳೆಸಿದ ಮಾಂಸಖಂಡಗಳು ಸತತ ವ್ಯಾಯಾಮ, ಪರಿಶ್ರಮದಿಂದ ರೂಢಿಸಿಕೊಂಡ ಬಲವರ್ಧನೆ.

"ಡಿಯರ್ ಫ್ರೆಂಡ್....ಸ್ವಲ್ಪ ಬಿಡು ಉಸಿರುಗಟ್ತಾ ಇದೆ" ಉಸುರಿದಾಗ ಪಟೇಲ್ ಒಂದು ಬೆನ್ನ ಮೇಲೆ ಗುದ್ದಿಯೇ ಹಿಡಿತದಿಂದ ಪಾರು ಮಾಡಿದ್ದು "ಕ್ಯಾ ಯಾರ್, ಈ ಸ್ನೇಹಿತನ ಆತ್ಮೀಯತೆ ತಡೆದುಕೊಳ್ಳಲಾರದಷ್ಟು ವೀಕಾ ?" ಹಾಗೆಯೇ ಹಿಂದಕ್ಕೆ ಸರಿದು ಕಾಲಿಡಿದುಕೊಂಡು ಕೂತ.

ಅವನ ಪಕ್ಕದಲ್ಲಿಯೇ ಕೂತ ಪ್ರಸನ್ನ ಸ್ನೇಹಿತನ ಭುಜದ ಮೇಲೆ ಕೈ ಹಾಕಿದ "ಯಾವಾಗ್ಬಂದಿದ್ದು ? ಸರ್‌ಪ್ರೈಜ್ ವಿಸಿಟ್...." ಪಟೇಲ್ ನಿಡಿದಾದ ಉಸಿರೆಳೆದು ದಬ್ಬಿದ. ಅಗಲ ಹಣೆಯ ಮೇಲೆ ಗೆರೆಗಳು ಮೂಡಿದವು ಕಣ್ಣುಗಳಲ್ಲಿ ನೋವು ಮಿನುಗಿ ಮರೆಯಾಯಿತು. "ಅದೆಲ್ಲ ದೊಡ್ಡ ಕತೆ, ನಂದು ಇರಲಿ....ನಿನ್ನ ವಿಷ್ಯ ಹೇಳು. ಹಳೇ ಮನೆ ಹತ್ರ ಹೋಗಿದ್ದೆ ಟು–ಲೆಟ್ ಬೋರ್ಡ್ ಇತ್ತು. ಕಾಲೇಜ್ ಹತ್ರ ಬಂದೆ. ಈ ಮನೆ ಅಡ್ರಸ್ ಕೊಟ್ರು. ಎಲ್ಲಿ ನಿವೇದಿತಾ, ಮಗು ?" ಕೇಳಿದ.

ಪ್ರಸನ್ನ ಸುಮ್ಮನೆ ಕೂತುಬಿಟ್ಟ. ನಿವೇದಿತಾ, ಪ್ರಸನ್ನನ ಪ್ರೇಮದ ಹಾರಾಟ, ಹೋರಾಟಕ್ಕೆ ಅವನು ಸಾಕ್ಷಿ. ಎಷ್ಟೋ ದಿನ ಗೋಳು ಹೊಯ್ದು ಕೊಂಡಿದ್ದ.

"ಲೈಲಾ ಮಜ್ನು, ಸಲಿಂ–ಅನಾರ್ಕಲಿ, ರೋಮಿಯೊ–ಜ್ಯೂಲಿಯಟ್ ಪ್ರೇಮಕ್ಕಿಂತ ಭಯಂಕರ ! ನೀವುಗಳು ಸತ್ತರೆ ಖಂಡಿತ ನಾನು ಸ್ಮಾರಕ ನಿರ್ಮಿಸ್ತೀನಿ. ನನ್ನ ಅರ್ನಿಂಗ್ ಎಲ್ಲಾ ಖರ್ಚಾದ್ರೂ ಪರ್ವಾಗಿಲ್ಲ....ಹತ್ತಾರು ಜನ ನಿಂತು ನೋಡಿ ಹೋಗ್ಬೇಕು. ಅಂಥ ಸ್ಮಾರಕ ನಿರ್ಮಿಸ್ತೀನಿ" ನಗೆಯಾಡುತ್ತಿದ್ದ ಪಟೇಲ್,

"ಎನಿ ಥಿಂಗ್ ರಾಂಗ್ ?" ಪಟೇಲ್ ತೋಳಿಡಿದು ಅವನ ಅನ್ಯಮನಸ್ಕತೆಯನ್ನ ಗುರ್ತಿಸಿ ಪ್ರಶ್ನಿಸಿದ. ಇಂದು ಅಂಜಿದ ಪ್ರಸನ್ನ "ಡೈವೋರ್ಸ್ ತಗೊಂಡ್ವಿ. ಇಬ್ರೂ ಈಗ ಬೇರೆ ಬೇರೆಯಾಗಿದ್ದೀವಿ" ಎಂದ ಕೂಡಲೇ ಅವನ ಕುತ್ತಿಗೆಯ ಪಟ್ಟಿ ಹಿಡಿದುಕೊಂಡ ಪಟೇಲ್.

"ಯೂ ಈಡಿಯಟ್, ನೀನೇನು ಹೇಳ್ತಾ ಇರೋದು ಡೈವೋರ್ಸ್...." ಅವನ ಕಣ್ಣುಗಳು ಬೆಂಕಿಯನ್ನ ಉಗುಳಿತು.

"ಹ್ಯಾವ್ ಎ ಪೇಷನ್ಸ್....ಬೇರೆ ದಾರಿ ಇರ್ಲಿಲ್ಲ" ಸಮಾಧಾನಿಸಿದ ಗೆಳೆಯನನ್ನ.ಆದರೆ ಪಟೇಲ್ ಮುಖದ ಬಿಗಿತ ಕಮ್ಮಿ ಆಗಲಿಲ್ಲ "ಪೇಷನ್ಸ್...." ಹಲ್ಲು ಕಡಿದ "ವ್ಹಾಟ್ ದ ಹೆಲ್ ಡೂ ಯು ಟಾಕ್...." ಸಿಡಿದ ಪಟೇಲ್ ಮೌನವಾಗಿ ಕೂತುಬಿಟ್ಟ.

"ಟೇಕ್ ಇಟ್ ಈಸೀ ಪಟೇಲ್. ನಾನು ಅವ್ಳ ಜೊತೆಯಲ್ಲಿ ಬಾಳೋಕೆ ಸಾಧ್ಯವೇ ಇಲ್ಲವೆಂದುಕೊಂಡಾಗ್ಲೇ ಡೈವೋರ್ಸ್ ತಗೊಂಡಿದ್ದು" ಎಂದ ಪ್ರಸನ್ನ.

ಪಟೇಲ್‌ನ ಕಣ್ಣುಗಳು ಕೆಂಪಗಾದವು "ಏನು ಅಂಥ ರೀಸನ್ ? ನಿವೇದಿತಾಗೆ ಬಾಯ್‌ಫ್ರೆಂಡ್ಸ್ ಇದ್ದರ ? ನಿವೇದಿತಾ ಪ್ರೀತಿ ಕಡಿಮೆ ಆಗಿತ್ತಾ ? ಅಥ್ವಾ....ಅಂಥ ಭಯಂಕರ ತಪ್ಪು ಏನಾದ್ರೂ ಮಾಡಿದ್ಲಾ ! ಟೆಲ್ ಮಿ...." ಪಟೇಲ್ ಗುಡುಗಿದ. ಅವನಿಗೆ ಆ ಅಧಿಕಾರವಿತ್ತು. ಅವರಿಬ್ಬರ ಪ್ರೇಮ ಸಾಫಲ್ಯಕ್ಕೆ ಅವನ ಕೊಡುಗೆ ಇತ್ತು.

"ಇಲ್ಲ..." ಅವಳ ಮೇಲೆ ಯಾವ ಅಪಾದನೆಯನ್ನೊರಸಲು ಅವನು ಇಷ್ಟಪಡಲಿಲ್ಲ "ನಿವೇದಿತಾ ಅಂಥ ಯಾವ ಆಪಾದನೆಗಳನ್ನ ಮಾಡ್ಲಿಲ್ಲ. ಎಂ ಎಸ್ ಸಿ ಪೂರ್ತಿ ಆಗೋ ವೇಳೆಗೆ ನನಗೆ ಅವಳ ಮೇಲಿದ್ದ ಆಸಕ್ತಿಯೇ ಕಡ್ಮೆಯಾಯಿತು. ಮನೆಗೆ ಹೋದರೇ ಕತ್ತು ಹಿಡಿದು ತಳ್ಳಿದಂಥ ಅನುಭವ ಒಂದು ರೀತಿಯ ಜಡತ್ವ ನನ್ನಲ್ಲಿ ಷುರುವಾಯ್ತು. ಹೊರ್ಗೆ ಸುಂದರವಾಗಿ ಕಾಣುವ ಪ್ರಪಂಚ ಅವಳನ್ನ ನೋಡಿದ ಕೂಡ್ಲೇ ಮಸುಕಾಗತೊಡಗಿತು. ಕಾರಣನ ಹುಡ್ಕೀ ಹುಡ್ಕೀ ಸೋತು ಹೋದೆ. ಅವ್ಳ ಮಾತು, ನಡತೆ ಪ್ರತಿಯೊಂದರ ಬಗ್ಗೆಯು ನನ್ನಲ್ಲಿ ಜಿಗುಪ್ಸೆ ಮೂಡತೊಡಗಿತು. ಪ್ರೇಮ, ಪ್ರೀತಿ, ಮದುವೆಯ ಬಗ್ಗೆ ಯೋಚ್ಸಿ ಕಂಗೆಟ್ಟೆ" ಮುಖ ಮೇಲೆತ್ತಿ ನಿಟ್ಟುಸಿರು ದಬ್ಬಿದ.

"ವಾಹ್ಹ್....ಪ್ಲೀಸ್ ಕಂಟಿನ್ಯೂ...." ವ್ಯಂಗ್ಯವಾಗಿ ಹೇಳಿದ.

ಆದರೆ ಪ್ರಸನ್ನ ಕಂಗೆಡಲಿಲ್ಲ, ಕೋಪಿಸಿಕೊಳ್ಳಲಿಲ್ಲ. ಮನದಲ್ಲಿಯೇ ವಿಶ್ಲೇಕ್ಷಿಸಿ ಸೋತು ಹೋಗಿದ್ದ. ಗೆಳೆಯನ ಮುಂದೆ ತೋಡಿಕೊಳ್ಳುವುದು ಸಮಂಜಸವಾಗಿ ಕಂಡಿತು.

"ನಿವೇದಿತಾ ಸನ್ನಿಹ ನನ್ನಲ್ಲಿ ಉಸಿರುಗಟ್ಟಿಸತೊಡಗಿತು. ನನ್ನಿಂದೆ ನನ್ನ ಪ್ರೇಮದ ಬಗ್ಗೆ ಒಂದು ಪದ ಉಪಯೋಗಿಸಿದ್ರು ಇದು 'ಇನ್ ಫ್ಯಾಚು ಯೇಷನ್' ಅಷ್ಟೆ....ಅದು ನನಗೆ ನಿಜವೆನಿಸತೊಡಗಿತು. ಅವಳ ರೂಪು, ವ್ಯಕ್ತಿತ್ವ ಕೂಡ ಅಸಹನೀಯವೆನಿಸತೊಡಗಿತು. ನಿವೇದಿತಾ ಎದುರಿನಲ್ಲಿ ನಿಮಿಷ ಗಳನ್ನ ದೂಡಲು ಕೂಡ ಪ್ರಯಾಸವೆನಿಸಿತು. ಆಗ ನನ್ನ ಬದ್ಕಿನಲ್ಲಿ ಬಂದವಳು ನೀಲಿಮಾ. ನಮ್ಮಿಬ್ರ ಜೀವನ, ಮಾತು ಪ್ರತಿಯೊಂದರಲ್ಲು ಹೊಸ ಹೊಸ ಅರ್ಥಗಳು ಕಾಣತೊಡಗಿತು. ಉತ್ಸಾಹಿತನಾದೆ. ಡೈವೋರ್ಸ್ ಬಿಟ್ಟು ಬೇರೆ ದಾರಿ ಇರ್ಲಿಲ್ಲ" ಹೇಳಿಕೊಂಡ.

ಕೋಪ ಬಿಟ್ಟು ಪಟೇಲ್ ಕರುಣೆಯಿಂದ ಅವನತ್ತ ನೋಡಿದ. ಮುಗ್ಧತೆಯೋ, ಮೂರ್ಖತೆಯೋ, ಅಜ್ಞಾನವೋ ಅವನಿಗೊಂದು ಅರ್ಥ ವಾಗಲಿಲ್ಲ.

"ದಾಂಪತ್ಯದ ಬದ್ಕಿಗೆ ಬೌದ್ಧಿಕ ಸಹಚರ್ಯ ಅಗತ್ಯವೆನಿಸಿತು" ಮತ್ತೆ ನುಡಿದ ಪ್ರಸನ್ನ ಮತ್ತಷ್ಟು ಕರುಣೆಯಿಂದ ಅವನನ್ನು ನೋಡಿದ ಪಟೇಲ್ "ಅಂದರೇ ಇಬ್ರೂ ಒಂದೇ ಕ್ಲಾಸ್‌ನಲ್ಲಿ ಓದಿರಬೇಕು? ಅಥ್ವಾ ಒಂದೇ ಸಬ್ಜೆಕ್ಟ್. ತಗೊಂಡ್ ಡಿಗ್ರಿಗಳ್ನ ಹಾಕಿಕೊಂಡಿರಬೇಕು ?" ಎದ್ದು ಗೆಳೆಯನ ಭುಜದ ಮೇಲೆ ಕೈ ಹಾಕಿದ "ಇದ್ರಲ್ಲಿ ನಿವೇದಿತಾ ತಪ್ಪೇನು ? ಅವ್ಳಿಗೂ ಈ ತರಹ ಅನ್ನಿಸಿದ್ದರೆ....ಖಂಡಿತ ಇಂಥ ಮಾರ್ಗ ಹಿಡೀತಾ ಇರ್ಲಿಲ್ಲ. ಅದ್ಕೇ ನೀನು ಹಿಡಿದ ಮಾರ್ಗ ಪರಿಹಾರವಲ್ಲ. ನಿನ್ನ ಮನದಲ್ಲೇ ಹುಟ್ಟಿದ ಅನಾಸಕ್ತಿ, ನಿರುತ್ಸಾಹ, ಆಂದೋಲನ ಅಲ್ಲೇ ಸಾಯ್ತಾ ಇತ್ತು. ಅದ್ಕೇ ಒಂದಿಷ್ಟು ಕಾಲಾವಕಾಶ ಮಾತ್ರ ಬೇಕಾಗ್ತಾ ಇತ್ತು. ಕೆಲವು ದಿನ ನೀವಿಬ್ರೂ ಬೇರೆ.... ಬೇರೆಯಾಗಿದ್ರೆ....ಸರಿ ಹೋಗ್ತಾ ಇತ್ತು. ಅಲೋಕ್ ಬಗ್ಗೆ ಏನ್ಮಾಡ್ದೇ?" ಕೇಳಿದ.

ಪ್ರಸನ್ನನ ತಲೆ ಪೂರ್ತಿ ತಗ್ಗಿತು. ಮಗನ ವಿಷಯದಲ್ಲಿ ಅವನು ದೊಡ್ಡ ಅಪರಾಧಿ.

"ನಿವೇದಿತಾ ಜೊತೆಯಲ್ಲೇ ಇದ್ದಾನೆ. ನನ್ನಲ್ಲಿ ಬೆಳೆದ ಅನಾಸಕ್ತಿ ದಿನ ದಿಂದ ದಿನಕ್ಕೆ ನಮ್ಮಿಬ್ರ ಮಧ್ಯೆ ಕಂದಕ ತೋಡಿತು. ಅವನನ್ನು ದೂರ ಸರಿಸಿದ್ದೆ" ಸರ್ವವನ್ನು ನುಡಿಯಲು ಹಿಂಜರಿಯಲಿಲ್ಲ ಅವನು. ಪಟೇಲ್ ತುಟಿ ಯಂಚಿನಲ್ಲಿ ನೋವಿನ ನಗೆಯೊಂದು ಮಿನುಗಿ ಮಾಯವಾಯಿತು.

ಮುಷ್ಟಿ ಹಿಡಿದು ಗೋಡೆಗೆ ಗುದ್ದಿದ "ನೀವಿಬ್ರೂ ಮದ್ವೆಯಾಗದಿದ್ರೆ ಚೆನ್ನಾಗಿತ್ತು. ಅಂದಿನ ಪ್ರೇಮ ಗಿಡವಾಗದಿದ್ರೂ ಸದಾ ನಿಮ್ಮಗಳ ಹೃದಯ ದಲ್ಲಿ ಅರಳಿ ಜೀವನ ಪೂರ್ತಿ ಜೊತೆಯಾಗಿ, ಆಹ್ಲಾದಕರವಾಗಿ, ಬದುಕಿಗೊಂದು ಚೇತನವಾಗಿ ಉಳಿಯುತಿತ್ತು. ಇದೊಂದು ಸ್ಯಾಡ್ ಲವ್ ಸ್ಟೋರಿ" ಮುಖ ಕಿವಿಚಿದ ಪಟೇಲ್. ಈಗ ಅವನ ಮನಸದಲ್ಲಿದುದ್ದು ಅಲೋಕ್, ನಿವೇದಿತಾ.

This world in a comedy of those that think; a tragedy to those that feel (ವಿಚಾರಶೀಲರಿಗೆ ಜಗತ್ತೊಂದು ಪ್ರಹಸನ, ಸಂವೇದನಾಶೀಲರಿಗೆ ಅದೊಂದು ದುರಂತ ನಾಟಕ)–ಓದಿದ್ದನ್ನ ನೆನಪಿಸಿಕೊಂಡು ನಿಟ್ಟುಸಿರು ದಬ್ಬಿದ.

ತಟ್ಟನೆ ಪ್ರಸನ್ನನತ್ತ ತಿರುಗಿ "ದೆನ್ ಓಕೆ....ಸೀಯೂ" ಪಟೇಲ್ ಹೊರಟು ಬಿಟ್ಟ.

ಮಾರುತಿ ಹತ್ತಿದಾಗ ಅವನ ಹೃದಯ ಕಣ್ಣೀರಿಡುತ್ತಿತ್ತು. ಅಂದಿನ ಪ್ರೇಮಿಗಳು ಸತ್ತಿದ್ದರೇ ಅವನೆದೆಯಲ್ಲಿ ಚಿರನೆನಪವಾಗಿ ಉಳಿಯುತ್ತಿದ್ದರು. ಅಮರವಾಗುತ್ತ ಇದ್ದರು. ಇಂದು ಅವನಲ್ಲಿನ ಪ್ರೇಮಿಗಳು ಸತ್ತು ಸಮಾಧಿಯಾದರು. ಅದರ ಪಳಿಯುಳಿಕೆಗಳು ಉಳಿಯುವುದು ಕೂಡ ಅವನಿಗೆ ಬೇಡ.

ವಿಚಾರಿಸಿಕೊಂಡೇ ಗೋದಾವರಿಯವರ ಔಟ್ ಹೌಸ್‌ಗೆ ಬಂದ. ಟೈಪ್ ರೇಟಿಂಗ್‌ನ ಟಕ ಟಕ ಸದ್ದು ಕೇಳಿಸುತ್ತಿತ್ತು. ಕಾಲಿಂಗ್ ಬೆಲ್ ಒತ್ತದೇ ಬಾಗಿಲ ಮೇಲೆ ಬೆರಳಿನಿಂದ ಸದ್ದು ಮಾಡಿದ ಬಾಗಿಲು ತೆಗೆದುಕೊಂಡಿತು.

"ಓ....ನೀವಾ...."ನಿವೇದಿತಾ ಮುಖ ಅರಳಿತು "ಬನ್ನಿ...." ಹಿಂದಿನ

ವಿಶ್ವಾಸವೇ. ಮೌನವಾಗಿ ಒಳಗಡಿಯಿಟ್ಟು ನೋಟ ಹರಿಸಿದ ಮನೆ ಪುಟ್ಟ ದಾಗಿದ್ದರು ಅಚ್ಚುಕಟ್ಟಾಗಿತ್ತು.

"ಕೂತ್ಕೊಳ್ಳಿ ..." ಬೆತ್ತದ ಛೇರ್‌ನತ್ತ ಕೈ ತೋರಿಸಿದಳು.

"ಹೇಗಿದ್ದೀರಾ, ನಿವೇದಿತಾ ?" ಕೇಳಿದ. ಆ ಪ್ರಶ್ನೆ ಅಷ್ಟು ಸಮಂಜಸವಲ್ಲವೇನೋ ಎನಿಸಿತು ನಂತರ "ಓಕೆ, ಫೈನ್.... ಯಾವಾಗ್ಬಂದಿದ್ದು ?" ಕೇಳಿದಳು. ಏರಿಳಿತವಿಲ್ಲದ ಪಕ್ವವಾದ ದನಿ.

ತುಟಿಯಂಚಿನಲ್ಲಿ ನಗು ಅರಳಿಸಿದ "ಭಾರತಕ್ಕೆ ಬಂದು ಕೆಲವು ದಿನ ಗಳಾಯ್ತು. ಟ್ರೈನಿಂಗ್ ನೆಪದಲ್ಲಿ ಎರಡ್ವರ್ಷ ರಷ್ಯದಲ್ಲಿ ಇರಬೇಕಾಯ್ತು. ಅಲ್ಲಿಂದ ಶ್ರೀಲಂಕಾಗೆ, ಇಲ್ಲಿಗೆ ಬಂದು ಒಂದು ದಿನ ಕೂಡ ಪೂರ್ತಿ ಆಗಿಲ್ಲ" ಎಂದ. ನಿವೇದಿತಾಗೆ ನಿಲ್ಲಲಾಗಲಿಲ್ಲ. "ಈಗ್ಬಂದೇ...." ಅಡಿಗೆಯ ಮನೆಗೆ ಹೋಗಿ ಕಣ್ಣೀರು ಕೊಡೆದುಕೊಂಡಳು.

ಆರ್ಮಿಯದಲ್ಲಿದ್ದ ಪಟೇಲ್ ಪ್ರಸನ್ನನಿಗೆ ಒಳ್ಳೆಯ ಫ್ರೆಂಡ್. ಅವರ ಪ್ರೇಮಕ್ಕೆ ಧೈರ್ಯ ತುಂಬಿದವನು, ಸಫಲವಾಗಲು ಶ್ರಮಿಸಿದವನು, ಶುಭ ಹಾರೈಸಿದ್ದು ಮಾತ್ರವಲ್ಲ ಅಂದು ಸಹಾಯ ಮಾಡಿದ ಏಕೈಕ ಬಂಧು.

ಟೀ ತಂದಾಗ ಸುಮ್ಮನೇ ನೋಡುತ್ತ ಕೂತಿದ್ದ ಪಟೇಲ್ ನಿಟ್ಟುಸಿರು ಚೆಲ್ಲಿದ "ನಿಮ್ಗೆ ಕಷ್ಟ ಬೇಡ. ಆ ಇಡಿಯಟ್‌ನ ಕಂಡೇ ಬಂದಿದ್ದು. ಮಗು....ಎಲ್ಲಿ ?" ಟೀ ಕಪ್ ತೆಗೆದುಕೊಂಡ ಉದ್ವೇಗ, ಕೋಪ, ಬೇಸರ ವೊಂದನ್ನು ಕೂಡ ಪ್ರದರ್ಶಿಸಲಿಲ್ಲ.

ಒಂದು ರೀತಿ ನಿರಾಳವಾಯಿತು ನಿವೇದಿತಾಗೆ. ಎಷ್ಟೇ ಧೈರ್ಯ ತಂದು ಕೊಂಡರೂ 'ಬಿಡುಗಡೆ' ಒಂದು ರೀತಿಯ ನೋವು, ಆ ಬಗೆಗಿನ ಪ್ರಶ್ನೆಗಳಿಗೆ ಉತ್ತರಿಸುವುದು, ಅದರ ಬಗ್ಗೆ ಮಾತಾಡುವುದು ಅವಳಿಗಿಷ್ಟವಿಲ್ಲ,

"ನನ್ನ ಕೋಲಿಗ್ ಚೈತ್ರ ಮನೆಗೆ ಹೋಗಿದ್ದಾನೆ. ಅವ್ರ ಮಕ್ಳು ಇವ್ನಿಗೆ ಫ್ರೆಂಡ್ಸ್" ಎಂದಳು.

ಆ ವಿಷಯ ಬಿಟ್ಟು ಅವಳ ಶಾಲೆ, ಔಟ್ ಹೌಸ್, ಅಲೋಕ್‌ನ ಓದಿನ ಬಗ್ಗೆಯಲ್ಲಿ ವಿಚಾರಿಸಿದ. ಮಧ್ಯೆ ಮಧ್ಯೆ ಮಾಮೂಲಿ ಜೋಕ್ ಹಾರಿಸಿದ.

ಹೊರಟು ನಿಂತಾಗ ಅವಳಿಗೊಂದು ವಿಳಾಸದ ಕಾರ್ಡ್ ಕೊಟ್ಟ.

"ಸಂಡೇ ಅಲೋಕ್‌ನ ಕಕೋರ್ಣಂಡ್....ಬನ್ನಿ ನಿವೇದಿತಾ. ಮಧ್ಯಾಹ್ನದ ಲಂಚ್ ವೇಳೆಗೆ ಅಲ್ಲಿಗೆ ಬಂದ್ಬಿಡಿ. ನಾನು ವೈಟ್ ಮಾಡ್ತಾ ಇರ್ತೀನಿ" ಮೇಲೆದ್ದ.

ಬಾಗಿಲ ಹೊರಗೆ ಹೋದವನು "ಮಿಸ್ ಮಾಡ್ಬೇಡಿ. ಆಮೇಲೆ ನಾನು ಉಪವಾಸ ಮಾಡ್ಬೇಕಾಗುತ್ತೆ" ತಮಾಷೆ ಮಾಡಿದವನು ಅವಳ ಪ್ರತಿ ಕ್ರಿಯೆಗೂ ಕಾಯದೇ ಹೊರಟುಬಿಟ್ಟ.

ಒಳಗೆ ಬಂದ ನಿವೇದಿತಾ ಒಂದು ಕಡೆ ಕುಕ್ಕರಿಸಿದಳು. ಎಂಥ ಸುಂದರ ವಾದ ಬದುಕು, ಹೇಗೆ ಛಿದ್ರವಾಗಿ ಹೋಯಿತು. ಡೈವೋರ್ಸ್‌ಗೆ ಸತ್ಯ ವಾದ ಕಾರಣವನ್ನೆ ಗೆಳೆಯನಿಗೆ ಹೇಳಿರಬೇಕು ಪ್ರಸನ್ನ.

ಮೊಣಕಾಲಿನ ಮೇಲೆ ಗದ್ದವೂರಿ ಕಣ್ಣೀರು ಸುರಿಸಿದಳು. ಅವರಲ್ಲಿ ಅಂಥ ಭಾವನೆಗಳು ಮೂಡಲು ತನ್ನ ದೋಷವೇನು ? ರೂಪ ಕೆಟ್ಟಿದೆಯಾ? ಎದ್ದು ಹೋಗಿ ಕನ್ನಡಿಯ ಮುಂದೆ ನಿಂತಳು.

ಮೇಕಪ್ ಇಲ್ಲದ ಸೌಮ್ಯ ಮುಖ ಸುಂದರವಾಗಿಯೇ ಇತ್ತು. ಎರಡು ಮಕ್ಕಳ ತಾಯಿಯಾದರೂ ಅವಳ ಮುಖದ ಬಣ್ಣವೇನು ಕೆಟ್ಟಿಲ್ಲದಿದ್ದರೂ ಕಣ್ಣಿನ ಸುತ್ತ ಆವರಿಸಿದ ಕಪ್ಪು ಛಾಯೆ ಅವಳ ಗಮನವನ್ನು ಸೆಳೆಯಿತು. ದುಡಿತ, ಹೋರಾಟದ ಬದುಕು ಅವಳನ್ನು ಬಳಲಿಸಿದ್ದರೂ ಆತ್ಮಸ್ಥೈರ್ಯ ವನ್ನು ಹೆಚ್ಚಿಸಿತ್ತು. ಚೆಲುವಿನಲ್ಲಿ ಪಕ್ವತೆ ಇತ್ತು ಇಂದು. ಅವಳ ಮಾಟ ವಾದ ಮೈಕಟ್ಟೇನು ಕೆಟ್ಟಿರಲಿಲ್ಲ. ಆದರೆ ಥಳುಕು ಬಳಕಿನ ಶೃಂಗಾರಕ್ಕೆ ಅವ ಳೆಂದು ಸೋತವಳೇ ಅಲ್ಲ.

ಟೈಪಾದ ಪೇಪರ್‌ಗಳನ್ನೆಲ್ಲ ಜೋಡಿಸಿ ಒಂದು ಕಡೆ ಇಟ್ಟಳು. ಈಚೆಗೆ ಗೋದಾವರಿ ಹೆಡ್‌ಮೇಡಮ್ ಅವರು ಸಕಲವನ್ನು ನಿವೇದಿತಾಗೆ ಹೊರಿಸಿ ಬಿಟ್ಟಿದ್ದರು. ಕೆಲವು ಹಿರಿಯ ಉಪಧ್ಯಾಯರಿಗೆ ಹೊಟ್ಟೆಕಿಚ್ಚು. ಅದನ್ನು ತೋರ್ಪಡಿಸಿಕೊಂಡಿದ್ದರು ಕೂಡ. ಅಂದೇ ಅವಳನ್ನು ಕರೆದು ಎಚ್ಚರಿಸಿದ್ದರು ಗೋದಾವರಿ.

"ಬಿ ಕೇರ್ ಫುಲ್. ಯಾರದೇ ಮಾತುಗಳಿಗೆ ಮನಸ್ಸು ಕೆಡಿಸಿಕೊಳ್ಳ ಬೇಡ. ಪರಿಸ್ಥಿತಿನ ಫೇಸ್ ಮಾಡೋದು ಕಲಿ. ಯಾವ್ದೇ ವಿಷ್ಯ ನಂಬುವ ಮೊದ್ಲು ಚಿಂತಿಸು, ನನ್ನ ಜೊತೆ ಚರ್ಚಿಸು, ನಂತರವೇ ನಿರ್ಧಾರ ತಗೋ."

ಅವರ ಮಾತುಗಳನ್ನ ನಿವೇದಿತಾ ಸೀರಿಯಸ್ಸಾಗಿ ತಗೊಂಡಿದ್ದಳು.

ಬಾಗಿಲಿಗೆ ಬೀಗ ತಗುಲಿಸಿ ಟೈಪ್ ಪೇಪರ್‌ಗಳನ್ನು ಹಿಡಿದು ಮುಂದಿನ ಮನೆಗೆ ಬಂದಳು. ಪಟೇಲ್ ಬಂದು ಹೋಗಿದ್ದನ್ನು ಗೋದಾವರಿ ಗಮನಿಸಿದ್ದರು.

"ಬಾ....ಕೂತ್ಕೋ" ತಮ್ಮ ಪಕ್ಕದಲ್ಲಿಯೇ ಕೂಡಿಸಿಕೊಂಡರು.

"ನಾಳೆನೇ ಇವೆಲ್ಲ ಪೋಸ್ಟಿಂಗ್ ಆಗ್ಬೇಕು. ಅವ್ರು ಮಕ್ಕಳ ಪ್ರೋಗ್ರೆಸ್ ಬಗ್ಗೆ ಉದಾಸೀನವಾಗಿದ್ರೆ....ನಾವು ಅಸಹಾಯಕರಾಗಿ ಬಿಡ್ತೀವಿ" ಡಲ್ ವಿದ್ಯಾರ್ಥಿಗಳ ಬಗೆಗೆ ಚರ್ಚಿಸಿದರು.

ಶಾಲೆಯ ಇತ್ತೀಚಿನ ಬೆಳವಣಿಗೆಗೆ, ಸಮಸ್ಯೆಗಳ ಬಗ್ಗೆ ಅವಳಲ್ಲಿ ಮಾತಾಡಿದರು. ಭಾನುವಾರದ ಸುದ್ದಿ ಬಂದಾಗ ನೆನಪಿಸಿಕೊಂಡಂತೆ ಹೇಳಿದಳು.

"ಪ್ರಸನ್ನ ಫ್ರೆಂಡ್ ಪಟೇಲ್ ಬಂದಿದ್ರು. ಅವರಲ್ಲಿಗೆ ನನ್ನ, ಅಲೋಕ್‌ನ ಊಟಕ್ಕೆ ಕರೆದಿದ್ದಾರೆ. ಅಂದು ನಮ್ಮ ಮದ್ವೆಗೆ ಸಹಾಯ ಮಾಡಿದ ಏಕೈಕ ಬಂಧು."

ಎರಡು ನಿಮಿಷ ಸುಮ್ಮನಿದ್ದ ಗೋದಾವರಿ "ಒಂದಿಷ್ಟು ಛೇಂಜ್ ಇರುತ್ತೆ, ಹೋಗ್ಬಾ. ರಾತ್ರಿ ಡಿನ್ನರ್ ಇಲ್ಲೆ" ಎಂದರು. ಅವರತ್ತ ಗೌರವದಿಂದ ನೋಡಿದಳು.

"ಒಂದು ತಿಂಗ್ಳಿಗೆ ತಂದ ಸಾಮಾನು ಮೂರು ತಿಂಗಳಾದ್ರೂ ಖರ್ಚು ಆಗೋಲ್ಲ. ಹೆಚ್ಚು ಕಡ್ಮೆ ಊಟ, ತಿಂಡಿ ಎಲ್ಲಾ ಇಲ್ಲೇ ಆಗೋಗುತ್ತೆ. ಮನೆ ಬಾಡ್ಗೇ ಇಲ್ಲ. ಸಂಬ್ಳದ ಹಣ ಏನ್ಮಾಡ್ಲೀ ?....ಅವಳ ಕಂಠ ಗದ್ಗದವಾಯಿತು.

ಪ್ರೀತಿಯಿಂದ ಅವಳ ಕೈ ಹಿಡಿದುಕೊಂಡರು. "ಅಲೋಕ್‌ನ ಭವಿಷ್ಯಕ್ಕಾಗಿ ಕಾಯ್ದಿಡು. ನಿಂದು ಚಿಕ್ಕಪುಟ್ಟ ವಯಸ್ಸು. ಬದ್ಕು ವಿಶಾಲವಾಗಿದೆ. ನಿನಗೊಂದು ಕೆಲ್ಸ ಇದ್ದಿದ್ರಿಂದ ನಿನ್ನ ಸ್ವಾಭಿಮಾನ ಮಾಡಿಕೊಳ್ಳೋಕೆ ಸಾಧ್ಯವಾಯ್ತು. ಇಲ್ದಿದ್ರೆ ಪ್ರಸನ್ನ ಕೊಡೋ ಜೀವನಾಂಶಕ್ಕೆ ಕೈ ಚಾಚಬೇಕಿತ್ತು." ಸತ್ಯವನ್ನು ಸ್ಪಷ್ಟವಾಗಿ ಅವಳ ಮುಂದೆ ಅರುಹಿದರು. ತಲೆದೂಗಿದಳು.

ಅಷ್ಟರಲ್ಲಿ ಅಲೋಕ್ ಬಂದ. ಷರಟು, ನಿಕ್ಕರ್ ಜೇಬುಗಳ ತುಂಬೆಲ್ಲ ಸೀಬೆಕಾಯಿಗಳು, "ತಗೋ...." ತಾಯಿಯ ಮುಂದಿಡಿದ.

ನೆನಪು ಅವಳನ್ನು ನೋಯಿಸಿತು. ಅಲೋಕನ ಬಸುರಿಯಲ್ಲಿ ಒಮ್ಮೆ ದೇವಸ್ಥಾನಕ್ಕೆ ಹೋಗಿದ್ದಾಗ ಅವಳ ಕಣ್ಣಲ್ಲಿನ ನೋಟದಿಂದಲೇ ಬಯಕೆ ಯನ್ನು ಅರಿತ ಪ್ರಸನ್ನ ಓಡಿ ಹೋಗಿ ಕೊಂಡುತಂದಿದ್ದ.

"ನಿನ್ನ ಕಣ್ಣುಗಳ ಭಾಷೆಯನ್ನ ಸುಲಭವಾಗಿ ಓದಬಲ್ಲೆ. ನಿನ್ನ ಈ ಸ್ಥಿತಿಯಲ್ಲಿ ನಾನು ಅಸಹಾಯಕ" ಕೈ ಕೈ ಹಿಸುಕಿಕೊಂಡಿದ್ದ ಅವೆಂಥ ಮಧುರ ಕ್ಷಣಗಳು. ಅಂದಿನ ಕಷ್ಟದಲ್ಲಿ ಸುಖವಿತ್ತು.

ಗೋದಾವರಿ ಅವನನ್ನು ಹತ್ತಿರಕ್ಕೆಳೆದುಕೊಂಡು ಕೂದಲಲ್ಲಿ ಬೆರಳಾಡಿಸಿದರು "ಸೀಬೇಕಾಯಿ... ಯಾರು ಕಿತ್ತು ಕೊಟ್ರು ?" ಅಲೋಕ ತಾಯಿಯತ್ತ ಕಳ್ಳ ನೋಟ ಬೀರಿದ "ನಾನೇ ಮರ ಹತ್ತಿದ್ದೇ...."

ಕ್ಷಣ ಉದ್ವೇಗಗೊಂಡರೂ ಹೊರಗೆ ತೋರಿಸಿಕೊಳ್ಳಲಿಲ್ಲ ನಿವೇದಿತಾ "ಆಗ್ಲೇ ಮರ ಹತ್ತೋಷ್ಟು....ಪ್ರಾವಿಣ್ಯ ! ತುಂಬ ತುಂಟ ಮೇಡಮ್...." ಅಂದರೂ ಮನೆಗೆ ಹೋದ ಮೇಲಂತು ಏಟು ತಿನ್ನದಿದ್ದರೂ ತಾಯಿಯ ಬೈಗಳನ್ನಾದರೂ ಕೇಳಬೇಕಿತ್ತು.

ಮನೆಗೆ ಬಂದ ಕೂಡಲೇ ಕೈಯೆತ್ತಿದವಳು ಇಳಿಸಿದಳು ಇಂಥ ಪ್ರಸಂಗ ದಲ್ಲಿ "ಪಪ್ಪ, ಮಮ್ಮಿ ಹೊಡೀತಾಳೆ" ದೂರು ಹೊಯ್ದಿದ್ದ. ಇಂದು ದೂರು ಕೇಳಲು ಯಾರು ಇಲ್ಲದಿದ್ದರಿಂದ ಕೋಪ ಕೂಡ ಸಮ್ಮತವಾಗಿ ಅವಳಿಗೆ ಕಾಣಲಿಲ್ಲ.

"ಇನ್ನು ಮೇಲೆ ಚೈತ್ರ ಆಂಟೀ ಮನೆಗೆ ನೀನು ಹೋಗಕೂಡ್ದು" ಗದರಿಸಿದಳು ಮೂಲೆಯಲ್ಲಿ ಹೋಗಿ ಪುಸ್ತಕವಿಡಿದು ಕೂತ "ಅಂಕಲ್ ಅರುಣನಿಗೆ ಈಜು ಕಲಿಸ್ತಾರಂತೆ" ಎಂದ.

"ನೀನು ಕಲಿಯುವಂತೆ...." ಎಂದಳು.

"ಯಾರು ಕಲ್ಸಿಕೊಡ್ತಾರೆ" ಪ್ರಶ್ನೆ.

ಅವನತ್ತ ಕೋಪದ ನೋಟ ಹರಿಸಿದಳು. ಪ್ರಶ್ನೆ ಎಸೆಯುವಲ್ಲಿ ಚಾಣಾಕ್ಷ. ಆದರೆ ಉತ್ತರಿಸಲು ಇವಳು ಪರದಾಡಬೇಕು.

"ಈಜು ಕೊಳದ ಬಳಿಯಲ್ಲಿ ಹೇಳಿ ಕೊಡೋ ಜನ ಇರ್ತಾರೆ. ಎದ್ದು

ಹೋಗಿ ಬಟ್ಟೆ ಬದಲಾಯ್ಸಿ ಬಾ...." ತಾಯಿಯ ಕೋಪವಿನ್ನು ಕಡಿಮೆ ಯಾಗಿಲ್ಲವೆಂದು ಅವಳ ಸ್ವರದಲ್ಲಿಯೇ ಗುರ್ತಿಸಿದ "ಪ್ರಾಮಿಸ್, ನಾಳೆಯಿಂದ ಮರ ಹತ್ತೋಲ್ಲ" ಸೀಬೆಕಾಯಿಗಳನ್ನ ಅವಳ ಮುಂದಿಡಿದ. ಅಪ್ಪಿಕೊಂಡು ಮುದ್ದಿಸಿದಳು.

ಮರುದಿನದಿಂದಲೇ ಅಲೋಕ್‌ಗೆ ಈಜು ಕಲಿಸಲು ಗೊತ್ತು ಮಾಡಿದಳು.

* * * *

ಅಂದು ಸೋಮೇಶ್ವರ್ ಮನೆಯಲ್ಲಿ ಒಂದು ಪಾರ್ಟಿ, ವಿದೇಶದಲ್ಲಿದ್ದ ಮಗ ಬಂದಿದ್ದ ಮತ್ತು ಅವನ ಮಗುವಿನ ಬರ್ತ್‌ಡೇ ಸಮಾರಂಭ.

ಅಲ್ಲಿ ನೀಲಿಮಾ ಸ್ನೇಹಿತರು, ಬಂಧುಗಳು ಮತ್ತು ಸೋಮೇಶ್ವರ್ ಮತ್ತು ಅವರ ಹೆಂಡತಿಯ ಕಡೆಯವರು, ಅವರುಗಳಿಗೆ ಬೇಕಾದವರೆಲ್ಲ ಆಗಮಿಸಿದ್ದರು. ಆದರೆ ಪ್ರಸನ್ನ ಮಾತ್ರ ಒಂಟಿ. ಪರಿಚಯಿಸಿದವರೊಡನೆ ಮುಗುಳ್ನಗೆಯ ವಿನಿಮಯ ಅಷ್ಟೆ.

ಒಂದು ಕಡೆ ಒಂಟಿಯಾಗಿ ಕೂತುಬಿಟ್ಟ. ನೀಲಿಮಾ ಅತ್ಯಂತ ಸಂತೋಷ, ಉತ್ಸಾಹದಿಂದ ಓಡಿಯಾಡುತ್ತಿದ್ದಳು. ಅವನಿಗೆ ಇಂಥ ಆಧುನಿಕ ಶ್ರೀಮಂತ ಪಾರ್ಟಿಗಳು ಹೊಸವು.

"ಓ, ಪ್ರಸನ್ನ....ಯಾಕೆ ಕೂತುಬಿಟ್ರಿ ?" ಮುನಿಸು ತೋರಿಸುತ್ತ ಅವನನ್ನ ನೀಲಿಮಾ ಎಳೆದೊಯ್ದಳು. ಅವನಿಗೆ ಅತಿಯಾದ ಸಂಕೋಚ, "ಪ್ಲೀಸ್, ನೀಲಿಮಾ....ನಂಗೆ ತಲೆ ಸಿಡಿತ ಇದೆ ರೆಸ್ಟ್....ತಗೋತೀನಿ" ರಿಕ್ವೆಸ್ಟ್ ಮಾಡಿಕೊಂಡ "ಓಕೆ...." ಅವನ ಕೈಬಿಟ್ಟಳು.

ಪ್ರಸನ್ನ ಅವನ ಕೋಣೆಗೆ ಹೋಗಿ ಮಲಗಿಬಿಟ್ಟ. ಅವನದು ಮಧ್ಯಮ ದರ್ಜೆಯ ಕುಟುಂಬ, ಒಂದು ರೀತಿಯಲ್ಲಿ ಸರಳವಾದ ಬದುಕು. ನಿವೇದಿತಾ ಅವನ ಬದುಕಿನಲ್ಲಿ ಬಂದ ಮೇಲೆ ತೀರಾ ಕಷ್ಟದ ದಿನಗಳನ್ನ ಕಂಡರೂ ಬೆವರಿನಲ್ಲು ಮುಗುಳ್ನಗೆ ಮಾಸದಂತಿರುತ್ತಿದ್ದಳು.

"ಹೇಗೂ ನಿಮ್ಗೆ ಕೆಲ್ಸ ಸಿಕ್ತು ಆರಾಮಾಗಿ ಮನೆಯಲ್ಲಿ ಇದ್ದು ಬಿಡ್ಲಾ ?" ಅವನೆದೆಯಲ್ಲಿ ಮುಖವಿಟ್ಟು ಪ್ರಶ್ನಿಸಿದಾಗ ಮೌನವಾಗಿದ್ದ. "ಪ್ಲೀಸ್, ನನ್ನನ್ನೇನು....ಕೇಳ್ಬೇಡ...." ಕೂಗಬೇಕೆನಿಸುತ್ತಿತ್ತು.

"ನಮ್ಮ ಅಲೋಕ್‌ಗೆ ಒಬ್ಬ ತಂಗಿ ಅಥ್ವಾ ತಮ್ಮ" ಅದಕ್ಕು ಅವನಲ್ಲಿ ಪ್ರತಿಕ್ರಿಯೆ ಇರಲಿಲ್ಲ "ಯಾಕೋ ನಿಮ್ಮ ಮೂಡ್ ಸರಿಯಾಗಿಲ್ಲ...." ಎದ್ದು ಹೋಗಿದ್ದಳು—ಜ್ಞಾಪಕದಲ್ಲಿ ಅಡಗಿದ ಮುತ್ತುಗಳು ಇವು.

ನೆನಪುಗಳು ಕಷ್ಟವಾದಾಗ ಎದ್ದು ಕೂತ. ಮೂರು ತಿಂಗಳು ಎಲ್ಲಾ ಚೆನ್ನಾಗಿದ್ದ ಹಾಗೆ ಕಂಡರೂ ಪದೇ ಪದೇ ಅಲೋಕ್ ಮತ್ತು ನಿವೇದಿತಾಳ ನೆನಪಾಗುತ್ತಿತ್ತು. ಹೊಸ ಅರ್ಥಗಳ ಅನ್ವೇಷಣೆಯಲ್ಲಿ ಎಲ್ಲಾ ಸಿಕ್ಕು ಸಿಕ್ಕಾಗಿ ಕಾಣುತ್ತಿತ್ತು.

"ಮೇಡಮ್ ಹತ್ರ ಅಡ್ವಾನ್ಸ್ ಕೇಳ್ದೆ. ಮೊದ್ಲು ಫೀಸ್ ಕಟ್ಟಿ ಇದ್ನ ನಿಮ್ಮ ಖರ್ಚಿಗೆ ಇಟ್ಕೊಳ್ಳಿ" ನೋಟಿನ ಮಡಿಕೆಗಳನ್ನು ಅವನ ಕೈಯಲ್ಲಿಡು ತ್ತಿದ್ದಳು ನಿವೇದಿತಾ.

ಅದೇ ಅಂಗೈ ತೆರೆದು ನೋಡಿಕೊಂಡ. ಹೆಚ್ಚು ಪ್ರಿಯವಾಯಿತು ತುಟಿಗೊತ್ತಿಕೊಂಡ.

ಎರಡನೇ ಮಗುವಿಗೆ ಬಸುರಿಯಾದಾಗ ಅವನ ತೊಡೆಯ ಮೇಲೆ ತಲೆ ಇಟ್ಟು ಕಣ್ಣೀರು ಸುರಿಸುತ್ತಿದ್ದಳು. "ಡಾಕ್ಟ್ರು, ತುಂಬ ವೀಕ್ ಅಂದ್ರೂ.... ನಂಗ್ಯಾಕೋ ಭಯವಾಗುತ್ತೆ. ನಂಗೆ ನಿಮ್ಜೊತೆ ಬದುಕೋಕೆ ಇಷ್ಟ. ನನ್ನ ಸಾಯೋಕೆ ಬಿಡ್ಬೇಡಿ."

ಹೆದರಿ ಎದೆಯಲ್ಲಿ ಹುದುಗಿಸಿಕೊಳ್ಳುತ್ತಿದ್ದ. "ಎಂಥಾ ಮಾತು ! ಸಾವಿತ್ರಿ ಯಮನ ಜೊತೆ ಹೋರಾಡಿ ಗಂಡನ ಪ್ರಾಣ ಉಳಿಸಿಕೊಂಡಳಂತೆ, ನಾನು ಯಮನ ಜೊತೆಗೆ ಹೋರಾಟಕ್ಕೆ ಬೇಕಾದ್ರೂ ನಿಂತು ನಿನ್ನ ಪ್ರಾಣ ಉಳಿಸ್ಕೋತೀನಿ. ಇಲ್ಲ ನಿನ್ನ ಜೊತೆ ಸಾಯ್ತೀನಿ" ಅವಳೊಂದಿಗೆ ಕಣ್ಣೀರು ಸುರಿಸಿದ್ದ. 'ಸೆಂಟಿಮೆಂಟಲ್ ಫೂಲ್' ಅಂದುಕೊಂಡ ನಂತರದ ದಿನಗಳಲ್ಲಿ.

ಅವೆಲ್ಲ ತೀರಾ ಹಾಸ್ಯದ, ಅಪಹಾಸ್ಯದ ಮಾತುಗಳಾಗಿ ಕಾಣುತಿತ್ತು. 'ಲವ್ ಈಸ್ ಬ್ಲೈಂಡ್' ಅನ್ನಿಸಿದ್ದ ದಿನಗಳು ತೀರಾ ಕಠೋರವಾಗಿದ್ದವು. 'ತಾನು ಹೇಗೆ, ಏಕೆ ನಿವೇದಿತಾನ ಪ್ರೀತಿಸಿದೆ ?' ಬಹಳಷ್ಟು ಸಲ ಅವನನ್ನ ಅವನೇ ಪ್ರಶ್ನಿಸಿಕೊಂಡಿದ್ದ. ಹೆತ್ತವರಿಗಿಂತ ಅವಳು ತನಗೆ ಪ್ರಿಯವಾದ್ದು ದ್ದೇಕೆ ? 'ಇನ್‌ಫ್ಯಾಚುಯೇಷನ್' ಅಷ್ಟೆ. ಸಮಾಧಾನಿಸಿಕೊಂಡಿದ್ದ ದಿನ ಗಳು ಇದ್ದವು.

"ಇದೇನು ಲೈಟು ಕೂಡ ಹಾಕಿಲ್ಲ. ಹೌ ನೈಸ್.... ಪಾರ್ಟಿ ತುಂಬ ಚೆನ್ನಾಗಿತ್ತು." ನೀಲಿಮಾ ಲೈಟು ಹಾಕಿದಾಗ ಭದ್ರವಾಗಿ ಕಣ್ಣು ಮುಚ್ಚಿ ಕೊಂಡ. "ಯಾಕೋ....ನಿದ್ದೆ" ಇದು ಸಮಂಜಸವಾದ ಕಾರಣವಲ್ಲ. ಆದರೆ ಅದನ್ನು ಯೋಚಿಸುವ ಸ್ಥಿತಿಯಲ್ಲಿರಲಿಲ್ಲ ನೀಲಿಮಾ.

ಲೈಟು ಆರಿಸಿ ಹೊರಗೆ ಹೋದಳು. ಬಹಳ ಹೊತ್ತಿನವರೆಗೂ ಮಾತು, ನಗು ಕೇಳಿಸುತ್ತಿತ್ತು. ಭಯಂಕರ ಒಂಟಿತನದಿಂದ ನರಳಿದ.

ಮನೆ ಬಿಟ್ಟು ಹೊರ ಬಂದ ನಿವೇದಿತಾ ಅವನನ್ನ ಬಿಟ್ಟು ಜಗತ್ತಿನ ಬಗ್ಗೆ ಮುಗ್ಧವಾಗಿದ್ದಳು. ಬೆಟ್ಟದಿಂದ ಹಾರಿಕೊಳ್ಳೋಣ ಸಮುದ್ರದ ಅಲೆ ಗಳ ಮಧ್ಯೆ ಸೇರಿಹೋಗೋಣ ಎಂದರೂ ಒಪ್ಪುವಂಥ ನಿರ್ಮಲ ಪ್ರೇಮಿ ಯಾಗಿದ್ದಳು ಅವಳು ಅಂದು.

"ಛೆ, ಎದ್ದು ಹೋಗಿ ಕಿಟಕಿಯ ಬಳಿಯಲ್ಲಿ ನಿಂತ. ಅಲೋಕ್, ನಿವೇದಿತಾಳ ಮಧ್ಯೆ ಇದ್ದಾಗ ಎಲ್ಲಾದರೂ ದೂರ ಓಡಿ ಹೋಗಬೇಕೆಂದು ತವಕಿಸುತ್ತಿದ್ದ. ಆದರೆ ಈಗ ಆ ನೆನಪುಗಳು ಅವನನ್ನ ಮುತ್ತಿಕೊಂಡಿ ದ್ದವು.

ಹನ್ನೆರಡರ ನಂತರವೇ ನೀಲಿಮಾ ಬೆಡ್‌ಗೆ ಬಂದಿದ್ದು. ಇಂದು ತುಂಬ ಖುಷಿಯಾಗಿದ್ದಳು. ಸೊಫಿಸ್ಟಿಕೇಟೆಡ್ ಫ್ಯಾಮಿಲಿ ತಂದೆ ಮಗ 'ಚೀರಿಯೋ' ಎಂದೇ ಗ್ಲಾಸ್‌ಗಳನ್ನು ತಾಗಿಸಿ ಡ್ರಿಂಕ್ಸ್ ತೆಗೆದುಕೊಳ್ಳುತ್ತಿದ್ದರು. ಹಾಗೆಂದು ಅವರೇನು ಕುಡುಕರಲ್ಲ, ಇಂದು ನೀಲಿಮಾ ಕೂಡ ಕಂಪನಿ ಸೇಕ್‌ಗಾಗಿ ಒಂದು ಪೆಗ್ ಹಾಕಿದ್ದಳು.

ಅಮಲಿನ ಉನ್ಮಾದ ಪ್ರಸನ್ನನ ಎದೆಯ ಮೇಲೆ ತಲೆ ಇಟ್ಟಳು. ವಾಸನೆ ಗಪ್ಪೆಂದು ರಾಚಿತು. ಅವನೆಂದು ಡ್ರಿಂಕ್ಸ್ ತೆಗೆದುಕೊಂಡಿರಲಿಲ್ಲ. ಬಹುಶಃ ಅಂಥ ಸಂದರ್ಭ ಇದುವರೆಗೂ ಅವನ ಜೀವನದಲ್ಲಿ ಬಂದಿರಲಿಲ್ಲ.

"ಡ್ರಿಂಕ್ಸ್....ತಗೊಂಡ್ಯಾ ?" ಆ ವಾಸನೆಯನ್ನು ಅರಗಿಸಿಕೊಳ್ಳಲಾರದೆ ಕೇಳಿದ.

"ನೋ, ಅಣ್ಣನ ಬಲವಂತಕ್ಕೆ ಸ್ವಲ್ಪ" ಹಾವಿನಂತೆ ಅವನಿಗೆ ಸುತ್ತಿ ಕೊಂಡಳು. ಬಳಸುವುದು ಅನಿವಾರ್ಯ.

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು.

ಸ್ವಲ್ಪ ವಿಮುಖಿವಾಗಿದ್ದರೂ ನಿವೇದಿತಾ ಮಾತಾಡಿಸಿ ಕೂಡ ತೊಂದರೆ ಕೊಡುತ್ತಿರಲಿಲ್ಲ. ಅವಳದು ಸಂತೃಪ್ತ ಮನಸ್ಸು. ಹೂವನ್ನು ಅರಳಿಸಿ ಮಕರಂದಕ್ಕೆ ದುಂಬಿ ಬಾಯಿ ಹಾಕಬೇಕು. ಆ ಅರಳುವಿಕೆಯಲ್ಲು ನವರುತನ. ಸಂತೃಪ್ತವಾಗಿ ಊಟ ಮಾಡಿ ದಣಿದಂಥ ಅನುಭವ ಅಂದು.

ಬೆಳಿಗ್ಗೆ ನೀಲಿಮಾ ಕ್ಷಮೆ ಯಾಚಿಸಿದಳು. "ನಿಮ್ಗೆ ಮೂಡ್ ಇರ್‍ಲಿಲ್ಲ ಆದರೆ...." ತುಟಿ ತೆರೆದು ನಕ್ಕಳು.

"ಯೂ ನಾಟಿ...." ಅವಳ ಕೂದಲು ಕೆದರಿ ಬಾತ್‌ರೂಮಿಗೆ ಹೋದ.

ನೀಲಿಮಾ, ಅವನ ಮದುವೆಯ ನಂತರ ನಿವೇದಿತಾನಾಗಲೀ, ಅಲೋಕ್‌ನನ್ನಾಗಲಿ ನೋಡಿರಲಿಲ್ಲ. ರಿಸೆಪ್ಷನ್‌ಗೆ ಶುಭ ಹಾರೈಕೆಯೊಂದಿಗೆ ಒಂದು ಹೂವಿನ ಬೊಕ್ಕೆ ಕಳಿಸಿದ್ದಳು ನಿವೇದಿತಾ.

ಮೊದಲ ಎರಡು ಪಿರಿಯಡ್ ಕ್ಲಾಸ್ ಇದ್ದುದ್ದರಿಂದ ಪ್ರಸನ್ನ ಬೇಗ ಹೊರಟ.

"ಇಂದು ಬರೋಲ್ಲ, ಇಡೀ ದಿನ ಅಣ್ಣನ ಜೊತೆ ಚೆಸ್ ಆಡ್ತೀನಿ. ನೀವು ಕಾರು ತಗೊಂಡ್ಹೋಗಿ" ನೀಲಿಮಾ ಹೇಳಿದ್ದಳು.

ಲೈಬ್ರರಿಯಲ್ಲಿ ಒಂದೆರಡು ಪುಸ್ತಕಗಳ ಅಗತ್ಯವು ಇದ್ದುದ್ದರಿಂದ ಕಾರಿನ ವೇಗ ಹೆಚ್ಚಿಸಿದ. ಅವನ ಅರಿವಿಗೆ ಬರದಂತೆ ಕಾರು ಅಲೋಕನ ಕಾನ್ವೆಂಟ್ ಹಾದಿ ಹಿಡಿಯಿತು. ವಾಚ್‌ನತ್ತ ನೋಡಿದ. ಇದು ಅವನು ಶಾಲೆಗೆ ಬರುವ ಹೊತ್ತು.

ಕಾನ್ವೆಂಟ್ ವ್ಯಾನ್ ಕಂಡು ಸ್ವಲ್ಪ ವೇಗ ತಗ್ಗಿಸಿದ. ಇಳಿದ ಹುಡುಗರಲ್ಲಿ ಕಣ್ಣುಗಳು ಮಗನಿಗಾಗಿ ಅರಸಿದವು....ಅಲೋಕ ಇಳಿದ, ತನ್ನತ್ತ ತಿರುಗಲಿಯೆಂದೇ ಹಾರನ್ ಮಾಡಿದ.

ವಿಂಡ್‌ನಿಂದ ತಲೆ ಹೊರಗೆ ಹಾಕಿದ. ಅಲೋಕ್ ಅವನತ್ತ ಕೆಲವು ಕ್ಷಣ ನೋಡಿದ. ತಟ್ಟನೆ ಹುಡುಗರೊಡನೆ ಬೆರೆತು ಹೋಗಿಬಿಟ್ಟ. ಕಪಾಳಕ್ಕೆ ಅವನಿಂದ ಏಟು ತಿಂದಂತಾಯಿತು.

ಕಾಲೇಜು ಹಾದಿ ಹಿಡಿಯಿತು ಫಿಯೆಟ್. ತಡೆದಿಟ್ಟಷ್ಟು ಭಾವನೆಗಳು ಅವನೆದೆಯನ್ನು ಕಲಕುತಿತ್ತು. ಕೆಲಸಕ್ಕೆ ಜಾಯಿನ್ ಆಗುವ ವೇಳೆಗೆ ಅವನಿಂದ ದೂರ ಸರಿದು ಬಿಟ್ಟಿದ್ದ. ಎಲ್ಲಾ ಬಂದ್ ಮಾಡಿದ್ದ.

"ಪಪ್ಪ, ನನ್ನ ಪ್ಲೈ ಗ್ರೌಂಡ್‌ಗೆ ಕರ್ಕೊಂಡ್ಹೋಗಿ. ನಾವಿಬ್ರೂ ಕ್ರಿಕೆಟ್ ಆಡೋಣ" ದಂಬಾಲು ಬಿದ್ದಾಗ ಪಕ್ಕಕ್ಕೆ ಸರಿಸುತ್ತಿದ್ದ.

"ನಂಗೆ ತೊಂದರೆ ಮಾಡ್ಬೇಡ. ಈ ತರಹ ಬಿಹೇವ್ ನಂಗಿಷ್ಟ ವಾಗೋಲ್ಲ" ಮುಖ ಗಂಟಿಕ್ಕಿ ಬಿಡುತ್ತಿದ್ದ.

ಆಗ ನನಗೇನಾಗಿತ್ತು ? ಇಂದು ಯೋಚಿಸಿದ. ಅಲೋಕ್ ತುಂಬ ಮುದ್ದಾಗಿದ್ದ. ಚೂಟಿಯಾಗಿದ್ದ. ಅವನ ಗ್ರಹಣ ಶಕ್ತಿ ಅಸಾಧಾರಣ. ಜನ ಅವನನ್ನ ಮೆಚ್ಚಿಕೊಳ್ಳುತ್ತಿದ್ದರು. ಅಂಥ ಮಗು ತನ್ನದಾದರೂ ದೂರ ಸರಿಯಲು ಯಾಕೆ ಪ್ರಯತ್ನಪಟ್ಟೆ ? ಉಪಯೋಗವಿಲ್ಲದ ಪ್ರಶ್ನೆಗಳಾದರೂ ಹಿಂಸಿಸದೇ ಅವನನ್ನ ಬಿಡುತ್ತಿರಲಿಲ್ಲ.

ಪಾಠ ಮಾಡಲು ಸಾಧ್ಯವಾಗದೇ ಲೈಬ್ರರಿಯಲ್ಲಿಯೇ ಕಾಲವನ್ನು ಕಳೆದ ನೀಲಿಮಾ ಫೋನ್ ಬಂದಾಗ ಲೈಬ್ರರಿಯಿಂದ ಹೊರ ಬಂದ. ಬರೀ 'ಹಲೋ ಹಲೋ'ಗಳ ವಿನಿಮಯ ಅಷ್ಟೆ.

ಸಿಗರೇಟು ಪ್ಯಾಕ್ ಕೊಳ್ಳಲು ಅಂಗಡಿಯ ಮೆಟ್ಟಿಲು ಹತ್ತಿದ. ಹಿಂದೆ ಅಲೋಕ್‌ನ ಕರೆದೊಯ್ದು ಅಲ್ಲಿ ಚಾಕಲೇಟ್ ಕೊಡಿಸುತ್ತಿದ್ದ ಯಜಮಾನ ಪರಿಚಯದ ನಗೆ ಬೀರಿದ.

"ಎಂಥ ಚೂಟಿ ಮಗು ಸಾರ್, ನಿಮ್ದು. ನನ್ನ ಮಗ್ಳೇ ಅವ್ನ ಕ್ಲಾಸ್ ಟೀಚರ್. ಪ್ರಶ್ನೆಗಳಿಗೆ ಉತ್ತರಿಸೋಕೆ ಆಗೋಲ್ವಂತೆ" ಸಿಗರೇಟು ಪ್ಯಾಕ್ ನೊಂದಿಗೆ ಮಾತುಗಳನ್ನ ಸೇರಿಸಿದ.

ಬಲವಂತದ ನಗು ಲೇಪನದ ಪ್ರತಿಕ್ರಿಯೆಯೊಂದಿಗೆ ಅಲ್ಲಿಂದ ಹೊರ ಬಿದ್ದ. ಹೆಂಡತಿ, ಮಗ ನನ್ನ ಬಿಟ್ಟ ವಿಷಯ ಎಲ್ಲರಿಗೂ ಡಂಗೂರ ಸಾರಲು ಸಾಧ್ಯವೇ ?

"ಹಲೋ....ಪ್ರಸನ್ನ" ಪಟೇಲ್‌ನ ಗಡಸು ದನಿ ಅವನನ್ನ ಎಚ್ಚರಿಸಿತು "ಹಲೋ...."ಎಂದ ಹರ್ಷಚಿತ್ತನಾಗಿ. ಅವನೆದೆಯ ಅಂದೋಳನ ಕಮ್ಮಿಯಾಗ ಬೇಕು. ಅದಕ್ಕೆ ಪಟೇಲ್‌ನಂಥ ಸ್ನೇಹಿತನ ಮಾತುಗಳು ಸಿಂಚನವಾಗಬೇಕು.

ಕೈಯಲ್ಲಿದ್ದ ಸಿಗರೇಟು ಪ್ಯಾಕ್ ನೋಡಿ ಹುಬ್ಬು ಕುಣಿಸಿದ "ಈಗ ಬಿಟ್ಟ ಗೂಳಿ. ಹೇಳೋರಿಲ್ಲ....ಕೇಳೋರಿಲ್ಲ!" ಅರ್ಥಗರ್ಭಿತವಾಗಿ ಆಡಿ ಅವನ ಕೈಯಲ್ಲಿನ ಸಿಗರೇಟು ಪ್ಯಾಕ್ ತೆಗೆದುಕೊಂಡ ತ್ರಿಬಲ್ ಫೈವ್ "ವ್ಹಾ...

ವ್ವಾ....ಪರ್ವಾಗಿಲ್ಲ ನಿರೀಕ್ಷೆಗೆ ಮೀರಿದ ಬದಲಾವಣೆ" ತಿಂಗಳಿಗೋ ಎರಡು ತಿಂಗಳಿಗೋ ಒಂದು ವಿಲ್ಸ್ ಸೇದಲು ಕೂಡ ಹಿಂಜರಿಯುತ್ತಿದ್ದ ವ್ಯಕ್ತಿಯ ಕೈಯಲ್ಲಿ ಶ್ರೀಮಂತ ಬ್ರ್ಯಾಂಡ್‌ನ ಸಿಗರೇಟು.

ಸಿಗರೇಟು ಪ್ಯಾಕ್‌ನ ಅವನ ಷರಟಿನ ಜೇಬಿಗೆ ತುರುಕಿ ಭುಜದ ಮೇಲೆ ಕೈ ಹಾಕಿದ ಪಟೇಲ್ "ಆರ್ ಯು ಫ್ರೀ. ನನ್ನ ಮನೆಗೆ ವಿಸಿಟಿಂಗ್ ಕಾರ್ಡು ಕೊಟ್ಟು ಕರೆಯೋ ಬದ್ಲು....ನಾನೇ ಕರ್ಕೊಂಡ್ಹೋಗ್ತೀನಿ" ಎಂದ.

ಅವನು ತೀರ್ಮಾನಕ್ಕೆ ಬರುವ ಮುನ್ನವೇ ಪಟೇಲ್ ಛೇಡಿಸಿದ "ಹೊಸ ಮೇಮ್ ಸಾಹೇಬ್ ಪರ್ಮೀಷನ್ ಬೇಕಾ ? ಈ ಎರಡನೇ ಸಂಬಂಧಗಳು ತೀರಾ ಸೂಕ್ಷ್ಮ. ಕತ್ತಿ ಮೇಲೆ ಸಾಮ್ ಮಾಡಿದಂತೆ, ಕಾಶ್ಮೀರ ಕಣಿವೆಯಲ್ಲಿನ ಸೈನಿಕನ ಸ್ಥಿತಿಯಂತೆ, ಪಂಜಾಬ್‌ನಲ್ಲಿನ ಪೊಲೀಸರ ಹಾಗೆ ಎಷ್ಟು ಎಚ್ಚರ ವಾಗಿದ್ರೂ ಸಾಲ್ದು.ಯಾಮ್ ಐ ಕರಕ್ಟ್ ?" ನಕ್ಕ. ಪ್ರಸನ್ನನ ಸ್ಥಿತಿ ಅಯೋಮಯ.

ಅರಿತವನಂತೆ ಪಟೇಲ್ "ಸಾರಿ ಯಾರ್, ಹೋಗೋಣ ಮಾತು ಜಾಸ್ತಿ ಆಡೋದ್ನ ಅಭ್ಯಾಸ ಮಾಡ್ಕೊಂಡ್ಬಿಟ್ಟಿದ್ದೀನಿ. ಕೈಯಲ್ಲಾಗದವ್ರು ಅದ್ನೇ ತಾನೇ....ಮಾಡ್ಬೇಕು" ಎಳೆದೊಯ್ದ.

ಕಾರಿನ ಬಳಿಗೆ ಹೋದವನು "ಯು ಡೂ ಒನ್ ಥಿಂಗ್, ನಿನ್ನ ಕಾರನ್ನ ಹತ್ತಿರದಲ್ಲಿ ಎಲ್ಲಾದ್ರೂ ಪಾರ್ಕ್ ಮಾಡು ನನ್ನ ಅಪ್ಪನಲ್ಲಿ ಹೋಗೋಣ. ಆಮೇಲೆ ಇಲ್ಲಿಗೆ ತಂದುಬಿಡ್ತೀನಿ. ನಿನ್ನ ಮಯೂರಿನಲ್ಲಿ ಹೋಗ್ಬಹುದ್ದ" ಸಲಹೆ ಕೊಟ್ಟ.

ಪ್ರಸನ್ನ ಹಾಗೆಯೇ ಮಾಡಿ ಪಟೇಲ್‌ನ ಮಾರುತಿಯನ್ನ ಹತ್ತಿದ. ಪಟೇಲ್‌ನ ಡ್ರೈವಿಂಗ್ ಅದ್ಭುತ. ಯುದ್ಧದ ಟ್ಯಾಂಕರ್‌ಗಳನ್ನ ನಡೆಸಿದ ಕೈ, ಅದರಲ್ಲೂ ಕೂಡ ಕುಶಲತೆ.

ಒಂದು ಸಣ್ಣ ಬಂಗ್ಲೆಯ ಪೋರ್ಟಿಕೋನಲ್ಲಿ ಕಾರು ನಿಂತಿತು. ಸಣ್ಣ ಕಾಂಪೌಂಡ್‌ನಲ್ಲಿ ವಿವಿಧ ನಮೂನೆಯ ಗಿಡಗಳು ಅತ್ಯಂತ ಕಲಾತ್ಮಕವಾಗಿ ಜೋಡಿಸಲ್ಪಟ್ಟಿತ್ತು.

"ಹೇಗಿದೆ, ನನ್ನ ಮಂದಿರ ?" ಬಳಸಿಯೇ ಒಳಗೆ ಕರೆದೊಯ್ದ. "ಬ್ಯೂಟಿಫುಲ್...." ಪ್ರಸನ್ನ ಉದ್ಗರಿಸಿದ. ನಿರಾಶೆಯ ನಗೆ ನಕ್ಕ ಪಟೇಲ್

"ಇದೆಲ್ಲ, ಮೇಲ್ಮುಖಕ್ಕೆ....ಇಲ್ಲಿ ಆತ್ಮನೇ ಇಲ್ಲ. ದೇವರಿಲ್ಲದ ಗುಡಿಯ ಹಾಗೇ...."

ಅಮೀರ್‌ನ ಕರೆದು ಪರಿಚಯಿಸಿದ "ಇಲ್ಲಿ ನನ್ನ ಒಂಟಿ ಜೀವಕ್ಕೆ ಜೊತೆ ಇವನೊಬ್ನೆ ಕುಕ್ಕರ್, ನನ್ನ ಪಿ. ಎ. ಮನೆಯ ಆಡಳಿತಗಾರ, ಕಾವಲುಗಾರ ಸಮಸ್ತವು ಇವ್ನೆ..." ಅವನ ಸ್ವರದಲ್ಲಿ ಅಭಿಮಾನವಿತ್ತು.

"ನಮಸ್ತೆ ಸಾಬ್, ಟೀ ತರ್ತೀನಿ" ಒಳಗೆ ಹೋದ ಸಂಕೋಚದಿಂದ

ಪ್ರಸನ್ನನಿಗೆ ಆಶ್ಚರ್ಯವಾಯಿತು ಇಲ್ಲೇ ಅವನ ಸ್ವಂತ ಮನೆ, ಅಣ್ಣ ಅತ್ತಿಗೆ, ತಂದೆ ಎಲ್ಲಾ ಇದ್ದರು ಈಗ ಬೇರೆ ಮನೆ ಮಾಡಿರುವುದರ ಅರ್ಥ ವೇನು ?

"ಇದೇನು....ಇಲ್ಲಿ ? ಎನೀ....ಪ್ರಾಬ್ಲಮ್ಸ್...." ಪ್ರಸನ್ನನ ಮಾತಿಗೆ ನಕ್ಕುಬಿಟ್ಟ "ಸಧ್ಯಕ್ಕೆ ಇಲ್ಲೇ. ಡ್ಯಾಡಿ, ಅತ್ಗೇ ವಿಷ್ಯ ಗೊತ್ತಲ್ಲ? ಸಂಪ್ರದಾಯ ವಾದಿಗಳು ನನ್ನ ಚಿಕನ್, ಬಿರಿಯಾನಿ, ನಾನ್‌ವೆಜ್‌ಗೆ ಹೊಂದಿಕೊಳ್ಳಲಾರರು. ಅದ್ಕೇ ಈ ಏರ್ಪಾಟು ನಂಗೆ ಇಷ್ಟವಾದಾಗ ಹೋಗ್ಬರ್ತೀನಿ ಅವ್ರು ಬೇಕಾ ದಾಗ ಬಂದು ಹೋಗ್ತಾರೆ ದಟ್ಸ್ ಆಲ್...." ಎಂದ.

ತಂದ ಟೀಯನ್ನ ತಾನೇ ಬೆರೆಸಿ ಪ್ರಸನ್ನನಿಗೆ ಕೊಟ್ಟ.

"ಅಂದರೆ...." ಪ್ರಸನ್ನನ ಕಣ್ಣುಗಳು ಕಿರಿದಾದವು. ಬಗ್ಗಿ ಪ್ಯಾಂಟ್‌ನ ಹಿಂದಕ್ಕೆ ಮಡಚಿದ. ಮರದ ಕಾಲಿನ ಜೋಡನೆ, ಪ್ರಸನ್ನ ಬೆಚ್ಚಿಬಿದ್ದ. "ಶ್ರೀಲಂಕಾಗೆ ಹೋಗಿದ್ದೆನಲ್ಲ ಆಗಿನ ದುರ್ಘಟನೆಯಲ್ಲಿ ಕಾಲು ಹೋಯ್ತು. ಭೂಮಿಯಲ್ಲಿ ಬಚ್ಚಿಟ್ಟ ಬಾಂಬ್ ಹುಡುಕೋ ಪ್ರಯತ್ನದಲ್ಲಿ ಇಂಥ ಸಣ್ಣ ಪ್ರಮಾದ. ನನ್ನ ಕೆಲವು ಗೆಳೆಯರು ತೀರಿಕೊಂಡ್ರು ಕಾಲು ಹೋದ್ರೂ ನಾನು ಉಳಿದುಕೊಂಡೆ." ಅವನ ದನಿಯಲ್ಲಿ ಉದ್ವೇಗ, ನೋವು ಏನು ಇರಲಿಲ್ಲ.

ಪ್ರಸನ್ನ ದಿಗ್ಭ್ರಾಂತನಾದ ಪೇಪರ್ ಸುದ್ದಿ ಓದಿ ಮಡಚುತ್ತಿದ್ದ ಪುಟ ಗಳ ಹಿಂದೆ ಎಂಥ ಬೀಭತ್ಸನೆ ಅಡಗಿದೆ.ಒಂದು ದೇಶಕ್ಕೆ ಕೆಲವು ಸಾವಿರ ಸೈನಿಕರ ಸಾವು ಕೂಡ ದೊಡ್ಡ ಪ್ರಮಾದವೇನಲ್ಲ. ಆದರೆ....ಒಂದು ಕುಟುಂಬಕ್ಕೆ ಅವನ ಸನ್ನಿಹದ ವ್ಯಕ್ತಿಗಳಿಗೆ ಆಗುವ ಆಘಾತ–'ಓ ಮೈ ಗಾಡ್....,ಮುಖ ಮೇಲೆತ್ತಿ ಉಸಿರು ದಬ್ಬಿದ.

"ಬಿಡು, ಯಾರ್... ದೇಶಕ್ಕಾಗಿ ಹೋರಾಡುವ ವ್ಯಕ್ತಿಯ ಸಾಫಲ್ಯ ಅವನ ಸಫಲ ಸಾವಿನಿಂದೆಯೇ ಅಡಗಿರುವುದು ಹುಟ್ಟು, ಸಾವು ತೀರಾ ಸಹಜ. ಅದು ತಲೆ ಕೆಡ್ಸಿಕೊಳ್ಳೋಂಥದಲ್ಲ ಅದರ ಮಧ್ಯದ ಬದುಕೆ... ಮುಖ್ಯ. ಮಾತು ಎಲ್ಲಿಂದ ಎಲ್ಲಿಗೋ ಹೋಯ್ತು, ಮೊದ್ಲು ಟೀ ಕುಡಿ" ತಾನು ಕುಡಿದಿಟ್ಟವನು ಬಟ್ಟೆ ಬದಲಾಯಿಸಿ ಬಂದ ಪಟೇಲ್.

ಐಪಿಕೆಎಫ್‌ನಲ್ಲಿನ ಅನುಭವಗಳು, ಆಘಾತಗಳು ಅಲ್ಲಿನ ತಮಿಳರ ಸಂಕಷ್ಟಮಾಲೆಯನ್ನು ಬಣ್ಣಿಸತೊಡಗಿದ. ಒಂದಿಷ್ಟೂ ಉದ್ವೇಗಗೊಳ್ಳಲಿಲ್ಲ.

ಅಲ್ಲೇ ಮಧ್ಯಾಹ್ನದ ಡಿನ್ನರ್ ಮುಗಿಸಿಕೊಂಡು ಹೊರಟು ನಿಂತಾಗ ಪಟೇಲ್ ಅವನ ಜೊತೆಗೂಡಿದ "ಫ್ರೀ ಇದ್ದಾಗ ಬರ್‍ತಾ ಇರು. ಸಧ್ಯಕ್ಕೆ ಇಲ್ಲಿ ಏಕೈಕ ಫ್ರೆಂಡ್ ನೀನು" ಭುಜ ತಟ್ಟಿದ.

ಸ್ಟೀರಿಂಗ್ ವೀಲ್ ಮುಂದೆ ಕೂತವನು ಕ್ರಾಪ್ ಹಾರಿಸಿ ಭಾರವಾದ ಉಸಿರನ್ನ ಹಬ್ಬಿದ "ನನಗೆ ಸಿಟಿಯ ಪರಿಸರವೆ ಇಷ್ಟವಾಗದು. ನಿರ್ಸಗದ ಮಧ್ಯದ ಜೀವನ ಅತ್ಯಂತ ಸುಂದರ, ಆಹ್ಲಾದಕರ. ಒನ್ ಟಚ್‌ಅಪ್ ನೇಚರ್ ಮೇಕ್ಸ್ ದಿ ಓಲ್ ವರ್ಲ್ಡ್ ಕಿನ್ (ನಿಸರ್ಗದ ಒಂದಿನಿತು ಸ್ಪರ್ಶದಲ್ಲಿ ವಿಶ್ವದ ಆಲಿಂಗನವಡಗಿಹುದು) ಅದು ವಿಶ್ವದರ್ಶನದ ಭಾಗ್ಯ" ತನ್ಮಯತೆಯಿಂದ ನುಡಿದು ಕಾರು ಸ್ಟಾರ್ಟ್ ಮಾಡಿದ.

ಅವನ ಕಾರು ಪಾರ್ಕ್ ಮಾಡಿದ್ದ ಕಡೆ ನಿಲ್ಲಿಸಿದ. ಇಳಿದ ಪ್ರಸನ್ನ "ನೈಟ್ ಡಿನ್ನರ್‌ಗೆ ಬಾ. ನೀಲಿಮಾನ ಪರಿಚಯ ಮಾಡಿಕೋಬಹುದ್ದು" ಹೇಳಿದ.

ಕೈಯೆತ್ತಿ ತಲೆ ಕೊಡವಿದ "ಇಂದು ಆಗೋಲ್ಲ. ಮುಂದೆ ಎಂದಾದ್ರೂ ನೋಡೋಣ. ಕೆಲವು ಇಷ್ಟವಿಲ್ಲದಿದ್ರೂ ಅನಿವಾರ್ಯವಾಗುತ್ತೆ. ನೀಲಿಮಾನ ಭೇಟಿ ಮಾಡೋ ಕ್ಯೂರಿಯಾಸಿಟಿ ಇದೆ. ಸೀ ಯೂ...." ಕಾರನ್ನ ಹಿಂದಿರುಗಿಸಿದ.

ಪ್ರಸನ್ನ ಚೇತರಿಸಿಕೊಳ್ಳಲು ಕ್ಷಣಗಳು ಬೇಕಾಯಿತು. "ಇಷ್ಟ ವಿಲ್ಲದಿದ್ರೂ....ಅನಿವಾರ್ಯ....ಆದರೆ ಕ್ಯೂರಿಯಾಸಿಟಿ ಇದೆ" ಎಂದ ಮಾತುಗಳು ತೀರಾ ಅವಮಾನಕರವಾಗಿ ಕಂಡಿತು. ಪಟೇಲ್ ಅಂಥ ವ್ಯಕ್ತಿ ಕೂಡ. ಎಲ್ಲಾ ಕೇಳಿ ಕೂಡ ತನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲವಲ್ಲ. ಹೀಗೇಕೆ?

ಬಂದಾಗ ನೀಲಿಮಾ ಇರಲಿಲ್ಲ ಅಣ್ಣ ಮತ್ತು ಅವನ ಕುಟುಂಬದ ಜೊತೆ

ಹೊರಗೆ ಹೋಗಿದ್ದಳು. ಸೋಮೇಶ್ವರ್, ಅರುಂಧತಿ ಎಷ್ಟು ಬೇಕೊ ಅಷ್ಟೆ ಅವನೊಂದಿಗೆ ಮಾತಾಡುತ್ತಿದ್ದುದ್ದು. ನೇರವಾಗಿ ಕೋಣೆಗೆ ಹೋಗಿಬಿಟ್ಟ.

ಅಡಿಗೆಯುವ ಬಂದು ನಿಂತ. ಅವನ ಊಟ, ತಿಂಡಿಯ ನಿಗಾ ಅವನದೇ. ಅತ್ಯಂತ ವಿನಯದಿಂದ ನಿರ್ವಹಿಸುತ್ತಿದ್ದ.

"ಈಗೇನು....ಬೇಡ" ಮಂಚದ ಮೇಲೆ ಉರುಳಿಕೊಂಡ. ಪಕ್ಕಕ್ಕೆ ತಿರುಗಿ ಟೀಪಾಯಿ ಮೇಲೆ ಫ್ರೇಮ್‌ನಲ್ಲಿದ್ದ ನೀಲಿಮಾ ಫೋಟೋ ಎತ್ತಿಕೊಂಡ. ದಟ್ಟವಾಗಿ ಕತ್ತರಿಸಿದ ಕೂದಲು ಕತ್ತು, ಕೆನ್ನೆಯ ಅಂಚನ್ನ ಆವರಿಸಿತ್ತು. ತೀಡಿದ ಹುಬ್ಬುಗಳು, ಅವುಗಳ ಮಧ್ಯೆ ಒಂದು ಸಣ್ಣ ಬೊಟ್ಟು.

ಬಹಳ ಹೊತ್ತು ದಿಟ್ಟಿಸಿದ. ಮುಖದಲ್ಲಿ ಮಾರ್ದವತೆಯ ಕೊರತೆ, ಗಡುಸಿನ ಲೇಪನ,ವಿದ್ಯೆ ಸ್ಟೇಟ್‌ಸ್‌ನ 'ಅಹಂ' ಎಕ್ಸ್‌ಟ್ರಾ ಆಗಿ ಸೇರಿಕೊಂಡಿತ್ತು. ಅವಳ ತಿಳಿವಳಿಕೆ ಅಪಾರ. ಯಾವ ವಿಷಯವಾದರೂ ಅತ್ಯಂತ ಖಚಿತವಾಗಿ ಮಾತಾಡಬಲ್ಲವಳಾಗಿದ್ದಳು. ಅತಿಯಾಗಿ ಪ್ರೀತಿ ಎಕ್ಸ್‌ಪೋಜ್ ಮಾಡುವುದು ಹೆಣ್ಣಿನ ದಾಸ್ಯತ್ವದ ಲಕ್ಷಣವೆಂದು ಅವಳ ಅಭಿಪ್ರಾಯ.

ಅವನು ಊಟ ಬೇಡವೆಂದರೇ ನಿವೇದಿತಾ ತಾನು ಉಪವಾಸ ಕೂತು ಬಲವಂತ ಮಾಡಿ ಬಡಿಸುತ್ತಿದ್ದಳು. ನೀಲಿಮಾದೆ ಬೇರೆ ರೀತಿ. ಹೊಟ್ಟೆ ಕೆಟ್ಟಿರಬೇಕು, ಅಥವಾ ಹೊರಗೆ ತಿಂದಿರಬಹುದು ಅಂಥದ್ದರಲ್ಲಿ ಬಲವಂತ ಮಾಡುವ ವಿಪರೀತವನ್ನ ಅವಳು ಯೋಚಿಸಲು ಕೂಡ ಸಿದ್ಧವಿಲ್ಲ.

ನಿಮಿಷಗಳು ಸರಿದು ಹೋಗುತ್ತಿದ್ದವು. ಅಡಿಗೆಯುವ ಎರಡು ಸಲ ಬಂದು ವಿಚಾರಿಸಿಕೊಂಡು ಹೋದ. ಮೂರನೆಯ ಸಲ ಬಂದಾಗ ಎದ್ದು ಕೂತ.

"ಏನಾದ್ರೂ....ತಿಂಡಿ ಇದ್ದರೆ ತಗೊಂಡ್ಬಾ ಫ್ರಿಜ್‌ದು ಬೇಡ" ಬಾತ್ ರೂಂನಲ್ಲಿ ಮುಖ ತೊಳೆದು ಬಂದ.

ಈ ವಿಶಾಲ ಕೋಣೆಯನ್ನು ಹೊಕ್ಕರೆ ಹೊರಗೆ ಯಾತಕ್ಕೂ ಬರ ಬೇಕಿರಲಿಲ್ಲ. ಅಟ್ಯಾಚ್ಡ್. ಬಾತ್‌ರೂಂ ಹೊಂದಿಕೊಂಡಂತೆ ಒಳ ಭಾಗದಲ್ಲಿಯೇ ಬೆಡ್‌ರೂಂ ಎ.ಸಿ. ಮಾಡಿಸಿದ ಕೋಣೆ. ಹೊರ ಭಾಗದಿಂದ ಮೇಲಿನ ಬಾಲ್ಕನಿಗೆ ಹೋಗುವ ಮೆಟ್ಟಲುಗಳು.

ಎರಡು ವಿಷಯದಲ್ಲಿ ನೀಲಿಮಾ ಮತ್ತು ನಿವೇದಿತಾಗೆ ಸ್ವಾಮ್ಯ, ಇವನ ಸಂಬಳದ ಬಗ್ಗೆ ನಿವೇದಿತಾ ಕೇಳುತ್ತಿರಲಿಲ್ಲ ಎಷ್ಟೆ ತಾಪತ್ರಯಗಳಿದ್ದರೂ. ಆದರೆ ಇಲ್ಲಿ ಅಂತಹ ಆರ್ಥಿಕ ಪರಿಸ್ಥಿತಿ ಇರಲಿಲ್ಲ, ನೀಲಿಮಾ ಅವನನ್ನ ಕೇಳಲು. ಪುಸ್ತಕ, ಹೋಟೆಲು, ಆಕಸ್ಮಿಕವಾಗಿ ಕಾರಿಗೆ ಪೆಟ್ರೋಲ್ ತುಂಬ ಬೇಕಾದ ಸಂದರ್ಭದಲ್ಲಿ ಅವನು ಪರ್ಸ್ ತೆಗೆಯಬೇಕಿತ್ತು.

ಕೆಲಸ ಸಿಕ್ಕ ಮೇಲೆ ತನ್ನ ಉಡುಪು, ಟಿ.ವಿ, ಸ್ಕೂಟರ್ ಜೊತೆ ಅಲೋಕ್‌ಗೆ ಒಂದೆರಡು ಬಟ್ಟೆಗಳ ಜೊತೆ ನಿವೇದಿತಾಗೆ ಒಂದು ಸೀರೆ ತಂದಿದ್ದ.

ಒಮ್ಮೆ ಒಂದು ಬೇಡಿಕೆ ಅವನ ಮುಂದಿಟ್ಟಿದ್ದಳು.

"ಹೇಗೂ ಇಬ್ಬರ ದುಡಿಮೆ. ಮ್ಯಾನೇಜ್ ಮಾಡ್ಕೋಬಹ್ದು. ಒಂದಷ್ಟು ದಿನ ಎಲ್ಲಾದ್ರೂ ಹೋಗ್ಬರೋಣ."

ಆಗ ಮುಖ ತಿರುಗಿಸಿದ್ದ, "ಈಗ ಆಗೋಲ್ಲ...." ಅವನಿಗೆ ರಜ. ಹಣದ ತಾಪತ್ರಯವಿಲ್ಲದಿದ್ದರೂ ಕರೆದೊಯ್ಯಲು ಇಷ್ಟವಿರಲಿಲ್ಲ. ಅಂದಿನ ನಂತರ ಯಾವ ಬೇಡಿಕೆಯನ್ನೂ ಅವಳು ಸಲ್ಲಿಸುತ್ತಿರಲಿಲ್ಲ. ಕನಿಷ್ಟ ಸಿನಿಮಾಗೆ ಹೋಗೋಣ ಎಂದು ಕೂಡ ಹೇಳಲಿಲ್ಲ.

ಅವನು ಕೂಡ ಅತ್ತ ಮನಸ್ಸು ಕೊಡಲಿಲ್ಲ, ಇಷ್ಟವಾದಾಗ ಒಳ್ಳೆಯ ಮೂವಿಗಳು ಬಂದಾಗ ಒಂಟಿಯಾಗಿ ಹೋಗುತ್ತಿದ್ದ, ನೀಲಿಮಾ ಸ್ನೇಹ ವಾದಾಗ ಜೊತೆಯಾಗಿ ಹೋಗುತ್ತಿದ್ದರು.

ಬಿಸಿ ಇಡ್ಲಿ, ಸಾಗು, ಚಟ್ನಿ ತಂದಿಟ್ಟ ಅಡಿಗೆಯವನು "ರಾತ್ರಿಗೆ ಏನು ಅಡ್ಗೆ ಮಾಡ್ಬೇಕು ? ಅವ್ರುಗಳು ಹೊರ್ಗಡೆ ಊಟ ಮಾಡುತ್ತೇವೆ ಅಂದ್ರು. ದೊಡ್ಡ ಯಜಮಾನ್ರು, ಅಮ್ಮಾವ್ರು ಕೂಡ ಆಚೆ ಹೋದರು, ಹೊರ್ಗ್ಗೇ ಊಟ ಮಾಡ್ಕೊಂಡ್ ಬರ್ತಾರೆ" ಎಂದ.

"ನಂಗೇನು ಬೇಡ, ಒಂಭತ್ತರ ನಂತರ ಒಂದ್ಲೋಟ ಹಾಲು ತಂದ್ಕೊಟ್ರೆ... ಸಾಕು" ಫೋರ್ಕ್, ಸ್ಪೂನ್ ಕೈಗೆತ್ತಿಕೊಂಡ.

ನಿಧಾನವಾಗಿ ತಿಂದ. ಬೇಸರವೆನಿಸಿತು. ಹಿಂದಿನ ದಿನಗಳಲ್ಲಿ ನಿವೇದಿತಾನೇ ಹತ್ತಿರ ಕೂತು ಬಡಿಸಿದರೇ ಅವನ ಹುಬ್ಬುಗಳು ಗಂಟಾಗುತ್ತಿದ್ದವು. 'ಇವಳು ಯಾಕೆ ಇಲ್ಲಿ ನಿಂತಳು ? ಹೊರಗೆ ಹೋಗಬಾರದೆ' ತಡಬಡಿಸುತ್ತಿದ್ದ.

ರೇಗಿಯೋ, ಲೋಟ ತಳ್ಳಿಯೋ, ತಿಂಡಿ ಚೆನ್ನಾಗಿಲ್ಲವೆಂದೋ ತನ್ನ ಕೋಪ ಪ್ರದರ್ಶಿಸುತ್ತಿದ್ದ. ಇಲ್ಲಿ ಅಂಥ ಅವಕಾಶವಿಲ್ಲ. ನೀಲಿಮಾ ಚೆನ್ನಾಗಿದೆಯೇ ಇನ್ನಷ್ಟು ಬೇಕಾ, ಎಂದು ಹತ್ತಿರ ನಿಂತು ಪ್ರಶ್ನಿಸುತ್ತಿರಲಿಲ್ಲ. ಅವನ ಬಯಕೆಯು ಇದೆಯೋ ಏನೋ !

ಆಳು ಬಂದು ತಟ್ಟೆ, ಕಪ್‌ಗಳನ್ನು ಒಯ್ದ. ಮಧ್ಯಮ ದರ್ಜೆಯವರಲ್ಲಿನ ತೊಂದರೆಗಳು ಇಲ್ಲಿ ಇರಲಿಲ್ಲ. ಮನೆ ಸಾಮಾನು, ಲೈಟು ಬಿಲ್, ಬಾಡಿಗೆ ಅಂತಹ ತಾಪತ್ರಯಗಳೇನು ಇರ್ಲಿಲ್ಲ.

ಅವನಿಗೆ ನಿದ್ದೆ ಬಂದಾಗ ಕೂಡ ನೀಲಿಮಾ ಕೋಣೆಯೊಳಗೆ ಬಂದಿರಲಿಲ್ಲ. ಯಾವ ದೊಡ್ಡ ಸಾಧನೆಗಾಗಿ ಈ ಮದುವೆ ? ಪ್ರಯೋಗ, ಸಂಶೋಧನೆ, ಬರವಣಿಗೆ ಅಂಥ ಉದ್ದೇಶಗಳೇನಾದರೂ ತನಗಿತ್ತಾ ?

ರಾತ್ರಿ ಬಹಳ ಹೊತ್ತಿನ ಮೇಲೆ ಅವನಿಗೆ ನಿದ್ದೆ ಬಂತು.

* * *

ಭಾನುವಾರ ಅಲೋಕನನ್ನು ಎಬ್ಬಿಸುತ್ತ ಹೇಳಿದಳು.

"ಇವತ್ತು ಅಂಕಲ್ ಮನೆಗೆ ಹೋಗೋಣ."

ಅವನು ಪಿಳಿಪಿಳಿ ಕಣ್ಣುಗಳನ್ನ ಬಿಟ್ಟ. "ಯಾವ....ಅಂಕಲ್ ?"

"ನಮ್ಮ ಅಲ್ಬಮ್‌ನಲ್ಲಿ ಫೋಟೋ ಇತ್ತಲ್ಲ. ದಪ್ಪ ಮೀಸೆ, ತಲೆಯ ಮೇಲೆ ಹ್ಯಾಟು. ಕೈಯಲ್ಲಿ ಬಂದೂಕ....ಆ ಅಂಕಲ್ ಮನೆಗೆ" ಎಂದಳು.

ಅವನಿಗೆ ತಕ್ಷಣ ಫ್ಲಾಷ್ ಆಯಿತು. ಡ್ರಾಯರ್ ಒಳಗಿದ್ದ ಆಲ್ಬಮ್ ಹಿಡಿದು ಬಂದು ಪಟೇಲ್ ಫೋಟೋ ತೋರಿಸಿದ.

''ಅವ್ರು....ಮನೆಗೇನೇ. ಬೇಗ ಸ್ನಾನ, ತಿಂಡಿ ಮುಗಿಸಿದರೆ.... ಹೋಗೋಣ'' ಬ್ರಷ್‌ಗೆ ಪೇಸ್ಟ್ ಹಾಕಿ ಅವನ ಕೈಗೆ ಕೊಟ್ಟು ಹಾಲ ಕಾಯಲು ಇಡಲು ಅಡಿಗೆಯ ಮನೆಗೆ ಹೋದಳು.

ಗೋದಾವರಿಯ ಮನೆಯ ಕೆಲಸದವಳು ಒಂದು ತಟ್ಟೆಯಲ್ಲಿ ಉಪ್ಪಿಟ್ಟು ತಂದಿಟ್ಟು ಹೋದಳು, ಇವೇನು ಅಪರೂಪವಲ್ಲ. ತಿಂಡಿ, ಅಡಿಗೆ ಹೆಚ್ಚು ಕಡಿಮೆ ಅಲ್ಲಿಂದಲೇ ಬರುತ್ತಿತ್ತು, ಅಥವಾ ಅವರೇ ಹೇಳಿ ಕಳಿಸುತ್ತಿದ್ದರು.

ಮಗನಿಗೆ ತಿನ್ನಿಸಿ ಡ್ರೆಸ್ ಮಾಡಿದಳು. ''ಹೋಂ ವರ್ಕ್ ಮಾಡಿ ಕೋತಾ ಕೂತಿರು. ಒಂದಿಷ್ಟು ಕೆಲ್ಸ ಇದೆ....'' ಅಕೌಂಟ್ ಪುಸ್ತಕ ಹಿಡಿದು ಮುಂದಿನ ಮನೆಗೆ ಬಂದಳು.

ಪೇಪರ್ ನೋಡುತ್ತಿದ್ದ ಗೋದಾವರಿ "ಅವನನ್ನೇನು ಮಾಡ್ಬಂದೇ ? ಇಂದು ಅವ್ನು ಗುಡ್ ಮಾರ್ನಿಂಗ್ ಹೇಳೋಕೆ....ಬರ್ಲಿಲ್ಲ'' ತುಟಿಗ್ಳ ಮೇಲೆ ನಗು ಅರಳಿಸಿ ಕೂತಳು.

"ಪಟೇಲ್ ಅಂಕಲ್ ಮನೆಗೆ....ಹೋಗೋಣಾಂದೆ. ಎಲ್ಲೋ ಮರೆ ತಿದ್ದಾನೆ. ಅದೇ ನೆಪ ಹೇಳ್ಕೊಂಡ್....ಬರ್ತಾನೆ'' ಅವಳು ಮಾತು ಪೂರ್ತಿ ಮಾಡುವ ವೇಳೆಗೆ ಹಾಜರಾದ ಅಲೋಕ್ "'ಗುಡ್ ಮಾರ್ನಿಂಗ್....''

''ವೆರಿ ಗುಡ್ ಮಾರ್ನಿಂಗ್, ಯೂ ಈಡಿಯಟ್ ಈಗ್ಬಂದು ಗುಡ್ ಮಾರ್ನಿಂಗ್ ಅಂತ ಇದ್ದೀಯಲ್ಲ.'' ನಸು ಮುನಿಸು ತೋರಿಸಿದರು ಗೋದಾವರಿ.

ನಿವೇದಿತಾ ಮಗನತ್ತ ತಿರುಗಿ "ಆಯಿತಲ್ಲ, ಹೋಗಿ ಹೋಂವರ್ಕ್ ಮಾಡು" ಕಳಿಸಿದಳು.

ಗೋದಾವರಿ ಮುಖ ಮಂಕಾಯಿತು. "ಈಗಿನ ಮಕ್ಕಳ ಬದುಕೇ ದುರಂತ. ಹಿಂದೆ ಹದಿನೈದು ವರ್ಷದ ನಂತರವೇ ಸಿರಿಯಸ್ ಓದು. ಅದ್ವರ್ಗೂ ಸದಾ ಆಟ, ನಲಿದಾಟ ಈಗಿನ ಮಕ್ಕಳಿಗೆ ಅಂಥ ಸುಖವೇ ಇಲ್ಲ. ಎಲ್.ಕೆ.ಜಿ., ಯು.ಕೆ.ಜಿ ಪುಟಾಣಿಗಳಿಗೆ ಷುರು. ಬೆಳಿಗ್ಗೆ ಯೂನಿಫಾರಂ, ಬೂಡ್ಸು ಶಾಲೆಗೆ ಹೋಗುವ ಆತುರ, ಸಂಜೆ ಮನೆಗೆ ಬಂದ ಕೂಡ್ಲೇ ಟ್ಯೂಷನ್, ರಾತ್ರಿ ಹೋಂವರ್ಕ್....ಅವಕ್ಕೂ ನಿದ್ದೆ ಹತ್ತರ ನಂತರವೇ" ನೋವಿತ್ತು ಆಕೆಯ ಮಾತುಗಳಲ್ಲಿ.

ಅಷ್ಟರಲ್ಲಿ ಮತ್ತೆ ಬಂದ ಅಲೋಕ್. "ಮಮ್ಮಿ, ಯಾವಾಗ ಹೋಗೋದು ? ಹೋಂ ವರ್ಕ್ ಆಯ್ತು...." ಹಣೆಗೆ ಕೈಯೊತ್ತಿದಳು ನಿವೇದಿತಾ.

"ಸ್ವಲ್ಪ ಹೊತ್ತು ಆಟ ಆಡ್ಕೋ" ಮತ್ತೆ ಕಳಿಸಿದಳು.

ಅರ್ಧ ಗಂಟೆಯಲ್ಲಿ ಅವನು ಮತ್ತೆ ನಾಲ್ಕು ಸಲ ಬಂದಾಗ ಗೋದಾವರಿ ನಕ್ಕು ಬಿಟ್ಟರು.

"ಎಲ್ಲಾದ್ರೂ ಹೊರಡೋದೂಂದ್ರೆ ಮಕ್ಕಿಗೆ ಉತ್ಸಾಹ...." ಹೇಳಿದರು.

ಯಾರೋ ಬಂದಿದ್ದರಿಂದ ನಿವೇದಿತಾ ಎದ್ದು ಹೊರಗೆ ಬಂದಳು. ಗೋದಾವರಿಯೇ ಪ್ರಾರಂಭಿಸಿದ ಎರಡು ನರ್ಸರಿ, ಎರಡು ಪ್ರೈಮರಿ ಶಾಲೆಗಳು, ಒಂದು ಮಿಡ್ಲ್‌ಸ್ಕೂಲ್ ಜೊತೆಗೆ ವಯಸ್ಕ ಮಹಿಳೆಯರಿಗಾಗಿ ಹೊಲಿಗೆ ಶಾಲೆ ಇತ್ತು.

ಹ್ಯಾಂಡ್ ಬ್ಯಾಗ್‌ಗೆ ಅಡ್ರಸ್‌ನ ಕಾರ್ಡ್ ಸೇರಿಸಿ ಬೀಗ ತಗುಲಿಸಿ ಹೊರಗೆ ಬಂದಳು. ಇನ್ನು ಹತ್ತು ಗಂಟೆ. ಇಷ್ಟು ಬೇಗ ಹೇಗೆ ಹೋಗುವುದು ? ದಾರಿಯಲ್ಲಿ ಸಿಕ್ಕ ದೊಡ್ಡ ಹೋಟೆಲ್‌ಗೆ ಕರೆದೊಯ್ದಳು. ಕೆಳಗೆಲ್ಲ ಭರ್ತಿ. ಫ್ಯಾಮಿಲಿ ಸ್ಪೆಷಲ್ ರೂಮು ಹೊಕ್ಕು ಒಂದೆಡೆ ಕೂತಳು.

ಕ್ಷಣ ಅವಳ ನೋಟ ಒಂದೆಡೆ ನಿಂತರೂ ಮರುಕ್ಷಣ ಚೇತರಿಸಿಕೊಂಡಿತು. ಸರಿದು ಹೋಗಬೇಕೆಂಬ ನಿರ್ಧಾರವನ್ನು ಕೂಡ ಮೆಟ್ಟಿ ಅಲ್ಲೇ ಕೂತಳು. ವೈಟರ್‌ಗೆ ಒಂದು ಐಸ್‌ಕ್ರೀಮ್, ಒಂದು ಕಾಫೀ ತರಲು ಹೇಳಿದಳು. ಎದೆಯಲ್ಲಿ ಪ್ರಚಂಡ ಬಿರುಗಾಳಿ ಹೊರಗೆ ಮಂದಾನಿಲ.

ನೀಲಿಮಾ ಕತ್ತರಿಸಿದ ಕೂದಲು ಆಗಾಗ ಪ್ರಸನ್ನನ ಹೆಗಲು, ಕುತ್ತಿಗೆ, ಕೆನ್ನೆ ಮುತ್ತಿಕ್ಕುತಿತ್ತು. ಬಗ್ಗಿ ಬಗ್ಗಿ ಏನೋ ಮಾತು, ನಗು. ಆದರೆ ಪ್ರಸನ್ನ ಮುಖದ ಬಣ್ಣವೇ ಬದಲಾಯಿತು.

ಎದುರಿಗೆ ನೀಲಿಮಾ ಅಣ್ಣ ಕೂತಿದ್ದ. ನಿವೇದಿತಾ ಕಡೆಗೆ ಬೆನ್ನಾಕ್ಕಿದ್ದ. ಅವನು ನಿವೇದಿತಾನ ನೋಡಿಲ್ಲ, ಈಗ ನೋಡಿದರೂ ಅಂಥ ಪ್ರತಿಕ್ರಿಯೆ ಇಲ್ಲ. ನೀಲಿಮಾ ಗಮನಿಸಿದ್ದಾಳೆ, ಸಂದೇಹಿಸಿದ ಹಾಗೆ ಕಾಣಲಿಲ್ಲ ಅವನಿಗೆ.

ಮಧ್ಯೆ ಏನೋ ಹೇಳಲು ಹೋದ ಅಲೋಕ್‌ನ ಕಣ್ಣುಗಳಲ್ಲಿಯೇ ಸುಮ್ಮನಾಗಿಸಿದಳು. ಅವನ ನೋಟ ಪ್ರಸನ್ನನಿಂದ ಕೀಳಲು ಬಹಳ ಪ್ರಯಾಸ ಪಡುತ್ತಿದ್ದ. ಐಸ್‌ಕ್ರೀಮ್ ತಿನ್ನುವುದನ್ನ ಬಿಟ್ಟಾಗ ಎಬ್ಬಿಸಿಕೊಂಡು ಬಿಲ್ ಹಿಡಿದು ಹೋಗಿಬಿಟ್ಟಳು.

ಅವರಿಬ್ಬರು ಡೈವೋರ್ಸ್ ಪಡೆದ ದಂಪತಿಗಳು. ಸಾಮಾಜಿಕವಾಗಿ ಅವರನ್ನ ಬೇರೆ ಮಾಡಿದ ಕಾನೂನಿಗೆ ಮಾನಸಿಕವಾಗಿ ಬೇರ್ಪಡಿಸಲು ಸಾಧ್ಯವೆ?

ವಿಳಾಸ ಹುಡುಕಿ ಆಟೋದಲ್ಲಿ ಪಟೇಲ್‌ನ ಮನೆ ತಲುಪಿದಾಗ ಇನ್ನು ಹನ್ನೆರಡು ಆಗಿರಲಿಲ್ಲ. ಗಾರ್ಡನ್‌ನಲ್ಲಿಯೇ ಏನೋ ಕೆಲಸ ಮಾಡಿಸುತ್ತಿದ್ದ

ಪಟೇಲ್ ಕಣ್ಣರಳಿಸಿ ಗೇಟಿಗೆ ಬಂದ. ಅನಿರೀಕ್ಷಿತವಾಗಿ ಅವನ ಕಾಲಿನತ್ತ ಅವಳ ನೋಟ ಹರಿದು ನಿಂತು ಬಿಟ್ಟಿತು. ಕೃತಕ ಕಾಲಿನ ಜೋಡನೆ.

"ಓ, ಕಾಲು ನೋಡ್ತಾ ಇದ್ದೀರ, ಒರಿಜಿನಲ್ ಅಲ್ಲ. ಬನ್ನಿ....ಬನ್ನಿ...." ಗೇಟು ತೆಗೆದು ಅಲೋಕ್‌ನ ಹತ್ತಿರಕ್ಕೆಳೆದುಕೊಂಡ "ಮೈ ಡಿಯರ್ ಯಾರ್.... ಎಷ್ಟು ದೊಡ್ಡವ್ನು ಆಗಿಬಿಟ್ಟಿದ್ದೀಯಾ" ಅನಾಮತ್ತಾಗಿ ಅವನನ್ನ ಎತ್ತಿ ಕೊಂಡು ಹೋದ.

ಸೋಫಾದಲ್ಲಿ ಕೂಡಿಸಿ ಕೆನ್ನೆ ಸವರಿದ "ದೊಡ್ಡವ್ನು ಆದ್ರೆ....ಹ್ಯಾಂಡ್ ಸಮ್ ಪರ್ಸನಾಲಿಟಿ" ಮೆಚ್ಚಿಗೆಯಿಂದ ನೋಡಿದ. "ಕೂತ್ಕೊಳ್ಳಿ.... ನಿವೇದಿತಾ ...." ಒಳಗೆ ಹೋದ.

ಹಣ್ಣಿನ ರಸವನ್ನ ತಾನೇ ಹಿಡಿದು ಬಂದ, "ನಮ್ಮ ಅಮೀರ್ ಕುಕ್ಕಿಂಗ್ ನಲ್ಲಿ ಬಿಜಿ. ಈಗ ಏನಾದ್ರೂ ಹೇಳಿದ್ರೆ ಅವ್ನು ಎಲ್ಲಾ ಕೆಡ್ಸಿಬಿಡ್ತಾನೆ" ತಾನೇ ಅಲೋಕ್‌ಗೆ ಕುಡಿಸಿದ.

ನಿವೇದಿತಾ ಗಂಟಲಲ್ಲಿ ಇಳಿಯಲಿಲ್ಲ "ಹೇಗಾಯ್ತು" ಅವಳ ಪ್ರಶ್ನೆಗೆ ನಕ್ಕು ಬಿಟ್ಟ "ನಮ್ಮ ಬದ್ಕಿನಲ್ಲಿ ವೆರಿ ಸಿಂಪಲ್. ಆದರೆ ನನ್ನ ಪ್ರೊಫೆಷನ್ ಹಾಳಾಯ್ತು" ನಿಟ್ಟುಸಿರು ಚೆಲ್ಲಿದ. ಅವನಿಗೆ ಕಾಲು ಹೋದದಕ್ಕಿಂತ ಅನ್‌ಫಿಟ್ ಆಗಿಬಿಟ್ಟನಲ್ಲ ಎನ್ನುವ ಕೊರಗು.

"ಅದ್ನ ಬಿಡಿ, ಮನೆ....ನೋಡ್ಬನ್ನಿ" ಒಳಗೆಲ್ಲ ಕರೆದೊಯ್ದ.

ಎಲ್ಲಾ ಅಚ್ಚುಕಟ್ಟಾಗಿತ್ತು, ಅಮೀರ್ ಮುಗುಳು ನಗುತ್ತ "ಆದಾಬ್....ಬಹನ್‌ಜೀ" ಎಂದ ಪಟೇಲ್ ರೇಗಿದ "ಗಪ್ ಚಿಪ್, ಎಣ್ಣೆ ಇಳಿಸಿ ಹೊರ್ಗೆ ಬಾ. ಪರಿಚಯ ಮಾಡಿ ಕೊಡ್ತೀನಿ."

ಇಡೀ ಮನೆಯನ್ನ ಅಲ್ಲಲ್ಲಿ ಗೋಡೆಗಳ ಮೇಲೆ ಅಲಂಕರಿಸಿದ್ದು ಸುಂದರ ಹಿಮಾಲಯ, ಕಾಶ್ಮೀರದ ವನ ಪ್ರದೇಶಗಳು, ದಟ್ಟವಾದ ಮಂಜು, ಹಸಿರು ನಿಬಿಡ ಕಂದಕಗಳು, ಹಿಮಾಚ್ಛಾದಿತ ಬೆಟ್ಟ ಪ್ರದೇಶಗಳು.

ಅತ್ಯಂತ ಕುತೂಹಲದಿಂದ ನೋಡಿದಳು.

"ಇದು ನನ್ನ ದೇವರಿನ ರೂಪಗಳು. ನಾನು ದೇವರನ್ನ ಕಾಣುವುದು ಪ್ರಕೃತಿಯಲ್ಲಿಯೇ. ಹೆಚ್ಚು ಪರವಶನಾಗುವುದು ಅಲ್ಲೇ" ನಗುತ್ತ ವಿವರಿಸಿದ.

ಶ್ರೀಲಂಕಾ ಅನುಭವಗಳನ್ನು ಊಟದ ವೇಳೆಯವರೆಗೂ ವಿವರಿಸಿದ.

ಅಪ್ಪಿತಪ್ಪಿ ಕೂಡ ಪ್ರಸನ್ನನ ಸುದ್ದಿ ಎತ್ತಲಿಲ್ಲ. ಆದರಿಂದ ಸರಾಗವಾಗಿ ಉಸಿರಾಡಿದಳು ನಿವೇದಿತಾ.

ಕಾಮಿಕ್ಸ್ ನೋಡುತ್ತಿದ್ದ ಅಲೋಕ್ ಆರಾಮಾಗಿ ನಿದ್ದೆ ಹೋದ ಸೋಫಾ ಮೇಲೆ. ಪಟೇಲ್ ಒಯ್ದು ಹಾಸಿಗೆಯ ಮೇಲೆ ಮಲಗಿಸಿ ಬಂದ.

"ಇನ್ನ....ಹೊರಡುತೀವಿ" ನಿವೇದಿತಾ ಮೇಲೆದ್ದಳು.

ಪಟೇಲ್ ಅಪರಿಚಿತನಲ್ಲದಿದ್ದರೂ ಅವನ ಮಾತುಕತೆ ಸ್ನೇಹ ಆತ್ಮೀಯತೆಯ ನಡುವೆ ಪ್ರಸನ್ನ ಇರುತ್ತಿದ್ದ. ಆದರೆ ಪಟೇಲ್‌ನದು ಅಂದಿನ ಸಲಿಗೆಯೇ.

"ಆರಾಮಾಗಿ ಮಲಗಿದ್ದಾನೆ, ಅಲೋಕ್ ಏಳಲಿ ಟೀ ನಂತರ ನಿಮ್ಮನ್ನ ಡ್ರಾಪ್ ಮಾಡ್ತೀನಿ" ಎದ್ದು ಹೋದವನು ಒಂದು ಆಲ್ಬಮ್ ತಂದು ಅವಳ ಮುಂದೆ ಹಾಕಿ ಹೋದ.

ಅಮೆರಿಕಾಯಲ್ಲಿನ ಅವನ ಸ್ನೇಹಿತರು, ಅಲ್ಲಿನ ರಮಣೀಯ ಪ್ರದೇಶಗಳ ಮಧ್ಯೆ ನಿಂತು ತೆಗೆಸಿಕೊಂಡ ಭಾವಚಿತ್ರಗಳು. ಬರೀ ಅಲ್ಲಿನವೇ. ನೋಡಿ ಇಟ್ಟು ಮೇಲೆದ್ದಳು.

ಮುಂದಿನ ಪುಟ್ಟ ಗಾರ್ಡನ್ ತೋರಿಸಿದ. ಅಮೀರ್ ಅಲ್ಲಿಗೇ ಟೀ ತಂದುಕೊಟ್ಟ. ಪಟೇಲ್ ಅವಳನ್ನ ಗಮನಿಸಿದ. ಯಾವ ಶೃಂಗಾರ ಸಾಧನಗಳನ್ನು ಬಳಸದಿದ್ದರೂ ಹೊಚ್ಚ ಹೊಸ ಮಲ್ಲಿಗೆಯಂತೆ ಇದ್ದಳು. ಅದಕ್ಕೆ ಅಪೂರ್ವ ಸುವಾಸನೆ. ಗಿಮಿಕ್ ಮಾಡದೇ ಉಟ್ಟ ಸೀರೆ, ಮಾಮೂಲಿ ಒಂದು ಜಡೆ.ಬಾಚುವಿಕೆಯಲ್ಲು ನಾವಿನ್ಯತೆಯೇನು ಇರಲಿಲ್ಲ. ಆದರಿಂದ ಅವಳ ಚೆಲುವಿಗೇನು ಕುಂದಿರಲಿಲ್ಲ.

ಏನಾಗಿತ್ತು ಪ್ರಸನ್ನನಿಗೆ ? ಯೋಚಿಸಿದ.

"ನಿಮ್ಗೇನು ತೊಂದರೆ ಬೇಡ ನಾವು ಹೋಗ್ತೀವಿ" ಅಲೋಕ್‌ನ ಎಬ್ಬಿಸಿದಳು. ಪಟೇಲ್ ಸುಮ್ಮನಾದ. ಪ್ರಸನ್ನ ಜೊತೆಯಲ್ಲಿ ಇದ್ದಿದ್ದರೆ ಗದರಿ ಇರಿಸಿಕೊಳ್ಳುತ್ತಿದ್ದ. ಆ ಅಯೋಗ್ಯನಿಂದ ಜಗತ್ತಿನ ಗಂಡಸರ ಬಗ್ಗೆಯೇ ಅವಳ ಭಾವನೆಗಳು ಬದಲಾಗಿರಬಹುದೆಂದುಕೊಂಡ.

ಕೆಂಪು ಮಾರುತಿ ಹತ್ತಿದಾಗ ಅಲೋಕ್‌ಗೆ ಖುಷಿಯೋ ಖುಷಿ.

"ಅಂಕಲ್, ನಾನು ಸೈನ್ಯಕ್ಕೆ ಸೇರ್ತೀನಿ...." ಎಂದವನು ಅವನ ಕಾಲಿನ ಕಡೆ ನೋಡಿದ. ಪಟೇಲ್ ನಕ್ಕುಬಿಟ್ಟ.

ಮನೆಯ ಮುಂದೆ ಕಾರು ನಿಂತಾಗ ಇಳಿದ ನಿವೇದಿತಾ ಅವನನ್ನ ಆಹ್ವಾನಿಸಿದಳು. "ನಮ್ಮ ಮೇಡಮ್‌ನ ಪರಿಚಯ ಮಾಡಿಕೊಳ್ಳಿ. ಸದಾ ನಾವು ನಮ್ಮ ಬಗ್ಗೆ ಯೋಚಿಸಿದ್ರೆ....ಆಕೆ ಸಮಾಜದ ಏಳುಬೀಳುಗಳನ್ನು ನೋಡಿ ಚಿಂತಿಸ್ತಾರೆ."

ತಲೆ ಕುಣಿಸಿ ಪಟೇಲ್ ಇಳಿದು ಬಂದ. ಒಳಗೆ ಕರೆದೊಯ್ದಳು. ಚಾ ಬೆರೆಸುತ್ತಿದ್ದ ಗೋದಾವರಿ ನಸು ನಗುವಿನ ಸ್ವಾಗತ ಬೀರಿದರು.

"ಹಲೋ ಮೇಡಮ್, ನಿಮ್ಮ ಪರಿಚಯ ಬಹಳ ಹಿಂದೆನೇ ಆಗಿತ್ತು, ವಿಷಯದ ಮುಖಾಂತರ ನಿಮ್ಮನ್ನ ನೋಡಿ ಸಂತೋಷವಾಯ್ತು" ತಾನೇ ಮಾತಾನಾಡಿಸಿದ.

ಅವರನ್ನು ಮಾತಿಗೆ ಬಿಟ್ಟು ಒಳಗೆ ಹೋದಳು. ಒಂದಿಷ್ಟು ಬಿಸ್ಕತ್, ಕಾಫೀಯನ್ನ ತಾನೇ ತಂದಳು ಬೇರೆಯಾಗಿ.

"ಶ್ರೀಮತಿ ನಿವೇದಿತಾ ಅವರೇ....ನಾನು ಆಗಾಗ ಬರ್ತೀನಿ. ಇಂಥ ಫಾರ್ಮ್ಯಾಲಿಟಿಸ್ ಬೇಕಿರ್‍ಲ್ಲಿಲ್ಲ" ಎನ್ನುತ್ತಲೇ ಬಿಸ್ಕತ್‌ಗೆ ಕೈ ಹಾಕಿದ. ಸಾವಿನ ಕ್ಷಣದಲ್ಲು ನಗುವಂಥ ಕಮಾಂಡರ್ ಆಗಿದ್ದ.

"ಎಂಥ ಗಟ್ಟಿ ಎದೆ ನಿಂದು. ಭಯ ಅನ್ನೋದು ನಿನ್ನ ಪಕ್ಕದಲ್ಲಿ ಕೂಡ ಸುಳಿಯೋಲ್ಲ" ಮೇಲಿನ ಆಫೀಸರ್‌ಗಳು ಮೆಚ್ಚಿಗೆಯಾಡುತ್ತಿದ್ದರು. ಕಿರಿಯ ವಯಸ್ಸಿನಲ್ಲೇ ಅವನ ಸಾಧನೆ ಅಪಾರವಾಗಿತ್ತು.

ಹತ್ತು ನಿಮಿಷ ಮಾತಾಡಿಯೇ ಪಟೇಲ್ ಹೊರಟಿದ್ದು.

ರಾತ್ರಿ ನೆನಪುಗಳು ಅವಳನ್ನ ಹಿಂಸಿಸಿದವು. ಒಮ್ಮೆ ಆಕಸ್ಮಿಕವಾಗಿ ಅವಳ ತಂದೆ ಭೇಟಿಯಾದರೂ ಅಪರಿಚಿತರಂತೆ ಸರಿದು ಹೋಗಿದ್ದರು. ಆ ಕಡೆಯವರು ಇರಲಿ, ಪ್ರಸನ್ನನ ತಾಯ್ತಂದೆ ಬಂಧುಗಳು ಕೂಡ ಎಂದೂ ಇವರಲ್ಲಿಗೆ ಬಂದಿಲ್ಲ, ಕರೆದಿಲ್ಲ. ಸಂಪೂರ್ಣವಾಗಿ ತೊರೆದುಕೊಂಡ ಬದುಕು ಆದರೂ ಪ್ರಸನನ್ನ ಜೊತೆ ಸುಖವಾಗಿದ್ದಳು ಈಗ....ಒಂಟಿ.

ಎದ್ದು ಕೂತು ಮೊಣಕಾಲುಗಳ ಮೇಲೆ ಮುಖ ಹುದುಗಿಸಿ ಕಣ್ಣೀರು ಸುರಿಸಿದಳು ಇಂಥ ನಿರ್ಧಾರ ತಗೊಳ್ಳುವ ಮುನ್ನ ಪ್ರಸನ್ನ ಒಂದೇ ಒಂದು

ಸಲ ತನ್ನ ಬಗೆಗೆ ಯೋಚಿಸಿದ್ದರೇ ? ತನ್ನ ಬಗ್ಗೆ ಮಾತ್ರ ಯೋಚಿಸಿಕೊಂಡ ಸ್ವಾರ್ಥಿ, ಮೋಸಗಾರ ಚೀರಬೇಕೆನಿಸಿತು ಅವಳಿಗೆ.

ಆಮೇಲೆ ಇಡೀ ರಾತ್ರಿ ನಿದ್ರಿಸಲಿಲ್ಲ.

ಈ ಯೋಚನೆಗಳಿಂದ ಬಿಡಿಸಿಕೊಳ್ಳಬೇಕೆಂದರೆ ತನ್ನನ್ನು ಬೇರೆ ರೀತಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡು ಕರೆಸ್ಪಾಂಡೆನ್ಸ್ ಕೋರ್ಸ್‌ನಲ್ಲಿ ಬಿ. ಎ. ಮಾಡಲು ನಿರ್ಧರಿಸಿದಳು. ನಿದ್ದೆ ಬರುವವರೆಗೆ ಪುಸ್ತಕಕ್ಕೆ ಶರಣು ಹೋಗುತ್ತಿದ್ದಳು.

ಬ್ಯಾಂಕ್‌ಗೆ ಬಂದ ನಿವೇದಿತಾ ಕಾದು ಕೂತಳು, ಚೆಕ್ ಕೊಟ್ಟು ಅವಳ ಟೋಕನ್ ಕಾಯುವವರ ಸರದಿಯಲ್ಲಿತ್ತು.

ಒಂದು ನೋಟ ಎದುರಾದಾಗ ಮುಖವನ್ನ ಬೇರಡೆಗೆ ತಿರುಗಿಸಿಕೊಂಡಳು. ಆ ಮುಖ ನೋಡಲು ಕಾತರಿಸುತ್ತಿದ್ದ ಹರೆಯದ ದಿನಗಳು ಅವಳ ಮಸ್ತಿಷ್ಕದಿಂದ ಸರಿದು ಹೋಗಿರಲಿಲ್ಲ. ಇಂದು ಮಾತ್ರ ಅಂಥ ಇಚ್ಛೆ ಇರಲಿಲ್ಲ.

ಬ್ಯಾಂಕ್ ಮನೇಜರ್ ಕೋಣೆಗೆ ಹೋಗಿ ಬಂದಾಗಲೂ ನಿವೇದಿತಾ ಅಲ್ಲೇ ಕೂತಿದ್ದಳು ಎಂತಹುದೋ ಒತ್ತಡ. ಸರಿದು ಹೋಗಲಾರದಷ್ಟು ನಿಸ್ಸಾಯಕವಾದವು ಅವನ ಪಾದಗಳು.

"ಹಲೋ...." ಎಂದ.

ನಿವೇದಿತಾ ಅತ್ತಿತ್ತ ನೋಡಿದಳು ಅಷ್ಟೆ. ಪ್ರಸನ್ನ ಶತ್ರು ಅಲ್ಲದಿರಬಹುದು ಮನದ ಕಹಿ, ಒಂಟಿತನ–ಹೇಗೆ ರಾಜಿಯಾಗಬಲ್ಲದು ?

"ನಿವೇದಿತಾ...." ಇನ್ನಷ್ಟು ಹತ್ತಿರದಲ್ಲಿ ಸ್ವರ ಕೇಳಿಸಿದಾಗ ತಲೆಯೆತ್ತಿದಳು "ನಮಸ್ತೆ...." ವಿಶ್ ಮಾಡಿದಳು. ನೈತಿಕವಾಗಿ ಬಲವಾಗಿದ್ದ ಅವಳಲ್ಲಿ ಸಂಕೋಚ ಇಣುಕಲಿಲ್ಲ "ಎಕ್ಸ್‌ಕ್ಯೂಜ್....ಮಿ" ಕೌಂಟರ್ ಬಳಿ ಹಣ ಪಡೆಯಲು ಹೋದಳು.

ಮಾತನಾಡಬೇಕೆಂಬ ಒತ್ತಾಯದಿಂದ ಹಿಂದಕ್ಕೆ ಸರಿಯಲು ಪ್ರಸನ್ನ ನಿಂದಾಗಲಿಲ್ಲ ಬರುವವರೆಗೂ ಕಾದು ನಿಂತ.

ಹಣ ಪರ್ಸ್‌ಗೆ ಸೇರಿಸಿ ಬಂದಾಗಲೂ ನಿಂತಿದ್ದ ಪ್ರಸನ್ನನ ನೋಡಿ ಅವಳಿಗೆ ಆಶ್ಚರ್ಯವಾಯಿತು,

"ಒಂದಿಷ್ಟು....ಮಾತಾಡೋದು ಇದೆ" ಎಂದ.

"ಬೇಗ ಹೋಗ್ಬೇಕಲ್ಲ, ಮೇಡಮ್ ನನಗೋಸ್ಕರ ಕಾಯ್ತಾ ಇರ್ತಾರೆ" ತನ್ನ ಅಸಮ್ಮತಿ ಸೂಚಿಸಿದಳು. ಪ್ರಸನ್ನ ಹಿಂದಕ್ಕೆ ಸರಿಯಲಿಲ್ಲ "ಫೈವ್ ಮಿನಿಟ್ಸ್ ಅಷ್ಟೆ. ವಿಷ್ಯ ತುಂಬ ಇಂಪಾರ್ಟೆಂಟ್...." ಅವನ ಮಾತಿಗೆ ಅವಳಿಗೆ ನಗು ಬಂತು. ಬಿಡುಗಡೆ ಹೊಂದಿರುವ ತಮ್ಮಿಬ್ಬರ ನಡುವೆ ಅಂಥ ಮುಖ್ಯ ವಾದುದ್ದು ಯಾವುದಿದೆಯೆಂದು ಪ್ರಶ್ನಿಸುವಂತಿತ್ತು ಅವಳ ಕಣ್ಣುಗಳು.

ಎದುರಿನಲ್ಲಿರುವ ಹೋಟಲ್ ಕಡೆ ಇಬ್ಬರು ಹೆಜ್ಜೆ ಹಾಕಿದರು. ಫ್ಯಾಮಿಲಿ ರೂಂ ಹೊಕ್ಕಾಗ ಅವನ ಎದುರಿನಲ್ಲಿ ಕೂತಳು.

"ಏನು....ತಗೋತೀಯಾ ?" ಕೇಳಿದ.

ಬೇಡವೆಂದು ತಲೆಯಾಡಿಸಿದಳು. ಆದರೆ ಪ್ರಸನ್ನ ಬಾದಾಮಿ ಹಲ್ವ, ಟೋಮಾಟೋ ಆಮ್ಲೆಟ್‌ಗೆ ಆರ್ಡರ್ ಮಾಡಿದ. ಅದು ಅವಳ ಇಷ್ಟವಾದ ತಿಂಡಿಗಳು. ವರ್ಷಗಳು ಮರೆತಿದ್ದು ಇಂದು ಹೇಗೆ ನೆನಪಿಗೆ ಬಂತು ?

ಕ್ಷಣ ಯಾವುದೋ ಲೋಕದಲ್ಲಿ ಇದ್ದಂತಾಯಿತು ನಿವೇದಿತಾಗೆ. ಬೇಗ ಚೇತರಿಸಿಕೊಂಡಳು "ಸಾರಿ, ಊಟ ಮಾಡ್ಕೊಂಡ್ ಬಂದಿದ್ದೆ.ಏನೂ ತಿನ್ನೋಕೆ ಆಗೋಲ್ಲ" ನಿರಾಕರಿಸಿದಳು.

"ತಿಂತೀಯಾ, ತಿನ್ನಲೇಬೇಕು" ಎಂದ.

"ಇಂಥ ಕಾನ್‌ಫಿಡೆನ್ಸ್ ಒಳ್ಳೆದಲ್ಲ. ನಾನು ಖಂಡಿತ ತಿನ್ನೋಲ್ಲ" ಅವಳ ಸ್ವರದಲ್ಲಿ ದೃಢತೆ ಇತ್ತು "ಬೇಗ ಹೇಳಿ, ನಂಗೆ ಹೋಗ್ಬೇಕಾಗಿದೆ" ಅವಸರ ಪಡಿಸಿದಳು.

"ವೈಯಿಟರ್ ಬಂದು ಹೋಗೋವರ್ಗೂ ಕಾಯ್ಬೇಕು" ಒಂದು ರೀತಿಯ ಅಧಿಕಾರ ದನಿಯಲ್ಲಿ ಇದೆಯೆನಿಸಿತು ಅವಳಿಗೆ. "ನಂಗೋಸ್ಕರ ಮೇಡಮ್ ಕಾಯ್ತಾ ಇರ್ತಾರೆ" ಎಂದಳು.

"ಸ್ವಲ್ಪ ಹೊತ್ತು ಕಾಯೋದ್ರಿಂದ ತೊಂದರೆಯೇನು ಇಲ್ಲ" ಸರಳವಾಗಿ ಹೇಳಿದ. ದುರುಗುಟ್ಟಿಕೊಂಡು ನೋಡಿದರೂ ಕಾದಳು.

ತಿಂಡಿ ಬಂದ ಮೇಲೆ ಪ್ಲೇಟುಗಳನ್ನ ಇನ್ನಷ್ಟು ಅವಳತ್ತ ಸರಿಸಿದ "ನಂಗೆ ತುಂಬ ಹಸಿವಾಗಿದೆ ನೀನು ತಿನ್ನದಿದ್ರೆ....ನಾನು ತಿನ್ನೋಲ್ಲ. ಅದ್ನ ನೆನಪಿನಲ್ಲಿಟ್ಕೋ" ಎಚ್ಚರಿಸಿದ.

ಇದೊಂದು ರೀತಿಯ ಹುಚ್ಚಾಟವೆನಿಸಿದರೂ ಅಲ್ಪ ಸ್ವಲ್ಪ ತಿಂದು ಕೈ ತೊಳೆದಳು.

"ಅಲೋಕ್, ನಂಗೂ ಮಗ. ಅವನಿಗಾಗಿ ಕಳಿಸಿದ್ದ ಹಣನ ವಾಪಸ್ ಕೊಟ್ಟೆ ಕಾರಣ ಕೇಳಬಹುದಾ ?" ತಟ್ಟೆಯಲ್ಲಿ ಸ್ಪೂನ್ ಹಾಕಿ ಕೇಳಿದ.

"ತೀರಾ ಸಿಂಪಲ್, ಅದ್ಕೆ ನನ್ನ ಉತ್ತರದ ಅಗತ್ಯವಿಲ್ಲ. ನಿಮ್ಮ ಉದಾರತೆ ನಂಗೆ ಬೇಕಿಲ್ಲ" ನಡೆದುಬಿಟ್ಟಳು.

ತೂಗುವ ಜಡೆಯಲ್ಲಿ ಅವನ ನೋಟ ನೆಟ್ಟಿತ್ತು.

ವೆಯಿಟರ್ ಹೇಳಿದಾಗಲೇ ಅವನಿಗೆ ಗೊತ್ತಾಗಿದ್ದು "ಬಿಲ್‌ನ ಹಣ ಕೊಟ್ಟು....ಹೋದ್ರು" ವಿಚಲಿತನಾದ.

ಅವನು ನಿರುದ್ಯೋಗಿಯಾಗಿದ್ದಾಗ ಅವಳೇ ಅವನ ಖರ್ಚನ್ನ ಪೂರೈಸು ತ್ತಿದ್ದುದ್ದು. ಅವಳ ಋಣದಡಿಯಲ್ಲಿಯೇ ನನ್ನ ಬದುಕು ಇಂದು ನೊಂದ. ತೀರಿಸುವ ಅವಕಾಶ ಸಿಕ್ಕರೂ ಉದಾಸೀನ ಮಾಡಿದ್ದ.

ಅವಳನ್ನ ಮೊದಲ ಸಲ ಕಂಡಿದ್ದು ಗೆಳೆಯನೊಬ್ಬನ ಮದುವೆಯಲ್ಲಿ. ಅವನದು ಕೂಡ ಹುಡುಗಾಟದ ವಯಸ್ಸು. ಅವಳನ್ನ ಸೆಳೆಯಲು ಅವನು ಪಟ್ಟ ಪಾಡು ಕಡಿಮೆಯದಲ್ಲ. ಪತ್ರಗಳ ವಿನಿಮಯದೊಂದಿಗೆ ಶುರುವಾಗಿದ್ದು ಕದ್ದು ಪಾರ್ಕ್, ಸಿನಿಮಾವರೆಗೂ ಮುಂದುವರಿಯುವ ವೇಳೆಗೆ ಅವನು ಮಜ್ನು ಆಗಿ ತಯಾರಾಗಿದ್ದ.

"ನಿನ್ನ ತಿರ್‍ಗಾಟಕ್ಕೆ ...ಅರ್ಥವೇನು ?" ಮೊದಲ ಸಲ ತಂದೆ ಕೇಳಿದಾಗ ಧೈರ್ಯವಾಗಿಯೇ ಪರಿಸ್ಥಿತಿಯನ್ನು ಎದರಿಸಿದ್ದ "ಅವಳನ್ನು ಪ್ರೀತಿಸ್ತಾ ಇದ್ದೀನಿ. ಮದ್ವೆ ಮಾಡ್ಕೋತೀನಿ."

ಅಂದಿನ ಭಂಡ ಧೈರ್ಯ ಹೇಗೆ ಬಂದಿತೆಂದು ಇಂದಿಗೂ ಯೋಚಿಸು ತ್ತಾನೆ. ಹರೆಯದ ಪ್ರೇಮದಲ್ಲಿ ವ್ಯಕ್ತಿ ಹುಚ್ಚನಾಗ್ತಾನೆ. ಮುಂದಿರುವ ಸಾಗರವಾಗಲೀ, ಹಿಂದಿರುವ ಕಂದಕವಾಗಲಿ ಕಾಣೋಲ್ಲ. ಆಗ ಅವನಿಗೆ ತನ್ನ ಪ್ರೇಮವೇ ದೊಡ್ಡದು ಅದಕ್ಕಾಗಿ ಸಾಯಲು ಕೂಡ ಸಿದ್ಧ.

ಈಗ ಅವನು ನಿವೇದಿತಾಗೇನು, ನೀಲಿಮಾಗೋಸ್ಕರ ಕೂಡ ಸಾಯಲು ಸಿದ್ಧವಿಲ್ಲ. ಈ ವಯಸ್ಸು ಲೆಕ್ಕಾಚಾರದ್ದು ಯೋಚಿಸುವುದು ಬರೀ ಅನುಕೂಲಕ್ಕಾಗಿ.

ಹೋಟೆಲ್‌ನಿಂದ ಹೊರ ಬಂದು ಕಾರಿನತ್ತ ನಡೆದ. ನೀಲಿಮಾ ಕೂತಿದ್ದಳು. ಅವನಿಗೆ ಆಶ್ಚರ್ಯವಾಯಿತು.

"ವಾಟ್ ಎ ಸರ್‌ಪ್ರೈಜ್ ! ನೀನು....ಇಲ್ಲಿ...." ಡೋರ್ ತೆಗೆದು. ಹತ್ತಿ ಕೂತ "ನಂಗೂ ಬ್ಯಾಂಕ್‌ನಲ್ಲಿ ಕೆಲ್ಸವಿತ್ತು" ಹೇಳಿದಳು.

"ಅಂದರೇ....ನಾನು ಬ್ಯಾಂಕ್‌ನಲ್ಲಿದ್ದಾಗಲೇ ಬಂದ್ಯಾ ?" ಕೀ ಹಾಕಿ ತಿರುಗಿಸಿ ಸ್ಟಾರ್ಟ್ ಮಾಡಿದ "ಹೌದು, ನೀವು ಯಾರೋ ಶಿಷ್ಯಗಾಗಿ ಕಾಯ್ತಾ....ಇದ್ದೀರಿ" ಮೊನಚಿತ್ತು ಸ್ವರದಲ್ಲಿ.

"ಸ್ಟೂಡೆಂಟ್ ಅಲ್ಲ, ನಿವೇದಿತಾ ಹತ್ತಿರ ಒಂದಿಷ್ಟು ಮಾತಾಡೋದಿತ್ತು." ಕಾರಿನ ವೇಗ ಸ್ವಲ್ಪ ಹೆಚ್ಚಿಸಿದ.

"ಯಾವ ನಿವೇದಿತಾ ?" ಭಾರವಾಗಿತ್ತು ಅವಳ ಸ್ವರ.

ಪ್ರಸನ ನಕ್ಕು ಅವಳ ತೋಳಿನ ಮೇಲೆ ಕೈ ಹಾಕಿದ "ನನ್ನ ಮನೆಗೆ ಕರ್ಕೊಂಡ್ಹೋಗಿ ಪರಿಚಯಿಸಿದ್ದೀನಿ, ಅಲೋಕನ ವಿಷ್ಯ ಒಂದಿಷ್ಟು ಮಾತಾಡೋದಿತ್ತು. ನಾನೆ ಅವ್ಳಿಂದ ದೂರ ಸರಿದು ನಿನ್ನ ಪಾಶದಲ್ಲಿ ಬಿದ್ದಿದ್ದು, ಕನಸ್ಸು ಕಾಣೋ ಹುಡ್ಗಾಟದ ವಯಸ್ಸಿನಲ್ಲಿ ನಡದದಕ್ಕೆ ಯಾವ್ದೇ ಮಹತ್ವವಿಲ್ಲ" ರೆಡ್ ಲೈಟು ಬಿದ್ದುದ್ದರಿಂದ ಕಾರು ನಿಲ್ಲಿಸಿದ.

ಅವನ ಪ್ರಬುದ್ಧ ಮಾತನ್ನ ಕೇಳಿ ಮನಸಾಕ್ಷಿ ನಕ್ಕಿರಬೇಕು. ಆಡಿದ ಮಾತುಗಳಿಗೆ ಅವನೇ ಅಂಜಿದ.

ಮರುದಿನ ಅಲೋಕ್‌ನ ನೋಡುವ ಅವಕಾಶ ತಾನಾಗಿ ಒದಗಿ ಬಂದಿತು. ಸುತ್ತಾಟ ಮುಗಿಸಿ ನೀಲಿಮಾ, ಪ್ರಸನ್ನ ಹೋಟಲ್ ಅತ್ತ ನಡೆದಾಗ ಕೆಂಪು ಮಾರುತಿಯಿಂದ ಇಳಿದ ಪಟೇಲ್ ಕೈ ಎತ್ತಿದ. ಪ್ರಸನ್ನ ಮುಖ ಅರಳಿತು.

"ಹಲೋ...." ನಾಲ್ಕು ಹೆಜ್ಜೆ ತಾನಾಗಿ ಮುಂದಕ್ಕೆ ಹೋಗಿ ಕೈ ಕುಲುಕಿದ ಪಟೇಲ್ ನೀಲಿಮಾ ಅತ್ತ ತಿರುಗಿ "ಬೈದಿಬೈ....ನಮ್ಮ ಪ್ರಸನ್ನನ ಲೈಫ್ ಪಾರ್ಟನರ್ ನೀಲಿಮಾ...." ಹಾರ್ದಿಕ ನಗೆ ಹರಿಸಿ "ನಾನು ಅವ್ನ ಫ್ರೆಂಡ್...." ತಾನೇ ಪರಿಚಯ ಹೇಳಿಕೊಂಡು ಕೈ ಜೋಡಿಸಿದ.

ಪ್ರಸನ್ನ ಸ್ನೇಹದಿಂದ ಅವನನ್ನು ಬಳಸಿದ "ಜೊತೆಯಲ್ಲೆ ಲಂಚ್

ತಗೋಳೋಣ...." ಎಂದ ನೀಲಿಮಾ ಕೂಡ ಧ್ವನಿಗೂಡಿಸಿದಳು "ಹೌದು, ನೀವು ಬಂದಾಗ ನಾನು ಇರ್ಲಿಲ್ಲ. ಈಗ ನಮ್ಮ ಗೆಸ್ಟ್...."

"ಓಕೇ....ಓಕೇ...." ಎಂದವ ಕಾರಿನತ್ತ ತಿರುಗಿದ. ಇತ್ತಲೇ ನೋಡುತ್ತಿದ್ದ ಅಲೋಕ್‌ನ ಕಣ್ಣುಗಳಲ್ಲಿ ತೀಕ್ಷ್ಣತೆ ಇತ್ತು. "ಕಮ್‌ಹಿಯರ್.... ಕಮ್‌ಹಿಯರ್...." ತಲೆ ಅಡ್ಡಡ್ಡ ಆಡಿಸಿದ. ಪಟೇಲ್ ತಾನೇ ಹೋಗಿ ಅವನನ್ನ ಕರೆತಂದ "ತುಂಬ ಮುದ್ದಾಗಿದ್ದಾನೆ. ಅವ್ನ ಕಣ್ಣುಗಳಲ್ಲಿನ ಷಾರ್ಪ್‌ನೆಸ್ ನೋಡಿ. ನಿಮ್ಮ ಮಗನಾ....?" ಮೆಚ್ಚಿಗೆಯ ಮಾತಿಂದ ಇಳಿದ ಪ್ರಶ್ನೆಗೆ ಪಟೇಲ್ ನಕ್ಕು ಬಿಟ್ಟ.

"ಸಾರಿ ಮೇಡಮ್, ನನ್ನ ವಿಷ್ಯ ಇನ್ನೂ ನಿಮ್ಗೇನೂ ಹೇಳ್ಲಿಲ್ಲ. ಇವ್ನು ನನ್ಮಗ ಅಲ್ಲ, ನನ್ನ ಫ್ರೆಂಡ್ ಮಗು...." ಅಲೋಕನ ಕೈ ಹಿಡಿದುಕೊಂಡ, ನೀಲಿಮಾ ಕೂಡ ಅವನ ಕೆನ್ನೆ ಸವರಿದಳು.

ತಟಸ್ಥವಾಗಿದ್ದವನು ಪ್ರಸನ್ನ ಮಾತ್ರ, ತನ್ನ ನೀಲಿಮಾ ನಡುವೆ ನಿವೇದಿತಾ, ಅಲೋಕನ ಸುದ್ದಿಯನ್ನ ಹೆಚ್ಚು ಪ್ರಸ್ತಾಪಕ್ಕೆ ತರುತ್ತಿರಲಿಲ್ಲ. ಅವರ ಬಗ್ಗೆ ಹೇಳಿರುವುದು ಅತ್ಯಲ್ಪ.

ನಾಲ್ವರು ಫ್ಯಾಮಿಲಿ ರೂಮು ಹೊಕ್ಕರು. ಅಲೋಕ್‌ನ ಕೈ ತೊಳಿಸಲು ಪಟೇಲ್ ಕರೆದಾಗ "ಬೇಡ....ಅಂಕಲ್....ನಂಗೇನು ಬೇಡ" ಎಂದವ "ನಾನು ಕಾರಿನಲ್ಲಿರುತೀನಿ" ಮುಖ ಸಪ್ಪಗೆ ಮಾಡಿಕೊಂಡಾಗ ಆ ಎಳೆಯ ಹೃದಯದಲ್ಲಿ ನಡೆಯುವ ಹೋರಾಟವನ್ನು ಅರ್ಥಮಾಡಿಕೊಂಡ.

"ಏನು ತಿನ್ನೋದ್ಬೇಡ, ಐಸ್‌ಕ್ರೀಮ್ ತಗೋ ಯಾರ್. ಬರೀ ಕಂಪೆನಿ ಸೇಕ್‌ಗಾಗಿ" ಅವನ ಮನ ಒಲಿಸಿದ.

ಕೈ ತೊಳೆದು ಬಂದ ಅಲೋಕ್ ಇನ್ನೊಂದು ಖಾಲಿ ಇದ್ದ ಟೇಬಲ್ಲಿಗೆ ಹೋಗಿ ಕೂತು ತನ್ನ ವಿರೋಧವನ್ನು ವ್ಯಕ್ತಪಡಿಸಿದ.

ನೀಲಿಮಾ ಮೆಚ್ಚಿಗೆಯಿಂದ ಅವನತ್ತ ನೋಡಿದಳು. "ದೊಡ್ಡವರ ಮನಸ್ಸಿನ ಸೈಕಾಲಜಿ ಅವ್ನಿಗೆ ಗೊತ್ತು. ತುಂಬ ಕ್ಲೆವರ್" ಸಣ್ಣ ಹುಡುಗರ ಒಡನಾಟ ಅವಳಿಗೆ ಕಮ್ಮಿ. ಆದರೂ ಯಾಕೋ ಅಲೋಕ್ ಅವಳಿಗೆ ಇಷ್ಟವಾಗಿದ್ದ.

ಪಟೇಲ್ ನಗು, ಮಾತಿನಲ್ಲಿ ಪ್ರಸನ್ನನ ಮೂಡ್ ಕೂಡ ಬದಲಾಯಿಸಿ

ಊಟಕ್ಕೆ ರಂಗು ತಂದ, ತಟ್ಟನೇ ನೋಟ ಹರಿಸಿದ ಪಟೇಲ್ ಬೆಚ್ಚಿಬಿದ್ದ. ಆ ಟೇಬಲ್ಲು ಖಾಲಿಯಾಗಿತ್ತು. ಐಸ್‌ಕ್ರೀಮ್ ಕೂಡ ಅವನು ಮುಟ್ಟಿರಲಿಲ್ಲ. ಅದು ನಿಧಾನವಾಗಿ ಕರಗುತ್ತಿತ್ತು.

"ಎಕ್ಸ್‌ಕ್ಯೂಜ್ ಮಿ...." ಪಟೇಲ್ ನಡೆದು ಬಿಟ್ಟ.

ಪರಿಸ್ಥಿತಿ ನೀಲಿಮಾ, ಪ್ರಸನ್ನ ಅರಿವಿಗೂ ಬಂತು. ಇಬ್ಬರು ಹೊರಗೆ ಬರುವ ವೇಳೆಗೆ ಪಟೇಲ್‌ನ ಮುಖದ ಮೇಲೂ ಬೆವರೊಡೆದಿತ್ತು. ಸೈನಿಕರು ನೆಲಕ್ಕೆ ಉರುಳುತ್ತಿರುವ ಸಂದರ್ಭದಲ್ಲಿ, ಕೂಡ ಕಂಗೆಡದ ಅವನು ಇಂದು ಅಧೀರನಾಗಿದ್ದ.

"ಸಾರಿ, ಸಿ, ಯೂ" ಕಾರು ಹತ್ತಿಯೇ ಬಿಟ್ಟ.

ಪಟೇಲ್‌ನ ನೀಲಿಮಾ ನೋಡಿರಲಿಲ್ಲ, "ನಿಮ್ಮ ಫ್ರೆಂಡ್ ತುಂಬ ಜಾಲಿ ಮನುಷ್ಯ, ಅಷ್ಟೆ ಎಮೋಷನಲ್, ಆ ಹುಡ್ಗ ಎಲ್ಲಿ ಹೋಗಿರ್ತಾನೆ, ಇಲ್ಲೇ ಹುಡ್ಕೋ ಬದ್ಲು ಕಾರು ಹತ್ತಿದರು." ಅವನಿದ್ದ ಸ್ಥಿತಿಯಲ್ಲಿ ಪ್ರಸನ್ನ ಏನು ಮಾತಾಡಲು ಹೋಗಲಿಲ್ಲ.

ಮನೆ ತಲುಪಿದಾಗಲೂ ಪ್ರಸನ್ನ ಚೇತರಿಸಿಕೊಳ್ಳಲಿಲ್ಲ. ಅವನೆದೆಯಲ್ಲಿ ಭಯ ತುಮುಲ. ಇವೆಲ್ಲಕ್ಕೂ ಮೀರಿದ ಸಂಕಟ. ಅಲೋಕ್ ಎಲ್ಲಿ ಹೋಗಿರ ಬಹುದು? ರಭಸದಿಂದ ಸಿಡಿದು ಬರುವ ವಾಹನಗಳ ನಡುವೆ ಅವನ ಛಿದ್ರ ಛಿದ್ರ ದೇಹ ಕಂಡಂತಾಯಿತು.

ಹೆದರಿಕೆಯಿಂದ ನಡುಗಿ ಹೋದ.

ಪಟೇಲ್ ಮನೆಗೆ ಎರಡು ಸಲ ಫೋನ್ ಮಾಡಿದ 'ಬಂದೇ ಇಲ್ಲ' ಅಮೀರ್ ತಿಳಿಸಿದ. ಅವನ ಮನ ಕೆಡಕನ್ನ ನೆನೆದು ನಡುಗತೊಡಗಿತು.

"ಡಿಯರ್, ಇಲ್ನೋಡಿ" ನೀಲಿಮಾ ಏನೋ ಹೇಳಿದಳು. ಅವನಿಗೇನು ಅರ್ಥವಾಗಲಿಲ್ಲ. ಮತ್ತೆ ಫೋನ್ ಹತ್ತಿರ ಹೋದ. ಹೋಟೆಲ್‌ನ ಸಮೀಪದ ಪೋಲೀಸ್ ಠಾಣೆಗೆ ಫೋನ್ ಮಾಡಿದ "ಸುತ್ತಮುತ್ತ ಯಾವುದಾದರೂ ಆಕ್ಸಿಡೆಂಟ್ ಆಗಿದ್ಯಾ? ಒಂದು ಸಣ್ಣ ಹುಡ್ಗ...." ಕೇಳಿದ. "ಯಾವ್ದು ಇಲ್ವಲ, ನೀವು ಯಾರು?" ಫೋನಿಟ್ಟು ಬಿಟ್ಟ.

ನೀಲಿಮಾ ಬಂದು ಅವನ ಕೈಯಲ್ಲಿನ ರಿಸೀವರ್ ಕಿತ್ತಿಟ್ಟಳು "ನೀವ್ಯಾಕೆ,

ಇಷ್ಟೊಂದು ಎಕ್ಸೈಟ್ ಆಗ್ತೀರಾ ? ಅಲ್ಲೀ ಎಲ್ಲೋ ಇರ್ತಾನೆ. ಪಟೇಲ್ ಕರ್ಕೊಂಡ್ಹೋಗಿರ್ತಾರೆ...." ಕೈ ಹಿಡಿದು ಎಳೆದೊಯ್ದಳು.

"ಸ್ವಲ್ಪ ಮಲ್ಗಿ ರೆಸ್ಟ್ ತಗೊಳ್ಳಿ. ಒಂದಿಷ್ಟು ಪಪ್ಪನನ್ನ ಮಾತಾಡ್ಸಿ ಕೊಂಡ್ಬರ್ತೀನಿ" ಹೊರಗೆ ಹೋದಳು.

ಅಲೋಕ್ ನೋಟದಲ್ಲಿದ್ದುದೇನು? ತೀರಾ ಜಾಣ್ಮೆಯ ಹುಡುಗ ಅವನ ಪ್ರಶ್ನೆಗಳಿಗೆ ಇವನೇ ಬೆಚ್ಚಿ ಬೀಳುತ್ತಿದ್ದ. ತಿರಸ್ಕಾರ, ದ್ವೇಷ ಕೂಡಿದ ಅವನ ನೋಟ ಇವನನ್ನ ಈಗಲೂ ಇರಿಯುವಂತೆ ಕಂಡಿತು.

ಮತ್ತೆ ಫೋನೆತ್ತಿ ಡಯಲ್ ತಿರುಗಿಸಿದ. ಅದೇ ಸಮಯದಲ್ಲಿ ರಿಸೀವರ್ ಎತ್ತಿದ್ದರು ಸೋಮೇಶ್ವರ್.

"ಇನ್ನು ಬಂದಿಲ್ಲ, ಸಾಬ್" ಅತ್ತ ಕಡೆಯ ಉತ್ತರ.

ಫೋನಿಟ್ಟ ಮೇಲೆ ಬರೀ ಕುತೂಹಲಕ್ಕಾಗಿ ಮಗಳನ್ನ ಕೇಳಿದರು. "ಯಾರು....ಪಟೇಲ್ ?" ನೀಲಿಮಾ ತುಟಿ ಅರಳಿಸಿದಳು "ಅವ್ರ ಫ್ರೆಂಡ್.... ಆರ್ಮಿನಲ್ಲಿದ್ದರಂತೆ, ಇಲ್ಲಿಗೆ ಬಂದಿದ್ದಾರೆ. ಅವ್ರ ಜೊತೆಯಲ್ಲೀ ಮಧ್ಯಾಹ್ನದ ಲಂಚ್ ತಗೊಂಡಿದ್ದು"

ಆ ವಿಷಯವನ್ನು ಸೋಮೇಶ್ವರ್ ಅಷ್ಟಕ್ಕೆ ಬಿಟ್ಟರು ಇಂದಿಗೂ ಅವರಿಗೆ ಮಗಳು ಹಿಡಿದ ದಾರಿ ಸರಿಯಿಲ್ಲವೆಂದೆ ಅನ್ನಿಸುತ್ತಿತ್ತು.

ಒಳಗಿನ ಆಂದೋಲನ ಸಹಿಸಲಾರದೆ ಮೇಲೆದ್ದ. ಪಟೇಲ್ ಇಷ್ಟರ ವರೆಗೂ ಮನೆಗೆ ಬರದಿರಬೇಕಾದರೆ....ಏನಾದರೂ ದುರಂತ ...ಅವನೆದೆ ನಡುಗಿ ಹೋಯಿತು. ಆ ಮಗುವಿಗಾಗಿ ಇಬ್ಬರು ಎಷ್ಟು ಶ್ರಮಿಸಿದ್ದರು. ನಿವೇದಿತಾ ಉಬ್ಬಿದ ಹೊಟ್ಟೆಯ ಮೇಲೆ ತಲೆ ಇಟ್ಟು ಮಗುವಿನ ಉಸಿರಾಟ ಕೇಳುತ್ತಿದ್ದ.

'ಅಲೋಕ್....' ಪೂರ್ತಿ ಬೆವತು ಹೋದ. ಆ ಹೆಸರನ್ನ ಆಯ್ಕೆ ಮಾಡಿ ಇಟ್ಟವನು ಅವನೇ. ಎರಡನೇ ಸಲ ಗರ್ಭ ಧರಿಸಿದಾಗ ನಿವೇದಿತಾ "ಈ ಸಲ ಮಗುವಿಗೆ ಹೆಸರಿಡೋದು ನಾನು. ಗಂಡು ಮಗುವಾದ್ರೆ ವಿವೇಕಾನಂದ ಅಂತ ಇಡ್ತೀನಿ" ಎಂದಿದ್ದಳು. ಆ ಅವಕಾಶವೆ ಅವಳಿಗೆ ದೊರೆಯಲಿಲ್ಲ.

ಕಾರು ಕೀ ತಗೊಂಡು ಹೊರಗೆ ಬರುವ ವೇಳೆಗೆ ನೀಲಿಮಾ ಎದುರಾದಳು

ಅವಳ ಕಣ್ಣುಗಳಲ್ಲಿ ಅಚ್ಚರಿ "ಈಗ ಮತ್ತೆಲ್ಲಿಗೆ?" ಹಣೆಗೆ ಕೈಯೊತ್ತಿದ "ಸ್ವಲ್ಪ ಅರ್ಜೆಂಟಿದೆ...." ಹೊರಟು ಬಿಟ್ಟ.

ಪಟೇಲ್ ಮನೆಗೆ ಬರುವವರೆಗೂ ಅವನ ಆವೇಶ ಕಡಿಮೆಯಾಗಲಿಲ್ಲ. ಅಮೀರ್ ಫೋನ್‌ನಲ್ಲಿ ಕೊಟ್ಟ ಉತ್ತರವೇ ಕೊಟ್ಟ.

"ಇನ್ನು....ಬಂದಿಲ್ಲ, ಸಾಬ್"

ಮೈಯಲ್ಲಿನ ಪೂರ್ತಿ ಶಕ್ತಿ ಕಳೆದುಕೊಂಡವನಂತೆ ವರಾಂಡದಲ್ಲಿನ ಸೋಫಾ ಮೇಲೆ ಕುಕ್ಕರಿಸಿದ 'ಅಲೋಕ್, ಅಲೋಕ್' ಅವನ ಮನ ಚೀರುತಿತ್ತು. ತೊಡೆದು ಹಾಕಲು ಸುಲಭವಾದಂಥ ಬಂಧನವೇ?

ಡೈವೋರ್ಸ್ ಪೇಪರ್ಸ್ ಕೊಟ್ಟಾಗ ವಕೀಲರು ಅವನನ್ನು ಪ್ರಶ್ನಿಸಿದ್ದರು "ಮಗುವಿನ ಬಗ್ಗೆ ಏನು ತೀರ್ಮಾನ ತಗೊಂಡ್ರಿ?" ತಲೆ ಕೊಡವಿದ್ದ. ಹಿಂದಿನ ಬದುಕನ್ನು ಪೂರ್ತಿ ಮರೆತು ಬಿಡುವಂಥ ಹೊಸ ಬದುಕು ಬೇಕಾಗಿತ್ತು. ಅವನು ನಿರಾಳವಾಗಿ ಉಸಿರಾಡಬೇಕಿತ್ತು.

"ಮಗು, ನಿವೇದಿತಾ ಬಳಿಯಲ್ಲೇ ಇರಲಿ. ಖರ್ಚು ವೆಚ್ಚಕ್ಕೆ ಒಂದಿಷ್ಟು ಹಣ ಕೊಡಲು ತಯಾರು" ಎಂದಿದ್ದ.

ವಕೀಲರು ಒಂದು ತರಹ ಅವನತ್ತ ನೋಡಿ ಮುಗುಳ್ನಗೆ ಬೀರಿದ್ದರು. "ಓಕೇ ಆದರೆ ಆ ಹಣ ಪಡೆಯೋಕೆ ನಿವೇದಿತಾ ಸಿದ್ಧವಿಲ್ಲ. ನಿಮ್ಮಿಂದ ಡೈವೋರ್ಸ್ ಬಿಟ್ಟು ಮತ್ತೇನನ್ನ ಬಯಸಿಲ್ಲ" ಪೇಪರ್‌ನತ್ತ ಕಣ್ಣಾಡಿಸಿದ್ದರು. ಭಾರತೀಯ ಹೆಣ್ಣು ಉಜ್ವಲ ಪರಂಪರೆ ಪ್ರತೀಕ ಎನ್ನುವುದು ಅವರ ಭಾವನೆ.

ಪಟೇಲ್‌ನ ನಗು ಕಂಡೇ ಪ್ರಸನ್ನ ಎಚ್ಚೆತಿದ್ದು "ಅಲೋಕ್ ಸಿಕ್ಕಿದ್ನಾ?" ಅವನ ಗಾಬರಿಯನ್ನ ಒಂದೇ ಮಾತಿನಿಂದ ತೊಡೆದು ಹಾಕಿದ "ಡೋಂಟ್ ವರೀ, ಅವ್ನು ಆರಾಮಾಗಿ ಅವರಮ್ಮನ ಕೈತುತ್ತು ತಿಂತಾ ಇದ್ದಾನೆ. ನೀನ್ಯಾಕೆ ಗಾಬ್ರಿಯಾಗಿ ಬಂದಿದ್ದೀಯ? ಈಗ ಅವ್ನು ನಿನ್ನ ಪಾಲಿಗೆ ಏನು ಅಲ್ಲ" ಅವನ ಬಳಿಯಲ್ಲೇ ಕೂತು ಉಸಿರು ದಬ್ಬಿದ.

"ಎಲ್ಲಿ....ಹೋಗಿದ್ದ, ಆ ಈಡಿಯಟ್?" ಹೋರಾಟ-ಕೋಪದ ದಾರಿ ಹಿಡಿಯಿತು "ಅವ್ನು ದಾರಿ ತಪ್ಪಿದ್ನೊ....ಪೊಲೀಸ್ ಠಾಣೆಗೆ ಹೋಗಿ ಅವರಮ್ಮನ ವಿಳಾಸ ಕೊಟ್ಟು ತನ್ನನ್ನ ಅಲ್ಲಿಗೆ ಬಿಡಬೇಕೆಂದು ರಿಕ್ವೆಸ್ಟ್ ಮಾಡಿ

ಕೊಂಡಿದ್ದ. ನಾನು ನಿವೇದಿತಾ ಮನೆಗೆ ಹೋಗೋ ವೇಳೆಗೆ ಇನ್‌ಸ್ಪೆಕ್ಟರ್ ವಿಲಿಯಂ ಕೂಡ ಅವನನ್ನ ಅಲ್ಲಿಗೆ ಕರ್ಕೊಂಡ್ಬಂದ್ರು. ಅವ್ನ ಇಂಟಲಿಜೆನ್ಸ್ ಬಗ್ಗೆ ಬಾಯಿ ತುಂಬ ಹೊಗಳಿದರು. ಅಲೋಕ್ ಪ್ರಚಂಡ. ಇನ್ನು ಎರಡ್ವರ್ಷಕ್ಕೆ ಯೋಚ್ನೇ ಮಾಡ್ಬೇಕಾದುದ್ದನ್ನ ಇಂದೇ ಯೋಚ್ನೇ ಮಾಡ್ತಾನೆ." ಮೆಚ್ಚಿಗೆಯಾಡಿದ.

ಅವನೆದೆಯ ಮೇಲಿನ ದೊಡ್ಡ ಕಲ್ಲು ಇಳಿಸಿದಂತಾಯಿತು ಪ್ರಸನ್ನಗೆ. ಸಮಾಧಾನವಾಗಿ ಉಸಿರಾಡಿದ.

"ಬೈ ದಿ ಬೈ ಪ್ರಸನ್ನ....ನೀನ್ಯಾಕೆ ಇಷ್ಟೊಂದು ಎಕ್ಸೈಟ್ ಆದೆ ? ಅದು ತೊಡೆದುಕೊಂಡ ಸಂಬಂಧ ತಾನೆ ! ಅದ್ನ ಕಾನೂನೇ ಹೇಳಿದೆ" ಸಮಾಧಾನವಾಗಿಯೇ ಆಡಿದ. ಆದರೆ ಪ್ರಸನ್ನ ಉರಿದುಬಿದ್ದ.

"ಷಟಪ್. ಕಾನೂನು ಬೇರ್ಪಡಿಸಿರೋದು ನನ್ನ, ನಿವೇದಿತಾನ ಮಾತ್ರ. ಅಲೋಕ್ ನನ್ನ ಮಗನೇ" ಉದ್ವೇಗಗೊಂಡ.

ಷೂ ಬಿಚ್ಚಿ ಪಕ್ಕಕ್ಕೆ ತಳ್ಳಿದ ಪಟೇಲ್ "ಹ್ಯಾವ್ ಎ ಪೇಷನ್ಸ್. ನೀನು ಅವನನ್ನ ಮಗ ಅನ್ನಬಹ್ದು. ಅವ್ನು ನಿನ್ನನ್ನ ಅಪ್ಪ ಅನ್ನಬೇಕು ಕೂಡ. ನಿಂಗೆ ಸೆನ್ಸ್ ಆಫ್ ಹ್ಯೂಮರ್ ಇದ್ದಿದ್ರೆ ಚೆನ್ನಾಗಿತ್ತು." ಬಟ್ಟೆ ಬದಲಾಯಿಸಿ ಬಂದವನು ಅವನ ಎದುರಿನಲ್ಲಿಯೇ ಕೂತ.

ಭಯಂಕರ ತುಮುಲದ ನೆರಳು ಪ್ರಸನ್ನನ ಮುಖದ ಮೇಲಿತ್ತು.

"ಥೋಡೋ ಯಾರ್, ಮುಗ್ದು ಹೋದ ಕತೆಗೆ ಮತ್ತೆ ಮುನ್ನುಡಿ ಬರೆಯೋದೇಕೆ ? ಅದ್ರಿಂದ ನಿಂಗೆ ತೊಂದರೆ. ಹೇಗೂ ಮಗನ ಜವಾಬ್ದಾರಿ ನಿವೇದಿತಾ ಹೊತ್ತುಕೊಂಡಿದ್ದಾಳೆ. ಅವ್ಳು ಹೆತ್ತ ತಾಯಿಯಾದರಿಂದ ಸರ್ಯಾಗಿ ನಿರ್ವಹಿಸ್ತಾಳೆ. ನೀನು ಸುಮ್ನೆ ತಲೆ ಕೆಡ್ಸಿಕೊಂಡು ಮನಸ್ಸಿನ ನೆಮ್ದಿ ಕೆಡಿಸ್ಕೋಬೇಡ. ಆರಾಮಾಗಿ ಹೊಸ ಪ್ರಬುದ್ಧ ಬದ್ಕಿನ ಅನ್ವೇಷಣೆಯಲ್ಲಿ ನಿರತನಾಗು." ಸಂತೈಯಿಸಿದ.

ಪ್ರಸನ್ನ ರಾತ್ರಿಯವರೆಗೂ ಅವನಲ್ಲಿಯೇ ಉಳಿದ. ಮತ್ತೆ ಪಟೇಲ್ ಅವರಿಬ್ಬರ ಪ್ರಸ್ತಾಪವೆತ್ತಲಿಲ್ಲ. ಗೆಳೆಯನ ತಪ್ಪಿನ ಅರಿವಿದ್ದರೂ ಚುಚ್ಚಿ ಚುಚ್ಚಿ ನೋಯಿಸುವುದು ಅವನಿಗೆ ಬೇಡವಾಗಿತ್ತು.

ಅವನು ಹಿಂದಿರುಗಿ ಮನೆಗೆ ಬಂದಾಗ ನಿಲೀಮಾ ಕೈಯಲ್ಲಿ ಪುಸ್ತಕ

ಹಿಡಿದು ಹಾಸಿಗೆಯ ಮೇಲೆ ಉರುಳಿಕೊಂಡಿದ್ದಳು. ಅವಳು ತುಂಬ ಧೈರ್ಯಸ್ಥೆ, ಹಟವಾದಿ.

"ಹಲೋ...." ಎಂದವನು ಬಟ್ಟೆ ಬದಲಾಯಿಸಿ ಅವಳ ಪಕ್ಕದಲ್ಲಿ ಕೂತ "ಆ ಹುಡ್ಗ ಸಿಕ್ಕಿದನಂತ ?" ಕೇಳಿದಳು, ಮೆಲ್ಲಗೆ ಗುಂಡು ಪಿನ್ನಿಂದ ಚುಚ್ಚಿದಂತಾಯಿತು. "ಹಾ....ನಿಂಗೆ ಹೇಗೆ ಗೊತಾಯ್ತು ?" ನಿಲೀಮಾ ಎದ್ದು ಕೂತು ನಕ್ಕುಬಿಟ್ಟಳು "ನಾನು ಅಷ್ಟೊಂದು ಮುಗ್ಧ ಹೆಣ್ಣಲ್ಲ. ನಿಮ್ಮ ಮನಸ್ಸಿನ ಸೈಕಾಲಜಿ ನಂಗೆ ಗೊತಾಗ್ಲಿಲ್ವಾ ? ಅವ್ನ ವಿಚಾರಿಸೋಕೆ ತಾನೇ ಹೋಗಿದ್ದು !"

"ಹೌದು...." ಸುಮ್ಮನಾದ.

"ಅವ್ನು ನಿಮ್ಮ ಮಗ ಅಲೋಕ್ ತಾನೇ ? ಹಾಗೆಂದೇ ನನ್ಹತ್ರ ಹೇಳಬಹುದಿತ್ತು. ಎಲ್ಲಾ ತಿಳಿದೆ ತಾನೇ ನಿಮ್ಮನ್ನ ಮದ್ವೆ ಆಗಿರೋದು. ಪರಿಚಯಿಸ್ಬೋದಾಗಿತ್ತು." ಕುಹಕವಿಲ್ಲದಿದ್ದರೂ ಭಾಷೆ ಬಳಕೆ ತೀಕ್ಷ್ಣವಾಗಿತ್ತು.

"ಅಪರಾಧನ....?" ಅವಳ ತೋಳಿನ ಮೇಲೆ ಕೈಯಿಟ್ಟ.

"ಏನಿಲ್ಲ, ನನ್ನ ಮನಸ್ಸಿಗೆ ಮುಜುಗರವಾಗುತ್ತೆ ಅಂದ್ಕೊಂಡ್ರಿ. ಆದರೆ ಅಲೋಕ್ ಮನಸ್ಸು ನಿಮ್ಮ ಇರುವಿಕೆಯನ್ನು ಕೂಡ ವಿರೋಧಿಸುತ್ತೆ. ಎಳೆಯ ಮನಸ್ಸು ಅಷ್ಟು ಕಠೋರವಾಗಲು ಬಿಡಬಾರ್ದಿತ್ತು. ನೀವುಗಳು ಬೇರೆ ಯಾದ್ರೂ ಮಗುವಿನ ಮೇಲೆ ನಿಮ್ಗೆ ಅಧಿಕಾರ ಇತ್ತು" ಸೂಕ್ಷ್ಮವಾಗಿ ಅವನ ಮನಸ್ಸನ್ನು ಅರಿಯಲು ನೋಡಿದಳು.

ತಲೆ ಅಡ್ಡಡ್ಡ ಆಡಿಸಿದ "ನಾನು ಅಂಥ ಅಧಿಕಾರದ ಬಗ್ಗೆ ಯೋಚಿಸ್ಲಿಲ್ಲ. ಅಲೋಕ್‌ನ ಲಾಲನೆ, ಪಾಲನೆ ಸಮಸ್ತವನ್ನು ನಿವೇದಿತಾಗೆ ಬಿಟ್ಟೆ" ಇಂದು ಅಪರಾಧಿಯಂತೆ ಮುಖ ಮಾಡಿದ.

ನೀಲಿಮಾ ಸುಂದರವಾಗಿ ಅತ್ಯಂತ ಸುಂದರವಾಗಿ ಹಲ್ಲುಗಳು ಕಾಣುವಂತೆ ನಕ್ಕಳು. "ಈಗ ಮೊದ್ಲು ಪಿ. ಹೆಚ್. ಡಿ. ನಾ, ಮಗುನಾ ಅಂತ ಯೋಚ್ಸಿ" ಪ್ರಸನ್ನ ಬಳಸಿ ಅಪ್ಪಿಕೊಂಡ. ಅವನ ಉದ್ವೇಗ ಶಮನವಾಯಿತೇನೋ.

ಸೋಮೇಶ್ವರ್ ಅಂದು ಮಾರ್ಕೆಟಿಂಗ್ ಸೆಂಟರ್‌ಗೆ ಬಂದಿದ್ದು ಒಂದಿಷ್ಟು ಕೊಳ್ಳುವಿಕೆಗಾಗಿ. ವೇರ್ ಹೌಸ್‌ನಲ್ಲಿ ನಿವೇದಿತಾನ ಕಂಡಾಗ ಮುಖ ತಿರುಗಿಸ ಬೇಕೆನಿಸಲಿಲ್ಲ. ಆದರೆ ಅಪರಾಧ ಪ್ರಜ್ಞೆ ಅವರನ್ನ ಕಾಡಿತು.

"ನಮಸ್ತೆ....ಸರ್" ಎಂದಾಗ ಬಲವಂತದಿಂದ ತುಟಿಯ ಮೇಲೆ ನಗುವರಳಿಸಿದರು "ನಮಸ್ತೆ, ಹೇಗಿದ್ದೀಯಾ ?" ಅಲೋಕ್‌ನತ್ತ ನೋಡುತ್ತ ಕೇಳಿದರು. ತಂದೆಯ ಸಾನಿಧ್ಯದಿಂದ ಆ ಮಗುವನ್ನ ವಂಚಿಸಿದ ನೀಲಿಮಾ ಕ್ಷಮೆಗೆ ಅರ್ಹಳಲ್ಲ ಅನ್ನಿಸಿತು.

"ಚೆನ್ನಾಗಿದ್ದೀನಿ, ಸರ್. ಇವ್ನು ನನ್ನ ಮಗ ಅಲೋಕ್...." ಮಗನನ್ನ ಪರಿಚಯಿಸಿದಳು "ನಮಸ್ತೆ...." ನಗು ಬೀರಿದ. ಎಂಥ ಸುಂದರ ನಗು! ಇಂಥ ನಗುವನ್ನ ಮೀರಿಸುವಂಥ ಆಕರ್ಷಣೆಯನ್ನೇನು ಕಂಡ ನೀಲಿಮಾಳಲ್ಲಿ ?

"ನಮಸ್ತೆ...."ಅವನ ಕೆನ್ನೆ ಸವರಿದರು.

ನಿವೇದಿತಾ ಬಿಲ್ ತೆತ್ತು ಪ್ಯಾಕೆಟ್ ಪಡೆದು ಬರುವವರೆಗೂ ಅವನ ಶಾಲೆ, ಓದಿನ ಬಗ್ಗೆಯೆಲ್ಲ ವಿಚಾರಿಸಿದರು.

"ಮುಂದೆ ಏನಾಗ್ತೀಯಾ ?" ಎಂದ ಕೂಡಲೇ ತಡಬಡಿಸದೆ ಉತ್ತರಿಸಿದ "ಆರ್ಮಿಗೆ ಸೇರ್ತೀನಿ. ಸೈನಿಕನಾಗ್ತೀನಿ... ಆಮೇಲೆ ಕಮ್ಯಾಂಡರ್ ಆಗ್ತೀನಿ ಶತ್ರುಗಳ ವಿರುದ್ಧ ಹೋರಾಡುತೀನಿ" ಸ್ವರದಲ್ಲಿನ ಉತ್ಸಾಹವನ್ನೆ ಗಮನಿಸಿದರು.

"ನೀನು ಸೈನ್ಯಕ್ಕೆ ಸೇರಿ ಬಿಟ್ಟರೇ....ನಿನ್ನ ಮಮ್ಮಿ ಒಂಟಿಯಾಗಿ ಬಿಡ್ತಾರಲ್ಲ" ಅವನನ್ನು ಕೆದಕಿದರು.

ಅದಕ್ಕೆ ಉತ್ತರಿಸಿದ್ದು ನಿವೇದಿತಾ "ಪ್ರತಿಯೊಬ್ಬ ಸೈನಿಕನಿಗೂ ತಾಯಿ ಇರ್ತಾಳೆ. ಅವ್ರೆಲ್ಲ ಹಾಗೇ ಯೋಚ್ಸಿದ್ರೆ....ದೇಶದ ಬಗ್ಗೆ ಯೋಚಿಸೋರು ಯಾರು ? ಅಲೋಕ್ ಉತ್ಸಾಹಕ್ಕೆ ನಾನು ಯಾವತ್ತೂ ತಣ್ಣೀರು.... ಎರಚೋಲ್ಲ"

ಸೋಮೇಶ್ವರ್ ಮೆಚ್ಚಿಗೆಯಿಂದ ಅವಳನ್ನು ನೋಡಿದರು. ಅವಳೊಬ್ಬ ಉತ್ತಮ ತಾಯಿ ಮಾತ್ರವಲ್ಲ, ಒಳ್ಳೆಯ ಹೆಂಡತಿಯು ಕೂಡ, ಈಗ ಪ್ರಸನ್ನ ದುರಾದೃಷ್ಟದ ವ್ಯಕ್ತಿಯಾಗಿ ಕಂಡ.

"ಬರ್ತೀನಿ, ಸರ್" ಸರಿದು ಹೋದಳು.

ಅಂದು ಮನೆಗೆ ಬಂದಾಗ ಸೋಮೇಶ್ವರ್ ಸಪ್ಪಗಿದ್ದರು. ಒಂದು ಹೆಣ್ಣಿಗೆ ಅನಗತ್ಯವಾಗಿ ಅನ್ಯಾಯ ಮಾಡಿದಂತಾಗಿತ್ತು. ಅವಳು ಸಿಡಿದೋ, ಇನ್ನು ಯಾವ ರೀತಿಯಲ್ಲೋ ಪ್ರತಿಕಾರ ತೋರಿದ್ದರೇ ಸೆಟೆದು ಮಗಳನ್ನ ಸಮರ್ಥಿಸಿಕೊಳ್ಳುತ್ತಿದ್ದರೇನೋ ! ಅವಳು ಹಿಡಿದ ದಾರಿ ಅತ್ಯಂತ ನಾಜೂಕು, ನವರು, ಸೋಲ್ಲೆತ್ತಲು ಯಾರಿಂದಲೂ ಸಾಧ್ಯವಿಲ್ಲ.

ಸಾಯಂಕಾಲ ಮಗಳು ಒಂಟಿಯಾಗಿ ಸಿಕ್ಕಾಗ ಅಪಾರ ಧೈರ್ಯ ಕೂಡಿಸಿ ಕೊಂಡು ಅಂದೆ ಬಿಟ್ಟರು "ನೀನು ಬಹಳ ದೊಡ್ಡ ತಪ್ಪು ಮಾಡ್ಬಿಟ್ಟೆ ನೀಲಿಮಾ. ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ, ದಬ್ಬಾಳಿಕೆಯ ಬಗೆಗೆ ಸಾಕಷ್ಟು ಸಲ ಆವೇಶದಿಂದ ಅತ್ಯಂತ ಬುದ್ಧಿವಂತಿಕೆಯಿಂದ ಭಾಷಣ ಮಾಡಿದ್ದೀಯ. ಈಗ ನೀನು....ಮಾಡಿದ್ದೇನು ?" ಬಹಳ ನೊಂದಂತೆ ಕಂಡರು.

ನೀಲಿಮಾ ವಿಸ್ಮಿತಳಾಗಿ ತಂದೆಯತ್ತ ನೋಡಿದಳು.

"ನೀವೇನು....ಹೇಳಿದ್ದು ? ನನ್ನ ಭವಿಷ್ಯದ ಬಗ್ಗೆ ನಾನೇ ಚಿಂತಿಸಬಲ್ಲೆ. ಬದುಕು ಸರಿ, ತಪ್ಪುಗಳ ಮಿಶ್ರಣವಲ್ಲ, ನನ್ನದು ಹದಿನೆಂಟರ ಹರೆಯವಲ್ಲ ಪ್ರಸನ್ನನ ಸೆಳೆಯಲು. ನಮ್ಮಿಬ್ಬರ ಭಾವನೆ, ನಂಬಿಕೆ, ಚಿಂತನ ಒಂದೇ ಆಗಿದೆ" ಎಂದಳು ತನ್ನನ್ನ ಸಮರ್ಥಿಸಿಕೊಳ್ಳುತ್ತ.

"ನೋ, ನಾನು ಅದಲ್ಲ ನೀಲಿಮಾ ಹೇಳ್ತಾ ಇರೋದು. ಇಲ್ಲಿ ಬೇರೊಂದು ಹೆಣ್ಣಿಗೆ ಅನ್ಯಾಯವಾಗಿದೆ. ಅದ್ಕೆ ನೀನು ಕಾರಣ"ತಮ್ಮೆಲ್ಲ ಧೈರ್ಯವನ್ನ ಕ್ರೋಢೀಕರಿಸಿ ಅಂದು ಎದ್ದು ಹೋದರು.

ಗೊಂಬೆಯಂತೆ ಕೂತು ಬಿಟ್ಟಳು ನೀಲಿಮಾ, ಅವರು ಅನಾಸಕ್ತಿ ಯಿಂದಲೋ, ಬೇರೆ ರೀತಿಯಿಂದಲೋ ಪ್ರಸನ್ನ, ನೀಲಿಮಾ ಮದುವೆ, ಸ್ನೇಹ ಇಷ್ಟವಿಲ್ಲವೆಂದು ತಿಳಿಸಿದ್ದರು. ಆದರೆ ಇಂದಿನಷ್ಟು ಸ್ಪಷ್ಟವಾಗಿ ಅವಳ ತಪ್ಪನ್ನ ಎತ್ತಿ ಆಡಿರಲಿಲ್ಲ.

ಅದನ್ನೆ ಮನಸ್ಸಿಗೆ ಹಚ್ಚಿಕೊಳ್ಳುವಂಥ ಸೆನ್ಸಿಟೀವ್ ಮೈಂಡ್ ಅಲ್ಲ ಅವಳದು.

ಆದರೆ ಮೂರು ದಿನ ಕಳೆದರೂ ಸೋಮೇಶ್ವರ್ ಅವಳೊಂದಿಗೆ ಸರಿಯಾಗಿ ಮಾತಾಡಲಿಲ್ಲ, ಎದುರಾದಾಗಲಿಲ್ಲ ಸರಿದು ಹೋಗುತ್ತಿದ್ದರು. ಅದನ್ನ ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ ನೀಲಿಮಾ.

ಮರುದಿನ ಸಂಜೆ ಪ್ರಸನ್ನನ ಹುಡುಕಿಕೊಂಡು ಪಟೇಲ್ ಮನೆಗೆ ಬಂದಾಗ ನೀಲಿಮಾ ಇದ್ದಳು.

"ನಿಮ್ಮ ಫ್ರೆಂಡ್ ಲೈಬ್ರರಿ ಕಡೆಗೆ ಹೋದ್ರು ಬರ್ತಾರೆ...ಬನ್ನಿ" ತಮ್ಮ ಕೋಣೆಗೆ ಕರೆದೊಯ್ದಳು. "ಸಾರಿ ಮೇಡಮ್, ಬಹುಶಃ ತೊಂದರೆ ಕೊಟ್ಟೇಂತ ಕಾಣಿಸುತ್ತೆ. ಅಪ್ಪ ಲೈಬ್ರರಿ...." ಕೈಯಾಡಿಸಿದ. ಸುಮ್ಮನಾದ.

ನೀಲಿಮಾ ಮಾತುಗಳಲ್ಲಿಯೇ ಗುರ್ತಿಸಿದ. ಹೆಚ್ಚು ಬುದ್ಧಿವಂತೆ, ಡಿಗ್ರಿಗಳ ಜೊತೆಗೆ ಸಾಕಷ್ಟು ಓದಿಕೊಂಡಿದ್ದಾಳೆ. ಮಹತ್ವದ ಲೇಖಕರ ಬಗ್ಗೆಯೆಲ್ಲ ಮಾತಾಡಬಲ್ಲಳು. ಆದರೆ ಎಡವಟ್ಟಾದ್ದುದು....ಎಲ್ಲಿ ?

ಲಘು ಉಪಹಾರದ ಜೊತೆ ಎರಡು ಸಲ ಟೀ ಆದಮೇಲೆಯೇ ಪ್ರಸನ್ನ ಬಂದಿದ್ದು. "ಹಲೋ...." ಅವನ ಪಕ್ಕದಲ್ಲಿಯೇ ಕೂತ. ನೀಲಿಮಾ ಮೇಲೆದ್ದಳು "ನಿಮ್ಮ ಫ್ರೆಂಡ್ ತುಂಬ ಬುದ್ಧಿವಂತರು. ನನ್ನ ಮಾತಾಡೋಕೆ ಬಿಟ್ಟು ತಾವು ಸುಮ್ಮನೇ ಕೂತರು. ನನ್ನ ಮಾತುಗಳಿಂದ ಅವ್ರಿಗೆ ಬೋರ್ ಆಯಿತೇನೋ" ಎಂದಾಗ ಪಟೇಲ್ ಮುಕ್ತ ನಗೆ ಬೀರಿದ.

"ನೋ ಮೇಡಮ್, ನಿಮ್ಮ ಕ್ಲಾಸ್‌ನಲ್ಲಿ ಬಂದು ಕೂಡೋ ಆಸೆ ಆಗ್ತಾ ಇದೆ. ನೀವು ರಿಯಲೀ ಜೀನಿಯಸ್. ನಿಮ್ಮ ಸ್ಟೂಡೆಂಟ್ಸ್ ನಿಜವಾಗ್ಲೂ ಅದೃಷ್ಟವಂತರು" ಹೊಗಳಿದ.

ಮತ್ತೆ ಹತ್ತು ನಿಮಿಷ ಮಾತಾಡುತ್ತ ಕೂತು ಮೇಲೆದ್ದ. "ಸಂಡೇ ಬೇರೆ ಪ್ರೋಗ್ರಾಂ ಇಲ್ಲದಿದ್ರೆ ಬನ್ನಿ...." ಆಹ್ವಾನ ಕೊಟ್ಟು ಬಾಗಿಲ ಬಳಿಗೆ ಬರುವ ವೇಳೆಗೆ ಸೋಮೇಶ್ವರ್ ಎಲ್ಲೋ ಹೊರಟಿದ್ದರು.

ಅವನ ಜೊತೆ ಮಾತಾಡಲು ಬಯಸಿದ್ದರೆಂದು ಕಾಣುತ್ತದೆ. ಅವನ ಮಾರುತಿ ಹತ್ತುವ ಆಕಾಂಕ್ಷೆ ವ್ಯಕ್ತಪಡಿಸಿದರು.

"ಬೈ ಆಲ್ ಮೀನ್ಸ್....ಬನ್ನಿ" ಆಹ್ವಾನಿಸಿದ.

ದಾರಿಯಲ್ಲಿ ಸೋಮೇಶ್ವರ್ "ನಿಮ್ಹತ್ರ ಸ್ವಲ್ಪ ಮಾತಾಡೋದಿತ್ತು. ಮಾತಾಡೋಕೆ ಅನ್ಕೂಲವಾದ ಸ್ಥಳದಲ್ಲಿ ನಿಲ್ಸಿ" ಎಂದರು.

"ನನ್ನ ಮನೆಗೆ ಹೋಗ್ಬಿಡೋಣ. ಅಲ್ಲೇ ಮಾತಾಡ್ಬಹುದ್ದು" ಕಾರಿನ ವೇಗ ಹೆಚ್ಚಿಸಿದ.

ಏನಾದರೂ ಸಹಾಯ ಮಾಡಿ ತಮ್ಮ ಮಗಳು ಮಾಡಿದ ಪಾಪಕ್ಕೆ

ಪ್ರಾಯಶ್ಚಿತ ಮಾಡಿಕೊಳ್ಳಬೇಕೆಂಬ ಹಂಬಲ ಅವರಿಗೆ. ಮತ್ತೇನು ಮಾಡಲಿಕ್ಕಾಗದಿದ್ದರೂ ಒಂದಿಷ್ಟು ಹಣದ ಸಹಾಯ ಅಷ್ಟೆ. ಅವರಂಥ ವಿದ್ಯಾವಂತರು ಕೂಡ ಸೆಂಟಿಮೆಂಟ್ಸ್‌ನಿಂದ ನರಳುತ್ತಿದ್ದರು.

ಪಟೇಲ್ ಕಾರು ನಿಲ್ಲಿಸಿ ಅವರನ್ನ ಒಳಗೆ ಕರೆದೊಯ್ದ.

"ನಿಧಾನವಾಗಿ ಮಾತಾಡಿ, ನಾನೇ ಮನೆವರ್ಗೂ ಡ್ರಾಪ್ ಮಾಡ್ತೀನಿ" ಕೂತು ಹಿಂದಕ್ಕೆ ಒರಗಿದ. ಬುದ್ಧಿವಂತೆಯೆಂದು ನೀಲಿಮಾನ ಒಪ್ಪಿಕೊಂಡರೂ ತಲೆ ನೋವು ತರಿಸಿತ್ತು ಆ ಮಾತುಗಳು.

ಐದು ನಿಮಿಷ ಮೌನವಹಿಸಿದ ಸೋಮೇಶ್ವರ್ "ನಿಮ್ಗೆ ನಿವೇದಿತಾ ಗೊತ್ತಿರಬಹುದಲ್ಲ" ಪಟೇಲ್ ಮೇಲಕ್ಕೆದ್ದ "ಆ ಮಾತುಗಳಿಗೆ ಈಗ ಯಾವ ಅರ್ಥವು ಇಲ್ಲ, ಸರ್. ಪ್ರಸನ್ನ ನೀಲಿಮಾನ ಇಷ್ಟ ಪಟ್ಟು ಮದ್ವೆ ಆಗಿದ್ದಾನೆ. ಡೈವೋರ್ಸ್ ಸಿಕ್ಕಿದೆ. ಇನ್ನು ಅವ್ರ ವೈವಾಹಿಕ ಜೀವನಕ್ಕೆ ಯಾವ್ದೇ ತೊಂದರೆ ಇಲ್ಲ" ಕಿಟಕಿಯ ಬಳಿ ಹೋಗಿ ನಿಂತು ಅವರತ್ತ ಬೆನ್ನು ಮಾಡಿ ಹೇಳಿದ.

"ಐ ನೋ....ಐ ನೋ....ನಿವೇದಿತಾ ಬಗ್ಗೆ ಸ್ವಲ್ಪ ತಿಳ್ಕೋಬೇಕು...." ಎಂದರು. ಪಟೇಲ್ ಹಿಂದಕ್ಕೆ ಬಂದು ಕೂತ "ಯಾವ ಪ್ರಯೋಜನಕ್ಕೆ ? ದಯವಿಟ್ಟು ಆ ಪ್ರಸ್ತಾಪ ಬೇಡ. ಮದ್ವೆಗೆ ಮುನ್ನ, ಡೈವೋರ್ಸ್ ತೆಗೆದು ಕೊಳ್ಳೋಕೆ ಮುನ್ನ ನಾನು ಬಂದಿದ್ದರೇ, ಮೂವರ ಬದ್ಕಿನಲ್ಲಿ ಇಂಥ ತಿರುವೆ ಸಾಧ್ಯವಾಗ್ತ ಇರ್ಲಿಲ್ಲ. ಒಬ್ಬ ಗಂಡು ಪ್ರೇಮಿಸಬಹುದಾದ, ಆರಾಧಿಸಬಹದಾದ, ನಂಬಬಹುದಾದ, ಗೌರವ, ಅಭಿಮಾನ ತೋರ ಬಹುದಾದಂಥ ಹೆಣ್ಣು ನಿವೇದಿತಾ. ಅವನೊಬ್ಬ ಮೂರ್ಖ ಕಳೆದುಕೊಂಡ, ಎಲ್ಲಾ ಹೆಣ್ಣನ್ನ ಪ್ರೀತಿಸಬಹುದು, ಆರಾಧಿಸೋಕಾಗ್ಲಿ, ನಂಬೋಕಾಗ್ಲಿ, ಗೌರವ ತೋರೋಕಾಗ್ಲೀ ಲಾಯಕ್ಕಾಗಿರೋಲ್ಲ." ಉದ್ವಿಗ್ನನಾದ.

ಸೋಮೇಶ್ವರ್ ಅವನ ಕೈ ತಟ್ಟಿದರು. ನಿವೇದಿತಾ ಬಗ್ಗೆ ಪಟೇಲ್‌ಗೆ ಇರುವ ಗೌರವ, ಅಭಿಮಾನವನ್ನ ಅರ್ಥ ಮಾಡಿಕೊಂಡರು.

"ಎಕ್ಸ್‌ಕ್ಯೂಜ್ ಮೀ....ಏನು ತಗೋತೀರಾ ? ನಾನು ಪ್ರಸನ್ನ, ನಿವೇದಿತಾ ಪ್ರೇಮಕ್ಕೆ ಮಾತ್ರವಲ್ಲ ವಿವಾಹಕ್ಕೂ ಕೂಡ ಪುರೋಹಿತ್ಯ ವಹಿಸಿದವ್ನು, ಎಂಥ ಬಂಧನ ಕಡಿದು ಹೋಯಿತಲ್ಲ ಅನ್ನೋ ನೋವು, ಅದ್ರೂ ನಾನು ಪ್ರಶ್ನಿಸೋಕಾಗೋಲ್ಲ. ನೀವೇನೋ ಮಾತಾಡ್ಬೇಕೂಂದ್ರಲ್ಲ.

ಪ್ರಸನ್ನ ಮರೆತ ಕನಸ್ಸಿನ ಯಾವ ಪ್ರಸ್ತಾಪವು ಬೇಡ. ಅದ್ರಿಂದ ಬರೀ ಮುಜುಗರ, ನೋವು ಅಷ್ಟೆ" ಅವನ ನಿರ್ಣಯ ಸರಿಯಾದ್ದುದ್ದು ಎನಿಸಿತು ಅವರಿಗೂ ಕೂಡ.

"ಯು ಆರ್ ಕರೆಕ್ಟ್, ಆದ್ರೂ....ನಾನು ತುಂಬ ಸಫರ್ ಆಗ್ತಾ ಇದ್ದೀನಿ. ಯಾರೊಂದಿಗೂ ಹೇಳಿಕೊಳ್ಳೋಕೆ ಆಗೋಲ್ಲ. ಅವಳೆಷ್ಟಾದರೂ ಹೆತ್ತವಳು, ನ್ಯಾಯ, ಅನ್ಯಾಯದ ಪರಿವೆಗಿಂತ ಮಗಳೇ ಮುಖ್ಯ. ಅವ್ಳ ಮದ್ವೆ, ಅವ್ಳ ಸುಖವೇ ಹೆಚ್ಚು, ಮದ್ವೆಯತ್ತ ಗಮನವನ್ನೆ ಕೊಡದ ನೀಲಿಮಾ ಪ್ರಸನ್ನ ಅಂಥ ಗಂಡನ್ನು ಮಗ್ಳು ಮದ್ವೆಯಾದದ್ದು ಕೂಡ ಸಂತೋಷವೇ. ಇನ್ನ ನೀಲಿಮಾ ಅಣ್ಣ, ವಿದೇಶದಲ್ಲಿ ಇರೋನು. ಸದಾ ವೆಡ್ಡಿಂಗ್, ಡೈವೋರ್ಸ್ ಜೊತೆಗೂಡಿಯೇ ಇರುವವರ ನಡುವೆ ಇರೋನು. ಅವ್ನಿಗೆ ಅತಿಶಯವಲ್ಲ, ತಲೆ ಕೆಡ್ಸಿಕೊಳ್ಳಲಾರ ಕೂಡ ಆದರೆ... ನಿವೇದಿತಾ...." ತಲೆ ತಗ್ಗಿಸಿದರು.

ಅವರ ಮನದ ಕಷ್ಟ ಪಟೇಲ್‌ಗೆ ಅರ್ಥವಾಯಿತು. ಒಳ್ಳೆಯ ಹೃದಯವಿರುವ ವ್ಯಕ್ತಿ ತನ್ನ, ಪರ ಎನ್ನಲಾರ. ನ್ಯಾಯ ವಿವೇಚನೆಯಲ್ಲಿ ಅವರಿಗೆ ಆತ್ಮಸಾಕ್ಷಿ ಇದೆ.

"ಉತ್ತಮ ಹೆಣ್ಣು, ಮನೆ ಬಿಟ್ಟು ಬಂದಾಗಿನ ಮುಗ್ಧತೆ ಇನ್ನು ಅವ್ಳ ಮುಖದಲ್ಲಿ ಕರಗಿಲ್ಲವೇನೋ ಅನ್ನಿಸುತ್ತೆ, ಇವ್ನ ಆ್ಯಂಬಿಷನ್ ಪೂರ್ತಿಯಾಗಲು ಅವ್ಳು ಕೆಲ್ಸಕ್ಕೆ ಸೇರಿ ದುಡಿತದ ಜೊತೆ ಅರೆ ಹೊಟ್ಟೆ ತಿಂದು ನಡುವೆ ಎರಡು ಹೆತ್ತರೂ ಕುಗ್ಗದೇ ಮನೆ ಟ್ಯೂಷನ್, ಹೊರ್‍ಗಿನ ಪಾಠ ಎಲ್ಲಕ್ಕೂ ತನ್ನನ್ನ ಒಡ್ಡಿಕೊಂಡಳು. ಅವ್ನ ಸಮಸ್ತವು ಅವ್ಳೇ ಆಗಿದ್ದಳು. ಕನಿಷ್ಟ ಕೃತಜ್ಞತೆ ಇದ್ದರೂ ಇಂಥ ಕೆಟ್ಟ ನಿರ್ಧಾರಕ್ಕೆ ಪ್ರಸನ್ನ ಬರ್‍ತಾ ಇರ್ಲಿಲ್ಲ" ಆವೇಗವಿಲ್ಲದ ಸಾಧಾರಣ ಸ್ವರದಲ್ಲಿ ಉಸುರಿದ. ಮತ್ತೆ ಇಂಥ ಮಾತುಗಳನ್ನು ಆಡಿದ್ದೇಕೆ ? ಅವನನ್ನ ಅವನೇ ಪ್ರಶ್ನಿಸಿಕೊಂಡ ತೀರಾ ಮೂರ್ಖತನವೆನಿಸಿತು.

ಕಡೆಯಲ್ಲಿ ಒಂದು ಮಾತು ಹೇಳಲು ಸಮರ್ಥರಾದರು. "ಒಂದಿಷ್ಟು ಹಣದ ಸಹಾಯ ಮಾಡೋಣಾಂತ, ಮುಂದೆ ಮಗುವಿನ ಭವಿಷ್ಯಕ್ಕೆ ಆಗುತ್ತೆ ಅಂತ" ಪಟೇಲ್‌ನ ಮುಖದ ಬಣ್ಣವೇ ಬದಲಾಯಿತು. ತಟ್ಟನೇ ಚೇತರಿಸಿ ಕೊಂಡಂತೆ ನಕ್ಕು ಬಿಟ್ಟ.

"ವರದಕ್ಷಿಣೆ, ವರೋಪಚಾರ ಏನು ಇಲ್ದೇ ಅಳಿಯನನ್ನ ಗಿಟ್ಟಿಸಿ ಕೊಂಡಿದಕ್ಕಾ ? ದಯವಿಟ್ಟು ಅಂಥ ಪ್ರಯತ್ನ ಮಾಡಿ ನಿವೇದಿತಾಗೆ ಅವಮಾನ ಮಾಡ್ಬೇಡಿ, ಅವರನ್ನ ಬಾಳೋಕೆ ಬಿಡಿ" ಎಂದ. ಒಂದು ರೀತಿ ಅಸಹ್ಯವು ಕೂಡ ಸೋಮೇಶ್ವರ್ ಬಗೆಗೆ.

ಮೇಲೆದ್ದ ಸೋಮೇಶ್ವರ್ "ದಟ್ಸ ಆಲ್ ರೈಟ್, ನಾನೇನು ಮಾಡೋಕೆ ಸಾಧ್ಯ ? ಹಿರಿಯರ ಮಾತು ಕೇಳೋ ವಯಸ್ಸಾಗಿರಲಿಲ್ಲ, ನೀಲಿಮಾ ಮದ್ವೆಯ ನಿರ್ಧಾರ ಮಾಡಿದಾಗ. ಒರ್ತಿನೀ ಮಿಸ್ಟರ್ ಪಟೇಲ್" ಬಂದಿದ್ದು ತಪ್ಪಾಯಿತೇನೋ ಅನ್ನಿಸಿದ್ದುಂಟು ಕೂಡ.

ಪಟೇಲ್ ಅವರ ಕೈ ಹಿಡಿದುಕೊಂಡ "ಸಾರಿ ಸಾರ್, ನಾನು ಮಾತಾಡಿದ್ದು ಜಾಸ್ತಿ ಆಯಿತೇನೋ ! ಪ್ರೇಮ ಪ್ರೀತಿಯ ಹಾರಾಟ ಇಷ್ಟು ಬೇಗ ಮುಗಿಯುವಂಥದೇನೋ ಎನ್ನುವಂಥ ನಿರಾಶೆ ನಂಗೆ. ಇನ್ಮೇಲೆ ಯಾವ್ದೇ ಪ್ರೇಮಿಗಳಿಗೆ ನನ್ನ ಬೆಂಬಲವಿಲ್ಲ. ಹೋಗ್ಬನ್ನಿ...." ಎಂದವನು ಮತ್ತೆ ಕಾರಿನ ಕೀ ತಗೊಂಡು ಬಂದ.

"ನಾನು....ಹೋಗ್ತೀನಿ...." ಸೋಮೇಶ್ವರ ಬೇಡವೆಂದರು.

"ವಿಷ್ಯ ನಮ್ಮಿಬ್ಬರ ತೀರಾ ವೈಯಕ್ತಿಕವೇನು ಅಲ್ಲವಲ್ಲ ಹತ್ತಿ...." ಸ್ಟೀರಿಂಗ್ ವೀಲ್ನ ಮುಂದೆ ಕೂತ.

ಬೇರೇನೋ ಸೋಮೇಶ್ವರ್ ಹೇಳಿದರು. ಅವನು ಕೇಳಿದ. ಮಗಳಿಗೆ ಒಬ್ಬ ಐ.ಎ.ಎಸ್. ಅಥವಾ ಐ.ಪಿ.ಎಸ್. ಗಂಡು ಹುಡುಕುವ ಸಾಮರ್ಥ್ಯ ತಮಗಿತ್ತೆಂದು ಹೇಳಿಕೊಂಡರು. ಅವರ ದೃಷ್ಟಿಯಲ್ಲಿ ಪ್ರಸನ್ನ ಅವರ ಮಗಳಿಗೆ ಲಾಯಕ್ಕಾದ ಗಂಡಲ್ಲ.

"ಬೈ ದಿ ಬೈ....ಈಗ ನೀಲಿಮಾ ವಯಸ್ಸು ಮುವತ್ತೈದು ದಾಟಿರ ಬಹುದು. ಪ್ರಸನ್ನ ವಯಸ್ಸು ಮುವತ್ತರ ಒಳಗೆ. ಕನಿಷ್ಟ ಐದು ವರ್ಷಗಳಿಗಿಂತ ತುಸು ಹೆಚ್ಚಿನ ಡಿಫರೆನ್ಸ್...." ಅವನು ವ್ಯಂಗವಾಡದಿದ್ದರೂ ತುಸು ಚುಚ್ಚಿದಂತಾಯಿತು ಅವರಿಗೆ.

ಮನೆಯ ಮುಂದೆ ಇಳಿಸಿ ಪಟೇಲ್ ಕೈ ಬೀಸಿದ.

ನೀಲಿಮಾ ಇದನ್ನ ಗಮನಿಸಿರಬೇಕು. ನಿರ್ದಿಷ್ಟ ಪ್ರಶ್ನೆ ಅವಳಲ್ಲಿ

ಮೂಡದಿದ್ದರೂ ಸಂಶಯ. ತಂದೆ ಎಲ್ಲಿಗೆ ಹೋಗಿರಬಹುದು ? ಪಟೇಲ್‌ನಲ್ಲಿ ಮಾತಾಡುವಂಥದ್ದು ಏನು ?

* * *

ಶಾಲೆ ಕೆಲಸದ ಜೊತೆ ಗೋದಾವರಿಯ ಕೆಲವು ಜವಾಬ್ದಾರಿಗಳನ್ನ ಅವಳೇ ನಿರ್ವಹಿಸಿಕೊಂಡಿದ್ದರಿಂದ, ನಿವೇದಿತಾ ಸದಾ ಬಿಜಿಯಾಗಿಯೇ ಇರುತ್ತಿದ್ದಳು. ರಾತ್ರಿ ಏನಾದರೂ ನೋಟ್ ಮಾಡುವ ಕೆಲಸವಿರುತ್ತಿತ್ತು. ಅದರ ಜೊತೆ ಅಲೋಕ್‌ನ ಪಾಠ, ಊಟ, ಮಾತಿನೊಂದಿಗೆ ರಾತ್ರಿಯ ಹನ್ನೊಂದು ಮುಟ್ಟಿ ಹೋದರೂ. ಆಮೇಲಿನ ಕ್ಷಣಗಳು ತೀರಾ ಭಯಂಕರವೆನಿಸುತಿತ್ತು. ನೆನಪುಗಳ ಬಾಧೆಯ ಜೊತೆ ಪ್ರಸನ್ನ ಆಡಿದ ಮಾತುಗಳನ್ನು ನೆನಸಿಕೊಂಡರೆ ಅವಳಿಗೆ 'ಅಳು ಬರುತಿತ್ತು. 'ನಿನ್ನ ಸನಿಹ, ಸಾನಿಧ್ಯ ನನ್ನಲ್ಲಿ ಉಸಿರುಗಟ್ಟಿಸು ತಿತ್ತು, ಅವನ ಮಾತನ್ನ ಮರೆಯಲಾರಳು. ಎಂಥ ಆರೋಪ ? ಯಾವ ಹೆಣ್ಣು ಕೂಡ ಸಹಿಸಲಾರದಂಥದ್ದು.

ಅಲೋಕ್ ಕೈ ಅವಳ ಕೆನ್ನೆಯ ಮೇಲಾಡಿತು. ಎದ್ದು ಕೂತ "ಮಮ್ಮಿ, ನೀನು ಅಳ್ತಾ ಇದ್ದೀಯಾ ?" ಅವನು ಎಚ್ಚರವಾಗಿದ್ದನ್ನ ಗಮನಿಸದಿದ್ದಕ್ಕೆ ತನ್ನನ್ನ ನಿಂದಿಸಿಕೊಂಡಳು "ಇಲ್ಲ, ಯಾತಕ್ಕೆ ಅಳಲೀ ? ತುಂಬ ತಲೆ ನೋವಿತ್ತು" ಮೇಲೆದ್ದು ಅಮೃತಾಂಜನ ತಂದು ತುಸು ತಲೆಗೆ ಸವರಿಕೊಂಡು ಅವನ ಮೂಗಿನ ಮುಂದಿಡಿದಳು "ಈಗ ನಿನ್ನ ಕಣ್ಣಲ್ಲಿ ಕೂಡ ನೀರು ಬರುತ್ತೆ"

ಅಲೋಕ್ ತಾಯಿಯತ್ತ ತದೇಕಚಿತ್ತನಾಗಿ ನೋಡಿದ. "ಆಗ ಅಮೃತಾಂಜನದ ವಾಸನೆನೇ ಬರ್‍ತಾ ಇರ್ಲಿಲ್ಲ...." ಅವನ ಜಾಣ್ಮೆಗೆ ಸೋತಳು "ಈಗ ಸುಮ್ನೇ ಮಲಕ್ಕೋ" ತುಸು ಗದರಿಸಿಯೇ ಮಲಗಿಸಿದ್ದು.

ಅವನು ಹತ್ತು ನಿಮಿಷದ ಮೇಲೆ ಕೇಳಿದ "ಡೈವೋರ್ಸ್ ಅಂದರೆ ಮಮ್ಮಿ, ಡ್ಯಾಡಿ ಬೇರೆ ಬೇರೆಯಾಗೋದೂಂತಾನಾ ? ಯಾಕೆ ಬೇರೆ ಯಾಗೋದು ? ಪಪ್ಪನ ಜೊತೆ ಇರೋ ಆಂಟೀ ಯಾರು ?"

ಪುಟ್ಟ ಹೃದಯಕ್ಕೆ ಘಾಸಿಯಾಗುವಂತಹ ಉತ್ತರಗಳನ್ನೇ ಹೇಳಬೇಕು.

"ಆಂಟೀನ, ಪಪ್ಪ ಮದ್ವೆ ಮಾಡಿಕೊಂಡಿದ್ದಾರಂತಲ್ಲ ಐ ಹೇಟ್ ದೆಮ್. ಅವ್ರು ನನ್ನ ಪಪ್ಪನೇ ಅಲ್ಲ" ಮುಖ ಮುಚ್ಚಿಕೊಂಡು ಬೇರೆಡೆ ತಿರುಗಿಕೊಂಡು ಅಳತೊಡಗಿದ.

ನಿವೇದಿತಾ ಸಂತೈಯಿಸಲಾರದೆ ಹೋದಳು. ಪ್ರೇಮ, ಪ್ರೀತಿ, ಸಂಬಂಧಗಳು, ಬಂಧನಗಳು ತಮ್ಮ ಅನುಕೂಲಕ್ಕೆ ಮಾಡಿಕೊಂಡ ಒಂದು ರೀತಿಯ ವ್ಯವಹಾರಗಳು.

ಕಣ್ಣಂಚಿಗೆ ಬಂದ ಕಂಬನಿಯನ್ನು ತಡೆದಿಟ್ಟಳು.

"ಅಲೋಕ್...." ಅವನ ತೋಳಿನ ಮೇಲೆ ಕೈಯಿಟ್ಟಳು "ಐ ಹೇಟ್ ಪಪ್ಪ, ಐ ಹೇಟ್ ದೆಮ್...." ಅದೇ ಬಡಬಡಿಕೆ. ಬಹಳ ಹೊತ್ತಿನ ಮೇಲೆ ಬಿಕ್ಕಳಿಕೆ ನಿಲ್ಲಿಸಿ ನಿದ್ದೆ ಹೋದ.

ವಸ್ತು ಸ್ಥಿತಿ ಹಾಗಿರುವಾಗ ನಿನ್ನ ತಂದೆ ಮಾಡಿದ್ದು ಸರಿ, ಅದು ಅನ್ಯಾಯವಲ್ಲ, ನೀನು ದ್ವೇಷಿಸಬೇಡ ಎಂದು ಅವನನ್ನ ಸಂತೈಯಿಸಲು ಸಾಧ್ಯವೇ ? ಅದು ಮಾಡುವ ಮೋಸ ? ಅದನ್ನ ನಂಬುವ ಮುಗ್ಧತನ ಅವನಲ್ಲಿ ಹಾರಿ ಹೋಗಿದೆ.

ಬೆಳಿಗ್ಗೆ ಶಾಲೆಗೆ ಕಳಿಸುವಾಗ ಮಂಕಾಗಿದ್ದ. ತುಟಿ ತೆರೆಯಲು ಹಿಂಜರಿದಳು. ಇಂದು ಅವಳೆದೆ ಭಾರವಾಯಿತು. ತನಗೆ ತಾನು ಮೋಸ ಮಾಡಿಕೊಳ್ಳಬಲ್ಲಳು, ಸಂತೈಯಿಸಿಕೊಳ್ಳಬಲ್ಲಳು, ಆದರೆ ಅಲೋಕ್....ಅವನ ತಿಳಿವಳಿಕೆ ಅಪಾರ.

ಮಧ್ಯಾಹ್ನದ ವೇಳೆಗೆ ಅವಳಿಗೆ ಸಾಕು ಸಾಕಾಯಿತು. ತನ್ನ ಕ್ಲಾಸ್ ಮುಗಿಸಿಕೊಂಡು ಹೆಡ್ ಮೇಡಮ್ ರೂಮಿಗೆ ಬಂದವಳೇ ಕುಸಿದಂತೆ ಕೂತವಳು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಗೋದಾವರಿ ಗಾಬರಿಯಾದರು ಈ ರೀತಿ ಅವರ ಮುಂದೆ ಅವಳೆಂದೂ ಅತ್ತಿರಲಿಲ್ಲ.

"ಸಮಾಧಾನ ಮಾಡ್ಕೋ. ಏನು ವಿಷ್ಯ ?" ಮೈದಡವಿದರು.

ವಿಷಯವನ್ನ ಸ್ಪಷ್ಟವಾಗಿಯೇ ವಿವರಿಸಿದಳು "ಮುಂದೆ ಅಲೋಕ್‌ನ ಮಾನಸಿಕ ಸ್ಥಿತಿಯ ಮೇಲೆ ಎಂಥ ಪರಿಣಾಮ ಬೀರುತ್ತೊ." ಅವಳ ಅಂಜಿಕೆ ಅವರಿಗೆ ಅರ್ಥವಾಯಿತು.

ಅವರು ಕೂಡ ಚಿಂತಿತರಾದರು.

"ನೋಡು, ನಿವೇದಿತಾ ಪ್ರಸನ್ನ ಬಗ್ಗೆ ಸುಳ್ಳು ಹೇಳಲು ಸಾಧ್ಯವಿಲ್ಲ. ಅವರು ಮನೆಗೆ ಬರದೆ ಇರೋದು, ಬೇರೆಡೆ ಇರೋದು, ನೀಲಿಮಾ ಜೊತೆ

ಯಲ್ಲಿ ಅವನ ಪಪ್ಪನನ್ನ ನೋಡಿರಬೇಕು. ವಿಷ್ಯ ಅತ್ಯಂತ ಸ್ಪಷ್ಟವಾಗಿದೆ. ಅವನು ದ್ವೇಷಿಸೋದರಲ್ಲಿ ಅರ್ಥವಿದೆ. ಆ ವಿಷ್ಯದಿಂದ ಹೊರಗಿಟ್ಟು ಧೃಡವಾಗಿ ಅವನನ್ನ ಬೆಳೆಸೋದಷ್ಟೇ ನಿನ್ನ ಕರ್ತವ್ಯ. ಈಗ ಹೋಗಿ ಅಲೋಕ್‌ನ ....ನೋಡು" ಕಳುಹಿಸಿಕೊಟ್ಟರು.

ಕೆಲವರಿಗಂತು ನಿವೇದಿತಾ, ಪ್ರಸನ್ನರ ಬದುಕು ಒಂದು ಪಾಠ. ಹರೆಯುದಲ್ಲಿ ಮಾಡಿದ ತಪ್ಪಿಗಾಗಿ ಗುದ್ದಾಡಿದರೆ, ಅದರಿಂದ ವಿಮುಕ್ತರಾಗ ಬಯಸುವವರು ಕೆಲವರು. ಆಗ ನೋವು ನಿರಪರಾಧಿಗಳಿಗೆ.

ಅಲೋಕ್‌ನ ಕಾನ್ವೆಂಟ್ ಬಳಿಯಲ್ಲಿ ನಿವೇದಿತಾ ಬಂದಾಗ ಲಂಚ್ ಬ್ರೇಕ್.ಕೆಲವರು ತಿಂಡಿ ತಿನ್ನುತ್ತಿದ್ದರೆ, ಕೆಲವು ಮಕ್ಕಳು ಆಟವಾಡುತ್ತಿದ್ದರು. ಆದರೆ ಅಲೋಕ್ ಒಂದು ಕಡೆ ಸಪ್ಪಗೆ ಕೂತಿದ್ದ.

ನಿವೇದಿತಾ ಗಾಬರಿಯಾದಳು. ಅವನಿಗೆಷ್ಟು ಮಾನಸಿಕ ಆಘಾತವಾಗಿದೆ. ವಿದ್ಯಾವಂತ ಪ್ರಸನ್ನ ಈ ಬಗ್ಗೆ ಯಾಕೆ ಯೋಚಿಸಲಿಲ್ಲ. ಅವನೊಬ್ಬ ಸ್ವಾರ್ಥಿ, ಲಂಪಟ—ಆಕ್ರೋಶಗೊಂಡಳು ಕ್ಷಣ.

"ಅಲೋಕ್...." ಅವನ ತೋಳಿನ ಮೇಲೆ ಕೈ ಇಟ್ಟಳು ತಾಯಿಯನ್ನ ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದ. ಅವಳ ಮನ ಅಳುತ್ತಿದ್ದರೂ ನಗಲು ಪ್ರಯತ್ನಿಸಿದಳು "ಅತ್ತರೆ ನಿನ್ನ ಫ್ರೆಂಡ್ಸ್ ನೋಡಿ ನಗ್ತಾರೆ. ಈಗ ನಾವು ಎಲ್ಲೋ ಹೋಗೋಣ" ಪ್ರಯಾಸದಿಂದ ಸಂತೈಯಿಸುವ ವೇಳೆಗೆ ಒಂದಿಷ್ಟು ಹುಡುಗರು ಬಂದು ಸುತ್ತಲು ನೆರೆದರು.

ಅವರಿಗೆಲ್ಲ ಚಾಕಲೇಟ್ ಕೊಟ್ಟು ಅಲೋಕ್‌ನ ಅವರುಗಳ ಜೊತೆ ಬಿಟ್ಟು ಅವನ ಕ್ಲಾಸ್ ಮೇಡಮ್‌ನ ಅರಸಿಕೊಂಡು ಬಂದಳು.

"ಈ ಸಲದ ಪ್ರೋಗ್ರೆಸ್ ರಿಪ್ರೋರ್ಟ್‌ನ ಜೊತೆ ಒಂದು ಲೆಟರ್ ಕೂಡ ಕಳಿಸೋಣಾಂತಿದ್ದೆ" ಎಂದಾಗ ಒಮ್ಮೆಲೆ ನಿವೇದಿತಾ ಎದೆಯ ಬಡಿತ ಏರಿತು. ಅವನು ಅಬ್‌ನಾರ್ಮಲ್ ಸ್ಥಿತಿ ತಲುಪಿಬಿಟ್ಟಿದ್ದಾನಾ ?

ಈಚೆಗೆ ಆಗಾಗ ಮಂಕಾಗಿರುವ ಜೊತೆಗೆ, ಯಾರನ್ನಾದರೂ ಹೊಡೆಯುವುದು, ಫಿಯೆಟ್ ಕಾರುಗಳನ್ನ ಕಂಡರೆ ಕಲ್ಲೆಸೆಯುವುದು ಮಾಡುತ್ತಿದ್ದಾನೆಂಬ ವಿವರಣೆ ನೀಡಿದರು.

"ಯಾವುದೋ ಆಘಾತ ಅವನ ಮಾನಸಿಕ ಏರುಪೇರಿಗೆ ಕಾರಣ ಅನ್ನಿಸುತ್ತೆ. ಸ್ವಲ್ಪ ಲಕ್ಷ ವಹಿಸಿ"

ನಿವೇದಿತಾ ಮಾತನಾಡಲಾರದೆ ಹೋದಳು.

ಅವಳ ಬಾಳಿಗೆ ಅಲೋಕ್ ಒಂದು ಆಶಾಕಿರಣ. ಅವನ ಭವಿಷ್ಯತ್‌ನ ಬಗೆಗೆ ತೀರ ಕಾಳಜಿ.

"ಥ್ಯಾಂಕ್ಯೂ...." ಮೇಲೆದ್ದಳು.

ಮಕ್ಕಳನ್ನ ಲಕ್ಷಿಸದ ತಾಯ್ತಂದೆಯರ ಬಗೆಗೆ ಅವಳಿಗೆ ನಿಜವಾಗಿ ಬೇಸರವಾಗಿತ್ತು. ಇನ್ನು ಎಷ್ಟು ಕಷ್ಟಕರವಾದ ಸ್ಥಿತಿಯಲ್ಲಿದ್ದಾರೋ, ಮಕ್ಕಳು.

ಹೊರಗೆ ಬಂದ ನಿವೇದಿತಾ ಪರ್ಮೀಷನ್ ಪಡೆದು ಅಲೋಕ್‌ನ ಮಾರ್ಕೆಟಿಂಗ್ ಸೆಂಟರ್‌ಗೆ ಕರೆದೊಯ್ದಳು. ಕಾಮಿಕ್ಸ್ ಪುಸ್ತಕದ ಜೊತೆ ಹೊಸ ಡ್ರೆಸ್ ಕೊಡಿಸಿದಳು, ತಿರುಗಾಡಿಸಿ ಹೋಟಲಲ್ಲಿ ತಿಂಡಿ ಕೊಡಿಸಿ ಮನೆಗೆ ಕರೆತಂದಳು.

'ಬಿಳಿ ಫಿಯೆಟ್ ಕಾರಿಗೆ ಕಲ್ಲೊಡೆಯುತ್ತಾನೆ' ಅಂದು ಬ್ಯಾಂಕ್‌ನ ಬಳಿ ಪಾರ್ಕ್ ಮಾಡಿದ್ದ ಫಿಯೆಟ್ ಕಾರನ್ನು ನೋಡಿದ್ದಳು. ಈಗ ಪ್ರಸನ್ನ, ನೀಲಿಮಾ ಅದರಲ್ಲೇ ಓಡಾಡುತ್ತಿದ್ದರು. ಆ ವಾಹನದ ಬಗ್ಗೆ ಅಲೋಕ್‌ನ ಆಕ್ರೋಶ, ಮಂಕುತನ, ತಟ್ಟನೆ ಕೋಪಗೊಳ್ಳುವುದು—ಅವಳೆದೆ ಢವ ಗುಟ್ಟಿತು.

ರಾತ್ರಿಯೆಲ್ಲ ಬರೀ ಕೆಟ್ಟ ಕನಸುಗಳು. ಅಲೋಕ್ ಹುಚ್ಚನಾದಂತೆ. 'ನೋ....ನೋ....ಅದ್ಕೆ ನಾನು ಅವಕಾಶ ಕೊಡೋಲ್ಲ' ಬೆವತು ಎದ್ದು ಕೂತಳು. ಮಗನೆನ್ನುವ ಸ್ವಾರ್ಥಕ್ಕಿಂತ ಮಕ್ಕಳನ್ನು ಉತ್ತಮ ಪ್ರಜೆಗಳಾಗಿ ಬೆಳೆಸುವುದು ಕೂಡ ಒಂದು ಸಾಮಾಜಿಕ ಹೊಣೆ.

ಒಂದು ನಿರ್ಧಾರಕ್ಕೆ ಬಂದಳು. ಹೆಚ್ಚಿನ ಸಮಯವನ್ನು ಮಗನಿಗಾಗಿ ವಿನಿಯೋಗಿಸತೊಡಗಿದಳು. ಮಹಾತ್ಮರ. ವೀರರ, ದೇಶಭಕ್ತರ, ಆದರ್ಶವಾದಿಗಳ ಕತೆಯನ್ನು ಅವನ ಚಿತ್ತದ ಮೇಲೆ ಛಿತ್ತಿ ವಿಚಾರ ಶೀಲನನ್ನಾಗಿ ಮಾಡತೊಡಗಿದಳು.

"ನಮಗಿಷ್ಟವಿಲ್ಲದವರ ಜೊತೆ ದ್ವೇಷ ಒಳ್ಳೆಯದಲ್ಲ. ಅವರಿಂದ

ಮೂರವಿದ್ದರೇ....ಸಾಕು" ಎಂದಾಗ ತೀರಾ ಗಂಭೀರವಾಗಿ ಕೂತಿದ್ದನ್ನ ಗಮನಿಸಿದ್ದಳು.

ಅವನಲ್ಲಿ ದಿನದಿಂದ ದಿನಕ್ಕೆ ಒಂದು ರೀತಿಯ ಬದಲಾವಣೆ ಕಂಡು ಬರತೊಡಗಿತು. ತನ್ನ ಪಾಠ, ಆಟಗಳ ಕಡೆ ಹೆಚ್ಚು ಗಮನ ಕೊಡ ತೊಡಗಿದ. ಫಿಯೆಟ್ ಕಾರನ್ನು ನೋಡಿದ ಕೂಡಲೇ ಎತ್ತಿದ ಕಲ್ಲನ್ನು ತಕ್ಷಣವೆ ಕೆಳಗೆ ಹಾಕಿ ಬಿಡುತ್ತಿದ್ದ.

ಮಗನ ಗೆಲುವು, ಉತ್ಸಾಹ ಅವಳಿಗೆ ಮರು ಹುಟ್ಟಾಯಿತು. ಅವನ ಸುಂದರ ಭವಿಷತ್‌ನ ಕನಸು ಕಾಣತೊಡಗಿದಳು. ಪೈಲಟ್‌ನ ಕನಸ್ಸಿನಲ್ಲಿದ್ದ ಅಲೋಕ್ ಆರ್ಮಿ ಸೇರುವ ಮಾತಾಡುತ್ತಿದ್ದ.

ಹೆಚ್ಚು ಹೆಚ್ಚು ಪ್ರಶ್ನೆಗಳನ್ನ ಕೇಳುವುದನ್ನು ನಿಲ್ಲಿಸಿದ್ದರಿಂದ ಅವಳಿಗೆ ಆರಾಮೆನಿಸಿತು.

* * * *

ಪಟೇಲ್ ಮನೆಯ ಮುಂದೆ ಕೆಂಪು ಮಾರುತಿಯನ್ನು ನೋಡಿದಾಗ ಮುಖದ ಬೆವರನೊರೆಸಿಕೊಂಡಳು ನಿವೇದಿತಾ. ಎಲ್ಲಿ ಇರುವುದಿಲ್ಲವೋ ಎಂದು ಆತುರಾತುರವಾಗಿ ಹೊರಟಿದ್ದಳು.

ಬಾಗಿಲಿಗೆ ಬಂದ ಆಮೀರ್ ಕೈ ವಸ್ತ್ರವನ್ನ ಹೆಗಲ ಮೇಲೆ ಹಾಕಿ ಕೊಂಡು ವಿನಯದ ಜೊತೆ ನಸುನಗು ಸೇರಿಸಿದ. "ಬನ್ನಿ....ಮೇಡಮ್, ನಮ್ಮ ಛೋಟಾ ಸಾಹೇಬ್ ಬರ್ಲಿಲ್ವಾ" ಅವಳ ಹಿಂದೆ ನೋಟ ಹರಿಸಿದ.

"ಈಗ ಅವ್ನಿಗೆ ಎಕ್ಸಾಮ್, ಇದ್ದಾರ....ಪಟೇಲ್ ?"

"ಬನ್ನಿ....ಬನ್ನಿ ಇದ್ದಾರೆ" ಒಳಗೆ ಕರೆದೊಯ್ದ.

ಕೂತು ಸುತ್ತಲು ನೋಟ ಹರಿಸಿದಳು. ಅವನು ಆರ್ಮಿಡ್ರೆಸ್‌ನಲ್ಲಿದ್ದ ದೊಡ್ಡ ಸೈಜಿನ ಫೋಟೋ ಹಾಲ್‌ನಲ್ಲಿತ್ತು. ತುಂಬ ಒರಟಾದ, ಪೌರುಷದ ಲಕ್ಷಣವಿದ್ದ ಮುಖ. ಒತ್ತು ಮೀಸೆ ಎದುರಿನವರ ಗುಂಡಿಗೆಗೆ ಲಗ್ಗೆ ಹಾಕುವಂತಿತ್ತು.

"ಹಲೋ, ನಿವೇದಿತಾ...." ಗುಂಡು ಹೊಡೆದಂಥ ಸ್ವರದ ಹಿಂದೆಯೇ ಧಾವಿಸಿದ "ಅಂತು ನಮ್ಮ ಮನೆ ಪುಣ್ಯ ಮಾಡಿದೆ..." ಹಾಸ್ಯ ಮಾಡುತ್ತಲೇ ಕೂತ. ಸ್ವಲ್ಪ ಕುಂಟುವಂತೆ ಕಂಡ.

"ಓಡಾಟದ ಜೊತೆ ಒಂದಿಷ್ಟು ಓಡಿದೆ. ಕಾಲು ಸ್ವಲ್ಪ ನೋವಿದೆ. ನಂದು ಕೆಟ್ಟ ಹುಮ್ಮಸ್ಸು, ಆದ್ರೆ....ಇದು ದೇವರ ಕೊಡುಗೆಯಲ್ಲ. ಅದ್ರ ಶಕ್ತಿಯೇ ಬೇರೆ" ಜೋಡಿಸಿದ್ದ ಮರದ ಕಾಲನ್ನ ನೀವಿಕೊಂಡ.

ವ್ಯಥೆಯಿಂದ ಅವನ ಕಾಲಿನತ್ತಲೆ ನೋಡಿದಳು.

"ಬಿಡಿ, ಅದು ಮಾಮೂಲಿ ವಿಷ್ಯ. ಎಲ್ಲಾ ಇದ್ದು ಕೂಡ ಇಲ್ಲದಂತೆ ಬದುಕೋಕ್ಕಿಂತ, ಕೆಲವು ಇಲ್ದೇ ಕೂಡ ಮಾಮೂಲಾಗಿ ಬದುಕೋದು.... ಗ್ರೇಟ್. ಹೇಗಿದ್ದಾನೆ, ನಮ್ಮ ಫೋಟೊ ಸರ್ಕಾರ್ ?" ಉತ್ಸಾಹ ತೋರಿದ.

ನಿವೇದಿತಾ ಚೇತರಿಸಿಕೊಂಡಳು "ಚೆನ್ನಾಗಿದ್ದಾನೆ. ಅವ್ನ ಬರ್ತ್‌ಡೇಗೆ ನಿಮ್ಮನ್ನು ಕರೆಯೋಣಾಂತ್ಬಂದೇ. ಹೇಗೂ ಸಂಡೇ ನಿಮ್ಗೂ ಲೀವ್, ಅಲ್ಲಿಗೆ ಊಟಕ್ಕೆ....ಬಂದ್ಬಿಡಿ" ಎಂದಳು.

ಅಷ್ಟರಲ್ಲಿ ಅಮೀರ್ ಬಿಸ್ಕತ್ ಜೊತೆ ಟೀ ತಂದಿತ್ತಾಗ ನಿರಾಕರಿಸಿದಳು.

"ಈಗೇನು ತಿನ್ನೋಕ್ಕಾಗೋಲ್ಲ ಊಟ ಮುಗ್ಸಿಕೊಂಡ್ಬಂದೆ. ಟೀ ಮಾತ್ರ ತಗೋತೀನಿ...." ಕಪ್ ಕೈಗೆತ್ತಿಕೊಂಡಳು.

ಅಮೀರ್ ನೆನಪಿಸಿಕೊಂಡ. ಸೋಮೇಶ್ವರ್ ಇವನು ಕೊಟ್ಟಿದ್ದು ತಿನ್ನುವುದಿರಲಿ ನೀರು ಕೂಡ ಕುಡಿದಿರಲಿಲ್ಲ, ಅಂಥ ಭೇದ ಭಾವ ಅವನಲ್ಲಿ ಸತ್ತು ಎಷ್ಟೋ ಕಾಲವಾಗಿದ್ದನ್ನ ಅವರು ನೆನಪಿಸಿದ್ದರು.

"ಮೇಡಮ್, ನೀವು ನನ್ನ ಕೈನ ಅಡ್ಗೆ ಊಟ ಮಾಡ್ತೀರಾ ?" ತಲೆ ಕೆರೆದುಕೊಳ್ಳುತ್ತ ಕೇಳಿದ. ಅವನ ಪ್ರಶ್ನೆಗೆ ಪಟೇಲ್ ನಕ್ಕರೂ ಅವಳು ವಿಸ್ಮಿತಳಾದಳು "ಯಾಕೆ ಮಾಡೋಲ್ಲ ? ನಿನ್ನ ರುಚಿ ರುಚಿಯಾದ ಊಟದಿಂದ್ಲೇ ಪಟೇಲ್ ಆರೋಗ್ಯವಾಗಿರೋದು. ಅಂದು ನೀನೆ ತಾನೇ ಅಡ್ಗೆ ಮಾಡಿದ್ದು ?" ಕೇಳಿದಳು.

ಅಮೀರ್ ಪೆಚ್ಚಾಗಿ ಒಳಗೆ ಹೋಗಿಬಿಟ್ಟ.

"ಸಂಜೆ ಪಾರ್ಟಿ ಅಲ್ಲ, ಮಧ್ಯಾಹ್ನದ ಊಟಕ್ಕೆ ಬಂದು ಆಶೀರ್ವದಿಸಿ. ನಾನು ಮಧ್ಯಮ ದರ್ಜೆಯ ಕುಟುಂಬದಲ್ಲಿ ಹುಟ್ಟಿ ಬೆಳೆದವಳು. ಸಂಪ್ರದಾಯ, ಪರಂಪರೆ ರಕ್ತಗತ. ಕೇಕ್ ಕಟ್ ಮಾಡಿ ಪಾರ್ಟಿ ಆಚರಿಸುವಂಥ ಸೋಫೆಸ್ಟಿಕೇಟೆಡ್ ಮನಸ್ಸು, ಅಂತಸ್ತು ಎರಡೂ ಅಲ್ಲ.

ದಯವಿಟ್ಟು ಮಧ್ಯಾಹ್ನದ ಊಟಕ್ಕೆ ನೀವು....ಅಮೀರ್....ಇಬ್ರೂ ಬರ್ಬೇಕು" ಹೇಳಿದಳು.

ತದೇಕಚಿತ್ತನಾಗಿ ಅವಳನ್ನೆ ನೋಡಿದ ಪಟೇಲ್. ಅಮೀರ್ ಮುಸಲ್ಮಾನನಾದರೂ ಭೇದ ತೋರದೆ ಅವನ ಕೈಯಲ್ಲಿ ಊಟ ಮಾಡುವಂಥ ದೊಡ್ಡತನವಿದ್ದರೂ ಕೇಕ್ ಕಟ್ ಮಾಡುವ ಪಾಶ್ಚಾತ್ಯ ಶೈಲಿಗೆ ಅವಳ ಮನ ಒಡಬಡದು.

"ಖಂಡಿತ ನಿವೇದಿತಾ....ಬ್ರೆಕ್‌ಫಾಸ್ಟ್ ತಗೊಳ್ಳದೆಯೇ ಹಾಜರಾಗ್ತೀನಿ. ಏಯ್....ಅಮೀರ್...." ಕೂಗಿದ. ಬಾಗಿಲ ಬಳಿಯಲ್ಲಿಯೇ ಇದ್ದವನು ಓಡಿ ಬಂದ "ಥ್ಯಾಂಕ್ಯೂ ಮೇಡಮ್, ಬಂದವರು ಸಾಬ್‌ನ ಕರೀತಾ ಇದ್ರು. ನನ್ನನ್ನ ಮನುಷ್ಯಂತ ಗುರ್ತಿಸಿದವ್ರು....ನೀವೊಬ್ರೆ" ಅವನ ಕಣ್ಣು ಮಂಜಾಯಿತು.

ಅವನ ಮಾತುಗಳಿಗೆ ಏನು ಹೇಳಲಾರದೆ ಮೇಲೆದ್ದಳು "ಖಂಡಿತ ಇಬ್ರೂ....ಬರ್ಬೇಕು. ಅಂಥ ದೊಡ್ಡ ಫಂಕ್ಷನ್ ಏನಲ್ಲ. ನಮ್ಗೇನು ರಕ್ತ ಸಂಬಂಧಿಗಳಾದ ಬಂಧುಗಳು ಇಲ್ಲ...." ಎರಡು ಕಡೆಯವರು ದೂರ ನಿಂತದನ್ನ ನೆನಸಿಕೊಂಡಳು.

ಪಟೇಲ್ ಮೇಲೆದ್ದ "ನಾನು ನಿಮ್ಮನ್ನ ಮನೆಗೆ ಡ್ರಾಪ್ ಮಾಡ್ತೀನಿ...." ನಿವೇದಿತಾ ತಡೆದಳು "ಇವತ್ತು ಹೊರಗೆಲ್ಲೂ ಹೋಗದೆ ರೆಸ್ಟ್ ತಗೊಳ್ಳಿ. ಮತ್ತೆ ಓಡಾಡಿ ನೋವು ಜಾಸ್ತಿ ಮಾಡಿಕೊಳ್ಳೋದ್ಬೇಡ."

ಹ್ಯಾಂಡ್‌ಬ್ಯಾಗ್ ಕೈಗೆತ್ತಿಕೊಂಡಳು.

ಅವಳು ಸೋಮೇಶ್ವರ್ ಮನೆಯ ಮುಂದೆಯೇ ಆಟೋ ಇಳಿದಿದ್ದು. ತುಂಬ ಯೋಚಿಸಿಯೆ ನಿರ್ಧಾರಕ್ಕೆ ಬಂದಿದ್ದು. ಇಬ್ಬರು ನಗು ನಗುತ್ತಲೇ ಬೇರೆಯಾದ್ದುದ್ದು. ಜನ್ಮ ಜನ್ಮಾಂತರ ಸಂಬಂಧ ಅಂದುಕೊಂಡಿದ್ದರು, ಈಗ ಜನ್ಮ ಜನ್ಮಾಂತರದ ಶತ್ರುತ್ವ ಸಾಧಿಸಲು ಅವಳಿಗೇನು ಬೇಕಿರಲಿಲ್ಲ.

ಮೊದಲು ಕಂಡಿದ್ದು ಸೋಮೇಶ್ವರ್. ಚಕಿತರಾದರು ನಗು ನಗುತ್ತಲೆ ಆಹ್ವಾನಿಸಿದರು. ವಿದ್ಯೆ ಕಲಿಸಿದ ಸೌಜನ್ಯ ಅವರಲ್ಲಿತ್ತು.

"ಸರ್‌ಪ್ರೈಜ್, ಬಾಮ್ಮ....ಬಾ...." ಕೂಡಿಸಿದರು.

ಅವರ ಹಿಂದೆಯೇ ಬಂದ ಸೋಮೇಶ್ವರ್ ಪತ್ನಿಗೆ ತಾನೇ ಪರಿಚಯಿಸಿ ಕೊಂಡಳು,

"ಗೋದಾವರಿ ಶಾಲೆಯಲ್ಲಿ ಮೇಡಮ್, ನನ್ನ ಹೆಸರು ನಿವೇದಿತಾ. ನನ್ನ ಮಗನ ಹುಟ್ಟಿದ ಹಬ್ಬಕ್ಕೆ ಕರೆಯೋಣಾಂತ್ಬಂದೆ"

ಆಕೆಯೇನು ಹರ್ಷಿತಳಾಗಲಿಲ್ಲ. ದೊಡ್ಡವರ ಪೈಕಿಯೇನೂ ಅಲ್ಲ, ಸಾಧಾರಣ ಮೇಡಮ್ ಎಂದುಕೊಂಡರೂ ನಿವೇದಿತಾ ರೂಪ, ಸರಳತನ ಆಕೆಗೆ ಮೆಚ್ಚಿಗೆಯಾಯಿತು.

ಅಷ್ಟರಲ್ಲಿ ನೀಲಿಮಾ, ಪ್ರಸನ್ನ ಕೋಣೆಯಿಂದ ಬಂದರು. ಪ್ರಸನ್ನ ಕಣ್ಣುಗಳಲ್ಲಿ ಬೇಸರಕ್ಕೆ ಬದಲು ಮಿಂಚು ಕೋರೈಸಿತು. 'ನಮಸ್ತೆ' ಎರಡು ಕೈ ಜೋಡಿಸಿದಳು.

"ನನ್ನ ಮಗ ಅಲೋಕ್‌ನ ಬರ್ತ್‌ಡೆ ಭಾನುವಾರ. ನೀವಿಬ್ರೂ ಮಧ್ಯಾಹ್ನದ ಊಟಕ್ಕೆ ಬಂದು ಅವ್ನಿಗೆ ಆಶೀರ್ವದಿಸಿದರೆ ಸಂತೋಷ. ಖಂಡಿತ ಬರ್ಬೇಕು" ಪರಿಚಿತರನ್ನೋ. ನೆಂಟರನ್ನೋ, ತುಂಬು ಸ್ನೇಹದಿಂದ ಆಹ್ವಾನಿಸಿ ದಂತಿತ್ತು.

ಅವಳು ಹೊರಟು ನಿಂತಾಗ ಸೋಮೇಶ್ವರ್ ಹೆಂಡತಿಯನ್ನು ಕರೆದು ಏನೋ ಹೇಳಿದರು. ತಾಂಬೂಲದ ಜೊತೆ ಒಂದು ಕಣ ಕೂಡ ತಂದಿತ್ತರು. ಮಾತಾಡದೆ ತೆಗೆದುಕೊಂಡು ಮತ್ತೊಮ್ಮೆ ಎಲ್ಲರಿಗೂ ಹೇಳಿ ಹೊರಟಳು.

ಸೋಮೇಶ್ವರ್ ಪತ್ನಿ ಬಾಯಿಗೆ ಕೆಲಸ ಕೊಟ್ಟರು. "ಇಷ್ಟು ಚಿಕ್ಕ ವಯಸ್ಸಿಗೆ ಮದ್ವೆಯಾಗಿ ಒಂದು ಮಗುವಿದೆಯೆಂದ್ರೆ....ಯಾರೂ ನಂಬೋ ಕ್ಕಾಗೋಲ್ಲ. ಮೈತುಂಬ ಒಡ್ವೆ ಇಟ್ಟು, ಭಾರಿ ಸೀರೆಯುಡ್ಸಿ, ತಲೆಯ ಮೇಲೆ ಕಿರೀಟವಿಟ್ಟುಬಿಟ್ಟರೆ ರವಿವರ್ಮನ ಲಕ್ಷ್ಮಿಯಂಥೊ, ಸರಸ್ವತಿಯ ಹಾಗೋ, ಪಾರ್ವತಿನೋ ಅನ್ನೋವಂತೆ ಇರ್‍ತಾಳೆ. ತುಂಬ ಲಕ್ಷಣವಾದ ಹುಡ್ಗೀ" ಅವಳು ಯಾರು ಎಂದು ತಿಳಿದುಕೊಳ್ಳದೆ ಹೊಗಳಿಬಿಟ್ಟರು.

ಮಾತಾಡದೆ ಸೋಮೇಶ್ವರ್ ತಮ್ಮ ಕೋಣೆಗೆ ಹೋದರು. ಪ್ರಸನ್ನ, ನೀಲಿಮಾ ಬಾಲ್ಕನಿಯಲ್ಲಿ ನಿಲ್ಲಿಸಿದ್ದ ಕಾರು ಹತ್ತಿದರು.

ತಿಳಿದ ಮೇಲೆಯೆ ಆಕೆ ಪಶ್ಚಾತ್ತಾಪ ಪಟ್ಟಿದ್ದು "ಪ್ರಸನ್ನನ ಹೆಂಡ್ತಿ

ಅಂತ ತಿಳಿಯಲೆ ಇಲ್ಲ. ಅವ್ಳು ಯಾಕೆ ಇಲ್ಲಿವರ್ಗ್ಗೂ ಬಂದು ಕರೆಯಬೇಕಿತ್ತು ?" ನಿವೇದಿತಾ ಮೇಲೆಯೆ ಕೋಪಗೊಂಡಿದ್ದು.

"ಛಿ...." ರೇಗಿಕೊಂಡರು ಸೋಮೇಶ್ವರ್ "ಅವಳು ಎಂದಾದ್ರೂ ಇಲ್ಲಿಗೆ ಬಂದಿದ್ದುಂಟಾ, ಅಥ್ವಾ ಪ್ರಸನ್ನನ ಹೊರಗೆಲ್ಲಾದ್ರೂ ಭೇಟಿ ಮಾಡಿದ್ದುಂಟಾ? ಅವ್ಳು ಯಾವ್ದೇ ನಿರೀಕ್ಷಣೆ ಇಟ್ಟುಕೊಳ್ಳುವವಳಲ್ಲ. ಹೆಣ್ಣಿನ ಮೇಲಾಗುವ ದೌರ್ಜನ್ಯದ ಬಗ್ಗೆ ಗಂಟೆಗಟ್ಟಲೆ ಭಾಷಣ ಮಾಡೋ ನಿನ್ನ ಮಗ್ಳು ಜಗತ್ತಿನಲ್ಲಿ ಗಂಡಸರೆ ಇಲ್ಲ ಎನ್ನುವಂತೆ ಅವ್ನ ಪದಾರ್ಥಕ್ಕೆ ಕೈ ಹಾಕಿದಳು. ಅವ್ಳು ಸಾಧಾರಣದ ಹೆಣ್ಣಾದ್ರೂ ನಿನ್ನ ಅಳಿಯನತ್ತ ತಿರುಗಿ ಕೂಡ ನೋಡೋಲ್ಲ. ಬದ್ಕು ಭಾಷಣದಲ್ಲಿಲ್ಲ, ನಡವಳಿಕೆಯಲ್ಲಿದೆ. ಒಳ್ಗೆ ಕೆಲ್ಸ....ನೋಡ್ಹೋಗು" ಪೇಪರ್ ಕೈಗೆತ್ತಿಕೊಂಡರು.

ಮಗಳ ನಡವಳಿಕೆ, ಓದಿನ ಬಗೆಗಿನ ಶ್ರದ್ಧೆ, ಜೀವನದ ಬಗೆಗಿನ ದಿಟ್ಟ ನಿಲುವನ್ನ ಬಹುವಾಗಿ ಮೆಚ್ಚಿಕೊಂಡವರು ಅವರು. ಆದರೆ ಒಂದು ತಪ್ಪು ಮಾಡಿ ಅದನ್ನೆಲ್ಲ ನೆಲಸಮ ಮಾಡಿಬಿಟ್ಟಿದ್ದಳು.

ಕಡೆಗೆ ಯಾವುದೇ ಜಾತಿ, ಧರ್ಮ, ವಿದ್ಯೆ ಇಲ್ಲದವನನ್ನ ಮದುವೆ ಯಾಗಿದ್ದರೂ ಅವರು ಇಷ್ಟು ವ್ಯಥೆ ಪಡುತ್ತಿರಲಿಲ್ಲ ! ತಾವೊಬ್ಬ ಆದರ್ಶದ ವ್ಯಕ್ತಿಯೆಂಬ ಅಮಲಿನಲ್ಲಿ ಬದುಕಿದವರು ಇಂದು ಅವರ ಕುಟುಂಬದ ತಪ್ಪನ್ನ ಅವರ ಮುಖದ ಮುಂದೆ ಹಿಡಿದರೆ....

ಫಿಯೆಟ್ ಹಾದು ಹೋದಾಗ ನಿವೇದಿತಾ ಆಟೋಗೆ ಕಾದು ನಿಂತಿ ದ್ದಳು. ಪ್ರಸನ್ನನ ಸ್ಟೀರಿಂಗ್ ವೀಲ್ ಹಿಡಿದ ಬೆರಳುಗಳು ಕಂಪಿಸಿದವು. 'ನಂಗೆ ಸಾಧ್ಯವಿದ್ದಿದ್ರೆ....ಜಗತ್ತಿನ ಸುಖವನ್ನೆಲ್ಲ ನಿನ್ಮುಂದೆ ಚೆಲ್ಲಿಬಿಡ್ತಾ ಇದ್ದೆ.' ಹೇಳಿದ್ದು ಅವನಿಗೆ ಜ್ಞಾಪಕವಿತ್ತು. 'ಅವೆಲ್ಲ ಏನು ಬೇಡ, ನಿಮ್ಮ ಪ್ರೀತಿ ನನ್ನದಾಗಿದ್ರೆ....ಸಾಕು,ಅವಳು ಬೇಡಿದ್ದು ಇಷ್ಟೆ. ಅದನ್ನು ಕೊಡದ ಕಂಜೂಸ್ ನಾನು. ಪ್ರಸನ್ನವಾಗಿದ್ದ ಅವನ ಮುಖ ಮೊದಲು ಬಿಗಿದುಕೊಂಡಿದ್ದು, ನಂತರ ಜಿಗುಪ್ಸೆಗೊಂಡಿತ್ತು, ನಂತರ ಮ್ಲಾನವದನವಾಯಿತು.

ಅಲೋಕ್‌ನ ಕೆಲವರು ಗೆಳೆಯರ ಜೊತೆ ಅವಳ ಶಾಲೆಯಲ್ಲಿ ಕೆಲಸ ಮಾಡುವ ಇತರೆ ಉಪಾಧ್ಯಾಯರ ಜೊತೆ ಗೋದಾವರಿ ಕೂಡ ಕೆಲವರಿಗೆ ಆಹ್ವಾನ ಕೊಟ್ಟಿದ್ದರು. ಅವರ ಮನೆಯಲ್ಲಿಯೇ ಊಟ, ಸಮಾರಂಭ ಎಲ್ಲಾ.

ಅಂದು ಗೋದಾವರಿ ಒಂದೆಳೆಯ ಚಿನ್ನದ ಸರವನ್ನ ಅಲೋಕ್‌ನ ಕುತ್ತಿಗೆಗೆ ಹಾಕಿ ಆಶೀರ್ವದಿಸಿದರು. ಪಟೇಲ್ ಬಂದ ಮೇಲೆಯೆ ವಾತಾವರಣಕ್ಕೆ ರಂಗು ಬಂದಿದ್ದು. ಉಪಾಧ್ಯಾಯ, ಉಪಾಧ್ಯಾಯಿನಿಯರನ್ನ ಜೋಕ್ ಮಾಡಿ ನಗೆಗಡಲಿನಲ್ಲಿ ತೇಲಿಸಿದ. ಹುಡುಗರು ಅವನ ಸುತ್ತಲು ಸೇರಿದರು.

ಬಾಳೆಯೆಲೆಯ ಮೇಲೆ ಔತಣದ ಊಟ ಬಡಿಸುವ ವೇಳೆಗೆ ಸೋಮೇಶ್ವರ್, ಹೆಂಡತಿ, ಮಗಳು, ಅಳಿಯನೊಂದಿಗೆ ಬಂದರು. ಎಲ್ಲರ ಕಣ್ಣುಗಳು ಅತ್ತಲೆ.

"ಬನ್ನಿ....ಬನ್ನಿ...." ಆತ್ಮೀಯತೆಯಿಂದಲೇ ಆಹ್ವಾನಿಸಿದಳು. ಪಟೇಲ್ ಕಣ್ಣುಗಳಲ್ಲಿ ಮಾತ್ರ ವ್ಯಥೆಯ ನೆರಳಾಡಿತು. 'ಪ್ರಸನ್ನ ನೀನು ಅತಿಥಿಯಾಗ್ಬಾರ್ದಿತ್ತು. ನೀನೆ ಆಹ್ವಾನಿಸುವ ಪ್ರಧಾನ ವ್ಯಕ್ತಿಯಾಗ್ಬೇಕಿತ್ತು. ಎಲ್ಲಾ ತಿರುಗು ....ಮುರುಗು' ಅಂದುಕೊಂಡ.

ನಿವೇದಿತಾ ಎಚ್ಚರಿಸಿದಳು "ನೀವು ಹೀಗೆ ಎಲೆಯ ಮುಂದೆ ಕೂತು ತಪಸ್ಸು ಮಾಡ್ತಾ ಇದ್ದರೆ....ನಾನು ತುಪ್ಪ ಬಡಸ್ತಾನೆ ಇರಬೇಕಾಗುತ್ತೆ". ಪಟೇಲ್ ಜೋರಾಗಿ ನಕ್ಕುಬಿಟ್ಟ.

ಗೋದಾವರಿ ಜೊತೆ ಚೈತ್ರನೂ ಓಡಾಡಿದಳು. ಎಲ್ಲೂ ಕಹಿಯ ವಾತಾವರಣವೇ ಇಲ್ಲ. ಸ್ವತಃ ನಿವೇದಿತಾ ಉತ್ಸಾಹದಿಂದ ಸೋಮೇಶ್ವರ್, ನೀಲಿಮಾ, ಪ್ರಸನ್ನರ ವಿಚಾರಿಸಿಕೊಂಡಳು. ಮಿತಿಮೀರದ ಗಾಂಭೀರ್ಯ ನಡವಳಿಕೆ ಅವಳದು.

ಊಟ, ತಾಂಬೂಲದ ನಂತರ ಅವರುಗಳು ಹೊರಟು ನಿಂತಾಗ ಅಲೋಕ್ ಅವರುಗಳಿಗೆ ಬಗ್ಗಿ ನಮಸ್ಕರಿಸಿದ. ನೀಲಿಮಾ ಕೂಡ ಅವನ ತಲೆ ತಡವಿದಳು. ಪ್ರಸನ್ನ ಉದ್ವೇಗ ಹತ್ತಿಕ್ಕಲಾರದೆ ಹೋದ.

"ನೀವೆಲ್ಲ ಬಂದಿದ್ದು ತುಂಬ ಸಂತೋಷ...." ಎರಡು ಕೈ ಜೋಡಿಸಿದಳು.

ತಟ್ಟನೆ ಕೋಣೆಯೊಳಗೆ ಹೋದ ಪ್ರಸನ್ನ, ಪಟೇಲ್‌ಗೆ ಹೇಳಿದ "ಪ್ಲೀಸ್, ಒಂದ್ಸಲ ಅಲೋಕ್‌ನ ಕರ್ಕೊಂಡ್ಬಾ" ನಿರಾಕರಿಸಬೇಕೆನ್ನುವ ಅವನ ಕಠಿಣ ಮನಸ್ಥಿತಿಯು ಆ ಕ್ಷಣದಲ್ಲಿ ಕರಗಿಹೋಯಿತು. ಸರಿಯೆಂದು ತಲೆ ದೂಗಿದ.

ಅಲೋಕ್ ಬಂದ ಕೂಡಲೇ ಅವನ ಪ್ರತಿಕ್ರಿಯೆಗೂ ಕಾಯದೆ ಅಪ್ಪಿಕೊಂಡುಬಿಟ್ಟ. ಅವನದೆ ಪ್ರತಿರೂಪ, ಅವನ ಮಗ. ಅವನ ರಕ್ತವೇ ಹರಿಯುತ್ತಿರುವುದು ಅಲೋಕ್‌ನ ಮೈಯಲ್ಲಿ. ಪ್ರಕೃತಿಯ ಬೆಸುಗೆಯನ್ನು ಕಿತ್ತೊಗೆಯಲು ಸಾಧ್ಯವೆ ?

ತಟ್ಟನೆ ಸಾವರಿಸಿಕೊಂಡು ಅವನ ಮುಖವನ್ನು ಮುದ್ದಾಡಿ ಕಣ್ಣೊರೆಸಿಕೊಂಡು ಹೊರಗೆ ಹೋಗಿಬಿಟ್ಟ. ಕಾರಲ್ಲಿ ಕೂತವನು ಮತ್ತೆ ಇತ್ತ ತಿರುಗಲೂ ಇಲ್ಲ.

ನಿವೇದಿತಾ ಮಾತ್ರ ಅತ್ಯಂತ ಶಾಂತವಾಗಿದ್ದಳು.

"ಅವರುಗಳು ಬರೋಲ್ಲ ಅಂದ್ಕೊಂಡಿದ್ದೆ" ಎಂದರು ಗೋದಾವರಿ. ಚೈತ್ರ ಕೋಪಗೊಂಡಳು. "ಮಾನ, ಮರ್ಯಾದೆ ಬಿಟ್ಟ ಜನ. ಹೆಸರಿನ ಜೊತೆಗೆ ಡಿಗ್ರಿಗಳು ಇವೆ. ಅವ್ರುಗಳೇ 'ಬುದ್ಧಿಜೀವಿ' ಎಂದು ಗುರುತಿಸಿಕೊಳ್ಳುವ ಸ್ಥಾನವಿದೆ. ಥಿ...."

ನಿವೇದಿತಾ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಬಹಳ ದಿನಗಳ ನಂತರ ಸಂತೋಷ ಅನುಭವಿಸಿದ ದಿನ ಇಂದು. ಈ ದಿನ ಅವಳಿಗೆ ತನ್ನ ಆತ್ಮವಿಶ್ವಾಸದ ಬಗೆಗೆ ನಂಬಿಕೆ ಬಂದಿತ್ತು.

ಪ್ರಸನ್ನ ಬೇರೆಯಾದಾಗ ಅವಳತ್ತ ಬೆಟ್ಟು ಮಾಡಿದವರೆ ಬಹಳ ಮಂದಿ. ಆ ಮಾತುಗಳನ್ನ ಲಕ್ಷಿಸಿದ್ದರೆ ಅವಳು ಅಲೋಕ್‌ನ ಅನಾಥನನ್ನಾಗಿ ಮಾಡಿ ನ್ಯೂರೋಸೆಂಟರ್ ಸೇರಬೇಕಿತ್ತು.

ಬಹಳ ಹೊತ್ತು ಉಳಿದವನು ಪಟೇಲ್ ಮತ್ತು ಅಮೀರ್. ಹುಡುಗರ ಜೊತೆ ಅವರುಗಳು ಕೂಡ ಹುಡುಗರಾಗಿಬಿಟ್ಟಿದ್ದರು.

ಎಲ್ಲರಿಗಿಂತ ಹೆಚ್ಚು ಹರ್ಷಚಿತ್ತರಾಗಿದ್ದವರು ಗೋದಾವರಿ. ಇಂಥ ಹಬ್ಬದ ವಾತಾವರಣ ಅವರ ವೈಯುಕ್ತಿಕ ಬದುಕಿನಲ್ಲಿ ಅಪರೂಪ. ದೂರಿದ ಬಂಧುಗಳನ್ನ ಒಂದು ನೆಲೆಗೆ ಬಂದಾಗಲೂ ಕೂಡ ದೂರವೇ ಇಟ್ಟರು. ಆತ್ಮೀಯರಾಗಿದ್ದವರು ಶಾಲೆಗೆ ಸಂಬಂಧಪಟ್ಟವರು ಮಾತ್ರ.

ಮರುದಿನ ತೀರಾ ಅನಿರೀಕ್ಷಿತವೆನ್ನುವಂತೆ ಬ್ಯಾಂಕ್ ಬಳಿಯಲ್ಲಿ ಪ್ರಸನ್ನ ಭೇಟಿಯಾದ. ಮಾತಾಡಿಸುವುದು ಅವಳಿಗೆ ಬೇಡವಾಗಿತ್ತು. ನೋಡದವಳಂತೆ ತಿರುಗಿಕೊಳ್ಳುವ ವೇಳೆಗೆ ಅವನ ಸ್ವರ ಹಿಡಿದು ನಿಲ್ಲಿಸಿತು.

"ಹಲೋ....ನಿವೇದಿತಾ...." ಬಲವಂತವಾಗಿ ಉಗುಳು ನುಂಗಿ ಅವನತ್ತ ತಿರುಗಿದಳು "ನನ್ನ ನೋಡಲಿಲ್ವಾ ?" ಅವರುಗಳ ಪ್ರೇಮದ ಆರಂಭದಲ್ಲಿ ಮುಖ ತಿರುಗಿಸಿ ನಿವೇದಿತಾ ಹೊರಟಾಗ ಅಡ್ಡಗಟ್ಟಿ ಹೀಗೆಯೇ ಕೇಳಿದ್ದ. ಅಂದು ಇಂದಿನ ಉತ್ತರ ಒಂದೇ ಆಗಿತ್ತು. "ನೋಡ್ದೆ, ತೀರಾ ಅರ್ಜೆಂಟ್ ಇತ್ತು."

"ಅರ್ಜೆಂಟ್ ಅನ್ನೋದು ಮಾಮೂಲಿ, ಒಂದು ಕಪ್ ಕಾಫೀ ಕುಡಿಯೋಕೆ ಕಂಪನಿ ಕೊಡ್ತೀಯಾ ?" ಸ್ವರದಲ್ಲಿ ತುಂಟತನ ಇಣುಕಿದಂತೆ ಕಂಡಿತು, ತಲೆ ಕೊಡವಿದಳು. ಒಮ್ಮೆ ಹಿಂದೆ ಪಾರ್ಕಿನ ಬಳಿಯಲ್ಲಿ ಅವಳನ್ನ ಅನುಸರಿಸಿ ಯಾಚಿಸಿದ್ದ "ನೋ ಥ್ಯಾಂಕ್ಯು....ನಂಗೆ ಸ್ಕೂಲಿಗೆ ಹೋಗ್ಬೇಕಿದೆ" ಎಂದಳು.

"ಅಂದು ಕೂಡ ಇಂಥದ್ದೇ ಉತ್ತರ ಕೊಟ್ಟಿದ್ದೆ."

ನೀವೇದಿತಾ ಬೆಚ್ಚಿಬಿದ್ದಳು. ಆದೇಪ್ರೇಮ ಜಾಲದ ಭ್ರಮೆ ಚಲಿಸಲು ಅವಳಿಂದಾಗಲಿಲ್ಲ. ಕನಸಿನಲ್ಲಿದಂತೆ ಭಾವಿಸಿದಳು.

"ಸಾರಿ, ಮಿಸ್ಟರ್ ಪ್ರಸನ್ನ ಅವರೇ...."ದಾಪುಗಾಲು ಹಾಕುತ್ತ ಸರಿದು ಹೋದಳು.

ಪ್ರಸನ್ನ ಅತ್ತಲೇ ನೋಡುತ್ತ ನಿಂತವನು ಮುಗುಳ್ನಗುತ್ತ ಬ್ಯಾಂಕ್ ನೊಳಕ್ಕೆ ಹೋದ. ಹಿಂದಿನಿಂದ ಬಂದ ಪಟೇಲ್ ಅವನ ಬೆನ್ನಿಗೊಂದು ಗುದ್ದಿದ.

"ಯಾವ್ದೋ ಹೊಸ ಹುಡ್ಗೀಗೆ ಲೈನ್ ಹೊಡೆಯೋ ಹಾಗೆ ಕಾಣ್ತೀಯಾ! ಇದು 1990ನೇ ಇಸವಿ, 1982 ಅಲ್ಲ, ಬಿ ಕೇರ್‌ಫುಲ್" ಭುಜದ ಮೇಲೆ ಕೈ ಹಾಕಿ ಒಳಗೆ ಕರೆದೊಯ್ದ.

ಇಬ್ಬರು ಹೊರಗೆ ಬರುವವರೆಗೂ ಮಾತಾಡಲಿಲ್ಲ. "ಅಂದು, ಇಂದು ನಿಂಗೆ ಹಾಸ್ಯ ಮಾಡೋ ಅವಕಾಶ ಒದಗಿಸಿ ಕೊಟ್ಟೆ" ಪ್ರಸನ್ನ ಗೆಲುವಾಗಿಯೇ ಹೇಳಿದಾಗ ಅಚ್ಚರಿಯಿಂದ ದಿಟ್ಟಿಸಿದ ಪಟೇಲ್ "ಯೂ ಈಡಿಯಟ್..." ಹೊಟ್ಟೆಗೆ ಗುದ್ದುವಂತೆ ನಟಿಸಿದ. "ಏನು ಸೀಕ್ರೆಟ್....ನೀಲಿಮಾ...." ಕಣ್ಣೊಡೆದ.

ಇನ್ನೊಬ್ಬ ಗುರುತಿನವರು ಬಂದಿದ್ದರಿಂದ ಇವರುಗಳ ಮಾತುಕತೆ

ಬಂದ್ ಆಯಿತು. ಬಿಡುವಿನ ದಿನವಾಗಿರದ ಪ್ರಯುಕ್ತ ಇಬ್ಬರು ಬೇಗ ಬೇರೆಯಾದರು.

ಕಾಲೇಜಿಗೆ ಹೋದ ಮೇಲೆಯೂ ಅವನಿಗೆ ನಿವೇದಿತಾಳ ಮುಖವೆ ನೆನಪಾಗುತಿತ್ತು. ಯಾಕೆ ? ಆ ಮುಖ ನೋಡಲು ಇಷ್ಟಪಡದೆಯೇ ಅವನು ಬೇರೆಯಾಗಿದ್ದು.

ಲ್ಯಾಬ್‌ನಿಂದ ಹೊರಗೆ ಬರುವ ವೇಳೆಗೆ ನೀಲಿಮಾ ಎದುರಾದಳು ಮೇಕಪ್, ಉಡುಪು ಪ್ರತಿಯೊಂದರಲ್ಲೂ ಶಿಸ್ತಿನ ಹೆಣ್ಣು. ಅವಳು ಬಹಳ ಸ್ಟ್ರಿಕ್ಟಾದ ಪ್ರಾಧ್ಯಾಪಕಿ ಕೂಡ.

"ಪ್ರಸನ್ನ, ಒಂದ್ನಿಮಿಷ ಬನ್ನಿ...." ಚಪ್ಪಲಿಯ ಸದ್ದು ಮಾಡುತ್ತ ಕಾರಿಡಾರ್‌ನಿಂದ ಹೊರಗೆ ನಡೆದಾಗ ಹಿಂಬಾಲಿಸಿ ಜೊತೆಗೂಡಿದ "ಇಡೀ ದಿನ ಬೋರ್ ಆಗೋ ಸೂಚನೆ ಸಿಕ್ಕಿದೆ" ಎಂದಾಗ ನಕ್ಕು ಬಿಟ್ಟ. "ನಿಮ್ಗೆ ಯಾವಾಗ್ಲೂ ತಮಾಷೆ" ನಾಚಿಕೆಯ ಮುಖ ಮಾಡಿದಳು. ನಾಚುವಂಥ ಹೆಣ್ತನ ಅವಳಲ್ಲಿ ಇಲ್ಲವೆನ್ನುವ ಅನುಭವ ಅವನಿಗೆ ಮೊದಲನೆ ಸಲ ಆಯಿತು.

ನಾಲ್ಕು ಮೆಟ್ಟಲು ಕೆಳಗೆ ಇಳಿದಾಗ ಹೇಳಿದ "ನಂಗೆ ಲ್ಯಾಬ್ ಇದೆ...." ನೀಲಿಮಾ ಅವನತ್ತ ನೋಟ ಹರಿಸಿದಳು "ಗೋ ಟು ಹೆಲ್....ಎಲ್ಲಾದ್ರೂ ಏಕಾಂತವಾಗಿ ಕೂತು ಪರ್ಸನಲ್ ಲೈಫ್‌ನ ಬಗ್ಗೆ ಮಾತಾಡೋಣ" ಅವಳ ಮಾತನ್ನ ಕೇಳಿ ಅವನಿಗೆ ಆಶ್ಚರ್ಯವಾಯಿತು.

ಲ್ಯಾಬ್, ಸೆಮಿನಾರ್, ಕೆಮಿಸ್ಟ್ರಿಯ ಬಗೆಗೆ ಸದಾ ಮಾತಾಡುವ ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲಾ ಗ್ರಂಥಗಳನ್ನು ಕಲೆ ಹಾಕಿ ಓದುವ ಅದನ್ನೆ ತಲೆಯಲ್ಲಿ ತುಂಬಿಕೊಂಡು ಚರ್ಚಿಸುವ ಪ್ರಬುದ್ಧ ಹೆಣ್ಣು. ಬಹುಶಃ ಅವಳಲ್ಲಿನ ಆ ಗುಣವನ್ನ ಮೆಚ್ಚಿಕೊಂಡು ಮದುವೆಯಾಗಿರ ಬಹುದೇನೋ !

ಅವಳಲ್ಲಿ ವಿದೇಶಕ್ಕೆ ಹೋಗಿ ಅಭ್ಯಸಿಸುವುದರ ಜೊತೆಗೆ ಅಲ್ಲೇ ಕೆಲಸ ಮಾಡುವ ಆಸಕ್ತಿಯು ಇತ್ತು. ಅದಕ್ಕೆ ಬೇಕಾಗುವ ಬುದ್ಧಿವಂತಿಕೆ, ಸಹಕಾರ ಸಿಗುತಿತ್ತು. ಅದಕ್ಕೆ ಪೂರ್ಣ ವಿರೋಧ ಸೂಚಿಸುತ್ತಿದ್ದವರು ಸೋಮೇಶ್ವರ್.

ಸ್ಟೀರಿಂಗ್ ವ್ಹೀಲ್ ಮುಂದೆ ಕೂತು ತಾನೇ ಕಾರನ್ನು ಸ್ಟಾರ್ಟ್ ಮಾಡಿದಳು. ಅವನಿಗೆ ವಿಚಿತ್ರವೆನಿಸಿತು ಸಿಟಿ ಪಾರ್ಕ್‌ನ ಬಳಿಯಲ್ಲಿ ಕಾರನ್ನು ಪಾರ್ಕ್ ಮಾಡಿದಾಗ ಚಕಿತನಾದ.

"ಓ ಮೈ ಗಾಡ್, ಪಾರ್ಕ್‌ನಲ್ಲಿ ಕೂತು ಮಾತಾಡೋ, ಕನಸ್ಸು ಕಾಣೋ ವಯಸ್ಸಾ, ಉತ್ಸಾಹವಾ ?" ಅಂದುಬಿಟ್ಟ. ಅವಳ ಮುಖದ ಕೆಂಪು ಬೆರೆಯದೆ ಬಿಳಿಯ ಬಣ್ಣ ನಿಸ್ತೇಜವಾಯಿತು.

ಆಗ ಪ್ರಸನ್ನಗೆ ತನ್ನ ತಪ್ಪಿನ ಅರಿವಾಯಿತು. "ಸಾರಿ, ನೀಲಿಮಾ.... ಐಯಾಮ್ ಸೋ ಸಾರಿ....ನೀನು ಸಾಧಾರಣ ಹೆಣ್ಣುಗಳ ಪೈಕಿಯಲ್ಲವೆಂದು ನಂಗೆ ಗೊತ್ತು." ತಾನು ಅಂದಿದ್ದಕ್ಕೆ ಸೂಕ್ತ ಸಮರ್ಥನೆ ನೀಡಲು ಪ್ರಯತ್ನಿಸಿದ.

ಮೂಲೆಯಲ್ಲಿ ಹೋಗಿ ಕೂತರು. ಇದು ಪಾರ್ಕ್‌ನಲ್ಲಿ ಕೂಡುವ ಸಮಯವೂ ಅಲ್ಲ, ಮನಸ್ಥಿತಿಯೂ ಅಲ್ಲ, ಅಂದು ಕದ್ದು, ಮುಚ್ಚಿ ನಿವೇದಿತಾಳೊಂದಿಗೆ ಆಡುತ್ತಿದ್ದ ಪಿಸು ಮಾತುಗಳು ನೆನಪಾದರೇ.... ಅವನೆದೆಯಲ್ಲಿ ಮಧುರವಾಗಿ ವೀಣೆಯ ಝೇಂಕಾರವಾಗುತಿತ್ತು.

ಕೈ ಮೇಲೆ ನೀಲಿಮಾ ಬೆರಳುಗಳಾಡಿದಾಗಲೇ ಅವನು ವಾಸ್ತವಕ್ಕೆ ಮರಳಿದ್ದು.

"ಏನಾದ್ರೂ....ಮಾತಾಡಿ" ಎಂದಳು. ಎಂದೂ ಇಲ್ಲದ ಉದ್ವೇಗ ನೀಲಿಮಾಳ ಸ್ವರದಲ್ಲಿದೆಯೆಂದು ಅರಿತು ಚಕಿತನಾದ. "ನೀನ್ಯಾಕೋ ನಾರ್ಮಲ್ ಆಗಿಲ್ಲ, ನೀಲಿಮಾ, ಹುಷಾರಾಗಿದ್ದೀಯಾ, ತಾನೇ ?" ಗಾಬರಿಯಿಂದ ಕೈ ಹಿಡಿದುಕೊಂಡ, ಕಣ್ಣೀರಿನೊಂದಿಗೆ ಶುರುವಾದ ಅಳು ಬಿಕ್ಕಳಿಕೆಯ ದಾರಿ ಹಿಡಿದಾಗ ಅವನಿಗೆ ತಲೆ ಕೆಟ್ಟಂತಾಯಿತು. ಏನಾಯಿತು ?

ಸುತ್ತಲೂ ನೋಟ ಹರಿಸಿದ ಎಲ್ಲೋ ಅಲ್ಲಲ್ಲಿದ್ದ ಜನರ ಗಮನ ಬೇರೆಡೆ ಇತ್ತು. ಆದರೂ ಅವನಿಗೆ ಭಯ ಯಾರಾದರೂ ನೋಡಿದರೆ....ಏನು ಊಹಿಸಬಹುದು ?

"ಏಳು....ನೀಲಿಮಾ" ಕರ್ಚೀಫ್‌ನಿಂದ ಕಣ್ಣೊರೆಸಿ ಅವಳ ಹ್ಯಾಂಡ್ ಬ್ಯಾಗನ್ನ ತಾನೇ ತೆಗೆದುಕೊಂಡ "ನಿನ್ನ ಮನಸ್ಥಿತಿ ಚೆನ್ನಾಗಿಲ್ಲ...." ಕಾರಿನತ್ತ ನಡೆಸಿಕೊಂಡು ಬಂದು ಹತ್ತಿಸಿ ತಾನೇ ಸ್ಟೀರಿಂಗ್ ವ್ಹೀಲ್ ಮುಂದೆ ಕೂತ.

ಆತಂಕದಿಂದಲೇ ಬಾಲ್ಕನಿಯಲ್ಲಿ ಕಾರು ನಿಲ್ಲಿಸಿ ನೀಲಿಮಾ ಅತ್ತ ತಿರುಗಿದ. ಒದ್ದೆಯಾದ ಕಣ್ಣು ರೆಪ್ಪೆಗಳು ಮುಚ್ಚಿದ್ದವು. ಭುಜವಿಡಿದು ಅಲ್ಲಾಡಿಸಿದ.

ಒಳಗೆ ಹೋಗಿ ಸೋಮೇಶ್ವರ್‌ಗೆ ಸುದ್ದಿ ಮುಟ್ಟಿಸಿ, ತಾನೇ ಎತ್ತಿ ಒಯ್ದು ಮಂಚದ ಮೇಲೆ ಮಲಗಿಸಿದ.

"ಡಾಕ್ಟ್ರಿಗೆ....ಫೋನ್....ಮಾಡಿ" ಹಿಂದಕ್ಕೆ ತಿರುಗಿದಾಗ ನೀಲಿಮಾ "ನೋ....ನೋ....ಡೋಂಟ್ ಕಾಲ್ ದೆಮ್...."

ಬಾಗಿಲವರೆಗೂ ಹೋದ ಸೋಮೇಶ್ವರ್ ಹಿಂದಕ್ಕೆ ಬಂದರು.

"ಪ್ಲೀಸ್ ಡ್ಯಾಡಿ...." ಅವಳ ದನಿಯಲ್ಲಿ ಗೋಗರೆತವಿತ್ತು ನಂಬಲಾರದೆ ಹೋದರು "ಯು....ನೀಲಿಮಾ...." ಅವರ ಸ್ವರ ಕಂಪಿಸಿತು. "ಏನಾಗಿದೆ.... ನಿಂಗೆ ? ಪ್ಲೀಸ್ ಟೆಲ್ ಮಿ" ಅವಳ ಬಳಿಯಲ್ಲಿಯೇ ಕುಸಿದರು.

ಇದೊಂದು ವಿಲಕ್ಷಣ ಪ್ರಸಂಗ. ಅವರನ್ನ ಎಬ್ಬಿಸಿ ಸಮಾಧಾನಿಸಿ ಕಳುಹಿಸಿದ ಪ್ರಸನ್ನ.

"ಅವ್ಳ ಕಣ್ಣಲ್ಲಿ ನಾನು ನೀರೇ ನೋಡಿರ್ಲಿಲ್ಲ...." ಅವರ ವಾದ "ಆ ಕಂಬನಿಗಂತು ನಾನು ಕಾರಣನಲ್ಲ. ಅವ್ಳ ಹತ್ರ ನಾನೇನು ಮುಚ್ಚಿಟ್ಟಿರಲಿಲ್ಲ ಕೂಡ ಬಿಲೀವ್ ಮಿ. ನೀಲಿಮಾ ಮನಸ್ಸಿಗೆ ಏನೋ ಆಘಾತವಾಗಿದೆ. ಅದ್ನ ನಿಧಾನವಾಗಿ ತಿಳ್ಕೋಬೇಕು. ಯು ಡೋಂಟ್ ವರೀ" ಅವರನ್ನ ಕೋಣೆಯಿಂದ ಹೊರಗೆ ಕಳುಹಿಸಿ ಬಂದು ಕುಸಿದಂತೆ ಅವಳ ಬಳಿಯಲ್ಲಿಯೇ ಕೂತ.

ಸೋಮೇಶ್ವರ್ ತಲೆಯಲ್ಲಿ ಒಂದು ವಿಷಯ ಫ್ಲಾಷ್ ಆಯಿತು 'ಷಿ ಬಿಕೇಮ್ ಎ ಮದರ್' ಅದರ ಜೊತೆಗೆ ಆತಂಕವು ಮೂಡಿತು.ಗೊತ್ತಿದ್ದರೂ ಅವಳ ಡೇಟ್ ಆಫ್ ಬರ್ತ್ ಮನದಟ್ಟು ಮಾಡಿಕೊಳ್ಳಲು ಮತ್ತೊಮ್ಮೆ ತಮ್ಮ ಹಳೆಯ ಡೈರಿಯನ್ನ ತೆಗೆದು ನೋಡಿದರು. ಅಂದು ಅವಳು ಹುಟ್ಟಿದ ದಿನ ಗುರುತು ಹಾಕಿದ ಅಕ್ಷರಗಳೆ.

ಹೆಂಡತಿಗೆ ತಿಳಿಸುವ ಮುನ್ನ ಡಾಕ್ಟರನ್ನ ಕರೆಸಿದರು. "ಸೆಂಟ್ ಪರ್ಸೆಂಟ್ ಕರೆಕ್ಟ್ ಡಯಾಗ್ನಿಸಿಸ್ ಬೇಕು, ಡಾಕ್ಟರೆ" ಸೋಮೇಶ್ವರ್ ಆತಂಕ ನೋಡಿ ಅವರೆ ನಕ್ಕುಬಿಟ್ಟರು.

ಚೆಕ್‌ಅಪ್ ಮಾಡಿ ಬಂದ ಡಾ॥ಫಿಲೋಮಿನಾ ತಲೆ ಅಡ್ಡಡ್ಡ ಆಡಿಸಿದರು.

"ಷಿ ಈಜ್ ಆಲ್‌ರೈಟ್ ಅಂಥದ್ದೇನಿಲ್ಲ. ಸ್ವಲ್ಪ ರೆಸ್ಟ್ ತಗೊಂಡರೆ ಸರಿ ಹೋಗುತ್ತೆ ಅಂಥ ಯಾವ ಲಕ್ಷಣಗಳು ಇಲ್ಲ" ಸರಳವಾಗಿ ಹೇಳಿದರು.

ಇದರಿಂದ ಯಾರಿಗೇನು ನಿರಾಸೆಯಾಗಲಿಲ್ಲ.

ಇಡೀ ರಾತ್ರಿ ಸೆಡೆಟಿವ್‌ನ ಮಂಪರಿನಲ್ಲಿದ್ದ ನೀಲಿಮಾನ ನೋಡುತ್ತ ಕೂತ. ಪದೇ ಪದೇ ನಿವೇದಿತಾಳ ನೆನಪು.

ಓದುತ್ತ ಕೂತಾಗ ಹಾಲು ತಂದು ಅವನ ಮುಂದಿಟ್ಟು "ಕುಡಿದು ಮಲ್ಗಿಕೊಳ್ಳಿ. ರೆಪ್ಪೆಗಳೆಲ್ಲ ಭಾರವಾಗಿದೆ. ನಂಗೆ ನಿಮ್ಮ ಆರೋಗ್ಯ ಮುಖ್ಯ" ಅರ್ಧರಾತ್ರಿಯವರೆಗೂ ತೊಡೆಯ ಮೇಲೆ ತಲೆ ಇರಿಸಿಕೊಂಡು ತಟ್ಟುತ್ತಿದ್ದಳು.

ಪ್ರಸನ್ನನಿಗೆ ಮೈಮರೆತಂತಾಯಿತು. ಬಸುರಿಯಾಗಿದ್ದಾಗಲೂ ತನ್ನ ಸುಸ್ತು, ಬಳಲಿಕೆ ಲೆಕ್ಕಿಸದೆ ಸದಾ ಅವನಿಗೆ ಕಷ್ಟಪಡುತ್ತಿದ್ದಳು. ಹರಿಯುತ್ತಿದ್ದುದ್ದು ನಿರಂತರ ಪ್ರೇಮಗಂಗೆ.

"ಛೆ...." ಮೇಲಕ್ಕೆದ್ದು ಕಣ್ಣೊರೆಸಿಕೊಂಡು ಕಿಟಕಿಯ ಪರದೆಗಳನ್ನು ಸರಿಸಿ ಮುಖವನ್ನ ಗಾಳಿಗೊಡ್ಡಿದ. "ನಮ್ದೇ ಪುಟ್ಟ ಮನೆ. ಅಲ್ಲಿಗೆ ನಾವೇ ರಾಜ, ರಾಣಿ.... ನಮ್ಮ ಅಲೋಕ್ ಯುವರಾಜ. ಅಂಥ ದಿನ ದೂರವಿಲ್ಲ" ಅವನಿಗೆ ಕೆಲಸಕ್ಕೆ ಸಿಕ್ಕ ಹೊಸದರಲ್ಲಿ ಅವನೆದೆಯ ಮೇಲೆ ತಲೆ ಇಟ್ಟು ನುಡಿದಿದ್ದಳು. ಪ್ರಸನ್ನ ಸಿಡಿದು ಬಿದ್ದಿದ್ದ "ಅಂತು ನಿನ್ದು ಹಗಲು ಕನಸುಗಳು...."

ಜೋರಾಗಿ ಬೀಸಿ ಬಂದ ಗಾಳಿ ಬೋಲ್ಟ್ ಹಾಕದ ಕಿಟಕಿ ಬಾಗಿಲುಗಳನ್ನ ರಪರಪನೆ ಬಡಿದು ಸದ್ದು ಮಾಡಿತು. ಅದನ್ನ ಹಾಕಬೇಕಂತ ಅನ್ನಿಸಲಿಲ್ಲ ಅವನಿಗೆ. ಒಂದು ರೀತಿಯ ಹೊಸ ಅನುಭವ.ಪಟ ಪಟ ಬಡಿಯುವ ಕಾರ್ಟನ್ ರಪ ರಪ ಬಡಿಯುವ ಕಿಟಕಿ ಬಾಗಿಲು ರೊಯ್ಯನೆ ಬೀಸುವ ಗಾಳಿ.

"ರ್ರೀ ನಂಗೆ ಒಂಟಿಯಾಗಿದ್ದೆ ಗೊತ್ತಿಲ್ಲ. ತುಂಬು ಜನದ ಮಧ್ಯೆ ಬೆಳೆದವಳು. ಆ ಕಡೆ ಅಕ್ಕ, ಈ ಕಡೆ ತಂಗಿಯ ಮಧ್ಯನೆ ಮಲಗೋದು. ಒಂದಿಷ್ಟು ಗಾಳಿ ಸದ್ದಾದ್ರೂ ಮುಸುಕು ಹಾಕ್ಕೊಂಡ್ ಮಲ್ಗಿಬಿಡ್ತಾ ಇದ್ದೆ" ಮುಗ್ಧಳಾಗಿ ಅವನ ಜೊತೆ ಬಂದ ದಿನವೇ ಭಯದಿಂದ ನುಡಿದ ನಿವೇದಿತಾಗೆ ತೋಳಿನ ಆಸರೆ ನೀಡಿ "ಇಂಪಾಜಿಬಲ್, ಆ ಗಾಳಿ ಕೂಡ ಬಡಿಯದ ಹಾಗೆ ನಿನ್ನ ನೋಡ್ಕೊತೀನಿ...." ಕೊಟ್ಟ ಭರವಸೆಯನ್ನ ಖಾಲಿ ಹಾಳೆಯಂತೆ ಎಸೆದುಬಿಟ್ಟಿದ್ದ.

ಈಗ ನಿವೇದಿತಾ ಹೇಗೆ ರಾತ್ರಿಗಳನ್ನ ಕಳೆಯುಬಹುದು ? ಅವನಿಗೆ ಹೃದಯ ಕಿತ್ತು ಬಾಯಿಗೆ ಬಂದಂತಾಯಿತು. ತಾನೇಕೆ ಇದೆಲ್ಲ ಯೋಚಿಸಲಿಲ್ಲ. ಕಗ್ಗಲ್ಲಾಗಿದ್ದನೆ ? ಆಗ ಹೃದಯ, ಮನಸ್ಸು ಸತ್ತುಹೋಗಿತ್ತೆ ?

ನೀಲಿಮಾ ಸಣ್ಣಗೆ ಹೊರಳಿ ನರಳಿದಾಗ ಹಿಂದಕ್ಕೆ ಬಂದ. ನಿಸ್ತೇಜ ವಾಗಿದ್ದ ಅವಳ ಮುಖ ಚೇತರಿಸಿಕೊಂಡಿರಲಿಲ್ಲ. ಕಣ್ಣಿನ ಸುತ್ತ ದಟ್ಟವಾದ ಕಂದು ಬಣ್ಣ. ತೀರಾ ಸಣ್ಣದಾಗಿ ಪ್ಲಕ್ ಮಾಡಿಸಿದ ಹುಬ್ಬುಗಳು ಬಣ್ಣದಿಂದ ತೀಡದೆ ಅವು ಅಸ್ತಿತ್ವವನ್ನೆ ಕಳೆದುಕೊಂಡಂತೆ ಕಾಣುತಿತ್ತು. ಬಣ್ಣ ಕಳೆದು ಕೊಂಡ ತುಟಿಗಳು ತೇಜೋಹೀನವಾಗಿದ್ದವು. ವ್ಯತ್ಯಾಸ ಅಧಿಕವಾಗಿ ಕಂಡಿತು.

ನಿವೇದಿತಾ ಸದಾ ಸರಳ ಹುಡುಗಿ. ಹೆಚ್ಚು ಅಲಂಕಾರದತ್ತ ಅವಳ ಗಮನವಿರಲಿಲ್ಲ. ಮನೆಯಲ್ಲಿದ್ದಂತೆಯೇ ಹೊರಗು ಹೋಗುತ್ತಿದ್ದಳು. ಬೆಳಗು, ರಾತ್ರಿಗಳಲ್ಲು ವ್ಯತ್ಯಾಸ ಕಾಣದ ಮುಖ.

ಯೋಚನೆಗಳು ಅವನನ್ನ ಮುತ್ತಿ ಕಾಡಿದಾಗ ಗಡಿಯಾರದತ್ತ ನೋಡಿದ. ಐದೂವರೆಯಾಗಿತ್ತು ಬಾತ್‌ರೂಂಗೆ ಹೋಗಿ ನಿಧಾನವಾಗಿಯೇ ತಣ್ಣೀರಿನಲ್ಲಿ ಸ್ನಾನ ಮಾಡಿ ಉಸಿರುಗಟ್ಟುವ ಕೋಣೆಯಲ್ಲಿರಲಾರದೆ ಹೊರಗೆ ಬಂದ.

ಹೆಂಡತಿಯೊಡನೆ ಬೆಳಗಿನ ವಾಕ್‌ಗೆ ಹೊರಟಿದ್ದ ಸೋಮೇಶ್ವರ ಧಾವಿಸಿ ಬಂದರು.

"ಆರಾಮಾಗಿ ನೀಲಿಮಾ ನಿದ್ದೆ ಮಾಡ್ತಾ ಇದ್ದಾಳೆ. ಸರಿಹೋಗ್ತಾಳೆ ಯಾವ್ದೇ ಪ್ರಾಬ್ಲಮ್ ಇಲ್ಲ" ಎಂದು ನುಡಿದ ಆರಾಮಾಗಿ.

ನೀಲಿಮಾ ಇಲ್ಲದಾಗ ಅವನು ಇವರ ನಡುವೆ ಬರುತ್ತಿದ್ದುದ್ದೇ ಅಪ ರೂಪ. ಇಂದು ಬಾಲ್ಕನಿಯಲ್ಲಿ ಬಿದ್ದ ಪೇಪರ್ ತೆಗೆದುಕೊಂಡು ಕಾಂಪೌಂಡ್ ನಲ್ಲೆಲ್ಲ ಅಡ್ಡಾಡಿದ. ಹೂ ಗಿಡಗಳನ್ನು ನೋಡಿದ.

ಜಗತ್ತು ಎಷ್ಟು ವಿಶಾಲವಾಗಿದೆ, ವೈವಿಧ್ಯಮಯವಾಗಿದೆ. ದೇವರು ಮಾನವನ ಸಂತೋಷ, ಅನುಕೂಲಕ್ಕಾಗಿ ಸಮೃದ್ಧ ಪ್ರಕೃತಿಯನ್ನೆ ತೆರೆದಿಟ್ಟಿ ದ್ದಾನೆ. ಆದರೆ ಅವನು ಉಪಯೋಗಿಸಿಕೊಳ್ಳುವುದು ಎಷ್ಟು ? ಪೂರ್ಣ ಪ್ರಯೋಜನ ಪಡೆಯುವ ಮಂದಿ ಎಷ್ಟು ಜನ ? ಎಷ್ಟು ಮಿಲಿಯ ವಿದ್ಯಾ ವಂತರು ಇದರ ಬಗ್ಗೆ ಯೋಚಿಸಲು, ಅನುಭವಿಸಲು ಪುರಸತ್ತು ಮಾಡಿ

ಕೊಂಡಿದ್ದಾರೆ ? ಹಲವು ನೂರರಷ್ಟು ಜನ ಇದರ ಬಗ್ಗೆ ಮಾತಾಡಿಯೇ ತಮ್ಮ ಆಯುಸ್ಸನ್ನು ಕಳೆಯುತ್ತಾರೆ. ಸಂವೇದಿಸುವ, ಖುಷಿ ಪಡುವ, ಅನುಭವಿಸುವ ಜನ ತೀರಾ ಕಡಿಮೆ, ಊಟ, ಹೆಸರು, ಮೈಥುನ, ಹಣ ಬಿಟ್ಟು ಜಗತ್ತಿನ ಸುಖದ ತುಲನೆಯನ್ನ ಮಾಡಲಾರರು !

ಹತ್ತಿರದಲ್ಲಿಯೇ ಸೋಮೇಶ್ವರ್ ನೆರಳಾಡಿದಾಗ ತಲೆಯೆತ್ತಿದ "ವಾಕ್ ಹೋಗ್ತಾ ಮಾತಾಡ್ಬಹ್ದು" ಎಂದರು. ಸಮ್ಮತಿ ಸೂಚಿಸಿದ. ಅವರು ತನ್ನಲ್ಲಿ ಮಾತಾಡಲು ಇಚ್ಛಿಸಿದ್ದಾರೆಂದು ಅವನಿಗೆ ಅರ್ಥವಾಗಿತ್ತು.

ಎಂದೂ ಅವನೊಂದಿಗೆ ಅವರು ಮನಸ್ಸು ತೆರೆದು ಮಾತಾಡಿರಲಿಲ್ಲ. ಅವನ, ನೀಲಿಮಾ ಮದುವೆಯಲ್ಲಿ ಭಾಗವಹಿಸಿದ್ದರು, ಸಂಜೆಯ ರಿಸೆಪ್ಷನ್ ನಲ್ಲಿಯು ಓಡಾಡಿದ್ದರು. ಅಸಮ್ಮತಿ ಸೂಚಿಸದಿದ್ದರೂ ಅವರಿಗೆ ಇಷ್ಟವಾಗಿಲ್ಲ ವೆಂದು ಎಂದೋ ಅರ್ಥವಾಗಿತ್ತು.

ಒಂದು ಫರ್ಲಾಂಗ್ ನಡೆಯುವವರೆಗೂ ಸುಮ್ಮನಿದ್ದವರು "ನೀಲಿಮಾ ತೀರಾ ಸೆನ್ಸಿಟೀವ್ ಅಲ್ಲ. ಅವ್ಳ ಮನಸ್ಸಿಗೆ ಆಘಾತವಾಗಬೇಕೆಂದರೇ...." ಪ್ರಾರಂಭಿಸಿದ ಕೂಡಲೇ ಅವನ ಹುಬ್ಬುಗಳು ಬೆಸೆದುಗೊಂಡವು. ಅದನ್ನ ಮಾಮೂಲಿ ಸ್ಥಳಕ್ಕೆ ತಳ್ಳಲು ಪ್ರಯಾಸ ಪಡಬೇಕಾಯಿತು "ನಂಗೆ ಗೊತ್ತಿಲ್ಲ. ನೀಲಿಮಾ ಸ್ವಲ್ಪ ಚೇತರ್ಸಿಕೊಂಡ್ಮೇಲೆ ಕೇಳ್ಬಹ್ದು" ಅವರು ಮುಂದೆ ಮಾತಾಡ ಬೇಕಾದುದ್ದನ್ನ ಒಂದೇ ನುಡಿಯಿಂದ ತೊಡೆದು ಹಾಕಿದ.

ಪೂರ್ತಿ ಗಪ್‌ಚಿಪ್ ಆದರು ಸೋಮೇಶ್ವರ್.

"ನೀವು ವಾಕ್ ಮುಗ್ಸಿಕೊಂಡ್ಬನ್ನಿ....ನಾನು ನೀಲಿಮಾಗೆ ಎಚ್ಚರ ವಾಗಿದೆಯೇನೋ....ನೋಡ್ತೀನಿ" ಹಿಂದಿರುಗಿಬಿಟ್ಟ. ಅವರೊಂದಿಗೆ ಮಾತಾಡಲು, ಬೆರೆಯಲು ಅವನು ಇಂದಿಗೂ ಹಿಂಜರಿಯುತ್ತಿದ್ದ.

ಪ್ರಸನ್ನ ಕೂಡ ಅಂದು ಸೇರಿಸಿ ಎರಡು ದಿನ ರಜ ಹಾಕಿ ನೀಲಿಮಾ ಜೊತೆ ಉಳಿದ. ಅವಳನ್ನು ಹೆಚ್ಚು ಹೆಚ್ಚು ಪ್ರೀತಿಸಬೇಕು, ಪೂರ್ಣ ಗಮನ ಕೊಡ ಬೇಕು ಎಂದುಕೊಳ್ಳುತ್ತಿದ್ದ. ಇದು ಪಾಪಕ್ಕೆ ಪ್ರಾಯಶ್ಚಿತ್ತವೇನೋ !

ಸಂಜೆ ಪೂರ್ತಿ ಗೆಲುವಾಗಿ ಕಂಡ ನೀಲಿಮಾ ಡ್ರೆಸ್, ಮೇಕಪ್ ಮುಗಿಸಿ ಕೊಂಡು ಬಂದು ಅವನ ಮುಂದೆ ಕೂತಳು.

"ಈ ಎರಡು ದಿನ ತುಂಬ ಆರಾಮೆನಿಸಿತು. ಏಕಾಂತ ಮನುಷ್ಯನ ಬದ್ಕಿಗೆ ತೀರಾ ಅಗತ್ಯ" ಅವಳ ಮಾತಿಗೆ ಮುಗುಳ್ನಕ್ಕ ಮೌನವಾಗಿ.

"ಒಂದ್ಮಾತು ಕೇಳಲಾ ಪ್ರಸನ್ನ ..." ಸ್ವರದಲ್ಲಿ ಸಂಕೋಚ ಮಿನುಗಿದಂತೆ ಕಂಡರೂ ಮುಖದಲ್ಲಿ ಆ ಭಾವ ಮೂಡಲಿಲ್ಲ. "ಲೇವಾದೇವಿ ಸರಣಿಯಂತೆ ಮಾತು ಶುರುಮಾಡಿದ್ದೀಯಲ್ಲ...." ತಮಾಷೆ ಮಾಡಿದ. ಆದರೆ ಎಲ್ಲೋ ಅವನನ್ನ ಇಂಥ ಸಮಯದಲ್ಲಿ ಹಿಡಿದಿಡುವುದು. ಅದೇನೆಂದು ಅವನಿಗೆ ಇಂದಿಗೂ ಅರ್ಥವಾಗಿರಲಿಲ್ಲ.

"ಐ ವಾಂಟ್ ಚೈಲ್ಡ್...." ಸ್ವಲ್ಪ ನೋಟ ಕೆಳಗಾಯಿತು. ಕೆನ್ನೆಯಲ್ಲಿ ನಾಚಿಕೆಯ ಕೆಂದಾವರೆಗಳು ಅರಳಲಿಲ್ಲ "ನನ್ನ ತಕರಾರೇನು ಇಲ್ಲ...." ಬಗ್ಗಿ ಅವಳ ಕೆನ್ನೆ ಸವರಿದ. ಬಲವಾಗಿ ಅವನನ್ನ ಅಪ್ಪಿಕೊಂಡಳು.

ಆ ಕ್ಷಣದ ಆನಂದ ಪೂರ್ತಿ ಅನುಭವಿಸಲು ಅವನಿಂದಾಗಲಿಲ್ಲ, ಅಲೋಕ್ ಒಬ್ಬ ಬದುಕಿದ್ದರೂ ಅವನು ಎರಡು ಮಕ್ಕಳ ತಂದೆ. ನನ್ನ, ಅಲೋಕ್‌ನ ಸಂಬಂಧ ಕಡಿದು ಹಾಕೀಂತ ಅವನು ಯಾವ ಕೋರ್ಟಿನಲ್ಲು ಕೇಸ್ ಫೈಲು ಮಾಡುವಂತಿರಲಿಲ್ಲ.

ಆಗಲೇ ಡಾಕ್ಟರ್ ಬಳಿಯಲ್ಲಿ ಹೋಗಿ ವಿಶೇಷ ಸಲಹೆ, ಸೂಚನೆಗಳನ್ನು ಪಡೆದು ಬಂದರು, ತಾಯಿ, ತಂದೆಯರಾಗಲು ಮಾನಸಿಕ ಸಿದ್ಧತೆಗಳನ್ನು ನಡೆಸಿದರು.

ತೀರಾ ಹರೆಯದ ಹುಡುಗಿಯಂತೆ ನೀಲಿಮಾ ಚೇಷ್ಟೆ ಮಾಡಿದಳು, ಮಾತಾಡಿದಳು, ನಟಿಸಿದಳು—ಅದೆಲ್ಲ ನಿರರ್ಥಕವೆನಿಸಿತು ಅವನಿಗೆ. ಆದರೆ ಅವಳ ಹೆಣ್ಣುತನದಲ್ಲಿ ಅದೇನೋ ಕೊರತೆ. ಬಹುಶಃ ಅವನಿಂದ ಕೂಡ ಹೇಳಲಿಕ್ಕಾಗದು.

"ಐ ಲೈಕ್ ಹರ್ ವೆರಿ ಮಚ್. ಆದರೆ ಆಕೆಯಲ್ಲಿ ಫೆಮಿನೈನ್ ಟಚಸ್ ಕಡಿಮೆ. ಮುಖದಲ್ಲಿ ಒರಟುತನ ತುಂಬಿಕೊಂಡು ಹೆಣ್ತನದ ಮಾಧುರ್ಯವನ್ನೆ ನುಂಗಿ ಹಾಕಿದೆ" ಪಟೇಲ್ ಸಂಕೋಚವಿಲ್ಲದೆ ಅವನೊಂದಿಗೆಯೇ ಹೇಳಿದ್ದ.

ಅದನ್ನ ಮನಸ್ಸಿಗೆ ಹಾಕಿಕೊಂಡಿರಲಿಲ್ಲ, ಯಾವ ವಿಷಯವನ್ನಾದರೂ ಮುಚ್ಚುಮರೆ ಇಲ್ಲದೇ ಫ್ರಾಂಕಾಗಿ ಮಾತಾಡುವುದು ಅವನ ಸ್ವಭಾವವೆಂದು ಗೊತ್ತು.

ಶಾಲೆಗಳಿಗೆ ರಜ. ನಿವೇದಿತಾಗಂತು ಕೆಲಸ ಇತ್ತು. ಆದರೆ ಅಲೋಕ್ ಬೇಸರದ ಮುಖ ಮಾಡಿ ಕೂಡುತ್ತಿದ್ದ. ಅಜ್ಜಿ, ಆಂಟೀ, ಅಂಕಲ್ ಮನೆಗಳಿಗೆಂದು ಅವನ ಫ್ರೆಂಡ್ಸ್ ಖಾಲಿಯಾಗಿದ್ದರು. ಈಗ ಅವನು ಒಂಟಿ, ಹೆಚ್ಚು ಹೆಚ್ಚು ಅರ್ಥವಾಗುತಿತ್ತು ಅವನಿಗೆ.

"ಮಮ್ಮಿ, ನಮ್ಗೆ ಯಾರಿಲ್ಲವಾ ?" ಒಮ್ಮೆ ಕೇಳಿದ.

ಅವಳು ಹೇಳಲು ಒದ್ದಾಡಿದಳು. "ಯಾರು ಇಲ್ಲಂತಲೇ ಅಂದ್ಕೋಬೇಕು. ಗೋದಾವರಿ ಮೇಡಮ್, ಚೈತ್ರ ಆಂಟಿ, ಪಟೇಲ್ ಅಂಕಲ್ ಅವರೆಲ್ಲ ಇಲ್ಲವಾ ?" ಮೇಲ್ಮುಖದ ಸಮಾಧಾನ.

ತಾಯಿಯನ್ನ ನೋಡುತ್ತ ಕೂತಿದ್ದ ಅಲೋಕ್ ಎದ್ದುಹೋದ. 'ನನ್ನ ಗ್ರಾಂಡ್ ಮಮ್ಮಿ ಬಂತು ಅಂತ ಒಬ್ಬ ಜಂಬ ಕೊಚ್ಚಿಕೊಂಡರೇ, ಇದ್ನ ನನ್ನ ಆಂಟೀ ಕೊಡ್ಸಿದ್ದು ಅಂತ ಇನ್ನೊಬ್ಬ ಎದೆ ಉಬ್ಬಿಸುವವನು' ಒಬ್ಬರಲ್ಲ ಒಬ್ಬರು ತಮ್ಮ ಬಂಧುಗಳ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಆದರೆ ಇವನಿಗೆ ಅಂಥ ಅವಕಾಶವೆ ಇಲ್ಲ. ಈಗ ಪ್ರಸನ್ನ ಕೂಡ ತೊಡೆದುಕೊಂಡಿದ್ದ.

ಅಲೋಕ್‌ನ ಕಣ್ಣಿಂದ ಧಾರೆಯಾಗಿ ಕಂಬನಿ ಇಳಿಯುತಿತ್ತು.

ಅವನ ಬಳಿ ಬಂದು ಕೂತ ನಿವೇದಿತಾಳ ಕಣ್ತುಂಬಿತು.

"ಮಮ್ಮಿ...." ಅಪ್ಪಿಕೊಂಡು ಅಳತೊಡಗಿದ. ಬೆಳೆಯುವ ಪೈರಿಗೆ ಬರೀ ನೀರು ಸಾಲದು, ಗೊಬ್ಬರ, ಕಾಲ ಕಾಲಕ್ಕೆ ಋತುಮಾನಕ್ಕೆ ಅನುಗುಣವಾಗಿ ಗಾಳಿ, ಬೆಳಕು ಎಲ್ಲಾ ಬೇಕು. ವ್ಯಕ್ತಿಯ ಜೀವನಕ್ಕೂ ಅಷ್ಟೆ.

ಒಂದು ನಾಲ್ಕು ದಿನ ಅಲೋಕ್‌ನ ಕರೆದುಕೊಂಡು ತೀರಾ ಹತ್ತಿರದ ಬಂಧುಗಳ ಮನೆಗೆ ಹೋಗಿ ಬರಬೇಕು. ಮೊದಲು ನೆನಪಾದುದ್ದು ತವರುಮನೆ. ಆಗಲೇ ಕೂತು ಪತ್ರ ಬರೆದು ಚಾತಕ ಪಕ್ಷಿಯಂತೆ ಕಾದಳು.

ನಾಲ್ಕು ದಿನದ ನಂತರ ಅವಳಪ್ಪನಿಂದ ಒಂದು ಕಾರ್ಡು ಬಂತು.

"ನಮ್ಮ ಮಗ್ಳು ಸತ್ತು ವರ್ಷಗಳೆ ಉರುಳಿ ಹೋಗಿದೆ. ಅಂಥ ಯಾರಾದರೂ ಅವಳ ಹೆಸರು ಹೇಳಿಕೊಂಡು ಬಂದರೇ ಪೋಲೀಸ್‌ಗೆ ದೂರು ಕೊಡಬೇಕಾಗುತ್ತೆ" ಮೂರೇ ಸಾಲು. ಆಶೀರ್ವಾದದ ಮಾತು ಕೂಡ ಅದರಲ್ಲಿ ಇರಲಿಲ್ಲ.

ತನ್ನ ಅವಿವೇಕಕ್ಕೆ ನೊಂದು ಹರಿದು ಕಸದ ಬುಟ್ಟಿಗೆ ಹಾಕಿದಳು.

ಸಾವು ಎಲ್ಲಾ ಬಂಧುತ್ವವನ್ನು ತೊಡೆದು ಹಾಕಿದರೂ ಬದುಕಿರುವಾಗಲೇ ಕೆಲವು ಸಂಬಂಧಗಳು ತೊಡೆದು ಹೋಗುತ್ತೆ.

ಅಂದು ಏಕಾಏಕಿ ಗೋದಾವರಿ ಅವಳಿಗೆ ಒಂದು ಸಲಹೆ ಕೊಟ್ಟರು.

"ಚೈತ್ರ, ಅವ್ಳ ಮಕ್ಳು ಹಳ್ಳಿಗೆ ಹೋಗ್ತಾ ಇದ್ದಾರೆ. ಅವ್ರುಗಳ ಜೊತೆ ಅಲೋಕ್‌ನ ಒಂದು ನಾಲ್ಕು ದಿನ ಕಳ್ಸಿ ಕೊಡು ಒಂದು ರೀತಿಯ ಛೇಂಜ್ ಸಿಕ್ಕುತ್ತೆ, ಇದು ಎಲ್ಲಾ ದೃಷ್ಟಿಯಿಂದಲು ಒಳ್ಳೆಯದು.

ಅದು ಅವಳಿಗೂ ಸೂಕ್ತವಾಗಿ ಕಂಡಿತು. ಸುದ್ದಿ ಅಲೋಕ್‌ನ ಕಿವಿಗೆ ಬಿದ್ದಾಗ ಕುಣಿದಾಡಿಬಿಟ್ಟ.

"ಅಜ್ಜಿ ಮನೆಗೆ ಹೋಗ್ತೀನಿ....ಪಪ್ಪಿ ಅಜ್ಜೀನ ನಾನು ಅ[illegible]" ಕೂಗ್ತೀನಿ" ಅವನಿಗೆ ಖುಷಿಯೋ....ಖುಷಿ.

ಸ್ವಾಮ್ಯ
ರಾಜ್ಯ ಕೇಂದ್ರ ಗ್ರಂ
ಬೆಂಗಳೂ

ಬ್ಯಾಗ್‌ಗೆ ಬಟ್ಟೆಗಳು ಹಾಕಿಟ್ಟಳು.

"ಕೆರೆ, ಬಾವಿ ಆ ಕಡೆ ಹೋಗ್ಬಾರ್ದು, ಸಿಕ್ಕಿದೆಲ್ಲ ತಿನ್ನಬಾರ್ದು. ಚೈತ್ರ ಆಂಟೀ ಹೇಳಿದಂಗೆ ಕೇಳ್ಬೇಕು, ಹಟ ಮಾಡ್ಬಾರ್ದು" ನೂರೆಂಟು ಬುದ್ಧಿ ಮಾತುಗಳು ಹೇಳುವಾಗ ಅವಳ ಕಂಠ ಗದ್ಗದವಾಯಿತು. ರಕ್ತ ಸಂಬಂಧದ ಬಗ್ಗೆಯೇ ಅವಳಿಗೆ ವಾಕರಿಕೆಯಾಯಿತು.

ಅವಳ ತಂದೆ ಅಂದು ನಿವೇದಿತಾನ ಹತ್ತಿರ ಕೂಡಿಸಿಕೊಂಡು ಕಣ್ಣೀರಿಟ್ಟಿದ್ದರು.

"ಪ್ರಸನ್ನನ ಮರ್‍ತು ಬಿಡು. ನಮ್ಗೆ ಆಗದ ಸಂಬಂಧ. ನಿನಗಿಂತ ಹಿರಿಯಳು, ಒಬ್ಬಳಿದ್ದಾಳೆ, ನಿನ್ತಂಗಿಗೆ ಬೇರೆ ಮುಂದೆ ಮದ್ವೆ ಮಾಡೋಕೆ ಕಷ್ಟವಾಗುತ್ತೆ, ಇಷ್ಟೆಲ್ಲ ಮಾಡಿದ ನಮಗಿಂತ ನಿಂಗೆ ಅವ್ನೇ....ಹೆಚ್ಚಾ ?"

'ಹೌದೆ'ನ್ನುವಂತೆ ಬಿಟ್ಟು ಬಂದಿದ್ದಳು. ಆಗ ತಾನು ತುಂಬ ಸ್ವಾರ್ಥಿಯಾಗಿದ್ದೆ. ಹೆತ್ತಮ್ಮ, ಅಪ್ಪ, ಒಡ ಹುಟ್ಟಿದವರ ಬಗ್ಗೆ ಯೋಚಿಸದಷ್ಟು ಕುರುಡಳಾಗಿದ್ದೆ. ಈಗ ಅವರು ವಿಧಿಸಿರುವ ಶಿಕ್ಷೆ ಅಷ್ಟು ದೊಡ್ಡದಲ್ಲವೆಂದು ಕೊಂಡಳು.

ಚೈತ್ರ, ಅವಳ ಮಕ್ಕಳ ಜೊತೆ ಅಲೋಕ್ ಕುಣಿಯುತ್ತ ಬಸ್ಸು ಹತ್ತಿದಾಗ ಎಲ್ಲ ಬರಿದಾಗಿ ಹೋಯಿತೆನಿಸಿತು. ಆಟೋ ಹತ್ತದೇ ನಡದೇ ಬಸ್ಸು ಸ್ಟಾಂಡ್‌ನಿಂದ ಹೊರಗೆ ಬಂದಳು.

ತಲೆ ಸುತ್ತಿ ಬಂದಂತಾಯಿತು. ಕ್ಷಣ ನಿಂತು ಸುಧಾರಿಸಿಕೊಂಡರೂ ಮುಂದೆ ಹೆಜ್ಜೆ ಇಟ್ಟು ನಡೆಯಲಾರೆನೆನಿಸಿತು. ಮತ್ತೆ....ಹೇಗೆ ಮನೆ ಸೇರುವುದು ? ಆಟೋ ಕೂಗಲು ಸಹ ಅವಳಿಗೆ ನಿತ್ರಾಣವೆನಿಸಿತು. ಜೋಲಿಯೊಡೆದಂತಾಯಿತು.

"ನಿವೇದಿತಾ...." ಸ್ವರ ಎಲ್ಲಿಂದಲೋ ಕೇಳಿ ಬಂತು. ಪಟೇಲ್ ಮನೆಗೆ ಕರೆತಂದಾಗ ಗೋದಾವರಿ ಗಾಬರಿಯಾದರು. "ಮಗನನ್ನ ಬಸ್ಸು ಹತ್ತಿಸಲು ಆಟೋದಲ್ಲಿ ನಗು ನಗುತ್ತಾ....ಹೋದ್ಲು" ಪಟೇಲ್ ಮೌನವಹಿಸಿದ.

ಅವನಿಗೆ ಡಾಕ್ಟರ್ ಅಗತ್ಯ ಕಾಣಲಿಲ್ಲ.

ಗೋದಾವರಿ ಕಾಫೀ ಮಾಡಿ ಕುಡಿಸಿದ ಮೇಲೆಯೇ ಅವಳು ಚೇತರಿಸಿಕೊಂಡಿದ್ದು, ನಾಚಿಕೊಂಡಳು ಕೂಡ.

"ಈಗ....ಹೇಗಿದ್ದೀರಿ ?" ಪಟೇಲ್ ನಗುತ್ತಲೇ ಕೇಳಿದ.

"ಏನಿಲ್ಲ, ಯಾಕೆ ಹಾಗೆ ಆಯ್ತುಂತ ಗೊತ್ತಾಗ್ಲಿಲ್ಲ" ಎಂದಳು ಸಂಕೋಚದಿಂದ "ನಿಮ್ಮ ಅರ್ಧ ಶಕ್ತಿ ಅಲೋಕ್ ಅಂಥ ತಿಳ್ಕೊಂಡಿದ್ದೀರಿ. ಅವ್ನು ಕಾಣೆಯಾದ ಕೂಡ್ಲೇ....ಪೂರ್ತಿ ಶಕ್ತಿಹೀನರಾಗಿಬಿಟ್ರಿ. ಈಗ ನಮ್ಮ ಪ್ರೊಫೆಷನ್‌ನಲ್ಲಿ ಕೂಡಿಯೇ ಇರ್ತೀವಿ. ಸಾವು, ಅಗಲುವಿಕೆ ನಮ್ಮನ್ನ ಬೇಟೆಯಾಡುತ್ತಲೆ ಇರೋದ್ರಿಂದ....ನಮ್ಮ ಅಂತರ್‌ಶಕ್ತಿ ನಮ್ದೆ ಎನ್ನುವ ರೀತಿಯಲ್ಲಿ ಪರಿಸ್ಥಿತಿಯನ್ನ ಎದುರಿಸಬೇಕಾಗುತ್ತೆ." ಕಾಶ್ಮೀರ ಗಡಿಯಲ್ಲಿನ ನಿರಂತರ ಆಘಾತ, ಆಕಸ್ಮಿಕಗಳ ಬಗೆಗೆ ವಿವರಿಸಿದ.

ಬಹಳ ಮೆಚ್ಚಿಗೆಯಿಂದ ಗೋದಾವರಿ ಅವನನ್ನ ನೋಡಿದರು. 'ಹೆತ್ತವ್ಳು ತುಂಬ ಪುಣ್ಯವಂತೆ' ಎಂದುಕೊಂಡರು.

ಆಕೆ ಒಂದು ಪ್ರಸ್ತಾಪ ಮುಂದಿಟ್ಟರು "ಪಟೇಲ್ ನೀವು ಯಾಕೆ ಮದ್ವೆ ಆಗ್ಬಾರ್ದು ? ಕಾಲಿನದು ಒಂದು ಸಮಸ್ಯೆಯೇ ಅಲ್ಲ. ನಿಮ್ಮ ವ್ಯಕ್ತಿತ್ವಕ್ಕೆ ಮಾರು ಹೋಗದ ಹುಡ್ಗಿಯೇ ಇಲ್ಲ"

ಎದ್ದು ನಿಂತ ಪಟೇಲ್ ಎರಡು ಕೈ ಜೋಡಿಸಿದ. "ನನಗೆ ಭಾರತೀಯ ಹೆಣ್ಣಿನ ಬಗ್ಗೆ ಅತ್ಯಂತ ಗೌರವಭಾವ ಪೂಜ್ಯನೀಯಳು ಹೌದು. ನಂಗೆ ಮುಟ್ಟಿ ಮಲೀನ ಮಾಡಲು ಕೂಡ ಇಷ್ಟವಿಲ್ಲ. ನನ್ತಲೆಯಲ್ಲಿ ಎಂದೂ ಮದ್ವೆ

ಯೋಚ್ನೆ ಹೊಕ್ಕೇ ಇಲ್ಲ, ಮುಂದು ಕೂಡ ಅಂಥ ಅವಕಾಶವಿಲ್ಲ" ಅವನ ಮಾತುಗಳಲ್ಲಿ ದೃಢತೆ ಇತ್ತು.

ಗೌರವಿಸಬಹುದಾದ ವ್ಯಕ್ತಿತ್ವ ಅವನದು.

ಮರುದಿನ ಪ್ರಸನ್ನ, ಪಟೇಲ್ ಫ್ಯಾಕ್ಟರಿಯಿಂದ ಸಂಜೆ ಮನೆಗೆ ಬರುವ ವೇಳೆಗೆ ಹುಡುಕಿಕೊಂಡು ಬಂದ. ತುಸು ಗಾಬರಿಯು ಇತ್ತು ಅವನಲ್ಲಿ.

"ಈಗ ನಿವೇದಿತಾ....ಹೇಗಿದ್ದಾಳೆ ?" ಅವನ ಪ್ರಶ್ನೆಗೆ ಆರಾಮಾಗಿ ನಕ್ಕುಬಿಟ್ಟ "ಯಾವ....ನಿವೇದಿತಾ ? ಮತ್ತೆ ಸುಂದರವಾಗಿರೋ ಬದ್ಕನ್ನ ಹಾಳು ಮಾಡ್ಕೋಬೇಡ. ನೀಲಿಮಾ ಕೂಡ ಒಂದು ಹೆಣ್ಣು. ನಿಂಗೆ ಬೇಡದ.... ವಿಷ್ಯ ಅದು" ಪರೋಕ್ಷವಾಗಿ ಆ ವಿಷಯ ಹೇಳಲು ತನಗೆ ಇಷ್ಟವಿಲ್ಲವೆಂದು ಸೂಚಿಸಿದ.

ರಾತ್ರಿ ಪಟೇಲ್ ಕ್ಲಬ್‌ಗೆ ಹೋಗಿದ್ದಾಗ ಬಂದ ಪ್ರಸನ್ನಗೆ ಅಮೀರ್‌ನೆ ಹೇಳಿದ್ದು ಮಧ್ಯಾಹ್ನದ ವಿಷಯವನ್ನು.

"ಅಂತು....ನೀನು ಹೇಳೊಲ್ಲ." ಸಿಡಿದುಬಿದ್ದ.

"ಹೇಳೊಲ್ಲ ಅಲ್ಲ, ನೀನು ಕೇಳೋದ್ಬೇಡ. ಯಾವ ಹೆಣ್ಣಿನ ಬಗೆಗೆ ನಿನಗೇನು ? ನೀಲಿಮಾ ಒಬ್ಬಳೆ ನಿನಗೆ ಸ್ವಂತ.ಅವಳ ಬಗ್ಗೆ ಮಾತ್ರ ಯೋಚಿಸು ವುದು ನಿನ್ನ ಆರೋಗ್ಯಕ್ಕೆ ಒಳ್ಳೇದು" ವಿವೇಕ ಹೇಳಿದ.

ಅವನಲ್ಲಿ ಬರೀ ಗೊಂದಲವೆ. ನಿವೇದಿತಾಯಿಂದ ಬಿಡುಗಡೆ ಬಯಸಿದ. ಈಗ ಅವಳಿಗಾಗಿ ಹಾತೊರಿಕೆ. ಇದು ಯಾವ ಲಕ್ಷಣ ? ಸೈಕ್ರಿಯಾಟಿಸ್ಟ್ ಇದಕ್ಕೆ ಏನೆಂದು ಹೆಸರಿಸಬಹುದು ?

ಕಡೆಗೆ ಪ್ರಸನ್ನ ಹೆಗಲ ಮೇಲೆ ಕೈ ಹಾಕಿ ಮೃದುವಾಗಿ ತಿಳಿ ಹೇಳಿದ "ಸರಿ, ತಪ್ಪುಗಳ ವಿಶ್ಲೇಷಣೆ ಬೇಡ. ನಿವೇದಿತಾ ನಿನ್ನ ನಡುವಿನ ಪ್ರೀತಿ, ಪ್ರೇಮ, ಮದ್ವೆ, ಅಲೋಕ್ ಎಲ್ಲವನ್ನ ಮರ್ರುಬಿಡು. ಅದು ನಿಂಗೆ ಇಷ್ಟ ವಾಗೂ ಇತ್ತು ! ನಿನ್ನ ಚಿಂತನೆ ಬೇರೆಡೆಗೆ ಹರಿಯಲಿ. ನೀನು, ನೀಲಿಮಾ ಕೆಮಿಸ್ಟ್ರಿಯಲ್ಲಿಯೇ ಮಾಸ್ಟರ್ ಡಿಗ್ರಿ ಮಾಡಿರುವುದು. ಅವಳ, ನಿನ್ನ ಸ್ಟಡಿ ವಿಷ್ಯ ಒಂದೇ. ಸಾಧನೆಗೆ ಒಬ್ಬರಿಗೆ ಮತ್ತೊಬ್ಬರ ಸಹಕಾರವಿದೆ"

ಸ್ವಲ್ಪ ಹೊತ್ತು ಕೂತಿದ್ದ ಪ್ರಸನ್ನ ಎದ್ದು ಹೋಗಿಬಿಟ್ಟ. ಪಟೇಲ್

ಗದ್ದಕ್ಕೆ ಕೈ ಹಚ್ಚಿದ. ಇವನಿಗೆ ಆದದ್ದು ಏನು ? ಈಗ ಆಗಿರುವುದೇನು ? ಬಹಳ ಹೊತ್ತು ಅದೇ ಭಂಗಿಯಲ್ಲಿ ಕೂತುಬಿಟ್ಟ.

ಪ್ರಸನ್ನ ಪ್ರತಿಭಾವಂತ. ಕಾಲೇಜಿನಲ್ಲೂ ಅವನ ನಡವಳಿಕೆ ಗೌರವಯುತವಾಗಿಯೇ ಇತ್ತು. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅವನು ಪ್ರಿಯವಾದ ಅಧ್ಯಾಪಕ. ಅಬ್‌ನಾರ್ಮಲ್ ವರ್ತನೆಯೇನು ಅಲ್ಲ.

ಒಮ್ಮೆ ಸೋಮೇಶ್ವರ್ ಬಳಿಯಲ್ಲಿಯೇ ಗೆಳೆಯನನ್ನು ಸಮರ್ಥಿಸಿಕೊಂಡಿದ್ದ. "ಹೆಚ್ಚು ಓದು, ಚಿಂತನೆ, ಕಲೆ, ಬರವಣಿಗೆ ಬೆಳೆದಂತೆ ವ್ಯಕ್ತಿ ತನ್ನ ಭಾವನೆಗಳಿಗೆ ಸ್ಪಂದಿಸುವವರನ್ನು ಆರಿಸಿಕೊಳ್ಳುತ್ತಾರೆ. ಇಟ್ ಈಸ್ ಕ್ವೈಟ್ ನ್ಯಾಚುರಲ್. ಪ್ರಸನ್ನ ತನ್ನ ಭಾವನೆಗಳ್ನ ನೀಲಿಮಾಳಲ್ಲಿ ಗುರ್ತಿಸಿಕೊಂಡಿದ್ದಾನೆ. ದಟ್ಸ್ ಆಲ್...." ಅವರನ್ನ ತೆಪ್ಪಗಾಗಿಸಿದ್ದ.

ಪಟೇಲ್ ಒಬ್ಬ ಆತ್ಮೀಯ ಗೆಳೆಯ. ಪ್ರಸನ್ನನ ಬದುಕಿನಲ್ಲಿ ತೂಫಾನ್ ಏಳುವುದು ಅವನಿಗೆ ಬೇಕಿರಲಿಲ್ಲ.

ಅವನ ಯೋಚನೆಗಳಿಗೆ ಬ್ರೇಕ್ ಹಾಕುವಂತೆ ಅಮೀರ್ ಬಂದು ನಿಂತ. "ಯಾರೋ ಲೇಡಿಸ್....ಬಂದಿದ್ದಾರೆ" ಅವನಿಗೇನು ಆಶ್ಚರ್ಯವಾಗಲಿಲ್ಲ. ಹೆಣ್ಣು, ಗಂಡೆಂಬ ಭೇದ ತೋರದೆ ಸಹಜವಾಗಿ, ಕೆಲವೊಮ್ಮೆ ಅಷ್ಟೇ ಕಟುವಾಗಿ ಎಲ್ಲರೊಂದಿಗೂ ಮಾತಾಡುತ್ತಿದ್ದ.

* * *

ಡಾಕ್ಟರ್‌ಗಳನ್ನ ನೀಲಿಮಾ, ಪ್ರಸನ್ನ ಕೂಡಿಯೇ ಭೇಟಿ ಮಾಡುತ್ತಿದ್ದರು. ಸಲಹೆ, ಸೂಚನೆಗಳು ಫಲಿಸದಾಗ ಪರೀಕ್ಷೆ, ಟ್ರೀಟ್‌ಮೆಂಟ್ ಶುರುವಾಯಿತು. ಪದೇ ಪದೇ ತಿರುಗುವುದು ಅವನಿಗೆ ತಲೆಬಿಸಿ.

ನೀಲಿಮಾ ಮಾತ್ರ ಅತ್ಯಂತ ಸಂತೋಷವಾಗಿದ್ದಳು.

"ನಮ್ಮ ಮಗುಗೇ ಏನಂಥ ಹೆಸರು ಇಡೋದು ?"

ಪ್ರಯತ್ನಿಸಿದರೂ ಅವನಲ್ಲಿ ಉತ್ಸಾಹವೇನು ತುಂಬಿ ಬರಲಿಲ್ಲ. "ಮೊದ್ಲು ಹೆಣ್ಣೋ ಗಂಡೋ ನಿರ್ಧಾರವಾದ್ಮೇಲೆ ತಾನೆ ಹೆಸರಿನ ಆಯ್ಕೆ" ಎಂದ. ಆದರೂ ಅವಳ ಉತ್ಸಾಹವೇನು ಅಡಗಲಿಲ್ಲ, "ಎರಡಕ್ಕೂ ಹೆಸರನ್ನ ಚ್ಯೂಸ್ ಮಾಡಿ ಇಡೋಣ. ನಮ್ಗೆ ಮಗು ಇಂಪಾರ್ಟೆಂಟ್ ಎರಡೂ ಆದ್ರೆ.... ಇದ್ದಿದ್ದೂ ಒಳ್ಳೇದು" ಕಿಲಕಿಲ ನಕ್ಕಳು. ಪ್ರಸನ್ನ ಸುಸ್ತಾದ.

"ಮೈ ಗಾಡ್, ಇದು ಅತಿಯಾದ ಹುಚ್ಚು. ವಿದ್ಯೆ ಇದೆ, ಒಳ್ಳೆ ಪ್ರೊಫೆಷನ್ ಇದೆ. ಡಾಕ್ಟರೇಟ್, ವಿದೇಶ....ಎಷ್ಟೋ ಅಪರ್ಚ್ಯುನಿಟಿ ಇದೆ" ಎಂದ ಕೂಡಲೆ ತೊಡೆಯ ಮೇಲಿದ್ದ ದಿಂಬನ್ನ ಅವನ ಮೇಲೆ ಎಸೆದಳು ನಸು ಮುನಿಸಿನಿಂದ.

ಪ್ರಸನ್ನ ತೀರಾ ಭಯ ನಟಿಸಿದ "ಮಗುವಿಗಾಗಿಯೇ ಇಂಥ ಪ್ರತಿಕ್ರಿಯೆ. ಆಮೇಲೆ...." ಆರಾಮಾಗಿ ಅವಳ ತೊಡೆಯ ಮೇಲೆ ತಲೆ ಇಟ್ಟು ಮಲಗಿಬಿಟ್ಟ.

ಪ್ರೀತಿಯಿಂದ ಅವನ ಒತ್ತು ಕೂದಲನ್ನು ಜಗ್ಗಿದಳು. "ನಿಮ್ಮಷ್ಟೆ ಮುದ್ದಾದ ಮಗು ಬೇಕು" ದಿಂಬಿನಿಂದ ಪ್ರಸನ್ನ ಮುಖ ಮುಚ್ಚಿಕೊಂಡ.

'ಮಗು' ಎನ್ನುವ ಪದ ಅವರಿಗೆ ವೈಯಕ್ತಿಕ ಬದುಕನ್ನ ನೀಡಿತ್ತು. ಆಮೇಲಿನ ಬೆಸೆತದಲ್ಲಿ ಹೆಚ್ಚು ಸುಖವಿದೆಯೆಂದು ಕೂಡ ಇಬ್ಬರಿಗೂ ಅನ್ನಿಸಿತ್ತು.

ತನ್ನ ಮಗುವಿನ ಕಲ್ಪನೆ ಮೂಡಿದಾಗಲೆಲ್ಲ ಅವಳಿಗೆ ಅಲೋಕ್‌ನ ನೆನಪಾಗುತಿತ್ತು. ಪುಟ್ಟ ಬಾಯಿ, ದುಂಡು ಕೆನ್ನೆಗಳು, ಆರೋಗ್ಯವಂತ ಮುಖ ಕಾಂತಿ, ಒತ್ತು ಕೂದಲು–ಹೆಚ್ಚು ಹೋಲಿಕೆ ಪ್ರಸನ್ನನದೆ.

ಅವನು ತೀರಾ ಮಗುವಾಗಿದ್ದಾಗ ಇನ್ನು ಹೆಚ್ಚು ಮುದ್ದಾಗಿರಬೇಕು– ನೀಲಿಮಾ ಕನಸುಗಳು ರಂಗು ರಂಗಾಗಿ ಅತ್ಯಂತ ವರ್ಣಮಯವಾಗಿ ಹರಡಿಕೊಳ್ಳುತ್ತಿದ್ದವು.

"ನಿಮ್ಗೆ ಗಂಡು ಮಗು ಇಷ್ಟಾನೋ, ಹೆಣ್ಣು ಮಗು ಇಷ್ಟಾನೋ ? ಈ ಎರಡು ಬೆರಳುಗಳಲ್ಲಿ ಒಂದನ್ನು ಮುಟ್ಟಿ" ಮೂರು ಬೆರಳುಗಳನ್ನು ಮಡಚಿಕೊಂಡು ಎರಡು ಬೆರಳುಗಳನ್ನು ಮುಂದಕ್ಕೆ ಚಾಚಿದಳು.

ಎಷ್ಟೇ ವಿದ್ಯಾವಂತೆಯಾಗಿದ್ದರೂ ಪ್ರಕೃತಿ ನೀಡಿದ ಸಹಜ ಹೆಣ್ಣಿನ ಸ್ವಭಾವವನ್ನು ಮೀರಿ ನಡೆಯಲಾರಳು.

ಎದ್ದು ಕೂತ ಪ್ರಸನ್ನ "ಇಂಥ ಸೆಂಟಿಮೆಂಟ್ಸ್ ನಿಂಗೂ ಇದ್ಯಾ, ಮೈ ಗಾಡ್...." ತಲೆಯ ಮೇಲೆ ಕೈಯೊತ್ತ.

ವೈಜ್ಞಾನಿಕ, ವೈಚಾರಿಕತೆ ಬಗ್ಗೆ ಅತ್ಯಂತ ಪ್ರತಿಭಾಪೂರ್ಣ ಭಾಷಣ ಮಾಡುವಂಥ ಮೇಧಾವಿ ನೀಲಿಮಾ.

ಅಚ್ಚರಿಯಿಂದ ಅವಳ ಮುಖವನ್ನೆ ದಿಟ್ಟಿಸಿದ. "ಕ್ವಿಕ್, ಬೇಗ.... ಮುಟ್ಟಿ" ಅವಸರಿಸಿದಳು. ಒಂದು ಬೆರಳನ್ನ ಮುಟ್ಟಿದ. ಹರ್ಷದಿಂದ ಉದ್ಗರಿಸಿದಳು "ಮೇಲ್ ಚೈಲ್ಡ್....ನಿಮ್ಮ ಹಾಗೆ....ಇರುತ್ತೆ" ಯಾಕೋ ಅತಿರೇಕವೆನಿಸಿತು. ಸಹಿಸುವುದು ಕಷ್ಟವೆಂದು ಮೇಲೆದ್ದ.

ಅಂದು ಅವನಲ್ಲಿ ಇಂಥ ಸಂದರ್ಭಗಳಲ್ಲಿ ಮೂಡುತ್ತಿದ್ದ ನವಿರಾದ ಭಾವನೆಗಳು ಇಂದು ಮಾಯವಾಗಿತ್ತು. ಯಾಕೆ ? ಇಂಥ ಪ್ರಶ್ನೆಗೆ ಉತ್ತರಿಸ ಲಾರ.

"ಹೊರಗಡೆ....ಹೋಗೋಣ...." ಉಸಿರುಗಟ್ಟುವಂತಾಯಿತು ಅವನಿಗೆ. ನೀಲಿಮಾ ಇನ್ನೊಂದು ದಿಂಬನ್ನ ಅವನತ್ತ ಎಸೆದಳು, "ಡ್ಯಾಮಿಟ್, ಹೊರಗಡೆ ....ಏನಿದೆ. ಫ್ರೆಂಡ್ಸ್, ಲೈಬ್ರರಿ, ಲ್ಯಾಬ್, ಸ್ಟೂಡೆಂಟ್ಸ್ ಎಲ್ಲಾ ಬೋರಿಡಿದು ಹೋಗಿದೆ. ಹೊಸ ರೀತಿಯ ಬದುಕ್ಕ ಬೇಕು."

ದಿಂಬನ್ನ ತೆಗೆದು ಪಕ್ಕಕ್ಕಿಟ್ಟು ಬಾತ್‌ರೂಂಗೆ ಹೋದ. ಬರುವ ವೇಳೆಗೆ ನೀಲಿಮಾ ಇರಲಿಲ್ಲ. ಸದಾ ಬಿಗಿದುಕೊಂಡಿರುತ್ತಿದ್ದ ಮುಖ ಈಚೆಗೆ ಅರಳು ತಿತ್ತು. 'ಸ್ಟಿಕ್ಸ್' ಎಂದವರ ಜೊತೆಯಲ್ಲೂ ಕೂಡ ನಾಲ್ಕು ಮಾತು ಹೆಚ್ಚಿಗೆ ಆಡುತ್ತಿದ್ದಳು. ನೀಲಿಮಾ ತುಂಬ ಬದಲಾಗಿದ್ದಳು.

ತಾಯಿ, ತಂದೆಯರ ಮಧ್ಯೆ ಕೂತು ಏನೋ ಹೇಳಿಕೊಂಡು ನಗು ತ್ತಿದ್ದಳು. ಆ ಬಾಗಿಲನ್ನು ಹಾಗೆಯೇ ಮುಚ್ಚಿ ಇನ್ನೊಂದು ಬಾಗಿಲಿನ ಮೂಲಕ ವರಾಂಡ ಹಾದು ಕಾಂಪೌಂಡಿಗೆ ಬಂದ. ಹೊಸ ಗಾಳಿ ಉಸಿರಾಡಿ ದಂತಾಯಿತು.

ಡಾಕ್ಟರನ್ನ ಪ್ರತ್ಯೇಕವಾಗಿ ಮಾತನಾಡಲು ಇಚ್ಛಿಸಿದ. ಇಬ್ಬರು ಜೊತೆ ಯಲ್ಲಿಯೇ ಡಾಕ್ಟರ್ ಫಿಲೋಮಿನಾ ಭೇಟಿ ಮಾಡಲು ಹೋಗುತ್ತಿದ್ದರು. ದಂಪತಿಗಳಿಬ್ಬರು ಡಾಕ್ಟರ್‌ಗಳು. ದೊಡ್ಡ ನರ್ಸಿಂಗ್‌ಹೋಂ ನಾಲ್ಕಾರು ಜನ ನೇಮಿತ ಡಾಕ್ಟರ್‌ಗಳಿದ್ದರೆ ಎಫಿಷಿಯಂಟ್ಸ್ ಸರ್ಜನ್, ಗೈನೋಕಾಲಾಜಿಸ್ಟ್, ಕಾರ್ಡಿಯಾಲಜಿಸ್ಟ್ ಮುಂತಾದವರು ಪಾರ್ಟ್ ಟೈಮ್ ವರ್ಕ್ ಮಾಡಲು ಬರುತ್ತಿದ್ದರು.

ನರ್ಸಿಂಗ್‌ಹೋಂ ಹಿಂಭಾಗದ್ದೇ ಡಾ॥ ಫಿಲೋಮಿನ ಮನೆ. ನೀಲಿಮಾ

ಹರ್ಷ ಹಾಗೆಯೇ ಉಳಿಯಬೇಕು, ಅವಳ ಆಸೆ ಆದಷ್ಟು ಬೇಗ ಸಫಲವಾಗ ಬೇಕೆಂಬುದೇ ಅವನ ಇಚ್ಛೆಯಾಗಿತ್ತು.

ರೆಸ್ಟ್‌ನಲ್ಲಿದ್ದ ಆಕೆ ಎದ್ದು ಬಂದರು.

"ಸಾರಿ ಫಾರ್ ದಿ ಡಿಸ್ಟರ್ಬ್...." ಕ್ಷಮೆ ಯಾಚಿಸುತ್ತಲೆ ಕೂತ.ನವಿರಾದ ನಗೆ ಬೀರಿದರು "ನೋ....ನೋ....ನಮ್ಗೆ ವೈಯಕ್ತಿಕ ಬದುಕೆ ಇಲ್ಲ. ನಮ್ಮ ಸಮಸ್ತವೂ ಪೇಷಂಟ್ಸ್‌ಗಳೆ"

ಬೋನ್‌ವಿಟಾ ನಂತರ ಹೇಗೆ ಪ್ರಾರಂಭಿಸಬೇಕೆಂದು ಯೋಚಿಸ ತೊಡಗಿದ. ನಿಧಾನವಾಗಿ ಅರೆ ಬರೆ ಅರ್ಥವಾಗುವಂತೆ ವಿವರಿಸಿದ.

"ಮಗುಗೋಸ್ಕರ ನೀಲಿಮಾ ಹುಚ್ಚಿಯಾಗ್ಬಿಟ್ಟಿದ್ದಾಳೆ. ಎಲ್ಲಾ ಬಿಟ್ಟು ಅದೇ ಮಾತು...." ಸಂಕೋಚದಿಂದ ಹೇಳಿದ.

ಆಕೆ ಸುಮ್ಮನೆ ಕೂತರು. ಸೋಮೇಶ್ವರ್ ಮನೆಯ ಫ್ಯಾಮಿಲಿ ಡಾಕ್ಟರ್. ಪೇಷಂಟ್ ಹಿಸ್ಟರಿ ಸಿಕ್ರೆಟ್ ಆಗಿರುವುದು ಡಾಕ್ಟರರ ಕರ್ತವ್ಯ.

"ಬೈ ದಿ ಬೈ....ಕೆಲವು ವಿಷ್ಯಗಳು ತೀರಾ ಪರ್ಸನಲ್ಲಾಗಿದ್ದರೂ ತಿಳ್ದು ಕೊಳ್ಳಬೇಕಾಗುತ್ತೆ. ನಿಮ್ದು ಲವ್ ಮ್ಯಾರೇಜ್ ಅಂತ ನೀಲಿಮಾ ತಿಳಿಸಿದರು, ಜಾತ್ಕ, ಗೋತ್ರ ನೋಡಿ ಆದ ಮದ್ವೆಯಲ್ಲ. ಆಕೆಯ ವಯಸ್ಸು ನಿಮ್ಗೆ ಗೊತ್ತಾ ? ನೀವು ಆಕೆನ ತುಂಬ ಲವ್ ಮಾಡ್ತೀರಂತಲೆ...." ತೊಡರಿದರು.

ಗೊತ್ತಿಲ್ಲವೆನ್ನುವಂತೆ ತಲೆಯಾಡಿಸಿದ.

"ನಲ್ವತ್ತು ವರ್ಷ....ಫಾರ್‌ಟಿ ಹಿಯರ್ಸ್. ತಾಯಿ ಆಗುವುದಕ್ಕೆ ತಡ ವಾದ ಸಮಯ. ಆದ್ರೂ....ಈಗ್ಲೂ ನಿರಾಶೆ ಪಡುವ ಅಗತ್ಯವಿಲ್ಲ." ಕೆಲವು ಸಮಸ್ಯೆಗಳನ್ನ ವಿವರಿಸಿದರು. ಕೇಳಿದರು, ತಿಳಿವಳಿಕೆ ನೀಡಿದರು.

ಮಾತುಗಳಲ್ಲಿ ಪ್ರಸನ್ನನ ಮೇಲೆ ಪೂರ್ಣ ಭರವಸೆ ಬಂತೇನೊ, ನೀಲಿಮಾ ಹಿಂದೆ ಅಂದರೆ ಬಿ.ಎಸ್. ಸಿ ಯ ಕೊನೆಯ ವರ್ಷದಲ್ಲಿ ಎಂ.ಎಸ್. ಸಿ.ಯ.ಕೊನೆಯ ವರ್ಷದಲ್ಲಿ ಎರಡು ಸಲ ಅಬಾರ್ಷನ್ ಮಾಡಿಸಿಕೊಂಡಿದ್ದನ್ನ ಹೇಳಿದರು.

"ಈಗ ಅದನ್ನೆಲ್ಲ ನೆನಪಿಸಿಕೊಂಡು ಕೇಸ್‌ನ ಸ್ಟಡಿ ಮಾಡಬೇಕಾಗುತ್ತೆ" ಸಹಜವಾಗಿ ತಿಳಿಸಿದರು.

ಪ್ರಸನ್ನನ ಮನದಲ್ಲಿ ಭಯಂಕರ ವಿಪ್ಲವ. ಮಿದುಳಿನಲ್ಲಿ ಜ್ವಾಲಾಮುಖಿ.

ಅಂಥ ಶಂಕೆಯೇ ಅವನಲ್ಲಿ ಉದ್ಭವಿಸಿರಲಿಲ್ಲ. ವಯಸ್ಸಿನ ಬಗ್ಗೆ ತಲೆ ಕೆಡಿಸಿ ಕೊಳ್ಳಲಾರ–ಆದರೆ ಒಂದು ರೀತಿಯ ಅಂಜಿಕೆ ಅವನಲ್ಲಿ ತಲೆ ಹಾಕಿತು.

"ಥ್ಯಾಂಕ್ಯೂ....ಡಾಕ್ಟರ್...." ಮೇಲೆದ್ದ.

"ಇದು ಸೀಕ್ರೆಟಾಗಿಯೆ ಇರಲಿ. ಮಗುವಿನ ಬಗ್ಗೆ ತೀರಾ ಉತ್ಸಾಹದಿಂದ ರುವ ನೀವು ತಿಳಿದಿರುವುದು ಅಗತ್ಯ. ಗಾಡ್ ಈಸ್ ದೇರ್. ನೀಲಿಮಾಗೂ ಒಂದು ಮಗುವಾಗ್ಲಿ...." ಕೊನೆಗೆ ಹರಿಸಿದರು.

ಅವರಿಗೆ ಇಂಥ ವಿಷಯಗಳು ತೀರಾ ಸಾಮಾನ್ಯ. ಭುಜದವರೆಗೂ ಕತ್ತರಿಸಿ ಕೊಂಡ ಕೂದಲು, ಮುಖದ ಮೇಕಪ್, ತುಟಿಯ ಬಣ್ಣ, ಮಾಟವಾದ ನಿಲುವು ಅವನನ್ನ ವಂಚಿಸಿದ್ದೆ ? ಅದನ್ನ ಒಪ್ಪಲಾರ. ಉಸಿರುಗಟ್ಟುವ ವಾತ ವರಣದಿಂದ ಹೊರಬರಲು ಪರ್ಯಾಯವಾದುದನ್ನು ಹುಡುಕುತ್ತಿದ್ದ. ಅನಾಯಾಸವಾಗಿ ಬಿದ್ದ.

ಅಲ್ಲಲ್ಲಿ ಸುತ್ತಾಡಿ ರಾತ್ರಿಯೇ ಪ್ರಸನ್ನ ಮನೆಗೆ ಬಂದಿದ್ದು. ನೀಲಿಮಾದು ಘೋರ ಅಪರಾಧವೆನ್ನಲಾರ, ಸ್ತ್ರೀ, ಪುರುಷರಿಗೆ ಬೇರೆ ಬೇರೆ ನ್ಯಾಯಗಳಲ್ಲ, ತಾನು ಎರಡು ಮಕ್ಕಳ ತಂದೆ. ನಿವೇದಿತಾ ಜೊತೆ ಆರೂವರೆ ವರ್ಷ ದಾಂಪತ್ಯ ಜೀವನ ಅನುಭವಿಸಿದವನು.

ಮಾಮೂಲಾಗಿಯೇ ಮಾತಾಡಿ ಊಟ ಮಾಡಿದ.

ಪಾರದರ್ಶಕ ನೈಟಿ ತೊಟ್ಟ ನೀಲಿಮಾ ಒಂದು ರೀತಿಯಲ್ಲಿ ಹುಚ್ಚಾಗಿ ದ್ದಳು. ಅವನು ಹೆಣ್ಣಿನಲ್ಲಿ ಈ ಗುಣವನ್ನು ಇಷ್ಟಪಡಲಾರ. ನಿವೇದಿತಾ ಗುಣ ಸ್ವಭಾವ, ನಡವಳಿಕೆ ತೀರಾ ತೂಕ ಉಳ್ಳದು. ಹದ್ದು ಮೀರಿದ ವರ್ತನೆ ಅವಳದಲ್ಲ.

ಒಂದು ಕಾದಂಬರಿ ಹಿಡಿದು ಕುಳಿತ. ಓದಿನಲ್ಲಿ ಮಗ್ನನಾದರೆ ಹೆಚ್ಚು ಕಾನ್ಸಂಟ್ರೇಷನ್‌ನಿಂದ ಓದಬಲ್ಲ.

"ಈಸ್ ಇಟ್ ನೆಸಸರಿ ?" ಅವನ ಕೈಯೊಳಗಿನ ಪುಸ್ತಕ ಕಿತ್ತುಕೊಂಡಳು. ಷಾಕ್ ಹೊಡೆದಂತಾಯಿತು ಅವನಿಗೆ. ನೀಲಿಮಾ ಕೂಡ ಅಂಥ ಚಂಚಲ ಸ್ವಭಾವದ ಹೆಣ್ಣಲ್ಲ "ಸಾರಿ, ಓದೋಕೆ ಬಿಡು" ಎಂದ. ಅವನತ್ತ ಒಂದು ತರಹ ನೋಡಿ ಪುಸ್ತಕ ಕೊಟ್ಟು ಹೋಗಿ ಮಲಗಿದಳು.

ಪುಟ ತಿರುವಲಾಗಲಿಲ್ಲ ಪ್ರಸನ್ನನಿಗೆ.

ಹೊಸ ತಿರುವು ನವ ಚೈತನ್ಯದ ಜೀವನವನ್ನು ದಯಪಾಲಿಸುತ್ತದೆ ಯೆಂದು ಕೊಂಡಿದ್ದ. ಇಲ್ಲಿ ಬರೀ ತಿರುವು ಮುರುವು. ಸೋಫಾದಲ್ಲಿಯೇ ಮಲಗಿ ಬಹಳ ಹೊತ್ತಿನ ಮೇಲೆ ನಿದ್ರಿಸಿದ.

ಶುಭ್ರ ಮನಸ್ಸಿನ ನಿವೇದಿತಾ ಪ್ರಾಣಕ್ಕಿಂತ ಹೆಚ್ಚಾಗಿ ಅವನನ್ನ ಪ್ರೀತಿಸುತಿದ್ದಳು. ಅವನನ್ನು ಬಿಟ್ಟು ಅವಳ ಭವ್ಯ ಕನಸು ಇರಲಿಲ್ಲ.

ದಿನಗಳು ತೀರಾ ಸತ್ವ ಕಳೆದುಕೊಂಡು ಉರುಳುತ್ತಿದ್ದವು. ಅವನು ತನ್ನ ವೈಯಕ್ತಿಕ ಜೀವನಕ್ಕಿಂತ ಪ್ರಾಧ್ಯಾಪಕ ವೃತ್ತಿ, ಸ್ಟೂಡೆಂಟ್ಸ್‌ಗಳನ್ನೆ ಹೆಚ್ಚಾಗಿ ಪ್ರೀತಿಸತೊಡಗಿದ.

ಒಮ್ಮೆ ಪ್ರಸನ್ನ, ನಿವೇದಿತಾ ಮಾರ್ಕೆಟ್ ಸೆಂಟರ್‌ನಲ್ಲಿ ಮೀಟ್ ಆದರು. ಅವರು ಒಬ್ಬರನ್ನೊಬ್ಬರು ನೋಡಿ ಕೆಲವು ತಿಂಗಳುಗಳೇ ಆಗಿತ್ತು.

ಅವನೆದೆಯಲ್ಲಿ ಸಪ್ತ ಸಾಗರಗಳ ಭೋರ್ಗರೆತ, ಎಲ್ಲೋ ದೂರದಲ್ಲಿ ಮಧುರವಾದ ವೀಣೆಯ ನಾದ, ಪ್ರಸನ್ನನ ಕಣ್ಣುಗಳು ಸುಂದರವಾಗಿ ನಕ್ಕವು.

"ಹಲೋ....ನಿವೇದಿತಾ...." ಸ್ವರ ಜೇನಿನಷ್ಟು ಸಿಹಿ. ಕಣ್ಣುಗಳಲ್ಲಿ ಕೋಲ್ಮಿಂಚು "ಹಲೋ...." ಎಂದಳು ಗಂಭೀರವಾಗಿ. ನೇರವಾಗಿ ದಿಟ್ಟಿಸಿದ ಸ್ವಲ್ಪ ಸಣ್ಣಗಾಗಿದ್ದಾಳೆನಿಸಿತು. ಅವನ ಕನ್ನಡಕ ಹಾಕಿದ ಕಣ್ಣುಗಳನ್ನ ನೋಡಿ ಅವಳಿಗೆ ನಗು ಬಂತು "ಕನ್ನಡಕದ ಫ್ರೇಮ್ ನಿಮ್ಮ ಮುಖಕ್ಕೆ ಮ್ಯಾಚ್ ಆಗೋಲ್ಲ." ಸ್ವತಂತ್ರಪಹಿಸಿ ಒಂದು ಮಾತು ಹೇಳಿದಳು. ದುಡುಕಿದನೇನೋ ಎಂದು ನಂತರ ಯೋಚಿಸಿದಳು ಕೂಡ.

"ಓ ಮೈ ಗಾಡ್, ಹೇಗೂ ಸಿಕ್ಕಿದ್ದೀಯಾ, ನೀನೇ ಚ್ಯೂಸ್ ಮಾಡಿ ಕೊಡ್ಬೇಕು" ತುಂಟತನದಿಂದ ಹೇಳಿದ.

ಸ್ವಲ್ಪ ಪಕ್ಕಕ್ಕೆ ಸರಿದಳು "ನಂಗೆಲ್ಲಿ ಪುರಸತ್ತು? ನೀವು ಆರಿಸಿ ಕೊಂಡಿದ್ದೀರೀಂದ್ರೆ ಚೆನ್ನಾಗೆ ಇರುತ್ತೆ....ಬರ್ತೀನಿ" ಹೊರಟಳು.

"ಏಯಾ....ನಿವೇದಿತಾ" ಅವನ ಮಾತು ಹಿಡಿದು ನಿಲ್ಲಿಸಿತು. "ಇವತಾದ್ರೂ ಕಾಫೀಗೆ ಕಂಪನಿ ಕೊಡು. ಸೌಜನ್ಯ ನಿನ್ನ ಬಿಟ್ಟು ಹೋಗಿರೋಲ್ಲಂತ ನನ್ನ ನಂಬ್ಕೆ" ಅವಳ ಕಾಲುಗಳಿಗೆ ಬೇಡಿ ತೊಡಿಸಿ ದಂತಾಯಿತು.

ಪ್ರಸನ್ನನ ಜೊತೆ ಹೆಜ್ಜೆ ಹಾಕಿದಳು ಹೋಟಲ್ ನ್ಯೂವೇವ್‌ನತ್ತ. ಯಾವುದೋ ಜೋಕ್ ಹಾರಿಸಿ ಅವಳನ್ನು ನಗಿಸುತ್ತಿದ್ದ.

ವೆಹಿಟರ್ ಬರುವ ಮುನ್ನ ಮೆನು ಕಾರ್ಡ್ ನೋಡುತ್ತ ಅವಳತ್ತ ವಾರೆನೋಟ ಬೀರಿದ "ಒಂದು ಕಂಡೀಷನ್, ಇಂದು ನೀನು ಬಿಲ್ ಕೊಡ್ಬಾರ್ದು. ಕೊಡೋಕೆ ಬಿಡ್ಲಾರೆ. ಕೊಟ್ಟರೆ ಖಂಡಿತ ಪನೀಷ್‌ಮೆಂಟ್...." ಛೇಡಿಸಿದ.

"ಈಗ ಕೊಟ್ಟಿರೋ ಪನಿಷ್‌ಮೆಂಟ್‌ಗಿಂತ ಭಯಂಕರವಾದದ್ದು ಇಲ್ಲವೆಂದೇ ನನ್ನ ಅಭಿಪ್ರಾಯ...."ಎಂದವಳು ತುಟಿ ಕಚ್ಚಿಕೊಂಡಳು. ದುಡಿಕಿದೆನೆಂದು ಪೇಚಾಡಿದಳು.

ಕನ್ನಡಕದ ಹಿಂದಿನ ಅವನ ಕಣ್ಣುಗಳಲ್ಲಿ ನೋವು ಕಾಣಿಸಿಕೊಂಡಿತು "ನನಗೆ ನಾನೆ ವಿಧಿಸಿಕೊಂಡ ಪನಿಷ್‌ಮೆಂಟ್ ನಿವೇದಿತಾ. ನಿನ್ನ ಹಾಗೆ ಬೇರೆಡೆ ಬೆಟ್ಟು ತೋರೋಕೂ ನನ್ನಿಂದ ಸಾಧ್ಯವಿಲ್ಲ" ಅವನ ದನಿ ಆಳದಿಂದ ಬಂದಂತಿತ್ತು.

ತಕ್ಷಣ ಕೈ ತೊಳೆಯಲು ಪ್ರಸನ್ನ ಎದ್ದು ಹೋದ ಹಿಂದೆಯೇ ಎದ್ದು ಹೊರಟು ಬಿಡಲು ನಿರ್ಧರಿಸಿದವಳು ಬಾಗಿಲವರೆಗೂ ಹೋಗಿ ಮತ್ತೆ ಹಿಂದಿರುಗಿ ಬಂದು ಕೂತಳು.

ಕೈಯೊರೆಸುತ್ತ ಬಂದ ಪ್ರಸನ್ನನ ಕಣ್ಣುಗಳು ಮೃದುವಾದವು "ಗುಡ್, ನಿನ್ನಲ್ಲಿರೋ ಒಳ್ಳೆತನನ ಯಾವ್ದು ಕರಗಿಸಲಾರ್ದು" ಕೂತ.

ಅದೇ ಹಲ್ವಾ, ಟೋಮಾಟೋ ಅಮ್ಲೆಟ್ ಎಸೆದು ಹೋಗಲಾಗಲಿಲ್ಲ ಅವಳಿಗೆ. ಕಾಲೇಜಿನಲ್ಲಿ ನಡೆದ ಸಣ್ಣ ಪುಟ್ಟ ತಮಾಷೆಗಳನ್ನು ಮೆಲುದನಿಯಲ್ಲಿ ಹೇಳುತ್ತ ಪ್ರಸನ್ನ ಸ್ವಲ್ಪ ಹಗುರವಾಗಿಸಿದ ಸಂದರ್ಭವನ್ನ.

"ಕನ್ನಡಕ ಹಾಕಿದ ಕಾರಣ...." ಮುಂದಿನ ಮಾತನ್ನು ನುಂಗಿದಳು. "ಕಣ್ಣಿನ ತೊಂದರೆಯಲ್ಲ, ಅಸಾಧ್ಯ ತಲೆ ನೋವು, ಸ್ಪೆಕ್ಸ್ ತೆಗೆಯದೆಯೇ ನಿದ್ದೆ ಮಾಡೀಂತ ಡಾಕ್ಟ್ರು ಹೇಳಿದ್ದಾರೆ" ನಕ್ಕುಬಿಟ್ಟ. ಯಾಕಿರಬಹುದು ತಲೆ ನೋವು ? ಚಿಂತಿಸುವಂತಾಯಿತು ನಿವೇದಿತಾಗೆ.

ಗೋದಾವರಿ ತಮಗಿದ್ದ ತಲೆನೋವಿಗೆ ಬಳಸಿದ ಆಯುರ್ವೇದಿಕ್ ಔಷಧಿಯ ಬಗೆಗೆ ಆಗಾಗ ಹೇಳುತ್ತಿದ್ದರು.

"ಈಗ ಕಡಿಮೆ ಆಗಿದ್ಯಾ ?" ಕೇಳಿದಳು.

ಎಡಗೈಯಲ್ಲಿ ಕನ್ನಡಕ ತೆಗೆದು ಟೇಬಲಿನ ಮೇಲಿಟ್ಟ. "ಸದಾ ನೋವು ಇರೋದ್ರಿಂದ ಕಡಿಮೆ, ಜಾಸ್ತಿಯ ಅಂತರವೇ ಗೊತ್ತಿಲ್ಲ. ತಲೆ ಇರೋ ಹಾಗೇ ನೋವು ಕೂಡ ಅಂದ್ಕೊಂಡ್ಬಿಟ್ಟಿದ್ದೀನಿ." ಎಂದ ನಸು ನಗುತ್ತ. ಇದು ನಿಜವು ಹೌದು.

ನಿವೇದಿತಾ ಮುಖದ ಅಳಿದುಳಿದ ಗೆಲುವು ಹಿಂಗಿ ಹೋಯಿತು.

"ಛೆ, ಇದು ಸರಿ ಇಲ್ಲ" ಎಂದಳು ಅನ್ಯಮನಸ್ಕಳಾಗಿ.

"ಯಾವ್ದು ಸರಿಯಿಲ್ಲ ? ತಲೆ ಇರೋದೋ, ತಲೆ ನೋವು ಇರೋದೋ ?" ಈಗ ಅವನ ನಗುವಿಗೆ ನಿವೇದಿತಾ ನಗು ಕೂಡ ಸೇರಿತು. "ಗೋದಾವರಿ ಮೇಡಮ್ ಯಾವ್ದೋ ಆಯುರ್ವೇದಿಕ್ ಔಷಧಿಯ ಬಗ್ಗೆ ಹೇಳುತ್ತಿದ್ದರು. ವಿಚಾರ್ಸಿ....ತಿಳಿಸ್ತೀನಿ ನೀವು...." ಅಂದವಳು ಸುಮ್ಮನಾದಳು.

ಅವನೇ ಬಿಲ್ ತೆತ್ತ, ಇಬ್ಬರು ಹೊರಗೆ ಬಂದರು. ಇನ್ನು ಕೆಲವು ದಿನಗಳೋ, ತಿಂಗಳುಗಳೋ ಅವಳನ್ನ ನೋಡಲು ಕಾಯಲು ಅವನಿಂದಾಗದು. ಅದು ಭಯಂಕರ ಹಿಂಸೆ. ಪ್ರತಿಯೊಂದು ಹೆಣ್ಣಿನಲ್ಲಿಯು ನಿವೇದಿತಾ ಮುಖವನ್ನೆ ಅರಸುವಷ್ಟು ಹುಚ್ಚನಾಗಿ ಬಿಡುತ್ತಿದ್ದ.

"ಯಾವಾಗ ತಿಳಿಸ್ತೀಯಾ?" ಅವಳು ಕೈ ಬೀಸಿ ಹೊರಡುವ ಮುನ್ನವೇ ಕೇಳಿದ "ಬಹಳ ಬೇಗನೇ ಸ್ವಲ್ಪ ದಿನವಾದ್ರೂ ತುಂಬ ಓದೋದು, ನಿದ್ದೆ ಕಡಿಮೆ ಮಾಡೋದು....ಬಿಡಿ" ಎಂದವಳು ಸರಸರನೆ ನಡೆದು ಬಿಟ್ಟಳು. ಅವಳ ಸ್ವರದಲ್ಲಿನ ಕಾಳಜಿಗೆ ಅವನ ಮನ ತಂಪಾಯಿತು. 'ಪ್ರೇಮ, ಪ್ರೀತಿಗೆ ಸಾವಿಲ್ಲ' ಉಸಿರಿ ಹೋದಂತಾಯಿತು.

ಕನಿಷ್ಟ ಐದು ನಿಮಿಷಗಳಾದರೂ ಹಾಗೆಯೇ, ಅಲ್ಲಿಯೇ ನಿಂತಿದ್ದ. ಓಡಾಡುವ ಜನ ಅವನ ಹಿಂದು ಮುಂದು ಬಳಸಿಕೊಂಡೇ ನಡೆದಾಡಿದರು.

ಗೋದಾವರಿ ಮೇಡಮ್‌ನ ಮನೆಯಲ್ಲಿ ಮೀಟ್ ಮಾಡೋವರೆಗೂ ಅನ್ಯಮನಸ್ಕಳಾಗಿಯೇ ಇದ್ದಳು. ಮನದಿಂದ ಪ್ರಸನ್ನನ ತಲೆ ನೋವಿನ ಸಂಗತಿಯನ್ನು ತೊಡೆದು ಹಾಕಲಾರದೆ ಸೋತು ಹೋಗಿದ್ದಳು.

ರಾತ್ರಿ ಪುರಸತ್ತಾಗಿ ಕೂತ ಗೋದಾವರಿಯವರಲ್ಲಿ ವಿಚಾರಿಸಿದಳು.

"ನಿಮ್ಮ ತಲೆ ನೋವು..."ಅವಳು ಮಾತು ಪೂರ್ತಿ ಮಾಡುವ ಮುನ್ನವೇ ನಕ್ಕು ಬಿಟ್ಟಳು. "ಪ್ರಸನ್ನನ ತಲೆನೋವಿನ ವಿಷ್ಯ ತಾನೇ ? ಮೊನ್ನೆ ಗ್ಲಾಸ್ ಬದಲಾಯಿಸಲು ಶ್ವೇತ ಆಪ್ಟಿಕಲ್ಸ್‌ಗೆ ಹೋಗಿದ್ದಾಗ ಸಿಕ್ಕಿದ್ರು. ಆಗ ತಲೆ ನೋವಿನ ವಿಷ್ಯ ತಿಳಿಸಿದ್ರು, ಈಗ ಹೇಗಿದೆಯಂತೆ ?" ಅವರೇ ಕೇಳಿದರು.

ಸಂಕೋಚ, ಹಿಂಜರಿಕೆ ಇಲ್ಲದೆ ತಿಳಿಸಿದಳು.

"ಸದಾ ಇರೋ ತಲೆ ನೋವುಂದ್ರು, ಫಾರ್ಮಸಿ ಅಥವಾ ಔಷಧದ ಬಗ್ಗೆ ನೀಲಿಮಾಗೆ ತಿಳ್ಸಿ ಬಿಡಿ. ಕೆಲವು ವಿಷ್ಯದಲ್ಲಿ ಪ್ರಸನ್ನ ಸ್ವಲ್ಪ ನಿರ್ಲಕ್ಷದವ್ರು."

ದಿಟ್ಟಿಸಿ ನೋಡಿದರು ಗೋದಾವರಿ. ಬದುಕನ್ನು ನಿವೇದಿತಾ ಆಶ್ಚರ್ಯಕರವಾದ ರೀತಿಯಲ್ಲಿ ಸ್ವೀಕರಿಸಿದ್ದಳು. ಪ್ರಸನ್ನನ ಪ್ರಸ್ತಾಪ, ಮುರಿದು ಹೋದ ವೈವಾಹಿಕ ಬದುಕು ಈ ಬಗ್ಗೆ ಸದಾ ಮಾತಾಡಿಯೋ, ಕಣ್ಣೀರು ಸುರಿಸಿಯೋ ಅವಳು ಮಾಡಲಿಲ್ಲ, ಅವಳು ಬದುಕಿನ ಬಗೆಗೆ ಒಂದು ಲಕ್ಷ ಇಟ್ಟುಕೊಂಡಿದ್ದಳು, 'ಇದು ನಿವೇದಿತಾ ಗ್ರೇಟ್‌ನೆಸ್' ಎಂದು ಕೊಂಡರು.

"ಪೂರ್ತಿ ಕೇಸ್ ಹಿಸ್ಟರಿ ತಿಳಿದೆ ಔಷ್ದಿ ಕೊಡೋದು. ಫೋನ್ ಮಾಡಿ ಫಾರ್ಮಸಿ ವಿಳಾಸ ಕೊಡ್ತೀನಿ" ಅವಳ ಕೆಲಸವನ್ನು ಹಗುರಗೊಳಿಸಿದರು. ಅವಳು ನಿಶ್ಚಿಂತಳಾದಳು.

ಗೋದಾವರಿ ಫೋನ್ ಮಾಡಿದಾಗ ನೀಲಿಮಾನೆ ರಿಸೀವರ್ ಎತ್ತಿದ್ದು, ಅಂದು ನೀಲಿಮಾ ಕೂಡ ಪ್ರಸನ್ನನ ಜೊತೆ ಇದ್ದುದ್ದರಿಂದ ಆಕೆಗೆ ಹೇಳಲು ಸುಲಭವಾಯಿತು.

"ಸರ್‍ಯಾಗಿ ಗೊತ್ತಿಲ್ಲ, ತಿಳಿಸ್ತೀನಿ" ಫೋನಿಟ್ಟಳು.

ಅವಳು ಬರೀ ಗೃಹಿಣಿಯಲ್ಲ, ಪ್ರೊಫೆಷನ್ ಮೂಲಕ ಸಮಾಜದ ಹೊಣೆಗಾರಿಕೆಯನ್ನು ಹೊತ್ತಿದ್ದಳು.

ವಿಷಯ ನೀಲಿಮಾ ಮುಖಾಂತರ ತಿಳಿದು ಫಾರ್ಮಸಿ ಅಡ್ರೆಸ್‌ನ ಚೀಟಿ ಅವನ ಮುಂದೆ ತಳ್ಳಿದಾಗ ಅವನ ಉತ್ಸಾಹದ ಮೇಲೆ ಬಂಡೆ ಎಳೆದಂತಾ ಯಿತು. ಅವನಿಗೆ ತಲೆನೋವಿನ ಉಪಶಮನಕ್ಕಿಂತ, ನಿವೇದಿತಾನ ಕೆಲವು ನಿಮಿಷಗಳಾದರೂ ನೋಡಬಹುದು, ಅವಳ ಮಾತುಗಳನ್ನು ಕೇಳಬಹುದೆಂದು ಕಾತುರನಾಗಿದ್ದ.

ಕ್ರೀಮ್ ಹಚ್ಚಿದ ಕೂದಲನ್ನು ಬಾಚುತ್ತ ನೀಲಿಮಾ "ಈಗ ಹೇಗಿದೆ ತಲೆನೋವು ? ಬೇಕಿದ್ರೆ....ಕಾಲೇಜಿನಿಂದ ಬರೋವಾಗ ಆಯುರ್ವೇದಿಕ್ ಫಾರ್ಮಸಿಗೆ ಹೋಗ್ಬರೋಣ" ಎಂದಳು.

ಪ್ರಸನ್ನ ತಲೆಯನ್ನ ಮುಟ್ಟಿ ನೋಡಿಕೊಂಡು "ಸ್ವಲ್ಪ ನೀನೆ ನೋಡು. ನಂಗೆ ತಲೆನೋವು ಇರದೇ ಇರೋವಾಗಿನ ಫೀಲಿಂಗ್ಸ್ ಮರ್ತುಹೋಗಿದೆ" ಎನ್ನುತ್ತ ನಕ್ಕ.

ನೀಲಿಮಾ ಜೋರಾಗಿ ನಕ್ಕು ಬಿಟ್ಟಳು.

ಒಂದು ರೀತಿ ಸಡಗರದಿಂದ ಇದ್ದಳು. ಈ ಸಲ ತಿಂಗಳ ಮೇಲೆ ಏಳು ದಿನಗಳಾದರೂ ಹೊರಗಾಗಿರಲಿಲ್ಲ, ನಾಲ್ಕು ಸಲ ಡಾಕ್ಟರಲ್ಲಿ ಸಲಹೆ ಪಡೆದು, ಒಮ್ಮೆ ತಪಾಸಣೆಗೆ ಕೂಡ ಹೋಗಿ ಬಂದಿದ್ದಳು.

"ಈಗ್ಲೇ ಏನು ಹೇಳೋಕಾಗೋಲ್ಲ ಆರಾಮಾಗಿರು. ಓಡಾಟ ಕಡಿಮೆ ಮಾಡು" ಇಷ್ಟು ಸೂಚನೆಯ ಜೊತೆ ಒಂದಿಷ್ಟು ಟಾನಿಕ್, ಮಾತ್ರೆಗಳನ್ನು ಬರೆದುಕೊಟ್ಟಿದ್ದರು.

ಹಾಡುತ್ತ ತುಟಿಗಳಿಗೆ ಬಣ್ಣ ಶೀಡಿ ಮುಗಿಸಿದಳು.

"ಒಂದೊಂದು ದಿನ ಸರಿಯೋಕೆ ಎಷ್ಟು ಹೊತ್ತು ಹಿಡಿಸುತ್ತೆ ಛೀ.... ಬೇಗ ಬೇಗ ಸರಿದು ಹೋಗೋಕೇನು ?" ಗುಣಗುಟ್ಟಿದಳು. ಪ್ರಸನ್ನ ಮಾತಾಡದೇ ಷೂ ಕಟ್ಟಿದ.

ಅವಳ ಸಂತೋಷದಲ್ಲಿ ಪಾಲ್ಗೊಳ್ಳುತ್ತಿದ್ದ, ಅತಿಶಯ, ಅತಿರೇಕ ಮಾತ್ರ ಅವನಿಗೆ ಇಷ್ಟವಾಗದು.

ಬಂದ ನೀಲಿಮಾ ಅವನ ಎರಡು ಭುಜದ ಮೇಲು ಕೈಗಳನ್ನು ಇಟ್ಟಳು. "ಡಾಕ್ಟ್ರು, ತುಂಬ ಆಯಾಸ ಮಾಡಿಕೊಳ್ಳೋದ್ಬೇಡಾಂತ ಅಂದಿದ್ದಾರೆ."

"ರಜ ಹಾಕಿ, ಬೆಡ್ ರೆಸ್ಟ್ ತಗೋ." ಸಲಹೆ ಕೊಟ್ಟ.

"ಹೇಗೆ ಸಮಯ ಕಳೆಯೋದು ? ನೀವು ರಜ ಹಾಕ್ಬಿಡಿ" ಅವಳ ಮಾತಿಗೆ ಪ್ರಸನ್ನ ಭಯ ನಟಿಸಿದ "ಎಂದೋ ಹುಟ್ಟುವ ಮಗುವಿಗಾಗಿ ಈಗೀ ನಿಂದಲೇ ಸಾಕಷ್ಟು ಪ್ಲಾನ್‌ಗಳನ್ನು ತಯಾರಿಸಿ ಇಟ್ಟಾಗಿದೆ. ಮತ್ತೆ ಮತ್ತೆ ಅದೇ ರಿಪೀಟ್. ಈಗ ಬಂದಿರೋ ಸಾಧಾರಣ ತಲೆನೋವಿಗೆ ಕನ್ನಡಕ

ಹಾಕಿಯಾಗಿದೆ. ಆಗ ಬರೋ ನೋವನ್ನ ವಾಸಿ ಮಾಡಿಕೊಳ್ಳಲು ನಿನ್ನಣ್ಣನಿಗೆ ಇನ್‌ಫರ್ಮೇಷನ್ ಕೊಟ್ಟು ವಿದೇಶಕ್ಕೆ ಹೋಗ್ಬೇಕಾಗುತ್ತೆ. ನನ್ನ ಬಗ್ಗೆ ಕರುಣೆ ಇರಲಿ" ಅವಳ ಕೆನ್ನೆ ಸವರಿದ.

ನೀಲಿಮಾ ಕೈಗಳು ಹಿಂದಕ್ಕೆ ಸರಿದವು. ಮುಖ ದಪ್ಪಗೆ ಮಾಡಿಕೊಂಡಳು.

"ಹೆಚ್ಚು ಆಯಾಸವೇನು ಆಗೋಲ್ಲ. ಕಾರನ್ನು ನಾನು ನಿಧಾನವಾಗಿ ಡ್ರೈವ್ ಮಾಡ್ತೀನಿ" ಓಲೈಸಿದ.

ಅಷ್ಟರಲ್ಲಿ ಕೋಣೆಯ ಬಾಗಿಲ ಮೇಲೆ ಟಕ ಟಕ ಸದ್ದು."ಒಳಗೆ ಬರಲು ಪರ್ಮೀಷನ್‌ವುಂಟೆ ?" ಪಟೇಲ್‌ನ ಸ್ವರ.

ಒಂದು ಮೊಟಕಿ ಕೈ ಹಿಡಿದೆ ಒಳಗೆ ಕರೆತಂದ ಸ್ನೇಹಿತನನ್ನ ಪ್ರಸನ್ನ.

"ವನ್ ಮಿನಿಟ್...." ನೀಲಿಮಾ ಹೊರಗೆ ಹೋದಳು.

"ಬೇಗ....ಬಂದ್ಬಿಡೀನಿ" ಬೆಡ್‌ರೂಮಿನತ್ತ ಓಡಿದ ಪ್ರಸನ್ನ. "ಡೋಂಟ್ ಮೈಂಡ್, ಕಾಲೇಜಿಗೆ ಹೋಗ್ತಾ ಮಾತಾಡೋಣ."

ಹಳೆಯ 'ಸನ್ ಡೇ' ಕೈಗೆತ್ತಿಕೊಂಡ. ನೀಲಿಮಾ ಸ್ವೀಟ್ಸ್ ತಂದಿಟ್ಟು ಸಂಕೋಚವಿಲ್ಲದೆ ಗುಡ್ ನ್ಯೂಸ್ ಹೇಳಿಬಿಟ್ಟಳು. ಪಟೇಲ್ ಸಂತೋಷ ವ್ಯಕ್ತ ಪಡಿಸಿ ಶುಭಕೋರಿದ.

ಹೊರಗೆ ಬಂದ ಪ್ರಸನ್ನನಿಗೆ ತಿಳಿದು ನಿರ್ವಿಣ್ಣನಾದ. ಇದನ್ನ ಸೂಕ್ಷ್ಮ ವಾಗಿ ಗಮನಿಸಿದ ಪಟೇಲ್.ನೀಲಿಮಾಗೆ ಮಗುವಾಗುವುದು ಇವನಿಗೆ ಬೇಡವೆ?

ಮತ್ತೆ ಡಾಕ್ಟರ್‌ಗೆ ಫೋನ್ ಮಾಡಿದ ನೀಲಿಮಾ ಮನೆಯಲ್ಲಿಯೇ ಉಳಿಯಲು ನಿಶ್ಚಯಿಸಿದಾಗ ಪ್ರಸನ್ನ, ಪಟೇಲ್ ಮಾತ್ರ ಹೊರಟರು.

ದಾರಿಯಲ್ಲಿ ರೇಗಿಸಿದ ಪಟೇಲ್ "ಪ್ರಬುದ್ಧತೆಯ ಮೇರು ಪರ್ವತದ ಮೇಲಿರುವ ಹೆಣ್ಣಿಗೂ ಮಗುವಿನ ಬಯಕೆ ಅಂತ ಆಶ್ಚರ್ಯನಾ ? ನೀನು ಫೂಲ್....ಹೆಣ್ಣು....ಹೆಣ್ಣೇ...." ಛೀಮಾರಿ ಹಾಕಿದಂತಿತ್ತು.

ಕರ್ಚಿಫ್‌ನಿಂದ ಮುಖವೊರೆಸಿದ ಪ್ರಸನ್ನ.

"ಅದೆಲ್ಲ ಅಲ್ಲ, ಏನು ಇಲ್ದೇ ಇರೋವಾಗ ನ್ಯೂಸ್ ಹರಡೋದು ಮೂರ್ಖತನ. ಹಿಮಾಲಯದ ತಳದಲ್ಲಿಯೇ ನಿಂತು ತಾನು ಗೌರಿಶಂಕರ ಏರಿದೆ

ನೆಂದು ಘೋಷಿಸುವುದು ಎಷ್ಟು ಸರಿ ?" ಅವನ ಮಾತುಗಳ ಅರ್ಥ ಪಟೇಲ್‌ಗೆ ಆಗಲಿಲ್ಲ.

ಇರುವ ವಿಷಯವನ್ನೆಲ್ಲ ಪಟೇಲ್‌ಗೆ ತಿಳಿಸಿದ. "ಮೂರು ತಿಂಗಳು ತುಂಬದ ಹೊರತ್ತು ಪ್ರೆಗ್ನೆನ್ಸಿಯ ಬಗ್ಗೆ ಏನು ಹೇಳೋಕಾಗೋಲ್ಲಂತ ಡಾಕ್ಟ್ರು ಹೇಳಿದ್ದಾರೆ. ಇವ್ಳ....ಆತುರ....ಆರಾಟಕ್ಕೆ....ಮಗು ಒಂಬತ್ತು ದಿನದಲ್ಲಿ ಹುಟ್ಟಬೇಕಷ್ಟೆ" ಬೇಸರ ತೀವ್ರವಿತ್ತು ಅವನ ಮಾತುಗಳಲ್ಲಿ.

ಪಟೇಲ್ ಮನದಲ್ಲಿಯೇ ನೋವಿನ ನಗು ನಕ್ಕ.

ಕಾಲೇಜು ಬಳಿ ಕಾರು ನಿಂತಾಗ ಪಟೇಲ್ ಮೊಣಕೈನಿಂದ ಅವನ ಸೊಂಟ ತಿವಿದ "ನಾನೂ ಇಳಿದು ಬರ್ಲಾ? ನಿನ್ನ ಪಾಠ ಕೇಳೊ ಆಸೆ ಇದೆ...." ಜೋರಾಗಿ ಕಾರಿನ ಡೋರ್ ಇಳಿದು ತಳ್ಳಿದ.

"ಕೂತಿರು, ಈಗ್ಬರ್ತೀನಿ... " ಸರಸರ ನಡೆದುಹೋದ.

ಅಲ್ಲಲ್ಲಿ ನಿಂತ ಕೆಲವು ವಿದ್ಯಾರ್ಥಿಗಳು ವಿಶ್ ಮಾಡಿ ಮಾತಾಡುತ್ತ ಅವನ ಜೊತೆ ಕಾಲೇಜಿನೊಳಕ್ಕೆ ಹೋದಾಗ ಪಟೇಲ್ ಇಳಿದು ಕಾರಿಗೆ ಒರಗಿ ನಿಂತ.

'ಗೋಲ್ಡನ್ ಡೇಸ್' ಇಂಥ ದಿನಗಳು ಅವನ ಬದುಕಿನಲ್ಲೂ ಸರಿದು ಹೋಗಿದ್ದವು. ಓಡಾಟ, ನಲಿದಾಟ, ಭವಿಷ್ಯದ ಕನಸುಗಳು, ತುಂಬು ಯೌವನದ ಹುರುಪು—ವ್ಹಾ....ವ್ಹಾ....ವ್ಹಾ ಎಂದುಕೊಂಡ. ಸಾಧನೆಯ ಮೆಟ್ಟಿಲು ಹತ್ತುವ ಹುಮ್ಮಸಿನ ವಯಸ್ಸು.

ಕೆಲವು ಲೇಡಿ ಲೆಕ್ಚರರ್, ವಿದ್ಯಾರ್ಥಿನಿಯರನ್ನ ಗಮನಿಸಿದ. ವಿಪರೀತ ಬೆಳಕು. ಇದರಿಂದ ಮನೆಯೊಳಕ್ಕೆ ನುಗ್ಗಿದರೆ ಆ ದೀಪ ಮಂಕೆ. ಎರಡರ ವ್ಯತ್ಯಾಸ ತಿಳಿಯದೆ ಹೋದರೆ ವ್ಯಕ್ತಿ ಮೂರ್ಖನಾಗುತ್ತಾನೆ. ಇಂಥ ಮೂರ್ಖ ತನದ ಕೆಲವಂಶ ಅಂದು ಪ್ರಸನ್ನನಲ್ಲಿ....ಇತ್ತೇನೊ !

ಹದಿನೈದು ನಿಮಿಷಗಳಲ್ಲಿ ಹಿಂದಿರುಗಿದ ಪ್ರಸನ್ನ "ಈಗ ನಿಮ್ಮ ಮನೆಗೆ ಹೋಗೋಣ. ಆರಾಮಾಗಿ ಮಲಗಬೇಕೆನಿಸಿದೆ" ಎನ್ನುತ್ತ ಸ್ಟೀರಿಂಗ್ ವ್ಹೀಲ್ ಮುಂದೆ ಕೂತ. "ನನ್ನ ಫ್ಯಾಕ್ಟರಿ ಬಳಿ ಬಿಡು. ನೀನು ಹಾಗೆ ಮಾಡ್ಬಹ್ದು. ಅಮೀರ್ ನೋಡ್ಕೊತಾನೆ"

ಹಾಗೆಯೇ ಮಾಡಿದ ಪ್ರಸನ್ನ ನೇರವಾಗಿ ಕಾರನ್ನು ಅಲೋಕ್‌ನ ಕಾನ್ವೆಂಟ್‌ನ ಬಳಿಗೆ ಒಯ್ದ.

ಡ್ರಿಲ್ ಮಾಡುತ್ತಿದ್ದವನು ಯಾವುದೋ ಹುಮ್ಮಸ್ಸಿನಿಂದ ಓಡಿ ಬಂದವನು ಗಕ್ಕನೆ ನಿಂತುಬಿಟ್ಟ. ಪ್ರಸನ್ನ ಪರ್ಮಿಷನ್ ಪಡೆದು ಬಂದು ಅವನನ್ನು ಕೈ ಹಿಡಿದು ಕಾರಿನ ಬಳಿಗೆ ಕರೆದೊಯ್ದ.

ಕೈ ಬಿಡಿಸಿಕೊಂಡು ಹಿಂದಕ್ಕೆ ಓಡಿದ ಅಲೋಕ್ "ನಾನು ಬರೋಲ್ಲ...." ಎಂದ. ಇದು ಸಹಜವೆ. ಅತ್ಯಂತ ಸಂಯಮದಿಂದ ಅವನನ್ನ ಒಲಿಸಿಕೊಂಡು ಕಾರು ಹತ್ತಿಸುವ ವೇಳೆಗೆ ಸಾಕಾದ.

ದಾರಿಯುದ್ದಕ್ಕೂ ಮಂಕಾಗೆ ಇದ್ದ. ಇವನ ಮಾತುಗಳಿಗೆ ಅವನ ಪ್ರತಿಕ್ರಿಯೆಯೇ ಇಲ್ಲ. ಹೋಟಲ್‌ಗೆ ಕರೆದೊಯ್ದು ಅವನ ಇಷ್ಟವಾದ ತಿಂಡಿ ಕೊಡಿಸಿ ತಾನೇ ಪಕ್ಕದಲ್ಲಿ ಕೂಡಿಸಿಕೊಂಡು ತಿನ್ನಿಸಿದ.

ಅವನಲ್ಲಿನ ತಾಳ್ಮೆಯೆಲ್ಲ ಖರ್ಚು ಮಾಡಿದ. ಆದರೆ ಅಲೋಕ್ ಮುಖ ತಿರುಗಿಸುತ್ತಿದ್ದ. ಅವನ ವಿರೋಧ, ಕೋಪ ಯಾವ ಮಟ್ಟಿನದೆಂದು ಇಂದು ಅಂದಾಜಿಗೆ ಬಂತು. ಡೈವೋರ್ಸ್ ಮಕ್ಕಳ ಮೇಲೆ ಎಂಥ ಪರಿಣಾಮ ಬೀರಬಲ್ಲದು, ಎಂಬುದನ್ನ ಮೊದಲೇ ತಲೆ ಕೆಡಿಸಿಕೊಂಡಿದ್ದರೆ ಅವನೊಬ್ಬ ಬೇಜವಾಬ್ದಾರಿಯುತ ತಂದೆಯಾಗುತ್ತಿರಲಿಲ್ಲವೇನೋ !

ಶಾಲೆಯ ಬಳಿಯಲ್ಲಿ ಇಳಿಸಿ ಕಾರಿಗೆ ಒರಗಿ ನಿಂತ. ಮೌನವಾಗಿ ನಡೆದು ಹೋದ ಅಲೋಕ್ ನಿಂತು ಹಿಂದಕ್ಕೆ ತಿರುಗಿ ಸುಮ್ಮನೆ ನೋಡಿದ. ಏನನ್ನಿಸಿತೋ ಕೈ ಎತ್ತಿ ಬೀಸಿದ.

ಸ್ವರ್ಗ ಧರೆಗೆ ಇಳಿದಂತಾಯಿತು ಪ್ರಸನ್ನನಿಗೆ. ಮುಗುಳ್ನಗುತ್ತ ಕೈ ಬೀಸಿದ, ತನ್ನಲ್ಲಿ ಉಂಟಾದ ಜಡತ್ವ, ನಿರಾಶೆ, ನಿರುತ್ಸಾಹಕ್ಕೆ ಅಲೋಕ್‌ನಲ್ಲಿ ಪರಿಹಾರ ಹುಡುಕಿಕೊಳ್ಳಬೇಕಿತ್ತು. ಕನಿಷ್ಟ ಛೀಮಾರಿ ಹಾಕುವ, ನಿರ್ಭಂದಿಸುವ ಹಿರಿಯರು ಇದ್ದಿದ್ದರೆ ಇಂಥ ದುರ್ಘಟನೆ ತನ್ನ ಜೀವನದಲ್ಲಿ ನಡೆದು ಹೋಗುತ್ತಿರಲಿಲ್ಲವೇನೊ ?

ಕಾರು ಹತ್ತಿ ನೇರವಾಗಿ ಮನೆಗೆ ಬಂದ. ರಾತ್ರಿ ಪಟೇಲ್ ಫೋನ್ ಮಾಡಿದ "ಎಲ್ಹೋಗಿದ್ದೆ ? ಆಫ್ ಡೇ ಲೀವ್ ಹಾಕಿ ಮನೆಗೆ ಬಂದರೆ ನೀನೆ ನಾಪತ್ತೆ. ಅಮೀರ್ ಬರಲೇ ಇಲ್ಲಾಂತ ತಿಳಿಸ್ದ ಕಾದು ಕಾದು ಸಾಕಾಯ್ತು."

ನೀಲಿಮಾ ಕೈಯಲ್ಲಿ ಪುಸ್ತಕ ಹಿಡಿದು ಅಲ್ಲೇ ಕೂತಿದ್ದಳು.

"ಆಗ್ಲಿಲ್ಲ ಅಷ್ಟೆ, ನೀನೆ ಈ ಕಡೆ ಬಂದಾಗ ಬಾ ಗುಡ್ ನೈಟ್" ಫೋನಿಟ್ಟು ಬಿಟ್ಟ.

ಅಲೋಕ್ ಮನೆಗೆ ಬಂದಾಗ ಅವನ ಮುಖದ ಗೆಲುವನ್ನ ಸುಲಭವಾಗಿ ಗುರ್ತಿಸಿದಳು ನಿವೇದಿತಾ. ಮೇಲ್ನೋಟಕ್ಕೆ ಮಾಮೂಲಾಗಿ ಕಂಡರೂ ಅವನಲ್ಲಿ ವ್ಯಥೆ, ತೊಳಲಾಟದ ಕರಿಯ ಛಾಯೆ ನುಸುಳುತ್ತಿದೆಯೆಂದು ಅವಳಿಗೆ ಗೊತ್ತು.

ರಾತ್ರಿಯುವರೆಗಿನ ಅವನ ಊಟ, ಓದು ಚಲನವಲನಗಳನ್ನ ಸೂಕ್ಷ್ಮವಾಗಿ ಗಮನಿಸಿದಳು. ಬದಲಾವಣೆ ಸ್ಪಷ್ಟವಾಗಿತ್ತು. ಅದು ಅವಳಿಗೂ ಸಮಾಧಾನವೇ.

ರಾತ್ರಿ ಮಲಗಿದಾಗ ಎಂದಿನಂತೆ ಅವಳ ತೋಳಿನ ಮೇಲೆ ತಲೆ ಇಟ್ಟ ಅಲೋಕ್ "ಮಮ್ಮಿ, ಪಪ್ಪ....ಬಂದಿದ್ರು" ಹೇಳಲಾರದೆ ಹೇಳಿದ. ಕ್ಷಣ ಅವಳ ಮನದಲ್ಲಿ ಎದ್ದ ಬಿರುಗಾಳಿ ಸ್ತಬ್ಧವಾಗಲು ಬೇಕಾಯಿತು ನಿಮಿಷಗಳು.

ಬೇರೆಡೆ ಮುಖ ತಿರುಗಿಸಿಕೊಂಡು ಮಲಗಿದಳು, ಹೇಳಿಕೊಳ್ಳಲಾರದ ತುಮುಲ, ಅವಳ ಮನ ಬಿರುಗಾಳಿಗೆ ಸಿಕ್ಕ ತರಗಲೆಯಾಯಿತು. ಗಾಳಿ ಇರುವಷ್ಟು ಕಾಲ ಹರಿದಾಡಿದರೂ ಕಡೆಯಲ್ಲಿ ಒಂದು ಕಡೆ ನಿಂತಿತು.

ಅಲೋಕ್ ಎದ್ದು ಕೂತವನು ಅವಳ ತೋಳಿಗೆ ಮುಖ ಹಚ್ಚಿ ಬಿಕ್ಕ ತೊಡಗಿದ. ಮಗುವಿನ ಭವಿಷ್ಯಕ್ಕಾಗಿ ಕೆಲವೊಮ್ಮೆ ಎಲ್ಲಾ ತ್ಯಾಗಗಳು ಅನಿವಾರ್ಯವೇನೋ !

ಡೈವೋರ್ಸ್ ಕೊಟ್ಟಿರುವುದು ಅವಳಿಗೆ ವಿನಹ ಅಲೋಕ್ ತನ್ನ ಮಗನಲ್ಲವೆಂದು ಹೇಳಲು ಸಾಧ್ಯವಿಲ್ಲ, ಅವನ ಹಕ್ಕನ್ನ ಕೋರ್ಟು ತನಗೆ ಬಿಟ್ಟುಕೊಟ್ಟಿದರೂ ತಂದೆ, ಮಗನ ಮಧ್ಯದ ತಂತು ಕಡಿಯಲು ಸಾಧ್ಯವೇ?

"ನಾನು ಮಾತಾಡ್ಲಿಲ್ಲ, ಮಮ್ಮಿ" ಅಳು ಜೋರು ಮಾಡಿದ.

ಮಗನ ಕಣ್ಣೊರಸಿ ಸಮಾಧಾನಿಸಿದಳು "ಈಗೇನಾಯ್ತು ನಿನ್ನ ಪಪ್ಪ ತಾನೇ ಬಂದಿದ್ದುದ್ದು! ನಿನ್ನ ಮಂತ್ಲಿ ರಿಪೋರ್ಟ್ ತೋರಿಸಿದ್ಯಾ ? ಈ ಸಲ ಬಂದಾಗ ತೋರ್ಸು" ಅವನಲ್ಲಿ ಉತ್ಸಾಹ ತುಂಬಲು ತುಂಬ ಶ್ರಮಿಸಿದಳು.

ತಂದೆಯೊಡನೆ ಮಾತಾಡುವುದು ದೊಡ್ಡ ಅಪರಾಧವಲ್ಲ ಎಂದು ಮನವರಿಕೆಯಾಯಿತು ಅವನಿಗೆ !

ತೊಳಲಾಡಿದರೂ ಅವನಿಗೆ ಪ್ರಸನ್ನನ ಪ್ರೀತಿ ಸಿಕ್ಕಿದ್ದು ನಿವೇದಿತಾಗೆ ಸಂತೋಷವೆ. ಇದರಿಂದ ನೀಲಿಮಾ, ಪ್ರಸನ್ನ ಅವರಲ್ಲಿ ಭಿನ್ನಾಭಿಪ್ರಾಯ ಬರಬಾರದು.

ಮತ್ತೆ ವಾರದ ನಂತರ ತುಂಬ ಖುಷಿಯಿಂದ ಬಂದ ಅಲೋಕ್. ಅವಳಿಗೆ ಅರ್ಥವಾಗಿತ್ತು.

"ಮಮ್ಮಿ, ಪಪ್ಪ ನನ್ನ ಡೆಲ್ಲಿಗೆ ಕರ್ಕೊಂಡ್ಹೋಗ್ತಾರಂತೆ" ಕುಣಿದಾಡಿದ. ಅವಳಿಗೆ ಏನು ಹೇಳಲಾಗಲಿಲ್ಲ."ಯಾವಾಗ....?" ನಿರುತ್ಸಾಹದಿಂದ ಕೇಳಿದಳು. "ಸನ್‌ಡೇ...." ಅವನ ಆನಂದ ಮುಗಿಲು ಮುಟ್ಟಿದಂತಿತ್ತು.

ಮೌನವಾಗಿ ಕೂತುಬಿಟ್ಟಳು. ತಲೆಯಲ್ಲಿ ಭಯಂಕರ ಸಿಡಿತ. ಆ ಮಾತು ಗಳನ್ನ ಅವಳೆಂದು ಮರೆಯಲಾರಳು. ತನ್ನೊಡನೆಯ ದಿನಗಳು ಉಸಿರುಗಟ್ಟಿ ದಂತಿತ್ತು. ಎಷ್ಟೋ ಹೊತ್ತಿನವರೆಗೂ ಕಣ್ಣೀರ್ನು ಸುರಿಸಿದಳು. 'ಇದೊಂದು ಸಿನಿಮಾ ಮಾದರಿಯ ಕತೆ' ವ್ಯಂಗ್ಯ, ನೋವು ಬೆರೆತ ನಗು ಅವಳ ತುಟಿಯಂಚಿ ನಲ್ಲಿ ಇಣಕಿ ಮರೆಯಾಯಿತು.

* * * *

ಸೆಮಿನಾರು ಸಲುವಾಗಿ ಪ್ರಸನ್ನ ದೆಹಲಿಗೆ ಹೊರಟಿದ್ದ. ನಾಲ್ಕು ದಿನದ ಕಾರ್ಯಕ್ರಮಕ್ಕೆ ಹದಿನೈದು ದಿನ ಅಲ್ಲಿದ್ದು ಸುತ್ತ ಮುತ್ತಲೂ ನೋಡಿ ಬರುವ ಉದ್ದೇಶವಿತ್ತು.

"ನಂಗೂ ಬರೋ ಆಸೆ ಇತ್ತು. ಡಾಕ್ಟ್ರು ಪ್ರಯಾಣ ಬೇಡ ಅಂದಿ ದ್ದಾರೆ" ಎಂದ ನೀಲಿಮಾ ಏನು ಬೇಸರಗೊಳ್ಳಲಿಲ್ಲ. ಒಂದ್ಹತ್ತು ಸಲ ಹೋಗಿ ಬಂದ ಪ್ರದೇಶವೆ, ಈಗ ಪ್ರಸನ್ನ ಜೊತೆಯಲ್ಲಿರುತ್ತಾನೆಂಬುದೆ ಹೊಸ ವಿಷಯ.

ರಾತ್ರಿ ಪ್ರಸನ್ನ, ಪಟೇಲ್‌ಗೆ ಫೋನಿನಲ್ಲಿ ಹೇಳುತ್ತಿದ್ದ.

"ನಾಳೆ ನಿನ್ನಿಂದ ಹೆಲ್ಪ್ ಬೇಕು. ಏರ್‌ಪೋರ್ಟ್‌ಗೆ ಅಲೋಕ್‌ನ ಕರ್ಕೊಂಡ್ಬಾ. ದೆಹಲಿಗೆ ಕರ್ಕೊಂಡ್ಹೋಗ್ತೀನಿ."

ಅದೇನು ಹೇಳಿದನೋ "ಅದ್ಹೇಗೆ ಕಳಿಸೋಲ್ಲ ಅಂತಾಳೆ. ಅವ್ನು ನಂಗೆ ಕೂಡ. ಮಗ ನಾನು ಹೇಳಿದಷ್ಟು ಮಾಡು" ರಿಸೀವರ್ ಇಟ್ಟ.

ಅಂದರೆ ಪ್ರಸನ್ನ ಮಗನನ್ನ ಜೊತೆಯಲ್ಲಿ ಕರೆದೊಯ್ಯುತ್ತಾನೆ. ಏನೂಂತ ವಿಶ್ಲೇಷಿಸಿದರೂ ಇದು ಸರಿಯಾಗಿ ಕಾಣಲಿಲ್ಲ, ಹಾಗೆಂದು ಹೇಳಲು ಸ್ವಲ್ಪ ಹಿಂಜರಿದಳು.

ಹೆಚ್ಚು ಹೊತ್ತು ಅದರ ಅಸಹನೆಯಲ್ಲಿಯೇ ಇದ್ದ ನೀಲಿಮಾ "ತೊಡೆದು ಕೊಂಡ ಸಂಬಂಧಾನ ಮತ್ಯಾಕೆ ಗಂಟು ಹಾಕಿಕೋತ ಇದ್ದೀರಾ! ದಿಸ್ ಈಸ್ ನಾಟ್ ಎ ಗುಡ್ ವೇ" ಬೇಸರಿಸಿದಳು.

ಅವಳತ್ತ ನೋಡಿದ ಪ್ರಸನ್ನ ಗಂಭೀರವಾದ. "ಅಲೋಕ್ ಬಗ್ಗೆ ನನ್ನ ಕರ್ತವ್ಯವು ಇದೆ. 'ಬಿಡುಗಡೆ' ನಮ್ಮಿಬ್ಬರಿಗೆ ಮಾತ್ರ, ಅವ್ನು ನನ್ನ ಹತ್ತಿರ ಇಲ್ಲ, ಇರೋದು ಕೂಡ ಇಲ್ಲ. ಅವನಿಗಾಗಿಯೇನು ದೆಹಲಿಗೆ ಹೋಗ್ತಾ ಇಲ್ಲ. ಈ ಸಂದರ್ಭ ಅವನಿಗೆ ಉಪಯೋಗವಾಗ್ಲೀಂತ" ಸಮಾಜಾಯಿಷಿ ನೀಡಿದ.

ಒಳಗೊಳಗೆ ನೀಲಿಮಾ ಧುಮುಗುಟ್ಟಿದಳು ಇಂಥ ಬೆಳವಣಿಗೆ ಅವಳಿಗೆ ಇಷ್ಟವಾಗಲಿಲ್ಲ, ನಿವೇದಿತಾ ಇಂದಿಗೂ ಅರಳುತ್ತಿರುವ ಹೊಸ ಮೊಗ್ಗಿನಂತಿದ್ದಳು. ಅವಳಿಗೆ ಸೌಂದರ್ಯ ಪ್ರಜ್ಞೆ ಇಲ್ಲವೆನ್ನುವುದು ಮಾತ್ರ ಮೈನಸ್ ಪಾಯಿಂಟ್.

ಅವನನ್ನು ಬೀಳ್ಕೊಡಲು ಹೊರಟಿದ್ದವಳು ಏರ್‌ಪೋರ್ಟ್‌ಗೆ ಕಡೆಯ ಗಳಿಗೆಯಲ್ಲಿ ಕ್ಯಾನ್ಸಲ್ ಮಾಡಿದಳು. ಪ್ರಸನ್ನ ಕೂಡ ಬಲವಂತ ಮಾಡಲಿಲ್ಲ.

ಹೊರಡುವ ಮುನ್ನ ನೀಲಿಮಾಳ ಎರಡು ಭುಜಗಳ ಮೇಲೆ ಹಸ್ತಗಳನ್ನೂರಿ ಕಣ್ಣಲ್ಲಿ ಕಣ್ಣಿಟ್ಟ "ನಿನ್ನ ಮಗುಗೆ ಏನು ತರಲೀ?" ಅವಳ ಬಿಗಿದ ಮುಖ ಸ್ವಲ್ಪ ಸ್ವಲ್ಪವಾಗಿ ಅರಳಿತು. ಅವನ ಭುಜದ ಮೇಲೆ ತಲೆ ಇಟ್ಟು ಮೈಮರೆತಳು.

ಲೆಕ್ಕ ಹಾಕಿ ಒಂದು ಪಟ್ಟಿಯನ್ನ ಕೊಟ್ಟಳು. ಉಣ್ಣೆಯ ಕಾಲು ಚೀಲದಿಂದ ಹಿಡಿದು ಮೂರು ವರ್ಷದ ಮಗುವಾಗುವವರೆಗೂ ಏನೇನು ಬೇಕೋ, ಅದನ್ನೆಲ್ಲ ಬರೆದು ಕೊಟ್ಟಳು.

ನೋಡಿದ ಪ್ರಸನ್ನಗೆ ಉಸಿರು ಗಟ್ಟಿದಂತಾಯಿತು. ಅವನು ಈಗ ತರಬಲ್ಲ. ಅಲೋಕ್ ಹುಟ್ಟಿದಾಗ ಬೆಲೆ ಬಾಳುವ ಒಂದು ಜೊತೆ ಬಟ್ಟೆ ತರುವ ಸಾಮರ್ಥ್ಯ ಕೂಡ ಅವನಿಗಿರಲಿಲ್ಲ.

"ಎಲ್ಲಾ.....ತರ್ಬೇಕು" ಎಚ್ಚರಿಸಿದಳು.

ಹ್ಗೂಗುಟ್ಟಿದ. ಏನ್ನನ್ನಿಸಿತೋ ಅವನು ಹೊರಟ ಮೇಲೆ ನೀಲಿಮಾ ಟ್ಯಾಕ್ಸಿಯಲ್ಲಿ ಹೊರಟಳು. ಇನ್ನೂ ವೇಳೆ ಇದ್ದುದ್ದರಿಂದ ಲೌಂಜ್‌ನಲ್ಲಿಯೇ ಇದ್ದ ಪ್ರಸನ್ನ ಹುಬ್ಬೇರಿಸಿದ.

"ಓ, ಬರ್ಬೇಕು....ಅನ್ನಿಸ್ತು....ಬಂದೆ" ಅವನ ರೆಟ್ಟೆಗೆ ಕೆನ್ನೆ ಯುಜ್ಜಿದಳು. "ಥ್ಯಾಂಕ್ಯೂ...." ಕೈ ಮೇಲೆ ತಟ್ಟಿದ. ಆದರೂ ಅವನ ಕಣ್ಣುಗಳು ಪಟೇಲ್‌ಗಾಗಿ ಅವನ ಜೊತೆ ಬರುವ ಅಲೋಕ್‌ಗಾಗಿ ಕಾತುರ ದಿಂದ ಕಾಯುತ್ತಿದ್ದವು.

ಕಂಡ ಕೂಡಲೆ ಪ್ರಸನ್ನ ಮುಖ ಅರಳಿತು. ಓಡಿಯೆ ಬಿಟ್ಟ ಎನ್ನುವ ಹಾಗೆ ಹಾರಿ ಅವನನ್ನು ಮೇಲಕ್ಕೆತ್ತಿ ಇಳಿಸಿದ.

ಪಟೇಲ್ ನೀಲಿಮಾಗೆ ವಿಶ್ ಮಾಡಿ ನಸು ನಗೆ ಬೀರಿದ.

ತುಸು ಎತ್ತರವಾಗಿದ್ದ ಅಲೋಕ್ ಬಹಳ ಮುದ್ದಾಗಿ ಅಷ್ಟೆ ಚೂಟಿ ಯಾಗಿ ಕಾಣುತ್ತಿದ್ದ. ಬೆಲೆ ಬಾಳುವ ಬಟ್ಟೆಗಳು, ಹೊಸ ನಮೂನೆಯ ಷೂನಿಂದ ಸಜ್ಜಾದ ಅವನನ್ನು ನೋಡುವುದೇ ಚೆಂದವೆನಿಸಿತು.

ಒಮ್ಮೆ ನೋಟವರಿಸಿದಳು ನೀಲಿಮಾ. ಪ್ರಸನ್ನ ಅವಳ ಮಧ್ಯೆ ಅಲೋಕ ನಿಂತಂತೆ ಭಾಸವಾದ. ಇದು ರಕ್ತ ಸಂಬಂಧ ಅನುಬಂಧ, ಅಂತಃಕರಣ, ಪ್ರಕೃತಿದತ್ತ.

ಆಗಾಗ ಅಲೋಕ್ ಅವಳತ್ತ ಕಳ್ಳ ನೋಟ ಬೀರಿದರೂ ಕಣ್ಣಿನ ತೀಕ್ಷ್ಣತೆ ಬದಲಾಗುತಿತ್ತು.

ಅವಳಮ್ಮ ಒಂದೆ ಒಂದು ಮಾತು ಹೇಳಿದ್ದಳು. "ಅವ್ನಿಗೆ ನಿವೇದಿತಾ ಸಂಬಂಧ ಇಷ್ಟವಿಲ್ಲದಿರಬಹ್ದು. ಡೈವೋರ್ಸ್ ತಗೋಬಹ್ದು ಆದರೆ.... ಮಗು....ಅವನ ರಕ್ತದ್ದೇ, ನಿರಂತರವಾಗಿ ಹರಿಯುವ ಪ್ರೀತಿಗೆ ಎಂಥ ಒಡ್ಡು ಗಳು ಕೂಡ ಉಳಿಯಲಾರವು."

ಅಂದು ಲಕ್ಷಿಸಿರಲಿಲ್ಲ. ಮರೆತಂತೆ ಆಯಿತು ಹಿಂದಿನ ಬದುಕು, ಆದರೆ....ಬರೀ ಗೊಂದಲವೆ ಅವಳ ತಲೆಯಲ್ಲಿ.

ಪ್ರಸನ್ನ ಏನೋ ಹೇಳಿದ. ಅವಳಿಗೇನು ಕೇಳಿಸಲಿಲ್ಲ. ಒಂದು ರೀತಿಯ ಜಡತ್ವ ಅವಳನ್ನ ಆವರಿಸಿತ್ತು.

ಪಟೇಲ್ ಎಚ್ಚರಿಸಬೇಕಾಯಿತು "ಇನ್ನ ಪ್ರಸನ್ನ ಹಿಂದಿರುಗೋವರ್ಗೂ ಇಲ್ಲೇ ಕಾಯ್ತೀರಾ ?" ಚೇತರಿಸಿಕೊಂಡು ನಕ್ಕಳು.

ಒಂದು ರೀತಿಯ ಅಸಹನೆ ಬೆರೆತ ಆಂದೋಳನಭಾವ ನೋಡಿ ಪಟೇಲ್‌ಗೆ ನಗಬೇಕೆನಿಸಿತು. ಮುಖ ಬೇರೆಡೆಗೆ ತಿರುಗಿಸಿಕೊಂಡ.

ಆಗಲೇ ಕಾರು ಹಿಂದಿರುಗಿದ್ದರಿಂದ ತಾನು ಟ್ಯಾಕ್ಸಿಯಲ್ಲಿ ಬಂದ ವಿಷಯ್ವ ನೀಲಿಮಾ ತಿಳಿಸಿದಳು.

"ನಿಮ್ಮನ್ನ ಮನೆಗೆ ಡ್ರಾಪ್ ಮಾಡಿ ಹೋಗ್ತೀನಿ"

ಕೆಂಪು ಮಾರುತಿ ಹತ್ತಿದಳು. ಆಲೋಕ್‌ನ ಪಟೇಲ್ ಕರೆತಂದ. ನಿವೇದಿತಾ ಚೆನ್ನಾಗಿ ಗೊತ್ತಿರಬಹುದೆಂದುಕೊಂಡಳು.

ಅದು ಇದು ಮಾತಾಡಿದಳು. ಪಟೇಲ್ ಮೌನವಾಗಿ ಆಲಿಸಿದ. ನಾನು ಹೆಚ್ಚು ಬುದ್ಧಿವಂತೆ ಎನ್ನುವ 'ಅಹಂ' ಇದೆಯೆಂದು ಅವಳ ಮಾತುಗಳಲ್ಲಿಯೇ ವ್ಯಕ್ತವಾಯಿತು—ಇದು ಎರಡನೆ ಬಾರಿಯ ತೀರ್ಮಾನ.

"ಬೈ ದಿ ಬೈ, ನಿವೇದಿತಾ....ಹೇಗೆ ?" ಕೇಳಿದಳು.

"ಹೇಗೆಂದ್ರೆ...." ಕ್ಲ್ಯಾಪ್‌ನಲ್ಲಿ ಕೈಯಾಡಿಸಿದ. "ಸಾರಿ, ನಿಮ್ಮ ಪ್ರಶ್ನೆ ಏನೂಂತ ನಂಗೆ ಗೊತ್ತಾಗ್ಲಿಲ್ಲ...." ಕಾರಿನ ವೇಗ ಹೆಚ್ಚಿಸಿದ. "ಪೂರ್ ಗರ್ಲ್...." ಸಹಾನುಭೂತಿ ಸೂಚಿಸಿದಳು ಯಾಕೆ, ಏನು ? ಅವನಿಗೇನು ಅರ್ಥವಾಗಲಿಲ್ಲ. ಅವಶ್ಯಕತೆ ಇಲ್ಲದಾಗ ಕೇಳಿ, ಮಾತಾಡಿ ಪ್ರಯೋಜನವಿಲ್ಲವೆಂಬುದು ಅವನ ಭಾವನೆ.

ಮನೆಯ ಮುಂದೆ ಕಾರು ನಿಂತಾಗ ಇಳಿದ ನೀಲಿಮಾ "ಒಳಗಡೆ....ಬನ್ನಿ ....ಒಂದಿಷ್ಟು ಮಾತಾಡೋದಿದೆ" ಆಹ್ವಾನಿಸಿದಳು. "ಸಾರಿ, ಇನ್ನೊಮ್ಮೆ.... ಬರ್ತೀನಿ" ನಿರಾಕರಿಸಿದ.

"ಪರ್ವಾಗಿಲ್ಲ....ಬನ್ನಿ" ಮತ್ತೆ ಕರೆದಳು.

"ಮತ್ತದೆ....ಹೇಳ್ಬೇಕಾಗುತ್ತೆ" ನಯವಾಗಿ ಹೇಳಿದ.

ಕಾರಿನ ಚಕ್ರಗಳು ಉರುಳಿದವು. ನೀಲಿಮಾ ನಿಂತು ಅತ್ತಲೆ ನೋಡಿದಳು. ಅವಳಲ್ಲಿ ವಿಚಿತ್ರ ಭಾವಗಳ ಸಂಘರ್ಷ.

ತನ್ನೊಂದಿಗೆ ಹಾಯಾಗಿ. ಆರಾಮಾಗಿದ್ದ ಪ್ರಸನ್ನ ಆಲೋಕ್‌ನ

ನೆನಸಿಕೊಂಡಿದ್ದೇಕೆ, ಕರೆದೊಯ್ದಿದ್ದೇಕೆ? ಆ ವಿಷಯವನ್ನ ಹಿಂದೆಯೇ ಇತ್ಯರ್ಥ ಮಾಡಿಕೊಳ್ಳಬೇಕಾಗಿತ್ತೆಂದುಕೊಂಡಳು.

ಮೊದಮೊದಲು ಲ್ಯಾಬ್, ಲೈಬ್ರರಿ, ಪ್ರಾಧ್ಯಾಪಕರ ಕೊಠಡಿಯಲ್ಲಿ ಭೇಟಿಯಾಗುತ್ತಿದ್ದ ಅವರಲ್ಲಿ ಒಂದು ವಿಚಿತ್ರ ರೀತಿಯ ಸೆಳೆತ ಷುರುವಾದಾಗ ಮೊದಲು ಮುಂದುವರಿದಿದ್ದು ಪ್ರಸನ್ನನೆ.

"ಕಾಫೀಗೆ ಕಂಪನಿ ಕೊಡ್ತೀರಾ ? ಇಂದು ಇಂಥ ಮೂವೀ ಬಂದಿದೆ ಹೋಗೋಣ್ವಾ ? ಈ ಆಥರ್ ಪುಸ್ತಕ ನೋಡಿದ್ರಾ?" ಈ ಮಾತುಗಳಲ್ಲಿಯೇ ಷುರುವಾದದ್ದು ಪ್ರೇಮದ ವ್ಯವಹಾರ.

ಸಲಿಗೆ ಹೆಚ್ಚಿ ಆತ್ಮೀಯತೆ ಬೆಳೆದಾಗ ನೋವಿನಿಂದ ತನ್ನ ಅಂತರಾಳದ ಭಾವನೆಗಳನ್ನ ತೋಡಿಕೊಂಡಿದ್ದ. ಯಾಕೆ ? ಏನೂಂತ ಪ್ರಶ್ನಿಸುವ ಮನಸ್ಸು ಅವಳಿಗೂ ಇರಲಿಲ್ಲ.

"ನಾವಿಬ್ರೂ ...ಮದ್ವೆ ಆಗೋಣ" ಎಂದಾಗ ಪ್ರಸನ್ನ ಹಸಿರು ಬಾವುಟ ಹಾರಿಸಿ ಮನೆಗೂ ಕರೆದೊಯ್ದು ನಿವೇದಿತಾನ ತೋರಿಸಿದ್ದ.

ಶಾಲೆಯ ಮೇಡಮ್, ಸಾಧಾರಣ ಉಡುಪು, ಬಿಂಕ ಬಿಗುವಾನೆ ತೋರದ ಮಾತುಗಳು, ಮಾಮೂಲಿ ಗೌರಮ್ಮನಂತೆ ಕಾಣುವ ಉದ್ದದ ಜಡೆ, ಹಣೆಯಲ್ಲಿ ಬೊಟ್ಟು, ಎರಡು ಕೈಗಳಲ್ಲೂ ಬಳೆ, ಕಣ್ಣಿಗೆ ಕಾಡಿಗೆ, ಮಸ್ಕರವಿಲ್ಲ. ತುಟಿಗೆ ಬಣ್ಣವಿಲ್ಲ, ಮುಖಕ್ಕೆ ಸರಿಯಾದ ಮೇಕಪ್ ಇಲ್ಲ 'ತೀರಾ ಮಂಕು' ಎಂದುಕೊಂಡಳು. ಸ್ವಲ್ಪ ಒಳ ಪರದೆಯನ್ನ ಸರಿಸಿ ನೋಡಿದ್ದರೆ ಅದೆಂಥ ಬೆಲೆ ಬಾಳುವ ವಜ್ರವೆಂದು ಅರಿಯಬಹುದಾಗಿತ್ತು ನೀಲಿಮಾ.

* * *

ಪಟೇಲ್ ಬಂದಾಗ ಒಲ್ಲದ ಮನಸ್ಸಿನಿಂದಲೆ ನಿವೇದಿತಾ ಅಲೋಕ್‌ನ ಕಳುಹಿಸಿಕೊಟ್ಟಿದ್ದು. ಅವಳಲ್ಲಿ ಆಡಲು ಮಾತುಗಳಿಲ್ಲ. ಮಗುವಿನ ಪ್ರಶ್ನೆ ಪ್ರಸನ್ನ ಎತ್ತಿದ್ದರೆ ಕೋರ್ಟು ಏನು ತೀರ್ಮಾನ ಕೊಡುತಿತ್ತೋ, ಈಗ ಅಲೋಕ್ ಸುಖಿಯಾಗಿದ್ದ. ಆರಾಮಾಗಿ ಬೆಳೆಯಬೇಕಾದ ಮಗುವಿನ ತಲೆ ತಾನೇಕೆ ಕೆಡಿಸಲಿಯೆಂದು ಸುಮ್ಮನಾಗಿದ್ದಳು.

ಯಾಕೋ ಪಟೇಲ್‌ಗೆ ಒಂದು ಮಾತು ಹೇಳುವುದು ಸರಿಯೆನಿಸಿತು "ಮತ್ತೆ ಮತ್ತೆ ಅದೇ ಪುನರಾವರ್ತನೆ ಏನು ಚೆನ್ನ ? ಹರೆಯದ ಪ್ರೇಮ

ಆಯ್ಕೆಯ ಬಗ್ಗೆ ತಪ್ಪು ಮಾಡಿರಬಹುದು, ಈಗ ಮತ್ತೊಂದು ತಪ್ಪು ಆಗುವುದು ಸರಿಯಲ್ಲ. ನೀವು ಅವರ ಗುಡ್ ಫ್ರೆಂಡ್, ವೆಲ್‌ವಿಷರ್, ಸ್ವಲ್ಪ ತಿಳಿಸಿ ಹೇಳಿ. ಅಲೋಕ್ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರೋದು ಬೇಡ. ನನ್ನ, ಅವರ ತಪ್ಪಿರಬಹುದು ನಿರಪರಾಧಿ ಮಗು ಬಲಿ ಆಗ್ಬಾರ್ದು."

ನೇರವಾಗಿ ಮನೆಗೆ ಬಂದ ಪಟೇಲ್. ಎರಡು ಸಲ ಮೇಡಮ್ ಮನೆಯಿಂದ ಫೋನ್ ಬಂದಿತ್ತೆಂದು ತಿಳಿಸಿದ ಅಮೀರ್. ತಾಯ ಹೃದಯ.... ಅವನೆದೆ ಭಾರವಾಯಿತು. ಜಗತ್ತಿನಲ್ಲಿ ಯಾರು ನೀಡಲಾರದಷ್ಟು, ಎಲ್ಲೂ ಸಿಗಲಾರದಷ್ಟು ಮಮತೆ, ಪ್ರೀತಿ, ಕ್ಷಮೆಗಳನ್ನ ದೇವರು ತಾಯ ಹೃದಯದಲ್ಲಿ ಬಚ್ಚಿಟ್ಟಿದ್ದಾನೆಂದುಕೊಂಡ.

"ಸಾಬ್....ನಿವೇದಿತಾ ಮೇಡಮ್....ಬಂದಿದ್ದಾರೆ" ತಿಳಿಸಿದ. ಮಲಗಿದ್ದವನು ಮೇಲೆದ್ದ "ಅಂತೂ....ನಿಂಗೂ ಮೇಡಮ್" ನಗುತ್ತಲೇ ಹೊರಗೆ ಬಂದ.

ನಿವೇದಿತಾಳ ಮುಖದ ಮೇಲಿನ ಉದ್ವೇಗ ಗುರುತಿಸಿದ. "ಫ್ಲೈಟ್ ಸರ್ಯಾದ ವೇಳೆಗೆ ಹೊರಟಿತಾ ? ಅಲೋಕ್....ಏನಾದ್ರೂ ಗಲಾಟೆ ಮಾಡಿದ್ನಾ ?" ನೇರವಾಗಿ ನೋಡಿ ನಸು ನಕ್ಕ.

"ಯಾವ್ದು ತೊಂದರೆ ಇಲ್ಲ. ಕೂತ್ಕೊಳ್ಳಿ..." ಎಂದವನು ತಾನೆ ಕಿತ್ತಲೆ ಹಣ್ಣಿನ ರಸ ತಂದ ಅವಳ ಮುಂದಿಟ್ಟ "ಮೊದ್ಲು, ಕುಡ್ದು ಸುಧಾರ್ಸಿಕೊಳ್ಳಿ."

ಕ್ಷಣ ತನ್ನ ದುರ್ಬಲತೆಗೆ ನಿವೇದಿತಾ ನಾಚಿಕೊಂಡಳು.

"ಅಲೋಕ್ ಬಗ್ಗೆ ಯೋಚ್ನೆ ಮಾಡ್ಬೇಡಿ ನಿವೇದಿತಾ. ಅವ್ನು ಹೋಗಿರೋದು ಅವ್ನ ತಂದೆ ಜೊತೆ. ಮಗುವಿನ ಹೊಣೆ ಇಬ್ಬರ ಮೇಲು ಸಮ ಸಮ, ಆದರೂ ರಕ್ಷಣೆಯ ವ್ಯವಸ್ಥೆಯ ಹೆಚ್ಚಿನ ಪಾಲು ತಂದೆಯ ಮೇಲೆ ಬೀಳುತ್ತೆ. ಈಗ ಅವ್ನು ಸೇಫ್ ಲಾಕರ್‌ನಲ್ಲಿ ಇದ್ದಂತೆ" ನವಿರಾಗಿ ಹೇಳಿದ.

ಮೌನವೇ ಹೌದೆಂದು ಒಪ್ಪಿಕೊಂಡಿತು. ತಾನೇ ಒಳಗೆ ಹೋಗಿ ಒಂದು ಗ್ಲಾಸ್ ತಂದು ಅರ್ಧ ಕಿತ್ತಲೆಯ ರಸವನ್ನು ಅದಕ್ಕೆ ಸುರಿದು ಪಟೇಲ್‌ನ ಮುಂದಿಟ್ಟಳು.

"ತಗೊಳ್ಳಿ...." ಪಟೇಲ್ ಸ್ವಲ್ಪ ಬಗ್ಗಿ "ಒಂದು ಕಂಡೀಷನ್, ಈ

ಜ್ಯೂಸ್‌ನ ನಾನು ಕುಡೀಬೇಕಾದ್ರೆ....ನೀವು ಇಲ್ಲೇ ಊಟ ಮಾಡ್ಬೇಕು. ಮೇಡಮ್‌ಗೆ ಬೇಕಾದ್ರೆ....ನಾನು ಫೋನ್ ಮಾಡ್ತೀನಿ" ಎಂದ.

"ನಂದು....ಊಟ ಆಗಿದೆ. ನಮ್ದು ಒಂಬತ್ತೂವರೆ ಊಟ. ಈಗ ಮತ್ತೆ ಊಟ ಮಾಡಿದ್ರೆ....ಶಾಲೆಯಲ್ಲಿ ಪಾಠ ಮಾಡದೆ ನಿದ್ದೆ ಮಾಡ್ಬೇಕಾಗುತ್ತೆ...." ನಮ್ರವಾಗಿ ಬೇಡವೆಂದಳು.

ಕೈಗೆತ್ತಿಕೊಂಡ ಗ್ಲಾಸ್‌ನ ಟೀಪಾಯಿ ಮೇಲಿಟ್ಟ "ಇದನ್ನ ನೀವೆ ಕುಡೀರಿ ಅಥ್ವಾ ಒಪ್ಕೊಳ್ಳಿ" ಸಣ್ಣ ಹುಡುಗನ ಹಟದಂತಿತ್ತು.

ಪ್ರೀತಿ ತೋರುವ, ಒತ್ತಾಯಿಸುವ ಜನರೆ ಅವಳ ಬದುಕಿನಲ್ಲಿ ಕಡಿಮೆ. ಗೋದಾವರಿ ಮೇಡಮ್, ಚೈತ್ರ ಬಿಟ್ಟರೆ ಅವಳಲ್ಲಿ ಒಲುಮೆ ತೋರುವ ವ್ಯಕ್ತಿ ಪಟೇಲ್ ಒಬ್ಬನೆ.

"ಊಟ....ಮಾಡ್ತೀನಿ...." ಒಪ್ಪಿಕೊಂಡಳು.

ಗ್ಲಾಸ್ ಖಾಲಿ ಮಾಡಿಟ್ಟ ಪಟೇಲ್ "ಇವತ್ತು ಅಮೀರ್ ಜೊತೆ ನಾನೊಂದು ಕೈ ಹಾಕ್ತೀನಿ ಅಡಿಗೆಗೆ. ನೀವೇನೂ ಹೆದ್ರಬೇಕಿಲ್ಲ ಎಲ್ಲಾ ವೆಜಿ ಟೇರಿಯನ್...." ಷರಟಿನ ತೋಳುಗಳನ್ನ ಹಿಂದಕ್ಕೆ ಮಡಚುತ್ತ ಮೇಲೆದ್ದ.

ನಿವೇದಿತಾ ಅವನನ್ನು ತಡೆದಳು "ನೀವು ಆರಾಮಾಗಿ ಕೂತು ಪೇಪರ್ ನೋಡಿ, ಮ್ಯೂಸಿಕ್ ಕೇಳಿ....ನಾನು ಅಡ್ಗೆಯ ಮನೆಗೆ ಹೋಗ್ತೀನಿ" ನಡೆದು ಬಿಟ್ಟಳು. ಕಾಲುಗಳನ್ನೆತ್ತಿ ಟೀಪಾಯಿ ಮೇಲಿಟ್ಟ.

ಪ್ರಸನ್ನನ ತಪ್ಪು ಬಹಳ ದೊಡ್ಡದಾಗಿ ಕಂಡಿತು. ಸರಳ ಸುಂದರ ಅರೆ ಬಿರಿದ ಮೊಗ್ಗಿನಂಥ ಹೆಣ್ಣಿನಲ್ಲಿ ಅವನೇನು ಕಂಡ ಲೋಪ ? ಹಿಂದಕ್ಕೆ ಒರಗಿ ಕಣ್ಮುಚ್ಚಿದ.

* * * *

ದೆಹಲಿಯಿಂದ ಬಂದ ನಂತರ ಪ್ರಸನ್ನ, ಆಗಾಗ ಶಾಲೆಯ ಬಿಡುವಿನಲ್ಲಿ ಅಲೋಕ್‌ನ ಭೇಟಿಯಾಗುತ್ತಿದ್ದ. ಹೋಟೆಲ್, ಸಿನಿಮಾಗೆ ಕರೆದೊಯ್ಯು ತ್ತಿದ್ದ. ನಿವೇದಿತಾ ತೆಪ್ಪಗಿದ್ದಳು.

ಇತ್ತೀಚಿನ ಅಲೋಕ್ ಚಟುವಟಿಕೆ, ಪ್ರೋಗ್ರೆಸ್ ಕಾರ್ಡು ನೋಡಿದಾಗ ಆತ್ಯಂತ ಸಮಾಧಾನಕರವಾಗಿತ್ತು: ಅವಳೇನು ತಲೆ ಕೆಡಿಸಿಕೊಳ್ಳಲು ಹೋಗು ತ್ತಿರಲಿಲ್ಲ.

ಪ್ರತಿ ಐದನೇ ತಾರೀಖು ಅವಳು ಬ್ಯಾಂಕಿಗೆ ಬರುವ ದಿನ. ಅಂದು ಅರ್ಧ ಗಂಟೆ ಮೊದಲೇ ಪ್ರಸನ್ನ ಬಂದು ಕಾದು ನಿಂತಿದ್ದ. ಅವನಲ್ಲಿ ಒಂದು ರೀತಿಯ ಚಡಪಡಿಕೆ, ಹಂಬಲಿಕೆ. ಹರೆಯದ ಪ್ರೇಮಿಯಾಗಿದ್ದ. ಒಂದು ರೀತಿಯ ಸಂವೇದನೆಗೆ ಒಳಗಾಗಿದ್ದ.

ಬ್ಯಾಂಕಿನಿಂದ ಹೊರ ಬಂದ ಕೂಡಲೆ ಪ್ರಸನ್ನ ಎದುರಾದ. ಪರಿಚಯದ ನಗು ಬೀರುವುದು ಸೌಜನ್ಯವೆನಿಸಿತು.

"ಹೇಗಿದ್ದೀರಾ ?" ಕೇಳಿದಳು.

"ನಿಂಗೆ ಹೇಗೆ ಕಾಣಿಸ್ತಾ ಇದ್ದೀನಿ ?" ರೆಪ್ಪೆಯಾಡಿಸದೆ ಅವಳನ್ನೆ ನೋಡಿದ "ಅವರವ್ರ ಬಗ್ಗೆ ಅವರವ್ರೇ....ಹೇಳ್ಬೇಕು ? ಬೇರೆಯವ್ರಿಗೆ ಹೇಗೆ ಗೊತ್ತಾಗುತ್ತೆ ?" ಆಗ ಅವಳೆದೆಯಲ್ಲಿ ನೋವಿನ ನೆರಳಾಡಿತು.

ವರ್ಷಗಳಷ್ಟು ಕಾಲ ನಿನ್ಸೊತ್ತೆ ಉಸಿರುಗಟ್ಟುವ ವಾತವರಣದಲ್ಲಿ ಬದುಕಿದ್ದೆ, ಪ್ರಸನ್ನ ನುಡಿದ ನುಡಿ ಮುತ್ತುಗಳು ಕಲ್ಲಿನ ಮೇಲೆ ಕೆತ್ತಿದಂತೆ ಅವಳೆದೆಯಲ್ಲಿ ಮೂಡಿತ್ತು.—ಹೇಗೆ ಮರೆತಾಳು ?

ಅದು ಪ್ರಸನ್ನನಿಗೂ ಅರ್ಥವಾಯಿತು "ನಾಟ್ ಬ್ಯಾಡ್ ಅಂತ ಹೇಳ್ಬಹುದು. ಹೋದ ತಿಂಗ್ಳು ಯಾಕೆ ಬರ್ಲಿಲ್ಲ ?" ಕೇಳಿದ.

ಅವಳಿಗೆ ಆಶ್ಚರ್ಯವಾಯಿತು. ಬರುವ, ಹೋಗುವವರಿಗೆ ಜಾಗ ಬಿಟ್ಟು ಪಕ್ಕದಲ್ಲಿ ನಿಂತರು.

"ತಾರೀಖು ಬದಲಾಗಿತ್ತು ಅಷ್ಟೆ. ಎಂಟನೇ ತಾರೀಖು ಬಂದಿದ್ದೆ. ಐದನೇ ತಾರೀಖು ಶಾಲೆಯಲ್ಲಿ ಮೀಟಿಂಗ್ ಇತ್ತು. ಇನ್ನು ಬರ್ಲಾ ?" ಮುಂದೆ ಹೆಜ್ಜೆ ಹಾಕಲು ನೋಡಿದಳು.

"ಹೇಗೆ....ಸಾಧ್ಯ ? ನನ್ನ ಕನ್ನಡಕ ಫ್ರೇಮ್ ಆಯ್ಕೆಗೆ ನಿನ್ನನ್ನೆ ಕರ್ಕೊಂಡ್ಹೋಗ್ಬೇಕೂಂತ....ಕಾಯ್ತಾ ಇದ್ದೀನಿ. ಚೆನ್ನಾಗಿಲ್ಲಂತ ನೀನೆ.... ಹೇಳಿದ್ದು" ನೆನಪಿಸಿದ. ಅವಳಿಗೆ ಪೇಚಾಟಕ್ಕೆ ಇಟ್ಟುಕೊಂಡಿತು.

ಕನ್ನಡಕದ ಫ್ರೇಮ್‌ದತ್ತ ನೋಡಿದಳು. ಅದರೊಳಗಿನ ಕಣ್ಣುಗಳಲ್ಲಿನ ಪ್ರೀತಿಯ ತೀಕ್ಷ್ಣತೆಗೆ ಬೆಚ್ಚಿದಳು. ಕ್ಷಣ ಅವಳ ಹೃದಯ ಎಲಿ ಎಲಿ ಒದ್ದಾಡಿತು. ಈ ನೋಟದ ಪಾಶದಲ್ಲಿಯೇ ಸಿಲುಕಿ ಹೆತ್ತವರನ್ನು ತೊರೆದು ಬಂದಿದ್ದು. ಈಗ ಆ ಸ್ಥಿತಿಯಲ್ಲಿರಲಿಲ್ಲ.

"ಸರಿ...." , ಪಾರ್ಕ್ ಮಾಡಿದ ವಾಹನಗಳತ್ತ ನೋಟ ಹರಿಸಿದಳು "ಸ್ಕೂಟರ್....ತಂದಿರೋದು...." ಅತ್ತ ಹೆಜ್ಜೆ ಹಾಕಿದ.

ವಹಿಕಲ್ ಕೊಂಡ ಮೇಲೆ ಅವನ ಜೊತೆ ಕೂತು ಓಡಾಡಬೇಕೆಂದು ಹಂಬಲಿಸಿದ್ದು ಎಷ್ಟು ಸಲ. ಅಕಸ್ಮಾತ್ ಕೂಡಿಸಿಕೊಂಡು ಹೋದರು ಅಸಹನೆ ಯಿಂದ ಕೂಡಿದ ಮುಖ, ಅಥವಾ ನಿರ್ಲಿಪ್ತವಾದ ನಡತೆ–ಅವಳ ಉತ್ಸಾಹಕ್ಕೆ ತಣ್ಣೀರು ಎರಚಿದಂತಾಗುತಿತ್ತು.

ನಿವೇದಿತಾ ಮುಂದೆ ಸ್ಕೂಟರ್ ತಂದು ನಿಲ್ಲಿಸಿದ, ಸುತ್ತಲು ನೋಟ ಹರಿಸಿಯೇ ಕೂತದ್ದು, ಅವನ ಸೊಂಟ ಬಳಸಲು ಹೋಗಲಿಲ್ಲ. ನೀಲಿಮಾಗೆ ಸೇರಿದವನು. ಅವಳಿಗೆ ದೊಡ್ಡದಾಗಿ ಭಾಷಣ ಮಾಡಲು ಬರದಿದ್ದರೂ ಒಂದು ಹೆಣ್ಣಿನ ದುಃಖ, ನೋವಿಗೆ ಮತ್ತೊಂದು ಹೆಣ್ಣು ಕಾರಣವಾಗುವುದು ನಾಗರೀಕತೆಯ ಲಕ್ಷಣವಲ್ಲ ಎನ್ನುವುದು ಅವಳ ಅಭಿಪ್ರಾಯ.

ಸ್ಕೂಟರ್ ಶ್ವೇತ ಆಪಿಕ್ಟಲ್ಸ್ ಮುಂದೆ ನಿಂತಿತು. ಇಳಿದು ಅವನಿಗೆ ಮುನ್ನವೇ ಒಳಗೆ ನಡೆದಳು. ಅವಳಿಗೆ ಇಷ್ಟವಾದ ಪ್ರತಿ ಫ್ರೇಮನ್ನು ಅವನಿಗೆ ಹಾಕಿಸಿ ನೋಡುತ್ತಿದ್ದಳು. ಕಡೆಗೆ ಒಂದು ಫ್ರೇಮ್ ಆಯ್ಕೆ ಮಾಡಿದಳು.

ಕಾಫೀ ಹಣ್ಣಿನ ಬಣ್ಣದ ತೆಳ್ಳನೆಯ ಫ್ರೇಮ್‌ಗೆ ಚಿನ್ನದ ಅಂಚು. ತುಸು ದೊಡ್ಡಗಿನ ಫ್ರೇಮ್ ಅವನ ಮುಖಕ್ಕೆ ಬಹಳ ಚೆನ್ನಾಗಿ ಕಾಣಿಸುತಿತ್ತು.

ತಾನೇ ಮೊದಲು ಬಂದು ಬಿಲ್‌ನ ಹಣಕ್ಕೆ ಮುಂಗಡ ತೆತ್ತು ರಸೀದಿ ಹಾಕಿಸಿದಳು.

"ನಾಳೆ ಬೆಳಗ್ಗೆ ಕೊಡ್ತೀನಿ" ಎಂದಾಗ ರಸೀದಿಯನ್ನ ಪ್ರಸನ್ನನ ಕೈಗೆ ಕೊಟ್ಟಳು "ಇನ್ನು ಆಯಿತಲ್ಲ, ನಾನ್ಹತೀನಿ...." ಎರಡೆಜ್ಜೆ ಮುಂದಿಟ್ಟಾಗ ಕೈ ಹಿಡಿದು ನಿಲ್ಲಿಸಿದ. ಅವಳಿಗೆ ಗಾಬರಿಯೇ ಆಯಿತು. "ಹೋಟಲ್‌ನಲ್ಲಿ ಊಟ ಮುಗಿಸಿಕೊಂಡೇ....ಹೋಗೋದು...."

ಕೊಸರಿಕೊಳ್ಳಲಾಗದಿದ್ದರೂ ಅವಳಿಗೇನು ಇಷ್ಟವಾಗಲಿಲ್ಲ. ಜೊತೆ ಯಲ್ಲಿಯೇ ಹೆಜ್ಜೆ ಹಾಕಿದಳು.

ಹಾಸ್ಯವಾಗಿ ನಗುತ್ತ, ಹರಟುತ್ತ ಊಟ ಮಾಡುತ್ತಿದ್ದ ಪ್ರಸನ್ನನನ್ನೆ ನೋಡಿದಳು. ತೃಪ್ತಿಯ ಬದುಕು ಜೀವನಕ್ಕೆ ಉಲ್ಲಾಸ. ಇಂದು ಮೊದಲ

ಸಲ ಅರ್ಥ ಕಂಡುಕೊಂಡಂತಾಯಿತು. ನೀಲಿಮಾ, ಪ್ರಸನ್ನ ಬೌದ್ಧಿಕವಾಗಿ ಸಮಾನರು. ಕ್ರಿಯಾಶೀಲತೆ, ಭಾವನೆಗಳನ್ನು ಹಂಚಿಕೊಳ್ಳಬಲ್ಲರು. ಭವಿಷ್ಯದ ಬಗ್ಗೆ ಒಂದು ಸ್ಪಷ್ಟತೆ ಇದೆ–ನಿವೇದಿತಾ ಏನೂ ಅಸೂಯೆ ಗೊಳ್ಳಲಿಲ್ಲ.

ಅವನ ಮೇಲಿನ ಅಸಹನೆ ಕಡಿಮೆ ಆದಂತಾಯಿತು "ಬರ್ತೀನಿ...." ಎರಡು ಕೈ ಜೋಡಿಸಿದಳು. ಹಿಂದಿನ ಹಾಗೆ ತಲೆಯ ಮೇಲೆ ಮೊಟಕಿ ಮುಖದ ಗಂಭೀರಭಾವವನ್ನ ಅಳಿಸಿ ಹಾಕಬೇಕೆನಿಸಿತು ಅವನಿಗೆ. ಆದರೆ.... ಸಾಧ್ಯವೇ ?

"ಮತ್ತೆ ಯಾವಾಗ ಸಿಕ್ತೀಯಾ ?" ಕೇಳಿದ.

ವಿಸ್ಮಯದಿಂದ ಅವನತ್ತ ನೋಡಿದಳು "ಯಾಕೆ ?" ಸನ್ನೆಯಿಂದ ಫ್ರೇಮಿನತ್ತ ತೋರಿಸಿದ "ಚೆನ್ನಾಗಿದೆಂತ....ಹೇಳ್ಬೇಕಲ್ಲ" ಎಂದ. ನಿವೇದಿತಾ ಮುಕ್ತವಾಗಿ ನಕ್ಕುಬಿಟ್ಟಳು.

"ಕನ್ನಡಿಯಲ್ಲಿ ನೋಡ್ಕೊಳ್ಳಿ, ಅಥ್ವಾ ನಿಮ್ಮ ಪ್ರೀತಿ ಪಾತ್ರರ ಕಣ್ಣಲ್ಲಿ ನೋಡಿ...." ನಡೆದು ಬಿಟ್ಟಳು.

ಪ್ರಸನ್ನಗೆ ಒಂದು ಹುಚ್ಚು ಯೋಚನೆ ಕಾಡಿತು. ಹಿಂದೆ ಕಾಲೇಜಿನಲ್ಲಿ ಓದುತ್ತಿದ್ದ ದಿನಗಳಲ್ಲಿ ಮಾಡಿದ ಹಾಗೆ ಹಿಂಬಾಲಿಸಿ, ಪ್ರೇಮ ಪತ್ರ ಕಳಿಸಿ, ಕವಿತೆಗಳನ್ನ ರಚಿಸಿ, ವಿರಹ ಗೀತೆಗಳನ್ನು ಹಾಡಿ–ಅವನಿಗೆ ನಗು ಬಂತು.

ಅವನು ಪಿರಿಯಡ್‌ಗೆ ಸರಿಯಾಗಿ ಕಾಲೇಜಿಗೆ ಬಂದ ನಂತರ ಸಿಕ್ಕಿದ ನೀಲಿಮಾ ಹುಬ್ಬೇರಿಸಿದಳು "ಬೇಗ ಬಂದರಲ್ಲ, ಮತ್ತೆಲ್ಲಾದ್ರೂ.... ಹೋಗಿದ್ರಾ ?" ಮೊದಲು ಇಲ್ಲವೆಂದು ತಲೆಯಾಡಿಸಿದ. ನಂತರ "ಗ್ಲಾಸ್‌ನ ಫ್ರೇಮ್ ಛೇಂಜ್ ಮಾಡ್ಸಬೇಕಿತ್ತು."

ಪ್ರಸನ್ನ ತಿಂಗಳುಗಳು ಕೂಡ ಆಗಿರಲಿಲ್ಲ ಕಣ್ಣುಗಳಿಗೆ ಕನ್ನಡಕ ಹಾಕಿ, ಮತ್ತೆ ಬದಲಾಯಿಸುವುದೆಂದರೇ ?

"ಏನಾದ್ರೂ....ಪ್ರಾಬ್ಲಮ್ ಇತ್ತಾ ?" ಕೇಳಿದಳು.

ಬರೀ ಮುಂಗುಳ್ಳಕ್ಕ ಅಷ್ಟೆ, ನೀಲಿಮಾ ಬೇರೆ ವಿಷಯ ಎತ್ತಿಕೊಂಡಳು. ಅದೂ ಇದೂ ಮಾತಾಡುತ್ತ ಪ್ರಾಧ್ಯಾಪಕರ ಕೊಠಡಿಗೆ ಬಂದರು.

ಮುವತ್ತೈದು....ಆದ್ಮೇಲೆ ಸೆಕೆಂಡ್ಸ್ ಹೊಡಕ್ಕೊಬೇಕು. ದಟ್.

ಮಿಶನ್ಸ್...." ಎಂದ ಪ್ರೊಫೆಸರ್ ಚಿದಂಬರ ಪಿಳ್ಳೈ ವಿಷಯವನ್ನ ಬಯಾಲಜಿಗೆ ಬದಲಾಯಿಸಿಕೊಂಡು ವಿಶ್ಲೇಷಿಸತೊಡಗಿದರು.

ಅದು ನೀಲಿಮಾ ಮನಸ್ಸಿನ ಮೇಲೆ ಏನು ಪರಿಣಾಮ ಬೀರಿತೋ, ಇಲ್ಲವೋ, ಆದರೆ ಡಾಕ್ಟರ್ ಮಾತು ತಟ್ಟನೆ ನೆನಪಾಯಿತು. ಈಗ ನೀಲಿಮಾ ವಯಸ್ಸು ನಲ್ವತ್ತು. ಒಂದು ರೀತಿಯಲ್ಲಿ ಮಧ್ಯ ವಯಸ್ಸಿನ ಪ್ರಾರಂಭದ ಅಂಚು. ಈಗ ವೈವಾಹಿಕ ಜೀವನದ ಪ್ರಾರಂಭ. ನಲ್ವತ್ತರ ನಂತರವೇ ಜೀವನದ ಪ್ರಾರಂಭ ಪ್ರಾಶ್ಚಾತ್ಯರ ಮಾತು. ಬದುಕಿನಲ್ಲಿ ಒಂದು ರೀತಿಯ ಪಕ್ವತೆ ಮೂಡಿದ ಕಾಲ.

ಕಾಲೇಜಿನಿಂದಲೂ ಒಟ್ಟಿಗೆ ಹೊರಟಿದ್ದು.

"ಸ್ವಲ್ಪ ನರ್ಸಿಂಗ್ ಹೋಂ ಕಡೆ ತಿರುಗಿಸಿ" ಎಂದಾಗ ಅವನಿಗೆ ತಲೆಯ ಮೇಲೆ ಕೈಯೊರಬೇಕೆನಿಸಿತು "ನೆನ್ನೆ ಡಾಕ್ಟರ್ ಬಂದಿದ್ದರಲ್ಲ, ಸೋ.... ಅವ್ರು ಹೇಳ್ದ ಪ್ರಕಾರ ನೆಕ್ಸ್ಟ್ ವೀಕ್ ಚೆಕ್‌ಅಫ್‌ಗೆ ಹೋಗೋಣ"

ನೀಲಿಮಾ ಅಸಹನೆಯಿಂದ ಕೂಗಿದಳು "ನಿಮ್ಗೇ ನನ್ನ ಕಷ್ಟ ಅರ್ಥ ಆಗೋಲ್ಲ, ಬೆಳಗಿನಿಂದ ಸೊಂಟನೋವು...." ಇನ್ನೊಂದು ಮಾತಾಡಲಿಲ್ಲ ಪ್ರಸನ್ನ.

ಕಾರು ನಿಂತಿದ್ದು ನರ್ಸಿಂಗ್ ಹೋಂ ಮುಂದೆಯೇ, ಪ್ರಸನ್ನ ಇಳಿಯಲಿಲ್ಲ.

"ನಾನು ಇಲ್ಲೇ ವೈಟ್ ಮಾಡ್ತೀನಿ" ಎಂದ ಅಂದರೇ ನಾನು ಬರುವುದಿಲ್ಲ ಎಂದು ಪರೋಕ್ಷವಾಗಿ ಹೇಳಿದಂತಾಯಿತು. "ಬರೀ ಸೆಲ್‌ಫಿಷ್...." ಒರಟಾಗಿ ಕಾರಿನ ಬಾಗಿಲು ದೂಡಿ ಇಳಿದು ಹೋದಳು.

'ಮಗು'ವೆನ್ನುವ ವೈಯುಕ್ತಿಕ ವಿಷಯ ಬಂದ ಮೇಲೆಯೇ ಅವರುಗಳು ಹೆಚ್ಚು ಹೆಚ್ಚು ಒಂದಾಗಿದ್ದು. ನೀಲಿಮಾ ಗಾಂಭೀರ್ಯ ಬಿಟ್ಟು ಹುಡುಗಿಯಂತೆ ಮೈಮರೆತಿದ್ದು, ಬಣ್ಣ ಬಣ್ಣದ ಕನಸು ಕಂಡಿದ್ದು.

ಎರಡು ಸಲ ನಿವೇದಿತಾ ಬಸುರಿಯಾದಾಗಲೂ ಬಹಳ ಕಷ್ಟದ ದಿನಗಳು. ಬರೀ ಅವಳ ಸಂಬಳ, ಪಾಠ, ಇವಿಷ್ಟರಿಂದಲೇ ಜೀವನ ಸಾಗಬೇಕಿತ್ತು. ಟಾನಿಕ್, ಹಾಲು ಇರಲಿ ಅವಳನ್ನು ಡಾಕ್ಟರ್ ಬಳಿಯಲ್ಲಿ ಚೆಕ್‌ಅಪ್‌ಗೆ ಕರೆದೊಯ್ಯಲು ಖರ್ಚಿಗೆ ಹೆದರುತ್ತಿದ್ದ ಕ್ಷಣಗಳು.

ಪ್ರಸನ್ನಗೆ ಹೃದಯಾ ಕಿತ್ತು ಬಾಯಿಗೆ ಬಂದಂತಾಯಿತು. ಅಂದು ಶಕ್ತಿ ಇರಲಿಲ್ಲ. ಸಶಕ್ತನಾದಾಗ ನಿಶ್ಚಿಂತೆಯಿಂದ ಹೊರ ಬಂದ. ಅವನ ಬಗ್ಗೆ ಅವನಿಗೆ ಬೇಸರವಾಯಿತು.

ಪ್ರೀತಿ, ಪ್ರೇಮ ಸಮಸ್ತವನ್ನು ಬೊಗಸೆ ಬೊಗೆಸೆಯಲ್ಲಿ ತುಂಬಿ ಕೊಟ್ಟ ಹೆಣ್ಣಿಗೆ ತಾನೇನು ಕೊಟ್ಟಿದ್ದು ?

ಡೋರ್ ಸದ್ದಿಗೆ ಇತ್ತ ತಿರುಗಿದ "ಇಲ್ಲಿ ಕೂತು ಕನಸು ಕಾಣೋ ಬದ್ಲು ಒಳ್ಗಡೆ ಬರಬಹುದಿತ್ತಲ್ಲ" ವ್ಯಂಗ್ಯವಿಲ್ಲದಿದ್ದರೂ ನೀಲಿಮಾ ಸ್ವರದಲ್ಲಿ ಕೋಪ ವಿತ್ತು. ಬರೀ ಮುಂಗುಳ್ನಕ್ಕ.

ಎರಡು ದಿನದ ಹಿಂದೆ ಡಾಕ್ಟರ್ ಫಿಲೋಮಿನಾನ ಭೇಟಿ ಮಾಡಿದ್ದ. "ನೀಲಿಮಾ ಪ್ರೆಗ್ನೆಂಟ್ ಅಂತ ಈಗ್ಲೇ ಹೇಳೋದು ಕಷ್ಟ. ಆಕೆ ಉತ್ಸಾಹ ನೋಡಿದ್ರೆ ..." ಗೋಡೆಯ ಮೇಲಿದ್ದ ಏಸುವಿನ ಫೋಟೋದತ್ತ ನೋಡಿದ್ದರು. ಸ್ಪಷ್ಟವಾಗಿ ಹೇಳಲಾರದೇ ಹೋಗಿದ್ದರು.

ಅವನಲ್ಲೂ ಕೂಡ ಒಂದು ರೀತಿಯ ಅಪನಂಬಿಕೆ. ಆದರೆ ಅದರ ಪರಿಣಾಮ ನೀಲಿಮಾ ಮೇಲೆ ಹೇಗೆ ಬೀರುತ್ತೆ ! ಎನ್ನುವ ಭಯ.

"ಡ್ರೈವಿಂಗ್ ತೀರಾ ಸ್ಲೋ ಆಗಿರಲಿ!...." ಕಾರು ಸ್ಟಾರ್ಟ್ ಆದಾಗ ಎಚ್ಚರಿಸಿದಳು "ಸಿಸ್ಟರ್ ಗಾಯಿತ್ರಿ....ಬೆಡ್ ರೆಸ್ಟ್ ಒಳ್ಳೇದೂಂದ್ರು. ರಜೆ ಹಾಕಿ ಬಿಡ್ತೀನಿ...." ಎಂದಾಗ ಅವನ ಹಣೆಯ ಮೇಲೆ ಬೆವರು ಶೇಖರ ವಾಯಿತು.

ಅವನೇನು ನೀಲಿಮಾನ ಮದುವೆಯಾದಾಗ ಇಂಥ ಕನಸುಗಳನೇನೂ ಕಂಡಿರಲಿಲ್ಲ. ಅಂಥ ಹಂತಗಳು ದಾಟಿದವ. ಅದೇನು ಹೊಸ ಅನುಭವ ವಲ್ಲದ್ದರಿಂದಲೋ, ಉತ್ಸಾಹವಿರಲಿಲ್ಲ.

ಭಾರತಿ ಬುಕ್ ಸೆಂಟರ್ ಮುಂದ ಕಾರು ನಿಲ್ಲಿಸೆಂದಳು. ಅದೇನು ಅಪರೂಪವಲ್ಲ. ಪ್ರಸನ್ನ ಕೂಡ ಸಂತೋಷಗೊಂಡ. ಆದರೆ ನೀಲಿಮಾ ಆಯ್ಕೆ, ಖರೀದಿ ನೋಡಿದಾಗ ಬೆಚ್ಚಿ ಬಿದ್ದ. ಅವಳಿಗೆ ತಿಳಿದ ಎಲ್ಲಾ ಭಾಷೆಗಳಲ್ಲಿನ ಪ್ರಿಗ್ನೆಸ್ಸಿ ಮತ್ತು ಡಿಲಿವರಿಗೆ ಸಂಬಂಧಿಸಿದ ಸಾಕಷ್ಟು ಪುಸ್ತಕಗಳು ಪ್ಯಾಕ್ ಆದಾಗ ಬಿಲ್ ತೆತ್ತು ಅವನ್ನ ಹೊತ್ತುಕೊಂಡು ಬರುವುದು ಅವನ ಹೊಣೆಯಾಯಿತು.

ಮನೆ ತಲುಪುವವರೆಗೂ ಒಂದು ಮಾತೂ ಆಡಲಿಲ್ಲ. ಪ್ರಸನ್ನ ಕಾರು ನಿಂತಾಗ ನೀಲಿಮಾ ಅತ್ತ ತಿರುಗಿದ.

"ಸಾಧಾರಣ ಹುಡ್ಗೀಯರ ಹಾಗೆ ಮಗುವಿಗೋಸ್ಕರ ಯಾಕಿಷ್ಟು ತಲೆ ಕೆಡಿಸ್ಕೋತೀಯಾ ! ಬೇರೆ ರೀತಿಯಲ್ಲಿ ಲೈಫ್ ಎಂಜಾಯಿ ಮಾಡುವಂಥ, ದಿನಗಳನ್ನು ಸಾರ್ಥಕವಾಗಿ ಬಳಸಿಕೊಳ್ಳುವಂಥ ಅವಕಾಶ ನಿನಗಿದೆ. ಈ ರೀತಿ ತೀರಾ ಹೆಚ್ಚಾಗುವುದು ನಿನಗೆ ಶೋಭಿಸುವಂಥದ್ದಲ್ಲ" ಅಷ್ಟು ಹೇಳುವ ಸಾಹಸ ಮಾಡಿದ.

ನೀಲಿಮಾ ಅಳಲೇ ಷುರು ಮಾಡಿದಳು. ಬೆಚ್ಚಿ ಬಿದ್ದ ಪ್ರಸನ್ನ, ಅವನ ಮುಂದಿನ ಚಿತ್ರ ಕರಗಲಾರಂಭಿಸಿತು. ಗತ್ತಿನಿಂದ, ತುಂಬು ಆತ್ಮವಿಶ್ವಾಸ ದಿಂದ ವಾದಗಳನ್ನು ಮಂಡಿಸುತ್ತಿದ್ದ ಬಾಬ್ ಕೂದಲನ. ಅಚ್ಚ ಬಿಳಿಯ ಮೈಬಣ್ಣ, ಶಿಸ್ತಾಗಿ ಉಡುಪು ತೊಡುತ್ತಿದ್ದ ನೀಲಿಮಾ ಮಾತ್ರ ಅವನಲ್ಲಿದ್ದಳು ಆದರೆ ಈ ನೀಲಿಮಾ....ಯಾರು ?

"ಐಯಾಮ್ ಸೋ ಸಾರಿ ನೀಲಿಮಾ... ಎಂದೂ ಈ ತರಹ ಮಾತಾ ಡೋಲ್ಲ". ಎದೆಗೊರಗಿಸಿಕೊಂಡು ಕಣ್ಣೊರೆಸಿ ಸಮಾಧಾನಿಸಿದ.

ಅವಳ ಬದಲಾದ ವ್ಯಕ್ತಿತ್ವ,ಮನಸ್ಥಿತಿಯ ಗುರ್ತಿಸಿದ್ದ.ಸಂಯಮ ತೀರಾ ಅಗತ್ಯವಾಗಿ ಕಂಡಿತು.

ಹೆಚ್ಚು ಅಧ್ಯಯನ, ಸ್ಟೂಡೆಂಟ್‌ಗಳ ಮಧ್ಯೆ ತನ್ನನ್ನು ತೊಡಗಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದ. ನೀಲಿಮಾ ಸಾನ್ನಿಧ್ಯ ಕೂಡ ಹಿಂಸೆಯೇ, ಭವಿಷ್ಯತ್‌ನ ಮಗುವಿನ ಬಗೆಗಿನ ಮಾತುಗಳು ಅವನ ತಾಳ್ಮೆಗೆ ಸವಾಲಾಗಿತ್ತು. ಇದು ಅವನ ಊಹೆಗೂ ಮೀರಿದ್ದು.

ಅಂದು ಇವನು ಲೈಬ್ರರಿ ಬಿಟ್ಟಾಗಲೇ ಹೊತ್ತಾಗಿತ್ತು. ಪ್ರಸನ್ನನ ಕಾರು ಬಸ್ ಸ್ಟಾಪ್‌ನ ಮುಂದೆ ಹಾದು ಹೋದಾಗ ನಿವೇದಿತಾನ ಕಂಡಂತಾ ಯಿತು. ಕಾರನ್ನ ಪಾರ್ಕ್‌ಮಾಡಿ ಹಿಂದಕ್ಕೆ ನಡೆದು ಬಂದ. ಮೈತುಂಬ ಸೆರ ಗೊದ್ದ ಅವಳು ಬಸ್ಸಿಗಾಗಿ ಬಹಳ ಹೊತ್ತಿನಿಂದ ಕಾದಿರಬಹುದು ಬೇಸರವಿತ್ತು ಮುಖದಲ್ಲಿ.

"ಹಲೋ....ನಿವೇದಿತಾ....?" ಎಂದ.

ಕ್ಯೂನಲ್ಲಿ ನಿಂತವಳು ಅವನತ್ತ ಬಂದಳು. ತಲೆ ನೋವಿನ ಬಗೆಗೆ ವಿಚಾರಿಸುವುದು ಬೇಕಿತ್ತು.

"ಆ ಫಾರ್ಮಸಿಗೆ ಹೋಗಿದ್ರಾ ? ತಲೆ ನೋವು ಹೇಗಿದೆ" ? ಎಂದಳು. ಪ್ರಸನ್ನ ನಕ್ಕುಬಿಟ್ಟ "ಹೋಗ್ಲೇ....ಇಲ್ಲ. ಸದಾ ತಲೆ ನೋವಿದ್ದು, ಇಲ್ಲದ ಸ್ಥಿತಿಯೇ ಮರ್ರು ಹೋಗಿದೆ. ಅದು ಕೂಡ ಒಗ್ಗಿ ಬಿಟ್ಟರೆ ಅಂಥ ಭಯಂಕರ ಕಾಯಿಲೆಯೇನು ಅಲ್ಲ" ಸನ್ನೆ ಮಾಡಿ ಕನ್ನಡಕದತ್ತ ಅವಳ ಗಮನ ಸೆಳೆದ "ಹೇಗೆ....ಕಾಣುತ್ತೆ ?" ಆದರೆ ಅವಳಿಗೆ ಅತ್ತ ಗಮನವಿಲ್ಲ.

"ನಿರಂತರವಾದ ತಲೆ ನೋವು ಒಳ್ಳೇದಲ್ಲ. ಮೊದ್ಲು ಎಲ್ಲಾದ್ರೂ ತೋರ್ಸಿ" ಅವಳ ಸ್ವರದಲ್ಲಿ ಆತಂಕವಿತ್ತು.

ಆವನೆದೆ ತುಂಬಿತು. ಕಣ್ಣು ಮುಂದೆ ಕಣ್ಣೀರಿನ ಪರೆ. ತಮಗಾಗಿ ಒಬ್ಬರು ತಳಮಳ ಪಡುವುದು ಮನುಷ್ಯ ಎಷ್ಟು ಇಷ್ಟಪಡುತ್ತಾನೆ.

"ಆಯ್ತು...."ಎಂದ.

ಮಂಕಾಗಿ ನಿಂತ ಅವಳತ್ತ ನೋಡಿದ. ಅಂದಿಗೂ ಇಂದಿಗೂ ಯಾವುದೇ ಬದಲಾವಣೆಯೇ ಇಲ್ಲ ಅವಳ ಉಡುಪು, ಅಲಂಕಾರದಲ್ಲಿ. ಅಷ್ಟರಲ್ಲಿ ಬಂದ ಬಸ್ಸು ನಿಂತಿದ್ದವರನ್ನು ತುಂಬಿಕೊಂಡು ಮುಂದಕ್ಕೆ ಹೋಗಿಯೇ ಬಿಟ್ಟಿತು. ಎಚ್ಚೆತ್ತ ಅವಳು 'ಓ....' ಎಂದಳು. ಇನ್ನೊಂದು ಬಸ್ಸಿಗೆ ಕಾಯುವುದು ಅಷ್ಟು ಸಮಂಜಸವಾಗಿ ಕಾಣಲಿಲ್ಲ ಅವಳಿಗೆ.

"ನನ್ನಿಂದ....ಬಸ್ಸು ಮಿಸ್ಸಾಯ್ತು ? ಏನಿಲ್ಲಿ....?" ಕೇಳಿದ.

ಪಟೇಲ್ ಮಲ್ಗಿ ಬಿಟ್ಟಿದ್ದಾರೇಂತ ಅಮೀರ್ ಫೋನ್ ಮಾಡಿದ್ದ. ಹೋಗಿದ್ದೆ, ಸ್ವಲ್ಪ ಜ್ವರ ಇತ್ತು. "ಯಾವುದೋ ಗುಂಗಿನಲ್ಲಿದ್ದಂತೆ ನುಡಿದ ನಿವೇದಿತಾ "ಆಟೋದಲ್ಲಿ....ಹೋಗ್ತೀನಿ...." ಖಾಲಿ ಬಂದ ಆಟೋದಲ್ಲಿ ಹತ್ತಿ ಕೂತುಬಿಟ್ಟಳು.

ಪ್ರಸನ್ನ ಸುಮ್ಮನೆ ನೋಡಿದ.

ಕಾರು ಪಟೇಲ್‌ನ ಮನೆಯತ್ತಲೇ ತಿರುಗಿದ್ದು. ಅಲ್ಲಿ ತಲುಪುವ ವೇಳೆಗೆ ತುಂತುರಾಗಿ ಷುರುವಾದ ಮಳೆ ಜೋರಾಯಿತು.

ಸ್ವೆಟರ್ ತೊಟ್ಟು ಅದರ ಮೇಲೆ ಶಾಲು ಹೊದ್ದ ಪಟೇಲ್ ಸೋಫಾ ಮೇಲೆ ಕಣ್ಮುಚ್ಚಿದ್ದ.

"ಯು ಬಾಸ್ಟರ್ಡ್ ...ಹುಷಾರಿಲ್ಲಂತ ಫೋನ್ ಕೂಡ ಮಾಡೋಕಾಗ ಲಿಲ್ವ?" ರೇಗಿಯೇ ಅವನ ಬಳಿಗೆ ಹೋಗಿದ್ದ. ಕಣ್ಣು ಬಿಟ್ಟ ಪಟೇಲ್ ಸರಿಯಾಗಿ ಕೂತು ಜೋರಾಗಿ ನಕ್ಕುಬಿಟ್ಟ. "ಫೋನ್ ಮಾಡೋಂಥ ಸೀರಿಯಸ್ಸಾಗ್ಲಿಲ್ಲ. ಅಂಥ ಸಮಯ ಬಂದಾಗ್ಲೂ ನಾನು ಒಂಟಿಯಾಗಿರೋಕೆ ಬಯಸ್ತೀನಿ. ಆ ಮೇಲಿನ ಕೆಲ್ಸಗಳು ಇದ್ದೇ ಇರುತ್ತೆ ನಿಮ್ಗೆ. ಬೇರೆಯವ್ರ ವಾಲ್ಯೂಬಲ್ ಸಮಯಾನ ಅನ್‌ನೆಸೆಸರಿಯಾಗಿ ಉಪಯೋಗಿಸ್ಕೋ ಬಾರ್ದು."

"ನಿನ್ನ ಫಿಲಾಸಫಿ....ನಿಲ್ಸು" ಸಿಡಿದುಬಿದ್ದ ಪ್ರಸನ್ನ.

ಬಹಳ ಹೊತ್ತು ಮಾತಾಡುತ್ತ ಮೈಮರೆತು ಕೂತ ಪ್ರಸನ್ನ ಹೊರಡಲು ಎದ್ದಾಗ ಪಟೇಲ್ 'ಊಟ ಮಾಡಿಕೊಂಡ್ಹೋಗು. ಇವತ್ತು ಸಾರು. ಅನ್ನ ನಿವೇದಿತಾ ಮಾಡಿಟ್ಟು ಹೋಗಿದ್ದಾಳೆ. ಬ್ರೆಡ್ಡು, ಹಾಲು, ಕಾಫಿ .... ಸಾಕಾಗಿದೆ" ಅವನು ಕೂಡ ಊಟ ಮಾಡಲು ಇಷ್ಟಪಟ್ಟ.

ಬಹಳ ಅಕ್ಕರೆಯಿಂದ ಊಟಕ್ಕೆ ಕೂತ ಪ್ರಸನ್ನ. ಮದುವೆಯಾದ ಹೊಸದರಲ್ಲಿ ಬಾಯಿ ತೆರೆದು ಅವಳ ಕೈಯಲ್ಲಿ ಊಟ ಮಾಡಿಸಿಕೊಳ್ಳುತ್ತಿದ್ದ ಅದು ಅಮೃತ ಸಮಾನವಾಗಿತ್ತೆಂದು ಇಂದು ಅವನಿಗೆ ಅನಿಸಿತು.

"ನೀಲಿಮಾ....ಹೇಗಿದ್ದಾರೆ ? ಊಟದ ಮಧ್ಯೆ ಪ್ರಸನ್ನನ ಪಟೇಲ್ ಕೇಳಿದ "ಕ್ವಟ್ .... ಓಕೇ. ಈಗ ಲೀವ್‌ನಲ್ಲಿದ್ದಾರೆ. ಫುಲ್ ರೆಸ್ಟ್ .... ಒಂದು ರೀತಿಯ ಅಧ್ಯಯನದಲ್ಲಿ ನಿರತಳು ಕೂಡ" ಅವಳು ಓದುವ ಪುಸ್ತಕಗಳನ್ನು ನೆನಪಿಸಿಕೊಂಡು ನಕ್ಕ.

"ವ್ಹಾಟ್...." ಪಟೇಲ್ ಹುಬ್ಬೇರಿತು.

ಎಲ್ಲಾ ವಿವರಿಸಿದ ಪ್ರಸನ್ನ ಬೇಸರ ತೋಡಿಕೊಂಡ. "ಇದು ನಂಗಂತು ಷಾಕ್. ಕೆಲವೊಮ್ಮೆ....ನಿಜಾವಾ ಅನ್ನೋಷ್ಟರ ಮಟ್ಟಿಗಿರುತ್ತೆ ನೀಲಿಮಾ ನಡತೆ, ಡಾಕ್ಟರೇಟ್ ಸಿಕ್ತು. ಆ ಸಂತೋಷವನ್ನ ಕೂಡ ಅನುಭವಿಸುವ ಸ್ಥಿತಿಯಲ್ಲಿಲ್ಲ ಅವಳು ಬಹುಶಃ ನೂರು ಡಾಕ್ಟರೇಟ್‌ಗಳು ಕೂಡ ಅವಳ ಮಗುವಿಗೆ ಸಮನಿರದು"

ಪಟೇಲ್ ನಗಲಿಲ್ಲ. ತೀರಾ ಗಂಭೀರವಾಗಿ ಚಿಂತಿಸಿದ. ಪ್ರಕೃತಿಯ

ತೀವ್ರ ಭಾವನೆಗಳ ತಾಕಲಾಟದಲ್ಲಿ ನರಳುವ ಹೆಣ್ಣಾಗಿ ಕಂಡಳು ನೀಲಿಮಾ.

"ಕ್ವಟ್ ನ್ಯಾಚುರಲ್....ಬೇಸರಿಸಿಕೊಳ್ಳೊಂಥದೇನಿಲ್ಲ" ಎಂದು ನುಡಿದ.

ಆದರೆ ಅವನು ಹೊರಟಾಗ ಪಟೇಲ್ ಒಂದು ಮಾತು ಹೇಳಿದ "ನಿನ್ನ ಬಗ್ಗೆ ನೀನು ಯೋಚ್ಸಿ ತೀರಾ ಸ್ವಾರ್ಥಿಯಾಗ್ಬೇಡ. ನೀಲಿಮಾ ಮೇಲೆ ಪ್ರೀತಿ, ಸಹಾನುಭೂತಿ ಎರಡೂ ಇರ್ಲಿ" ಬಿಳ್ಕೊಟ್ಟ.

ಪ್ರಸನ್ನನಿಗೆ ಪೂರ್ತಿ ತಲೆ ಕೆಟ್ಟಂತಾಯಿತು.

ಒಂದೆಡೆ ಕಾರು ನಿಲ್ಲಿಸಿ ಮಲ್ಲಿಗೆ ಹೂ ಕೊಂಡ. ನೀಲಿಮಾ ಭಾವನೆ, ಸಂತೋಷದಲ್ಲಿ ಪಾಲ್ಗೊಳ್ಳಲು ಇಚ್ಛಿಸಿದ.

ಮನೆಯ ಬಾಲ್ಕನಿಯಲ್ಲಿ ಕಾರು ನಿಂತು ಹೂವಿನ ಪೊಟ್ಟಣ ಕೈಗೆತ್ತಿಕೊಂಡಾಗಲೆ ನೆನಪಿಗೆ ಬಂದಿದ್ದು. ಕೆಲವೊಮ್ಮೆ ಬಾಬ್ ಆಗುತ್ತಿದ್ದ ಕೂದಲು ಮತ್ತೊಮ್ಮೆ ಯು ಆಕಾರದಲ್ಲಿ ಕತ್ತಿನವರೆಗಿಂತ ಭುಜದವರೆಗೂ ಹರಡಿಕೊಳ್ಳುತಿತ್ತು. ಜಡೆ, ಮತ್ಯಾವ ಹೇರ್‌ಸ್ಟೈಲ್‌ನಲ್ಲೂ ನೋಡಿರಲಿಲ್ಲ ನೀಲಿಮಾ ಕೂದಲನ್ನು.

ಪ್ರಸನ್ನ ಮನದಲ್ಲೇ ನಕ್ಕು ಹೂವನ್ನು ಒಳಗೊಯ್ದು ಮಲಗಿದ್ದ ನೀಲಿಮಾ ಮುಂದಿಟ್ಟ. ಮೊದಲು ನಕ್ಕರೂ ಆಮೇಲೆ ಸ್ಕ್ಲೀಪ್ ಮೂಲಕ ಹೂವನ್ನ ಕೂದಲಿಗೆ ಸಿಕ್ಕಿಸಿದಳು.

"ಹೇಗಿದೆ...." ಅವನೆಡೆ ಜಂಬದ ನೋಟ ಹರಿಸಿದಳು.

"ಬ್ಯೂಟಿಫುಲ್...." ಬಗ್ಗಿ ಅವಳ ಹಣೆಗೆ ಚುಂಬಿಸಿದ.

ಒಂದರ್ಧ ಗಂಟೆಯ ನಂತರ ಯಾವುದೋ ಮೂಡ್‌ನಲ್ಲಿದಂತೆ ಕೇಳಿದಳು "ಅಲೋಕ್....ಹುಟ್ಟಿದಾಗ ಹೇಗಿದ್ದ?" ಇದು ಅವನಿಗೆ ಅನಿರೀಕ್ಷಿತ. ಆ ನೆನಪುಗಳು ಅವನನ್ನೆಷ್ಟು ನೋಯಿಸುತ್ತದೆಯೆಂದು ಅವಳಿಗೆ ತಿಳಿಯದೆನೋ "ಬೇರೆ ಯೇನಾದ್ರೂ ಮಾತಾಡು ನೀಲಿಮಾ" ಸಂತೈಯಿಸಲು ನೋಡಿದ.

ಅವಳ ಮಗುವಿಗೆ ಸ್ಪಷ್ಟವಾದ ರೂಪುರೇಶೆ ಕೊಡಲು ಪುಟ್ಟ ಅಲೋಕ್‌ನ ಚಹರೆಯ ವಿವರ ಅವಳಿಗೆ ಬೇಕೇಬೇಕು.

"ಪ್ಲೀಸ್, ಅಲೋಕ್ ಹೇಗಿದ್ದಾ ?" ಪೀಡಿಸಿದಳು.

ಅವನ ತಲೆನೋವು ಇನ್ನಷ್ಟು ಜಾಸ್ತಿಯಾಯಿತು, "ಮಕ್ಳು ಹುಟ್ಟಿ

ದಾಗ ಬಹುಶಃ ಹೆಚ್ಚು ಕಡ್ಮೆ ಒಂದೇ ತರಹ ಇರ್ತಾರೆ. ಅಂಥದ್ದರಲ್ಲಿ.... ನಾನೇನು ಹೇಳ್ಲಿ ?" ಜಾರಿಕೊಳ್ಳಲು ನೋಡಿದ.

ಅವಳ ಪಟ್ಟು ಬಲವಾಗಿತ್ತು. "ನಾನು ಒಪ್ಪೋಲ್ಲ. ಒಂದಿಷ್ಟು ಹಿಂಟ್ಸ್ ಕೊಡಿ" ಅವನು ತಲೆಯಾಡಿಸಿಬಿಟ್ಟ. "ಇಂಪಾಜಿಬಲ್....ನಾನೇನೂ.... ಹೇಳ್ಲಾರೆ. ನಿಂಗೆ ಹುಟ್ಟಿದ ಮಕ್ಳು ಹೇಗಿರುತ್ತೆ ಅಂದರೆ....ಡಾ॥ ಫಿಲೋ ಮಿನಾ ಹೆಲ್ಪ್ ತಗೋ. ಅಲ್ಲಿ ಸದಾ ಡಿಲಿವರಿಗಳು ಇದ್ದೇ ಇರುತ್ತೆ". ಎದ್ದು ಹೊರಗೆ ಹೋದ.

ಅಲೋಕ್ ಹುಟ್ಟಿದಾಗ ಕೆಂಪಿಸ ಮುದ್ದೆಯಂತೆ ಎಂಟು ಪೌಂಡ್ ಇದ್ದ. ಕೈ ತುಂಬುವಂಥ ಮಗು. ಆದರೆ ಆ ಸಂದರ್ಭದಲ್ಲಿ ಒಳ್ಳೆಯ ಆರೈಕೆ ಇಲ್ಲದೆ ಇಪ್ಪತ್ತು ವರ್ಷ ತುಂಬುವ ಮೊದಲು ತಾಯಿಯಾದ ನಿವೇದಿತಾ ಹತ್ತಿಯಂತೆ ಹಾಸಿಗೆಗೆ ಅಂಟಿಕೊಂಡಿದ್ದಳು.

ಹೊರಗೆ ಅಡ್ಡಾಡುತ್ತಿದ್ದ ಪ್ರಸನ್ನನ ನೋಡಿ ಸೋಮೇಶ್ವರ್ ಬಂದರು.

"ಊಟ, ತಿಂಡಿ ತೀರಾ ಕಮ್ಮಿ ಮಾಡಿದ್ದಾಳೆ ನೀಲಿಮಾ. ಮಲಗಿದ್ದ ಕಡೆ ಅರಗೋದು ಕಷ್ಟ. ಸ್ವಲ್ಪ ಎದ್ದು ಓಡಾಡೋದು ಒಳ್ಳೇದು." ಎಂದಾಗ ಅವರತ್ತ ನಿಸ್ಸಹಾಯಕ ನೋಟ ಬೀರಿದ.

"ಈಗಾಗ್ಲೆ ಡಾಕ್ಟರನ್ನ ಹತ್ತಾರು ಸಲವಲ್ಲ ಒಂದು ನೂರು ಸಲವಾದ್ರೂ ಕನ್‌ಸಲ್ಟ್ ಮಾಡಿದ್ದಾಳೆ. ಸಾಕಷ್ಟು ಪುಸ್ತಕ ತರ್ಸಿಕೊಂಡು ಓದ್ತಾ ಇದ್ದಾಳೆ. ಅವ್ಳಿಗೆ ಹೇಳೋಕೆ ಹೋಗೋದು ಅಷ್ಟು ಸರಿ ಕಾಣೋಲ್ಲ. ನೀವು ಪ್ರಯತ್ನಿಸ ಬಹುದಷ್ಟೆ" ಅವರತ್ತಲೆ ತಳ್ಳಿಬಿಟ್ಟ.

ಆತ ಕೂಡ ಸುಮ್ಮನಾದರು ಮಗಳಿಗೆ ಮದುವೆ ಮಾಡಿಕೋ ಅಂದಾಗ ಮುಖ ತಿರುಗಿಸಿದ್ದಳು. ಇನ್ನು ಮಗಳಿಗೆ ಮದುವೆಯ ಅಗತ್ಯವಿಲ್ಲ ಎಂದು ಕೊಂಡಾಗ ಮಾಡಿಕೊಂಡಿದ್ದಳು. ಈಗ....ಮಗು....ಅವರೇನೂ ಹೇಳಲಾರರು.

ಮಲಗುವ ಕೋಣೆಗೆ ಹೋಗಲು ಅಂಜಿದ ಪ್ರಸನ್ನ ಅಧ್ಯಯನ ಕೋಣೆ ಯಲ್ಲಿನ ಸೋಫಾ ಮೇಲೆಯೇ ಮಲಗಿ ನಿದ್ರಿಸಿಬಿಟ್ಟ. ಒಂದು ರೀತಿಯಲ್ಲಿ ಆರಾಮಾದ ನಿದ್ದೆ.

ಬೆಳಿಗ್ಗೆ ನೀಲಿಮಾಗೆ ಮುಖ ತೋರಿಸಲು ಅಂಜಿದ. ಆದರೆ ಅವಳು ಆರಾಮವಾಗಿ ನಿದ್ರಿಸುತ್ತಿರುವುದನ್ನು ಕಂಡು ನಿಶ್ಚಿಂತನಾದ. ಚಟಪಟ ಓಡಾಡುತ್ತ

ಶಿಸ್ತಿನ ಸಿಪಾಯಿಯಂತಿದ್ದ ನೀಲಿಮಾ ಈಗ ತೀರಾ ಮಗುವಿಗಾಗಿ ಹಂಬಲಿಸುವ ಅಮಾಯಕ ಹೆಣ್ಣು ಮಾತ್ರ.

ಸ್ನಾನ ಮುಗಿಸಿ ಬಂದಾಗ ಪಕ್ಕದಲ್ಲಿದ್ದ ಡೈರಿ ನೋಡುತ್ತ ದಿಂಬಿಗೊರಗಿದ್ದಳು. ದಿನಗಳೇನು ಗಂಟೆ, ನಿಮಿಷಗಳನ್ನು ಲೆಕ್ಕ ಹಾಕುತ್ತಿದ್ದಳು.

"ಪ್ರಸನ್ನ....ಇಲ್ಬನ್ನಿ" ಡೈರಿಯ ಪುಟವನ್ನು ಅವನ ಮುಂದಿಡಿದಳು. ತಾರೀಖು, ದಿನಾಂಕ ನಮೂದಿಸಿ ಲೆಕ್ಕ ಹಾಕಿ ಇಟ್ಟಿದ್ದಳು. ಅದನ್ನ ಕಿತ್ತು ಪಕ್ಕಕ್ಕಿಟ್ಟ "ಸ್ವಲ್ಪ ಆ ಮೂಡ್‌ನಿಂದ ಹೊರ್ಗೆ ಬಾ ಹೇಗೂ ಇವತ್ತು ರಜ. ಒಂದಿಷ್ಟು ಆರಾಮಾಗಿ ಸುತ್ತಾಡಿ, ಒಂದು ಮೂವೀ ನೋಡಿ ಹೋಟಲ್‌ನಲ್ಲಿ ಊಟ ಮಾಡೋಣ" ಉತ್ಸಾಹ ತುಂಬಲು ನೋಡಿದ.

ಒಂದೆರಡು ರಿಪ್ರೋರ್ಟ್‌ಗಳು ನೆಗೆಟಿವ್ ಆಗಿಯೇ ಬಂದಿತ್ತು ಅದು ಡಾಕ್ಟರ್ ಅವನಿಗೆ ಪ್ರತ್ಯೇಕವಾಗಿ ತಿಳಿಸಿದ್ದರು. ಆಕೆ ಕೂಡ ನೀಲಿಮಾಗೆ ಹೇಳಲಾರದೆ ಹೋಗಿದ್ದರು.

"ಆಗೋಲ್ಲಪ್ಪ, ಹೊಟ್ಟೆಯಲ್ಲಿ ಭಾರ, ಸೊಂಟ ನೋವು" ಆಯಾಸದಿಂದ ಹೇಳಿದಾಗ ತೆಗೆದಿಟ್ಟ ಡೈರಿಯನ್ನು ಎತ್ತಿ ಅವಳ ಕೈಗೆ ಕೊಟ್ಟ. "ಇದು ಸರಿಯಲ್ಲ ನೀಲಿಮಾ, ನಿನಗೆ ನೀನೆ ಶಿಕ್ಷೆ ವಿಧಿಸಿಕೊಂಡಿದ್ದೀಯಾ. ಆರೋಗ್ಯದ ಜೊತೆ ಮನಸ್ಸಿನ ನೆಮ್ಮದಿಯು ಹಾಳು. ಇದ್ನ ಬಿಟ್ಟು ಬೇರೆನಾದ್ರೂ....ಓದು." ಅಕ್ಕ ಪಕ್ಕ ಹರಡಿಕೊಂಡಿದ್ದ ಪುಸ್ತಕಗಳನ್ನೆಲ್ಲ ಎತ್ತಿ ಬೇರೆಡೆ ಇಟ್ಟ. ಅವನಿಗೆ ರೇಗಿಹೋಗಿತ್ತು.

ಆರಾಮಾಗಿ ಕಣ್ಮುಚ್ಚಿದಳು ನೀಲಿಮಾ. ವಿದ್ಯೆ, ಪ್ರೊಫೆಷನ್‌ನಲ್ಲಿ ಸಾಕಷ್ಟು ಸಾಧಿಸಿದ್ದಳು, ಸಂಪಾದಿಸಿದ್ದಳು. ಆ ರೊಟೀನ್ ವರ್ಕ್ ಬೇಸರ ತರಿಸಿತ್ತು. ಅವಳ ಒಲವು ತೀರಾ ವೈಯುಕ್ತಿಕದೆಡೆ ಹರಿದಾಗ ತನ್ನ ರಕ್ತ, ಮಾಂಸಗಳಿಂದ ಕೂಡಿದ ಮಗುವಿನ ಹಂಬಲಿಕೆ ಷುರುವಾಗಿತ್ತು. ಮುಂದಿನ ಒಂಟಿತನದ ಭಯವೋ !

ಪ್ರಖ್ಯಾತ ನಟಿಯ ಉವಾಚ 'ನನಗೆ ಮಗು ಬೇಕು, ಗಂಡ ಬೇಡ' ಆಕೆಯೊಬ್ಬಳದಲ್ಲ ಇದು, ಕೆಲವರು ಇದನ್ನೇ ಆಯ್ದುಕೊಂಡಿದ್ದರು. ತಮ್ಮ ಮಗುವಿಗೆ ತಂದೆಯ ಸ್ಥಾನ ಕೂಡಲೂ ಒಬ್ಬ ಗಂಡಸಿನ ಅಗತ್ಯ.

ಅಂದು ಬಹು ಎಚ್ಚರದಿಂದ ನರ್ಸಿಂಗ್‌ಹೋಂಗೆ ಹೋಗಿ ಡಾ. ಫಿಲೋಮಿನಾಗೆ ತನ್ನ ಬಯಕೆ ತಿಳಿಸಿದರು. ಮೇಲ್ನೋಟಕ್ಕೆ ನಕ್ಕರೂ ನೊಂದುಕೊಂಡರು. ಅಂದು ಹುಟ್ಟಿದ ಮೂರು ಶಿಶುಗಳನ್ನ ತರಿಸಿ ಅವಳಿಗೆ ತೋರಿಸಿದರು. ಹೆಚ್ಚು ಓದಿಕೊಂಡ ಹೆಣ್ಣು ಇಂಥ ಸೆನ್ಸಿಟೀವ್‌ಗೆ ಹೇಗೆ ಒಳಗಾದಳು ಎಂದು ಕೂಡ ಯೋಚಿಸಿದರು.

ಅಂದಿನ ರಾತ್ರಿ ಒಂದು ಪ್ರಸ್ತಾಪವೆತ್ತಿದಳು.

"ಅಲೋಕ್, ಎಳೆ ಮಗುವಿನಲ್ಲಿ ತೆಗೆಸಿದ ಫೋಟೋ ಇಲ್ವಾ?"

ಭರ್ಜಿಯಲ್ಲಿ ಒಗೆದಂತಾಯಿತು ಪ್ರಸನ್ನಗೆ. "ನಂಗೊಂದು ನೆನಪಿಲ್ಲ. ನೆನ್ಹತ್ರ ಯಾವ್ದೇ ಫೋಟೋ ಇಲ್ಲ" ಖಾರದಿಂಪ ನುಡಿದ.

"ಎಲ್ಲಾ....ಸುಳ್ಳು. ನೆನಪಿರುತ್ತೆ ಕೂಡ. ಅವ್ನ ಫೋಟೋ ಇತ್ತೋ, ಇಲ್ಲವೋ ?" ಅವಳ ಮಾತಿಗೆ ತಲೆಗೆ ಕೈಯೊತ್ತಿ

"ಪ್ಲೀಸ್ ಅದೆಲ್ಲ ಬಿಡು ನೀಲಿಮಾ, ನಾನೆಪ್ಪು ಅದು ಕನಸೂಂತ ಮರೆಯಬೇಕೆಂದ್ಕೊಂಡ್ರು. ನೀನು ನೆನಪಿಸ್ತಿಯಲ್ಲ" ಖೇದಗೊಂಡ.

"ಇತ್ತೋ....ಇಲ್ಲವೋ...." ಅವಳದೇ ಹಟದ ಹಾದಿ.

ತಾನು ಒಬ್ಬ ಕ್ಲಾಸ್‌ಮೇಟ್‌ನಿಂದ ಎರವಲು ಕ್ಯಾಮರವಲ್ಲಿ ಹತ್ತು ಫೋಟೋಗಳನ್ನು ತೆಗೆದಿದ್ದೆ. ಮೂರರಲ್ಲಿ ಅವನು ಅಲೋಕ್, ನಾಲ್ಕರಲ್ಲಿ ನಿವೇದಿತಾ, ಮಗು, ಇನ್ನ ಉಳಿದ ಮೂರರಲ್ಲಿ ಅಲೋಕ್‌ನದು ಮಾತ್ರ. ಆಗ ಅವನು ಎರಡೂವರೆ ತಿಂಗಳಿನ ಮಗು.

"ಇತ್ತು, ಈಗ ಇದೆಯೋ, ಇಲ್ಲವೋ ಗೊತ್ತಿಲ್ಲ. ಇದ್ರೂ ನಿವೇದಿತಾ ಕೊಡೋಲ್ಲ. ಡೈವೋರ್ಸ್ ಸಿಕ್ಕುವ ಮುನ್ನವೇ ಬಿಡುಗಡೆ ಘೋಷಿಸಿ ನನ್ನ ಸಾಮಾನಿನ ಜೊತೆ ಹೊರ್ಗೆ ಕಳಿಸಿದ್ಲು. ಈಗ ಅವಳಲ್ಲಿರೋ ಯಾವ್ದೇ ಸಾಮಾನಿನ ಮೇಲೆ ನನ್ನ ಹಕ್ಕು ಇಲ್ಲ" ಸ್ಪಷ್ಟಪಡಿಸಿದ.

ಕೆಲವು ಕ್ಷಣ ನೀಲಿಮಾ ಸುಮ್ಮನೆ ಕೂತಳು. ತನ್ನ ಕನಸಿನ ಮಗುವನ್ನು ನೋಡಬೇಕೆಂಬ ಅವಳಲ್ಲಿನ ಭಯಂಕರ ಹಂಬಲ ಸಾಯಲು ಸಿದ್ಧವಿರಲಿಲ್ಲ.

"ನಂಗೇನು ಬೇಡ, ಅಲೋಕ್‌ನ ಫೋಟೋನ ತರ್ಸಿ. ಬರೀ

ನೋಡೋಕೆ ಮಾತ್ರ. ಒಂದ್ಸಲ ನೋಡ್ಬಿಟ್ರೆ....ಅವ್ನ ರೂಪುರೇಶೆಗೆ ಒಂದು ಕಲ್ಪನೆ ಕೊಡ್ಬಹ್ದು."

ನೀಲಿಮಾ ವಾದ ಅವನಿಗೆ ಸರಿಯಾಗಿ ಕಾಣಲಿಲ್ಲ.

"ಎಕ್ಸ್‌ಕ್ಯೂಜ್ ಮಿ....ನನ್ನಿಂದ ಆಗೋಲ್ಲ."

"ನೀವು ಡೈವೋರ್ಸ್ ಕೊಟ್ಟಿದ್ದು ನಿವೇದಿತಾಗೆ, ನೀವು ಕೇಳ್ಬೇಕಾಗಿರೋದು ಅಲೋಕ್‌ನ ಫೋಟೋ. ಇದೊಂದು....ಸಿಂಪಲ್ ವಿಷ್ಯ" ಸಮರ್ಥಿಸಿಕೊಂಡಳು ನೀಲಿಮಾ.

ಒಡಂಬಡಲು ಅವನು ಸಿದ್ಧವಿಲ್ಲ "ನಿಂಗೆ ಬೇಕಾದ್ರೆ ಅಲೋಕ್‌ನ ಫೋಟೋ ತೆಗ್ದು ತಂದುಕೊಡ್ತೀನಿ. ಅವ್ನ ಎಳೆ ಮಗುವಿನ ಫೋಟೋ ಸುದ್ದಿ ನಂಗೆ ಹೇಳ್ಬೇಡ" ಖಡಾತುಂಡವಾಗಿ ಹೇಳಿದ.

ಒಂದೆರಡು ದಿನ ನೀಲಿಮಾ ಮಾತು ಕಮ್ಮಿ ಮಾಡಿದಳು. ಅವನೇನು ಈ ವಿಷಯದಲ್ಲಿ ಜಗ್ಗಲಿಲ್ಲ. ಇದಕ್ಕಾಗಿ ಬೇರೊಂದು ವ್ಯಕ್ತಿಯನ್ನು ಹಿಡಿಯಬಹುದೆಂದು ಶಂಕಿಸಲು ಕೂಡ ಇಲ್ಲ.

ಎರಡು ಮೂರು ಸಲ ಪಟೇಲ್‌ನ ಫೋನ್‌ನಲ್ಲಿ ಸಂಪರ್ಕಿಸಿದಾಗ 'ಹುಷರಿಲ್ಲವೆಂದ', ನಾಲ್ಕನೇ ಸಲ 'ಪರ್ವಾಗಿಲ್ಲ' ಎಂದಾಗ 'ಒಂದಿಷ್ಟು ಮಾತಾಡೋದಿದೆ' ಖಂಡಿತ ಬನ್ನಿ" ಆಹ್ವಾನ ಕೊಟ್ಟಳು.

"ಸಾರಿ ಮೇಡಮ್, ಪ್ರೇಮ, ಮದುವೆ ಮತ್ತೆ ಯಾವುದಕ್ಕಾಗ್ಲಿ ನಾನು ಪುರೋಹಿತ್ಯ ವಹಿಸೋಲ್ಲ. ಡೈವೋರ್ಸ್ ಬಗ್ಗೆಯು ಅಷ್ಟೆ...." ಹೇಳಿದ.

ನೀಲಿಮಾ ಮುಖ ವಿವರ್ಣವಾದರೂ ಪಟ್ಟು ಸಡಲಿಸಲು ಒಪ್ಪಲಿಲ್ಲ.

"ಅಂಥದೇನಿಲ್ಲ, ಸ್ವಲ್ಪ....ಬನ್ನಿ. ಈಗ್ಲೇ....ಬನ್ನಿ."

"ಸಂಜೆ....ಬರ್ತೀನಿ" ಪಟೇಲ್ ಒಪ್ಪಿಕೊಂಡ.

ಬಂದವನಿಗೆ ಟೀಯ ಉಪಚಾರವಾಯಿತು. ಮುಖ್ಯ ವಿಷಯಕ್ಕೆ ಬಂದ.

"ವ್ಹಾಟ್ ಕೆನ್ ಐ ಡೂ ಫಾರ್ ಯು, ಮೇಡಮ್ ? ಬೇಗ....ಹೇಳಿ" ವಾಚ್ ನೋಡುತ್ತ ಕೇಳಿದ. ಅವನಿಗೆ ಪ್ರಸನ್ನ, ನೀಲಿಮಾ ವೈಯಕ್ತಿಕ ವಿಷಯ ಕೇಳಲು ಇಷ್ಟವಿಲ್ಲ.

ಆದರೆ ನೀಲಿಮಾ ಬೇಡಿಕೆ ಕೇಳಿದ ಮೇಲೆ ಮುಕ್ತವಾಗಿ ನಕ್ಕುಬಿಟ್ಟ.

"ಯಾಕಿಷ್ಟು, ಆತುರ ಮಿಸಸ್ ಪ್ರಸನ್ನ ? ಮಗು ಪ್ರಸನ್ನನ ಹಾಗೆ ಇರ್ಬಹುದ್ದು. ಅಥವಾ ನಿಮ್ಮಂತೆ....ಕೆಲವೊಮ್ಮೆ ನಾವುಗಳು ನೋಡದ ಕುಟುಂಬದ ಹಿರಿಯರಂತೆ, ನನಗೆ ನನ್ನ ಮುತ್ತಾತನ ಹೋಲಿಕೆ ಇದೆಯಂತೆ. ನನ್ತಂದೆ ಕೂಡ ಅವ್ರನ್ನ ನೋಡಿರ್ಲಿಲ್ಲಿ." ಸಮಜಾಯಿಸಿ ನೀಡಿದ ಅವಳ ಹುಚ್ಚುತನಕ್ಕೆ.

"ನೋ....ನೋ... ಪ್ಲೀಸ್ ಡೂ ಇಟ್. ನಂಗೆ ಅಲೋಕ್ ಮಗು ವಾಗಿದ್ದಾಗಿನ ಫೋಟೋ ಬೇಕು. ಬರೀ ನೋಡೋಕೆ, ಆಮೇಲೆ ನೀವೇ ನಿವೇದಿತಾಗಿ ಹಿಂದಿರುಗಿಸಿ ಬಿಡಿ" ಪುತ್ತದೇ ಮಾತು,

ಪಟೇಲ್ ಜೋರಾಗಿ ನಕ್ಕುಬಿಟ್ಟ.

"ಫೋಟೋಗೇ ಕಾರಣ ಕೊಡ್ಬೇಕಾಗುತ್ತೆ. ನಿಮ್ಮ ರೀತಿಯಲ್ಲಿ ಕಾರಣ ಕೊಟ್ಟರೆ, ತೀರಾ ಹಾಸ್ಯಾಸ್ಪದವಾಗುತ್ತೆ. ಪ್ರಯತ್ನ ಕೈ ಬಿಡಿ" ಸ್ಪಷ್ಟವಾಗಿ ಹೇಳಿದ.

ಅವಳ ಬಿಳಿಯ ಬಣ್ಣ ಮತ್ತಷ್ಟು ಬಿಳುಪೇರಿತೆ ವಿನಹಃ ಕೆಂಪಗಾಗಲಿಲ್ಲ.

"ಓಕೇ...." ಎದ್ದು ಹೋದಳು.

ಹೊರಗೆ ಬಂದವನು ಸೋಮೇಶ್ವರ್‌ರೊಂದಿಗೆ ಮಾತಾಡುತ್ತ ಅರ್ಧ ಗಂಟೆ ಕಳೆದ, ಪ್ರಸನ್ನ ಬರದಿದ್ದಾಗ-ಮೇಲೆದ್ದ. ಅವನಿಗೆ ಭ್ರಮ ನಿರಸನ ವಾಗಿರಬಹುದೆಂದುಕೊಂಡ.

ಅವನು ನೇರವಾಗಿ ಬಂದಿದ್ದು ನಿವೇದಿತಾ ಮನೆಗೇನೆ. ಮಗನಿಗೆ ಪಾಠ ಹೇಳುತ್ತಿದ್ದವಳು ಸಂತೋಷದಿಂದ ಬರಮಾಡಿಕೊಂಡಳು.

"ನಾಳೆ ಬೆಳಿಗ್ಗೆ ಬರೋಣಾಂತಿದ್ದೆ. ಜ್ವರ ಬಿಟ್ಟಿದ್ರೂ ಚೇತರಿಸಿಕೊಂಡಂ ತಿಲ್ಲ" ಎಂದಳು.

ಪಟೇಲ್ ಕೆನ್ನೆ, ಗಡ್ಡ ಸವರಿಕೊಂಡು ನಕ್ಕುಬಿಟ್ಟ.

ನಿವೇದಿತಾನ ಸೂಕ್ಷ್ಮವಾಗಿ ಗಮನಿಸಿದ. ಮೊದಲಿನ ಮಂಕುತನ, ವೇದನೆತುಂಬಿದ ಮುಖ ಸ್ವಲ್ಪ ಚೇತರಿಸಿಕೊಂಡಿತ್ತು. ಸಂತೃಪ್ತವಾಗಿ ಕಂಡಳು.

"ನಮ್ಮ ಅಲೋಕ್ ಎಕ್ಸ್ಟ್ರಾ ಆರ್ಡಿನರಿ ಆಗ್ಬೇಕು. ಚೆಸ್, ಟೆನ್ನಿಸ್, ಕ್ರಿಕೆಟ್, ಸಿಂಗಿಂಗ್, ನಟನೆ—ಅವ್ನಿಗೆ ಯಾವುದರಲ್ಲಿ ಆಸಕ್ತಿ ಇದೆಯೋಂತ ನೋಡ್ತಾ ಇದ್ದೀನಿ. ಹೇಗೂ ಅವ್ನಿಗೆ ಪೈಲಟ್ ಆಗೋ ಆಸೆ. ಅದ್ಕೆ ಬೇಕಾದ ಬೆಳವಣಿಗೆ, ಆತ್ಮವಿಶ್ವಾಸ ಬೇಕಲ್ಲ" ಮಗನ ಬಗ್ಗೆ ನಿವೇದಿತಾ ಹೇಳಿಕೊಂಡಾಗ ಮೋಡಿಗೆ ಒಳಗಾದವನಂತೆ ನೋಡಿದ.

"ಷ್ಯೂರ್..." ಅವನನ್ನ ಬಳಸಿ ಬೆನ್ನ ತಟ್ಟಿದ. "ಅಷ್ಟೊಂದು ಕಾಳಜಿ ವಹಿಸೋವಾಗ...." ಮುಂದೆ ಮಾತನಾಡಲಾಗದೆ ಹೋದ.

ಇಂಥ ಹೆಣ್ಣಿನ ಗುಣವೆ ಅತ್ಯಂತ ಪೂಜನೀಯ ಭಾರತೀಯ ಹೆಣ್ಣು ತನ್ನನ್ನು ತೆತ್ತುಕೊಂಡಾದರೂ ಕುಟುಂಬದ ಸಮಸ್ತ ಭವಿಷ್ಯಕ್ಕಾಗಿ ಹೋರಾಡುತ್ತಾಳೆ—ಆ ಕ್ಷಣ ಕಂಬನಿ ಅವನ ಕಣ್ಣಂಚಿಗೆ ಬಂದಿತು. ಹೋರಾಟದ ಮುಂಚೂಣಿಯಲ್ಲಿರುವ ಸೈನಿಕರಿಗೆ ಇಂಥ ಹೆಣ್ಣಿನ ಸ್ಫೂರ್ತಿಯೇ.

ಮೂವರು ಕೂಡಿಯೇ ಮುಂದಿನ ಗೋದಾವರಿಯವರ ಮನೆಗೆ ಬಂದರು. ಲೆಕ್ಕ ನೋಡುತ್ತಿದ್ದ ಆಕೆ ಸಂಭ್ರಮದಿಂದ ಬರಮಾಡಿಕೊಂಡರು.

ಅಷ್ಟರಲ್ಲಿ ಒಂದು ಹೆಣ್ಣಿನ ಹಿಂಸೆ ಬಂತು. ಅವರನ್ನ ಹುಡುಕಿಕೊಂಡು. ಆಧುನಿಕ ವೇಷ ಭೂಷಣಗಳ, ಕಷ್ಟ, ಕಾರುಣ್ಯಕ್ಕೆ ಸಿಕ್ಕದ ಸುಂದರ ಹೂಗಳು.

ಸ್ವಲ್ಪ ದಢೂತಿಯಾಗಿದ್ದ ಹೆಣ್ಣು ಒಂದು ಪಾಂಪ್ಲೇಟ್ ತೆಗೆದು ಮೊದಲು ಗೋದಾವರಿಗೆ ಕೊಟ್ಟರೂ ಇವರಿಬ್ಬರಿಗೂ ಕೊಡಲು ಮರೆಯಲ್ಲಿಲ್ಲ,

ಅಶ್ಲೀಲ ಭೀತಿ ಚಿತ್ರಗಳ ವಿರುದ್ಧ ಹೋರಾಟ ಶೀರ್ಷಿಕೆಯ ಕೆಳಗೆ ಮಾಡೆಲ್‌ಗಳಿಗಾಗಿ, ಸಿನಿಮಾಗಳಲ್ಲಿ, ಹೆಣ್ಣನ್ನು ಬಳಸಿಕೊಳ್ಳುತ್ತಿರುವ ರೀತಿ, ಗೋಡೆಗಳ ಮೇಲೆ ಅಶ್ಲೀಲವಾದ ಪೋಸ್ಟರ್‌ಗಳನ್ನು ಹಚ್ಚಿ ಹೆಣ್ಣಿಗೆ ಮಾಡುತ್ತಿದ್ದ ಅವಮಾನಗಳ ಬಗ್ಗೆ ಸ್ಥೂಲವಾದ ವಿವರವಿತ್ತು. ಅದರ ಜೊತೆ ಯಾವ ಯಾವ ಚಿತ್ರಗಳಲ್ಲಿ ಹೆಣ್ಣನ್ನ ಹೇಗೆ ಚಿತ್ರಿಕರಿಸಲಾಗಿದೆ. ಯಾವ ವಸ್ತುಗಳ ತಯಾರಿಕೆಯಲ್ಲಿ ಹೆಣ್ಣನ್ನು ಕನಿಷ್ಟ ಉಡುಪಿಲ್ಲದೆ ಹೇಗೆ ಬಳಸಿಕೊಳ್ಳಲಾಗಿದೆ ಎಂಬುದನ್ನು ಕೂಡ ಕೊಡಲಾಗಿತ್ತು.

ಓದಿಕೊಂಡ ಗೋದಾವರಿ ಅವರುಗಳತ್ತ ನೋಟ ಹರಿಸಿದರು.

"ಈಗ ನನ್ನಿಂದ ಏನಾಗ್ಬೇಕಿದೆ ?"

ಇನ್ನೊಬ್ಬಾಕೆ ಆವೇಶದಿಂದ ಹೂಂಕರಿಸಿದಳು "ಇದೆಲ್ಲದರ ವಿರುದ್ಧ

ನಮ್ಮ ಪ್ರತಿಭಟನೆ ಇದೆ. ಅದಕ್ಕೆ ಮೆರವಣಿಗೆ, ಸಭೆ, ಘೇರಾವೋ, ಸತ್ಯಾಗ್ರಹ ಇಂಥ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ನಿಮ್ಮ ಸಹಕಾರಬೇಕು" ಗೋದಾವರಿಯವರು ಸುಮ್ಮನೆ ಕೂತು ಬಿಟ್ಟರು.

ಅವರಿಗೆ ಮಾತಾಡಲು ಅವಕಾಶ ಕೊಟ್ಟರು. ನಂತರ ಒಳಗೆ ಎದ್ದು ಹೋದರು. ಬಂದವರಿಗೆ ಬಿಸ್ಕತ್, ಹಾರ್ಲಿಕ್ಸ್ ಉಪಚಾರ.

ತುಂಬ ಸ್ಮಾರ್ಟಾಗಿ, ಜಬರ್ಾಗಿ ಕೂತಿದ್ದ ಪಟೇಲ್‌ನತ್ತ ನೋಟ ಹರಿಸಿ ಹರಿಸಿ ನೋಡಿದರು. ಒಬ್ಬರಿಗೆ ಅವನ ಒತ್ತು ಮೀಸೆ ಚೆನ್ನಾಗಿ ಕಂಡರೆ, ಇನ್ನೊಬ್ಬರಿಗೆ ಅವನ ಮುಖದ ಒರಟುತನ ಇಷ್ಟವಾಯಿತು.

ಅವರ ಕಣ್ಣುಗಳಿಗೆ ಆಹಾರವಾಗಲಿಚ್ಛಿಸಿದ ಪಟೇಲ್ ಎದ್ದು ಹೊರಗೆ ಹೋದ.

"ನೀವು ಮತ್ತೆ ಮದ್ವೆಯಾದ್ರೆ?" ಒಬ್ಬ ಹೆಣ್ಣು ಕೇಳಿದಳು ನಿವೇದಿತಾನ "ಇಲ್ಲ...." ಚುಟುಕಾಗಿತ್ತು ಅವಳ ಉತ್ತರ. "ಯಾಕೆ ಹಿಂಜರಿದ್ರಿ ? ನೀವು ಮದ್ವೆಯಾಗಿ ಬುದ್ಧಿ ಕಲಿಸ್ಬೇಕಿತ್ತು" ಮತ್ತೊಬ್ಬಳ ನುಡಿ ಮುತ್ತು.

"ಯಾರಿಗೆ ಬುದ್ಧಿ ಕಲಿಸೋದು ?" ನಿವೇದಿತಾ ಪ್ರಶ್ನೆ ತೀಕ್ಷ್ಣವಾಗಿತ್ತು "ಇನ್ನ....ಯಾರ್ಗೇ...." ಎಂದರೂ ಯಾರೆಂದು ಸ್ಪಷ್ಟ ಪಡಿಸಲು ತಿಣುಕಾಡಿದರು.

ಗೋದಾವರಿ ಏನೋ ಹೇಳಿ ಕಳಿಸಿದರು.

ಹೊರಟ ಅವರುಗಳನ್ನೆ ನೋಡಿದ. ಚಮಕಿಸುವ ಸೊನಾರಿಯಂತೆ ತಳಪಳ ಹೊಳೆಯುತ್ತಿದ್ದರು. ಸೀರೆ, ಕುಪ್ಪಸ ಧರಿಸಿದ್ದರೂ ಸಾಧ್ಯವಾದಷ್ಟು ನಗ್ನತೆಯನ್ನು ಕಾಪಾಡಿಕೊಂಡು ಬಂದಿದ್ದರು. ವಿಪರೀತ ಮೇಕಪ್‌ನಡಿಯಲ್ಲಿ ಸಹಜ ಸೌಂದರ್ಯ ಸತ್ತು ಹೋಗಿತ್ತು. ಇವರೆಲ್ಲ ಮದುವೆಯಾದವರು. ಆದರೆ ಇಂಥ ಅತೃಪ್ತ ಪ್ರದರ್ಶನವೇಕೆ ?

ಇಂಥ ಬೆಳಕನ್ನೆ ಕಂಡು ಪ್ರಸನ್ನ ಮೋಸ ಹೋಗಿರಬಹುದೇ ? ಬೀದಿಯಲ್ಲಿ ಉರಿಯುವ ಸೋಡಿಯಂ ದೀಪದ ಬೆಳಕಿನಲ್ಲಿ ದೇವರ ಮನೆಯ ನಂದಾ ದೀಪವಿಟ್ಟು ನೋಡುವ ಸಾಹಸ—ಮನದಲ್ಲೇ ನಕ್ಕ

"ಅಂತೂ ಮಹಿಳೆಯರು ಹೋರಾಟದ ಮುಂಚೂಣಿಯಲ್ಲಿದ್ದಾರೆ" ನಕ್ಕ

ನಿವೇದಿತಾಳ ಪ್ರತಿಕ್ರಿಯೆ ಇಲ್ಲ. "ಇದೊಂದು ದುರಂತ !" ಗೋದಾವರಿ ನಿಟ್ಟುಸಿರು ಚೆಲ್ಲಿದರು.

* * *

ಈತ್ತೀಚೆಗೆ ನಿವೇದಿತಾ ಮತ್ತಷ್ಟು ಚಟುವಟಿಕೆ ಹಮ್ಮಿಕೊಂಡಳು. ಕೆಲಸದ ಜೊತೆ ವಿದ್ಯಾಭ್ಯಾಸ. 'ಅಶ್ಲೀಲ ಭಿತ್ತಿ ಚಿತ್ರಗಳ ವಿರುದ್ಧ ಪ್ರಬುದ್ಧ ಮಹಿಳೆಯ ಹೋರಾಟ' ಎನ್ನುವ ಶೀರ್ಷಿಕೆಯಡಿಯಲ್ಲಿ ಒಂದು ಉತ್ತಮ ಲೇಖನ ಸಿದ್ಧಪಡಿಸಿ ಪತ್ರಿಕೆಗೆ ಕಳಿಸಿದಳು.

ನಮ್ಮ ಧರ್ಮ ಗ್ರಂಥಗಳಿಂದ ಹಿಡಿದು ಇಂದಿನ ಸ್ತ್ರೀ ಸಮುದಾಯದ ವರೆಗಿನ ಕಲೆ, ಸಾಹಿತ್ಯ, ಸಂಗೀತದಿಂದ ಹಿಡಿದು ಕಲ್ಲಿನಲ್ಲಿ ರೂಪುಗೊಂಡ ವನಿತೆಯರನ್ನು ಮೊದಲ್ಗೊಂಡು ಸಿದ್ಧಪಡಿಸಿದ ಲೇಖನ ಅತ್ಯಂತ ಪ್ರಬುದ್ಧ ವಾಗಿತ್ತು. ಓದುಗರಿಂದ ಉತ್ತಮ ಪ್ರತಿಕ್ರಿಯೆಯು ಸಿಕ್ಕಿತು. ಅದು ತನ್ನದೇ ಬರಹ ಎಂದು ಯಾರೊಂದಿಗೂ ಹೇಳಿಕೊಳ್ಳಲು ಹೋಗಲಿಲ್ಲ.

ಅಂದು ಬಸ್ ಬಂದಿರಲಿಲ್ಲ. ಅಲೋಕ್‌ನ ಕಾನ್ವೆಂಟಿಗೆ ಬಿಡಲು ತಾನೇ ಆಟೋದಲ್ಲಿ ಹೋದಳು. ಕಾಯುವಂತೆ ಕಾರಿನ ಬಳಿ ಪ್ರಸನ್ನ ನಿಂತಿದ್ದ. ಆಗಾಗ ಬಂದು ಮಗನನ್ನು ಭೇಟಿ ಮಾಡುವುದು ಅವಳಿಗೆ ತಿಳಿದ ವಿಷಯವೇ.

"ಗುಡ್ ಮಾರ್ನಿಂಗ್...." ಎಂದ ಪ್ರಸನ್ನ ಬರುತ್ತ,

ಇಳಿದ ಆಟೋನ ಹಾಗೆಯೇ ನಿಲ್ಲಿಸಿಕೊಂಡ ನಿವೇದಿತಾ "ವೆರಿ ಗುಡ್ ಮಾರ್ನಿಂಗ್....ಬರ್ತೀನಿ ಅಲೋಕ್" ಹತ್ತಿ ಮಗನಿಗೆ ಕೈ ಬೀಸಿದಳು.

ಅಲೋಕ್ ಮಗನನ್ನ ಹತ್ತಿರಕ್ಕೆಳೆದುಕೊಂಡು ಆಟೋ ಹೋದತ್ತಲೇ ನೋಡಿದ. "ಇವತ್ತು ಲೀವ್‌ಲೆಟರ್ ಕೊಟ್ಟು ಬಾ. ಎಲ್ಲಿಗೋ ಹೋಗೋಣ" ಮಗನಿಗೆ ಹೇಳಿದ.

ಫಿಯೆಟ್‌ನತ್ತ ನೋಡಿದ ಅಲೋಕ್ ಅಷ್ಟು ದೂರಕ್ಕೆ ಹೋಗಿ ನಿಂತ "ಟೆಸ್ಟ್ ಇದೆ...." ಎಂದವನು ತಿರುಗಿ ತಿರುಗಿ ಫಿಯೆಟ್ ಕಡೆ ನೋಡುತ್ತ ಶಾಲೆಗೆ ಓಡಿ ಬಿಟ್ಟ.

ತಪ್ಪಿನ ಅರಿವಾಯಿತು ಪ್ರಸನ್ನಗೆ. ಅಲೋಕ್ ಫಿಯೆಟ್ ಹತ್ತಲು ನಿರಾಕರಿಸುತ್ತಿದ್ದ. ಒಂದು ರೀತಿಯ ದ್ವೇಷ ಅದರ ಬಗ್ಗೆ. ಅಂಥ ಸಂದರ್ಭ

ದಲ್ಲಿ ಅವನ ಕಣ್ಣುಗಳು ಉರಿಯುತ್ತಿದ್ದವು. ಜ್ವಾಲಾಮುಖಿಯಂತೆ ಕಾಣು ತ್ತಿದ್ದ.

ಎರಡು ದಿನದಿಂದ ನೀಲಿಮಾ ಅವನನ್ನು ಕಾಡುತ್ತಿದ್ದಳು. ಕರ್ಕೊಂಡ್ಬನ್ನಿ, ಹತ್ತಿರದಿಂದ ನೋಡ್ತೀನಿ." ಅವನಿಗೆ ಇದೊಂದು ಸಮಸ್ಯೆ ಹೋಟಲ್‌ನಲ್ಲಿ, ಹುಟ್ಟಿದ ಹಬ್ಬದ ದಿನ ನೋಡಿದ್ದೆಯಲ್ಲ, ಮತ್ತೇನಿದೆ ಅವನಲ್ಲಿ ನೋಡೋಕೆ....ವಿಶೇಷ ?" ಸಮಾಳಿಸಲು ನೋಡುತ್ತಿದ್ದ. ಅವಳದು ಒಂದೇ ಪಟ್ಟು.

ಅಲೋಕ್‌ನ ಕರೆದೊಯ್ಯಲು, ಅಥವಾ ನೋಡಲು ಬರುವಾಗ ಸ್ಕೂಟರ್‌ನಲ್ಲಿಯೇ ಬರುತ್ತಿದ್ದ. ಹತ್ತಿ ಕೂಡುತ್ತಿದ್ದ ಸವರಿ ನೋಡುತ್ತಿದ್ದ. 'ತಾನು, ಮಮ್ಮಿ, ಡ್ಯಾಡಿಯ ಜೊತೆ ಅದರ ಮೇಲೆ ಕೂಡುತ್ತಿದ್ದುದ್ದನ್ನು ನೆನಪಿಸಿಕೊಳ್ಳುತ್ತಿದ್ದನೇನೋ—ಅತ್ಯಂತ ಹಸನ್ಮುಖಿಯಾಗಿ ಕಾಣುತ್ತಿದ್ದ.

ನೀಲಿಮಾ ಕಾದಿದ್ದಳು. "ಎಲ್ಲಿ....ಅಲೋಕ್ ?" ತಲೆಯಾಡಿಸಿದ. ಅವ್ನಿಗೆ ಟೆಸ್ಟ್ ಇದೆಯಂತೆ. ಎಂದಾದ್ರೂ ಕರ್ಕೊಂಡ್ಬರ್ತೀನಿ" ಎಂದ. ಅವಳ ಮುಖ ವಿವರ್ಣವಾಯಿತು.

ಹೊರಗಿನ ಚಟುವಟಿಕೆ ಪೂರ್ತಿ ತೊಡೆದುಕೊಂಡ ನೀಲಿಮಾ ಮುಖದ ವರ್ಚಸ್ಸೇ ಕಡಿಮೆಯಾಗಿದೆಯೆನಿಸಿತು.

"ನಾನೇ....ಹೋಗಿ ನೋಡ್ತೀನಿ" ಎಂದಳು ಹಟದಿಂದ.

ಅವನಿಗೆ ಕೈ ಜೋಡಿಸುವಂತಾಯಿತು. "ಪ್ಲೀಸ್, ಸ್ವಲ್ಪ ಅರ್ಥ ಮಾಡ್ಕೋ, ನಾನೇ ಕರ್ಕೊಂಡ್ಬರ್ತೀನಿ. ಯಾಕೆ ಇಷ್ಟೊಂದು....ಆತ್ರ ?" ತಲೆ ಚಿಟ್ಟಿಡಿದಂತಾಯಿತು.

"ಈ ವಾರದಲ್ಲಿ ಖಂಡಿತ ಕರ್ಕೊಂಡ್ಬರ್ತೀನಿ" ಎಂದ ಮೇಲೆಯೇ ಅವಳು ಸುಮ್ಮನಾಗಿದ್ದು.

ಇದೊಂದು ರೀತಿ ತಲೆ ಬಿಸಿ ಪ್ರಸನ್ನನಿಗೆ.

ಬೆಳ ಬೆಳಗ್ಗೆ ಪಟೇಲ್‌ನ ಹುಡುಕಿಕೊಂಡು ಬಂದ. ವ್ಯಾಯಾಮ ಮಾಡುತ್ತಿದ್ದವನು ಹುಬ್ಬು ಹಾರಿಸಿ "ಏನೀ ಗುಡ್ ಆರ್ ಬ್ಯಾಡ್ ನ್ಯೂಸ್ ...." ನಗುತ್ತಲೇ ಬೆವರೊರೆಸುತ್ತ ಬಂದ.

"ಪಶ್ಚಾತ್ತಾಪ ಪಡೋಂಗೇ ಆಗಿದೆ. ಬದ್ಕು ಒಂದು ರೀತಿ ತೀರಾ

ನೀರಸ" ಜಿಗುಪ್ಸೆಗೊಂಡವನಂತೆ ನುಡಿದ. ಪಟೇಲ್ ತಳ್ಳಿ ಹಾಕಿದ. "ದೇರ್ ಈಸ್ ನೋ ಗ್ರೇಟರ್ ಆರ್ಟ್ ದ್ಯಾನ್ ಲೈಫ್ ಅಂದರು ಗಾಂಧೀಜಿ. ಜೀವನಕ್ಕಿಂತ ಸುಂದರವಾದ ಕಲಾಕೃತಿಯೇ ಇಲ್ಲ....ಅದ್ನ ಕುರೂಪಗೊಳಿಸೋದು ಆ ವ್ಯಕ್ತಿಯ ದುರಂತ ಅಷ್ಟೆ. ಏನು ನಿನ್ನ ಪ್ರ್ಯಾಬ್ಲಮ್ ?" ಅವನನ್ನ ಕೂಡಿಸಿ ತಾನು ಕೂತ.

ಬೆಳಗಿನ ಸೂರ್ಯನ ಹೊಂಗಿರಣಗಳ ಪ್ರಕಾಶ ಮಾನವ ಜೀವನಕ್ಕೆ ಚೈತನ್ಯವನ್ನ ನೀಡುವಂಥ ದಿವ್ಯ ಪ್ರಕಾಶ. ಸೂರ್ಯನತ್ತ ನೋಡಿ ದೀರ್ಘ ಶ್ವಾಸವೆಳೆದು ದಬ್ಬಿದ ಪಟೇಲ್.

ಹೊರಗಿನ ಬಾಲ್ಕನಿಯ ತುಂಬೆಲ್ಲ ಸೂರ್ಯನ ರಶ್ಮಿಗಳು ತುಂಬಿಕೊಂಡಿದ್ದವು. ಕೂತ ಬೆತ್ತದ ಛೇರನ್ನ ಸ್ವಲ್ಪ ಹಿಂದಕ್ಕೆ ಸರಿಸಿಕೊಂಡು ಕೂತ ಪ್ರಸನ್ನ.

ಟೀ ತಂದಿಟ್ಟ ಅಮೀರ್ "ನಮಸ್ತೆ....ಸಾಬ್...." ಎಂದ ತಲೆ ಕೆರೆದು ಕೊಳ್ಳುತ್ತ. ಅವನ ತೋಳಿಡಿದು ಜಗ್ಗಿದ ಪಟೇಲ್. "ನೀನು ತಲೆ ಕೆರೆಯೋದು ಬಿಡದಿದ್ರೆ ಎಂದೋ ಷೂಟ್ ಮಾಡಿಬಿಡ್ತೀನಿ" ಗದರಿಸಿ ಒಳಗೆ ತಳ್ಳಿದ.

ಟೀ ಕುಡಿಯುತ್ತ ಅವನ ಬಗ್ಗೆ ಹೇಳಿದ. "ಜೀತಕ್ಕೆ ಒಳಗಾದವನು. ಟಿಂಬರ್ ಕಂಟ್ರಾಕ್ಟರ್ ಮನೆಗೆ ಬಂದಾಗ ಅವ್ನಿಗೆ ಏಳು ವರ್ಷವಂತೆ. ಅವ್ರಪ್ಪ ಮಾಡಿದ ಸಾಲಕ್ಕೆ ಬಡ್ಡಿ ತೀರಿಸೋಕೊ....ಅವ್ನಿಂದ ಆಗ್ಲಿಲ್ಲ. ಸ್ಯಾಂಡಿಸ್ಟ್ ಪೀಪಲ್ಸ್....ಅವನನ್ನ ಮೂಲೆಯಲ್ಲಿ ಬಿದ್ದಿರುವ ನಿಕೃಷ್ಟ ನಾಯಿನ ಮಾಡಿಕೊಂಡು ಬಿಟ್ಟಿದ್ರು ! ಅದು ಅವ್ನಿಂದ....ಇನ್ನ ಮರೆಯಾಗ್ಲಿಲ್ಲ" ಅಂದಿನ ಅಮೀರ್‌ನ ನೆನಸಿಕೊಂಡ ಪಟೇಲ್.

ಎರಡು ಕಪ್‌ಗಳು ಬರಿದಾದವು.

"ಈಗ್ಹೇಳು, ನಿನ್ನ ಪ್ರ್ಯಾಬ್ಲಮ್ ?" ಕ್ರಾಪ್‌ನ ಕೂದಲನ್ನ ಹಿಂದಕ್ಕೆ ತಳ್ಳಿದ. ಪ್ರಸನ್ನ ತೀರಾ ಚಿಂತಿತನಾಗಿದ್ದಂತೆ ಕಂಡ. "ನೀಲಿಮಾ ಅಲೋಕ್‌ನ ನೋಡ್ಬೇಕಂತೆ."

ಪಟೇಲ್ ಜೋರಾಗಿ ನಕ್ಕುಬಿಟ್ಟ,

"ಯಾಕೆ, ಅಲೋಕ್‌ನ್ನೆ ನೋಡ್ಬೇಕು ? ಇದು ತಾವಾಗಿ ಕ್ರಿಯೆಟ್

ಮಾಡಿಕೊಳ್ಳುತ್ತಿರುವ ಪ್ರಾಬ್ಲಮ್ ನೀಲಿಮಾ" ಅವನ ಪ್ರತಿಕ್ರಿಯೆಯು ನೆಗೆಟಿವ್ ಆಗಿಯೇ ಇತ್ತು.

"ನಂಗೆ....ಸಾಕಾಯ್ತು. ಅವಳ ಪಟ್ಟು ಬದಲಾಗೋಲ್ಲ." ನಿಸ್ಸಾಯಕತೆ ತೋಡಿಕೊಂಡ ಪ್ರಸನ್ನ.

ಹೆಣ್ಣಿನ ಮನದ ಆಳ ಅಗಲ ಅಳೆಯುವುದು ತೀರಾ ಕಷ್ಟವೆನಿಸಿತು. ಗೆಳೆಯನ ಕೈ ಹಿಡಿದುಕೊಂಡ.

"ಯು ಡೂ ವನ್ ಥಿಂಗ್, ನೀಲಿಮಾನ ಶಾಲೆ ಹತ್ರ ಕರ್ಕೊಂಡ್ಹೋಗು, ಅಲ್ಲೇ....ನೋಡ್ಲೀ...." ಹೇಳಿದ.

"ಅವ್ಳು ತೀರಾ ಹತ್ತಿರದಿಂದ ನೋಡ್ಬೇಕಂತೆ. ನೀಲಿಮಾ ಮುಖ ಕಂಡರೇ ಸಾಕು....ಅಲೋಕ್ ಬರೋದು ಇರಲಿ—ಆ ಕಡೆ ಮುಖ ತಿರಿಗಿಸೋಲ್ಲ. ಟೀಚರ್ ಪರ್ಮೀಷನ್ ಕೇಳಿ ಹೊರ್ಗೆ ಕರ್ಕೊಂಡ್ಬಂದ ಕೂಡ್ಲೇ.... ನನ್ನ ಕೈ ಬಿಡಿಸಿಕೊಂಡು ಓಡಿದ. ಅಷ್ಟು ಸುಲಭವಾದ ಕೆಲಸವಲ್ಲ ಅದು."

ಪ್ರಸನ್ನ ಮಾತು ಕೇಳಿ ಅವನಿಗೆ ನಗಬೇಕೆನಿಸಿತು. ತಾಯಿ ಸ್ಥಾನವಿರಲಿ ತಂದೆಯ ಜೀವನದಲ್ಲಿ ಇನ್ನೊಂದು ಹೆಣ್ಣನ್ನು ಸಂತಾನ ಹೇಗೆ ವಿರೋಧಿಸುತ್ತೆ ಅನ್ನೋಕೆ ಇದೊಂದು ಸ್ಪಷ್ಟ ಉದಾಹರಣೆಯೆನಿಸಿತು.

"ಅಲೋಕ್‌ನ ಕರ್ಕೊಂಡ್ಬರೋ ಜವಾಬ್ದಾರಿ ನಿಂದು. ನಿವೇದಿತಾ ಹೆಲ್ಪ್ ಕೂಡಬೇಕು." ಅನ್ಯ ಮನಸ್ಕತೆಯಿಂದ ಹೇಳಿದ.

ಸೆಲ್ಯೂಟ್ ಹೊಡೆದ ಪಟೇಲ್ "ನೆವರ್, ನನ್ನಿಂದ ಸಾಧ್ಯವೇ ಇಲ್ಲ. ನಾಚ್ಕೇ ಆಗುತ್ತೆ. ಸಂಕೋಚದಿಂದ ತಲೆ ತಗ್ಗಿಸೋ ಹಾಗೆ ಆಗುತ್ತೆ ಛೆ...." ಮುಖ ತಿರುಗಿಸಿಕೊಂಡ.

ಇದು ಅವನಿಗೆ ಸಮ್ಮತವಲ್ಲ. ಬಹಳ ಚರ್ಚೆಯ ನಂತರ ಒಂದು ರಾಜಿ ಸೂತ್ರಕ್ಕೆ ಬಂದರು,

"ಸಂಜೆ ಹೋಟೆಲ್ ಚಿದಂಬರಂ ಹತ್ರ ನೀಲಿಮಾನ ಕರ್ಕೊಂಡ್ಬಾ. ಹತ್ತಿರದಲ್ಲೇ ಸಿಟಿ ಪಾರ್ಕ್, ಒಂದು ಸುತ್ತು ಬರೋಣ. ಆಕೆ ಸರಿಯಾಗಿ ನೋಡಿದಂಗಾಗುತ್ತೆ, ನಿವೇದಿತಾ, ಅಲೋಕ್‌ಗೆ ಇದರ ಸುಳಿವು ಹತ್ತಿಲ್ಲ." ಇದೊಂದು ಒಳ್ಳೆಯ ಉಪಾಯವೆನಿಸಿತು ಇಬ್ಬರಿಗೂ.

"ತೀರಾ ಆಕಸ್ಮಿಕ....ಅಷ್ಟೆ" ಭುಜ ತಟ್ಟಿ ಸ್ನೇಹಿತನಿಗೆ ಹೇಳಿ ಬೀಳ್ಕೊಟ್ಟ ಪಟೇಲ್.

"ಅಂತೂ... ಒಳ್ಳೆ ಶಿಕ್ಷೆ...." ನಗುವಂತಾಯಿತು ಅವನಿಗೆ. ಅದರ ಹಿಂದೆಯೇ ಸಂಕಟ ಗೆಳೆಯನ ಬಗೆಗೆ.

ಬಂದು ನಿಂತ ಅಮೀರ್ ಏನೋ ಕೇಳಬೇಕೆಂದುಕೊಂಡಿದ್ದಾನೆ ಎಂದು ಕೊಂಡ ಅವನ ಮುಖದ ಭಾವನೆಗಳನ್ನು ಗುರ್ತಿಸಿ,

"ಏನು....ವಿಷ್ಯ ?" ಸ್ಟೀರಿಯೋ ಹಚ್ಚಿ ಅಲ್ಲಿಯೇ ಕೂತ.

"ಸಾಬ್...." ಸಂಕೋಚಿಸಿದ.

"ನಿಮ್ಮ ದೋಸ್ತು ತಲಾಕ್ ಕೊಟ್ಟಿದೇಕೆ ?" ಪ್ರಶ್ನೆಗೆ ಪಟೇಲ್ ಜೋರಾಗಿ ನಕ್ಕುಬಿಟ್ಟ.

"ಈಗ್ಲೇ ಅದ್ರ ಕಾರಣ ಪ್ರಸನ್ನನೇ ಮರ್ರು ಬಿಟ್ಟಿದ್ದಾನೆ, ನಾನೇನು.... ಹೇಳ್ಲಿ ? ಒಳ್ಗೆ ಕೆಲ್ಸ ನೋಡು ನಮ್ಮಂಥ ಸಾಮಾನ್ಯರ ಮಿದುಳಿಗೆ ಹೊಳೆ ಯೊಂಥದಲ್ಲ" ಒಳಗೆ ಕಳಿಸಿದ.

ನಿವೇದಿತಾ ಶಾಲೆಗೆ ಫೋನ್ ಮಾಡಿ "ಸಂಜೆ ಶಾಲೆ ಬಸ್ಸಿನಲ್ಲಿ ಅಲೋಕ್‌ನಿಗಾಗಿ ಕಾಯ್ಬೇಡಿ. ನಾನು ಅವನನ್ನ ಮನೆಗೆ ಕರ್ಕೊಂಡ್ಹೋಗಿ ಸ್ವಲ್ಪ ಲೇಟಾಗಿ ತಂದುಬಿಡ್ತೀನಿ" ಎಂದ.

ನೂರೆಂಟು ಪ್ರಶ್ನೆಗಳೇನು ಕೇಳಲಿಲ್ಲ. "ಅವ್ನಿಗೆ ಕೋಲ್ಡ್ ಆಗಿದೆ. ಐಸ್‌ಕ್ರೀಮ್ ಕೊಡಿಸ್ಬೇಡಿ," ಅಷ್ಟೇ ಹೇಳಿದ್ದು.

ಎದೆಯ ಮೇಲೆ ಕೈಯಿಟ್ಟುಕೊಂಡ. ಮಾಮೂಲಿಗಿಂತ ಎದೆಯ ಬಡಿತ ಏರಿದಂತೆ ಕಂಡಿತು. ತೀರಾ ಸಿಂಪಲ್ಲಾಗಿ ಕಾಣುವ ಹೆಣ್ಣಿನ ಬಗೆಗೆ ಹೆದರಿಕೆ.... ಅವಳಲ್ಲಿನ ನೈತಿಕ ಶಕ್ತಿಗೆ ಹೆದರುವುದೆಂದುಕೊಂಡ.

ಶಾಲೆಯಿಂದ ಹೊರಬರುತ್ತಿದ್ದ ಅಲೋಕ್ ಇವನ ಕೆಂಪು ಮಾರುತಿ ಕಂಡ ಕೂಡಲೇ ಓಡಿಬಂದ.

"ಮಮ್ಮಿಗೆ ಫೋನ್ ಮಾಡಿದ್ದೀನಿ. ಹೋಟಲ್‌ನಲ್ಲಿ ತಿಂಡಿ" ಕಾರಿ ನೊಳಕ್ಕೆ ಹತ್ತಿಸಿದ.

ಅಲೋಕ್ ತನ್ನ ಶಾಲೆಯ ಬಗೆಗೆ, ಮಮ್ಮಿಯ ಬಗ್ಗೆ ಮಾತ್ರ ಹೇಳು ತ್ತಿದ್ದ.

"ನಿಂಗೆ ಪಪ್ಪನ್ನ ಕಂಡರೇ....ಇಷ್ಟವಿಲ್ವಾ !" ತಟ್ಟನೆ ಕೇಳಿದ. ಅಲೋಕ್ ಮುಖದ ಭಾವವೆ ಬದಲಾಯಿತು. ಒಂದು ರೀತಿಯ ಆಂದೋಳನ ಅವನಲ್ಲಿ "ಇದೆ...." ಎಂದವನು ಕೂಡಲೇ "ಇಲ್ಲ.. .ಐ ಹೇಟ್ ಹಿಮ್" ದ್ವಂದ್ವದಲ್ಲಿ ನರಳುವಂತೆ ಕಂಡಿತು ಪಟೇಲ್‌ಗೆ.

ಕಾರು ಹೋಟೆಲ್ ಚಿದಂಬರಂ ಬಳಿ ನಿಲ್ಲುವ ವೇಳೆಗೆ ವೈಟ್ ಫಿಯೆಟ್ ಕಾರನ್ನು ಗುರ್ತಿಸಿದ ಪಟೇಲ್, ಅಲ್ಲಿ ಪ್ರಿಮಿಯರ್ ಪದ್ಮಿನಿಯಿಂದ ಹಿಡಿದು ಅಂಬಾಸಿಡರ್, ಮರ್ಸಿಡಿಸ್, ಟಯೋಟಾ, ನಿಸಾನ್, ಕಾಂಟೆಸ್ಸಾ, ಸ್ಟ್ಯಾಂಡ್ರಡ್ 2000 ವರೆಗೂ ಪಾರ್ಕ್ ಮಾಡಲ್ಪಟ್ಟಿತ್ತು.

"ನಿಂಗೆ ಯಾವ ಕಾರು ಇಷ್ಟ ?" ಅಲೋಕ್ ಕ್ರಾಪ್‌ನಲ್ಲಿ ಬೆರಳು ಗಳನ್ನಾಡಿಸುತ್ತ ಕೇಳಿದ "ಎಲ್ಲ ಇಷ್ಟ....ಅದೊಂದು....ಬೇಡ" ತೋರು ಬೆರಳನ್ನು ಬಿಳಿಯ ಫಿಯೆಟ್‌ನತ್ತ ತೋರಿಸಿದ.

ನೀಲಿಮಾ ಕಾರಿನ ಬಗ್ಗೆಯೂ ಅವನಿಗೆ ದ್ವೇಷ, ಕ್ಷಣ ಬೆಚ್ಚುವಂತಾಯಿತು ಪಟೇಲ್‌ಗೆ.

"ಯಾಕೆ, ಬೇಡ ? ತುಂಬ....ಚೆನ್ನಾಗಿದೆ" ಒಲೈಸಲು ನೋಡಿದ. ತಲೆ ಅಡ್ಡಡ್ಡ ಆಡಿಸಿದ ಅಲೋಕ್ "ಚೆನ್ನಾಗಿಲ್ಲ...."

ಇಬ್ಬರು ಹೋಟೆಲ್‌ನೊಳಕ್ಕೆ ಹೋದರು. ನೀಲಿಮಾ, ಪ್ರಸನ್ನ ಒಂದು ಮೂಲೆಯಲ್ಲಿ ಕೂತು ಮತ್ತೇರಡು ಸೀಟುಗಳನ್ನು ಕಾಯ್ದಿರಿಸಿದ್ದರು.

"ಹಾಯ್...." ಎಂದು ಅತ್ತ ಹೊರಟವನ ಕೈ ಹಿಡಿದಿದ್ದ ಅಲೋಕ್ ಜಗ್ಗಿದ "ಅಂಕಲ್, ನಂಗೆ ಅಲ್ಲಿ ಕೂತುಕೊಳ್ಳೋಕೆ....ಇಷ್ಟ" ಬೇರೆಡೆ ತೋರಿಸಿದ.

ತಲೆದೂಗಿದ ಪಟೇಲ್ ಸಿಂಕ್‌ನಲ್ಲಿ ಕೈ ತೊಳೆಸಿ ಆ ಟೇಬಲ್ಲುನತ್ತ ಕರೆದೊಯ್ದು ಕೂಡಿಸಿ "ನನ್ನ ಫ್ರೆಂಡ್‌ನ ಮಾತಾಡ್ಸಿಕೊಂಡು ಬಂದ್ಬಿಡ್ತೀನಿ, ಎಲ್ಲೂ....ಹೋಗ್ಬಾರ್ದು" ಭುಜ ತಟ್ಟಿ ಅತ್ತ ನಡೆದ.

ಎದ್ದ ಅಲೋಕ್ ಮಮ್ಮಿಯ ಮಾತನ್ನು ನೆನಪಿಸಿಕೊಂಡ "ಪಟೇಲ್ ಅಂಕಲ್ ತುಂಬ ಒಳ್ಳೆಯವ್ರು. ನೀನು ಪೈಲೆಟ್ ಆಗೋಕೆ ಅವ್ರ ಗೈಡೆನ್ಸ್ ಬೇಕಾಗುತ್ತೆ. ಅವ್ರಿಗೆ ಆ್ಯಂಟಿಯಾಗಿ ನಡ್ಕೋಬಾರ್ದು" ಒಮ್ಮೆ ಹೇಳಿದ್ದಳು ನಿವೇದಿತಾ.

ಅಲ್ಲೇ ಕೂತು ಆ ಕಡೆ ಬಿಟ್ಟು ಸುತ್ತಲೂ ನೋಡತೊಡಗಿದ.

ಪಟೇಲ್ ಅವರ ಟೇಬಲ್‌ನ ಮೇಲೆ ಬಗ್ಗಿ, "ಅವ್ನು ಇಲ್ಲಿಗೆ ಬರೋಕೆ ಇಷ್ಟ ಪಡೋಲ್ಲ. ಸೋ....ಸಾರಿ...." ಎಂದವನು ಹಿಂದಿರುಗಿ ಬಂದ.

ಪ್ರಸನ್ನ ಮುಖ ಪೆಚ್ಚಾಗುವುದರ ಜೊತೆ ಕೋಪಾನು ಬಂತು. ಅದು ಕೆಲವು ಕ್ಷಣಗಳು ಮಾತ್ರ.

ನೀಲಿಮಾ ದಿಟ್ಟಿಸಿದಳು. ಹೋದ ಸಲ ನೋಡಿದ್ದಕ್ಕಿಂತ ಈ ಸಲ ಮೈಕೈ ತುಂಬಿಕೊಂಡಿದ್ದ. ಅಗಲ ಕರಿಯು ಕಣ್ಣುಗಳು ನಿವೇದಿತಾದಾದರೂ ಮೂಗು, ಮುಖ, ಬಣ್ಣ, ಅಗಲ ಹಣೆ ಎಲ್ಲಾ ಪ್ರಸನ್ನನ ತದ್ರೂಪು, ನಕ್ಕಾಗ ಬಹಳ ಚೆನ್ನಾಗಿ ಕಾಣಿಸುತ್ತಿದ್ದ. ಆದರೆ ನೋಡಲು ಪ್ರಸನ್ನನಲ್ಲಿ ಹಿಂಜರಿಕೆ.

"ಪ್ರೆಟ್ಟಿ ಬಾಯ್....ನನ್ಮಗು ಕೂಡ ಹೀಗೆ ಇರ್ಬೇಕು" ಅವಳ ದನಿಗೆ ಸ್ಪಂದಿಸಲಾರದೆ ಹೋದ ಪ್ರಸನ್ನ "ಕಾಫೀನಾದ್ರೂ....ತಗೋ...." ಕಾಫೀ ಯನ್ನ ಅವಳತ್ತ ಸರಿಸಿ ತಾನು ಕುಡಿದು ಮೇಲೆದ್ದವನು "ಟಾಯ್‌ಲೆಟ್‌ಗೆ.... ಹೋಗ್ಬರ್ತೀನಿ" ನಡೆದು ಬಿಟ್ಟ.

ಮನದಲ್ಲಿ ಬಿರುಗಾಳಿಯನ್ನು ಹತ್ತಿಕ್ಕಲಾರದೆ ಹೋದ. 'ಪಪ್ಪ....' ಎರಡು ಕೈ ಚಾಚಿ ಬರುವ ಅಲೋಕ್ ಅವನಿಗೆ ಬೇಕು. ದೆಹಲಿಗೆ ಅವನ ಜೊತೆ ಬಂದಾಗಲೂ ಉದಾಸ ಭಾವನೆ, ಮಮ್ಮಿ ಹತ್ರ ಹೋಗಬೇಕೆನ್ನುವ ಹಟ, ಒಂದು ರೀತಿಯ ಭಯ, ಕೋಪ ಅವನನ್ನು ಕಾಡಿದನ್ನು ನೋಡಿದ್ದ. 'ಅಲೋಕ್ ಮಗುವಾದ್ರೂ ತಾಯಿಗೆ ಆದ ಅನ್ಯಾಯ, ಆ ತನ್ನ ತಪ್ಪನ್ನು ಕ್ಷಮಿಸಲಾರ'

ಕಾರಿಗೊರಗಿ ನಿಂತು ನಿಟ್ಟುಸಿರು ಚೆಲ್ಲಿದ ಪ್ರಸನ್ನ, ಮೊದಲು ಹೋಟಲ್‌ನಿಂದ ಹೊರ ಬಂದಿದ್ದು ಪಟೇಲ್, ಅಲೋಕ್.

ಬರುವಂತೆ ಸನ್ನೆ ಮಾಡಿದ. ಅಲೋಕ್ ನೋಟ ಪ್ರಸನ್ನ ಒರಗಿದ್ದ ಫಿಯೆಟ್‌ಗೆ ಕಡೆಯೇ ಇತ್ತು. ಅರಿತು ಅವನೇ ನಡೆದು ಬಂದ.

ಮುಗುಳ್ನಗುತ್ತ ಅಲೋಕ್‌ನ ಹತ್ತಿರಕ್ಕೆ ಕರೆದುಕೊಂಡು ಪ್ರೀ ಯಿಂದ ಕ್ಯಾಪ್ ಸರಿ ಮಾಡಿದ.

"ಯೂನಿಫಾರಂ ಬದಲಾಯಿಸೇ ಇಲ್ಲ" ಕೇಳಿದ.

"ಕಾನ್ವೆಂಟ್‌ನಿಂದ ನಾನೇ ಕರ್ಕೊಂಡ್ಬಂದಿದ್ದು" ಉತ್ತರ ಪಟೇಲ್ ಹೇಳಿದ "ಅಲೋಕ್‌ನ ನಮ್ಮ ಮನೆಗೆ ಕರ್ಕೊಂಡ್ಹೋಗ್ತೀನಿ" ಅವನ ಕೆನ್ನೆ ತಟ್ಟಿದ.

ಅಷ್ಟರಲ್ಲಿ ನೀಲಿಮಾ ಬಂದಳು. ಅಲೋಕ್ ಓಟಕಿತ್ತ. ಪಟೇಲ್ ಓಡಿ ಹಿಡಿದು ತಂದು ತನ್ನ ಮಾರುತಿ ಹತ್ತಿಸಿ ಕೈ ಬೀಸಿದ.

ಮಡದಿಯತ್ತ ನೋಡದೆಯೇ ಕಾರು ಹತ್ತಿದ ಪ್ರಸನ್ನ "ನಿನ್ನ ಕೋರಿಕೆ ಈಡೇರಿತಲ್ಲ. ಮುಂದೆ ಇಂಥ ಇಕ್ಕಟ್ಟಿನಲ್ಲಿ ನನ್ನ ಸಿಗಿಸ್ಬೇಡ. ನಾವು ಆರಾಮವಾಗಿರೋಣ" ಕಾರು ಸ್ಟಾರ್ಟ್ ಮಾಡಿದ.

ಇವನ ಎಷ್ಟೇ ಪ್ರೀತಿಗೂ ಅಲೋಕ್‌ನಲ್ಲಿ ಅಂಥ ಉತ್ತೇಜನಕಾರಿ ಪ್ರತಿಕ್ರಿಯೆ ಇಲ್ಲ. ಅವನಲ್ಲಿನ ತಂದೆಯ ಪ್ರೇಮ ಅದುಮಿಡಲಾರದೆ ಇವನ ತೆರೆದ ತೋಳುಗಳಿಗೆ ಬಂದು ಬಿದ್ದರೂ ಒಂದು ರೀತಿಯ ಕೊಸರಾಟ ಅವನದು.

ನೀಲಿಮಾ ಮನ ಅವಳ ಮೂಗಿನ ನೇರಕ್ಕೆ ಓಡುತಿತ್ತು. ಕೋಣೆಗೆ ಬಂದಕೂಡಲೇ ಪೇಪರ್ ಹಿಡಿದು ಬಂದು ಮಗುವಿನ ಸ್ಕೆಚ್ ಹಾಕಿ ಮೂಗು ಮುಖ, ತೀಡಿ ಅವನ ಮುಂದಿಡಿದಳು.

"ನಮ್ಮ ಮಗು ಹೀಗೆ ಇರುತ್ತೆ."

ಪ್ರಸನ್ನ ಆಳವಾಗಿ ಅವಳನ್ನ ನೋಡಿದ. "ಟೂ ಮಚ್....ನೀಲಿಮಾ. ನಂಗೆ ನೀನು ಏನೇನೂ ಅರ್ಥವಾಗಿಲ್ಲ. ಮಗು ಹೇಗಾದ್ರೂ ಇರಲೀ.... ಸಧ್ಯಕ್ಕೆ ನಿನಗೊಂದು ಮಗುವಾದ್ರೆ....ಸಾಕು" ಮೆಲ್ಲನೆ ಉಸುರಿದ.

ಆ ಪೇಪರ್‌ನ ಅವನ ತಲೆಯ ಮೇಲೆ ಹಾಕಿ ಎದ್ದು ಹೋದಳು.

ಮರುದಿನವೇ ಒಂದು ದೊಡ್ಡ ಪಟ್ಟಿಯನ್ನು ನೀಲಿಮಾ ತಂದೆಗೆ ಕೊಟ್ಟಳು.

"ಇದನ್ನೆಲ್ಲ....ತಗೊಂಡ್ಬಾ, ಡ್ಯಾಡಿ."

ಪಟ್ಟಿ ಹಿಡಿದ ಅವರು ಚಕಿತರಾದರು. "ಮಗುವಿಗೆ ಕುಡಿಸುವ ಗ್ರೇಪ್ ವಾಟರ್‌ನಿಂದ ಹಿಡಿದು, ಅಮುಲ್ ಬೇಬಿ ಮಿಲ್ಕ್ ಪೌಡರ್, ಮೈಗೆ ಹಾಕುವ ಜಾನ್‌ಸನ್ ಬೇಬಿ ಲೋಷನ್ ಇತ್ಯಾದಿ....ಇತ್ಯಾದಿ....

"ಏನಮ್ಮ....ಇದೆಲ್ಲ ? ಯಾರಿಗಾಗಿ ಇಷ್ಟೆಲ್ಲ" ಎಂದರು.

"ಓ, ಡ್ಯಾಡಿ....ನಿಮ್ಗೆ ಮುಂದಾಲೋಚನೆನೇ ಇಲ್ಲ. ಇದ್ದಕ್ಕಿದ್ದಂತೆ

ಮಾರ್ಕೆಟ್‌ನಲ್ಲಿ ಕೆರ್‌ಸಿಟಿ ಆಗುತ್ತೆ. ಆಗೇನು....ಮಾಡೋಕ್ಕಾಗುತ್ತೆ ?" ಎಂದಾಗ ಅವರಿಗೆ ಅರ್ಥವಾಯಿತು.

ಸೋಮೇಶ್ವರ್ ಕಸಿವಿಸಿಗೊಂಡರು.

"ಕೂಸು ಹುಟ್ಟೋ ಮೊದ್ಲೇ ಕುಲಾವಿ ಹೊಲೀಬಾರದ್ದೂಂತ ನಮ್ಮ ಅಜ್ಜ ಹೇಳ್ತಾ ಇದ್ದರು. ಬಾಣಂತನ ಮಾಡಬೇಕಾದವ್ರು ನಾವು ತಾನೇ ? ಆ ಬಗ್ಗೆ ನಾವು ಯೋಚಿಸ್ತೀವಿ. ಸುಮ್ನೇ ಎಕ್ಸೈಟ್ ಆಗ್ಬೇಡ...." ಆ ಪಟ್ಟಿಯನ್ನು ತಾವಿಟ್ಟುಕೊಂಡರು.

ದೆಹಲಿಯಿಂದ ಪ್ರಸನ್ನನ ಕೈಯಲ್ಲಿ ತರಿಸಿಕೊಂಡ ಸಾಮಾನುಗಳೆಲ್ಲ ಅಚ್ಚುಕಟ್ಟಾಗಿ ಬೀರುನಲ್ಲಿತ್ತು. ಆರಾಮಾಗಿದ್ದ ಮಗಳ ಬದುಕಿನಲ್ಲಿ ಗೋಜಲಾಯಿತಲ್ಲ ಎಂದು ವ್ಯಥಿಸುತ್ತಿದ್ದರು.

ಅವಳ ಈ ತರಹದ ನಡೆ ನುಡಿ ಈಗ ಚೆನ್ನಲ್ಲವೆನಿಸುತಿತ್ತು.

ದಿನದಿಂದ ದಿನಕ್ಕೆ ನೀಲಿಮಾ ತೀರಾ ಮೃದುವಾದಳು. ಕೆಲವೊಮ್ಮೆ ಅವಳ ಪ್ರಶ್ನೆಗಳು ಅತಿರೇಕಕ್ಕೇರುತಿತ್ತು.

"ಹೊಟ್ಟೆ ತುಂಬ ದೊಡ್ಡದಾಗಿ ಕಾಣುತ್ತಾ ? ತನ್ನ ಎದೆಹಾಲು ಮಗುವಿಗೆ ಸಾಕಾಗುತ್ತಾ ?" ತಲೆನೋವು ಬರೆಸುವಂಥದ್ದು.

ಮಗುವಿನ ವಿಷಯಲ್ಲಿ ಇಷ್ಟೊಂದು ಅಕ್ಕರೆ ಹೊಂದಿರುವ ನೀಲಿಮಾ ಎರಡು ಸಲ ಅಬಾಷನ್ ಮಾಡಿಸಿಕೊಂಡಿದ್ದೇಕೆ ? ಕೇಳಿ ಬಿಡಬೇಕೆಂಬ ಮಾತುಗಳನ್ನು ಆಗಾಗ ಪ್ರಸನ್ನ ನುಂಗಬೇಕಾಯಿತು.

* * *

ಈ ತಿಂಗಳಲ್ಲಿ ಹತ್ತು, ಹನ್ನೆರಡು ಸಲವಾದರೂ ನಿವೇದಿತಾ ಶಾಲೆಯ ಮುಂದೆ ಕಾರಿನಲ್ಲಿ ಓಡಾಡಿದ್ದ. ಆದರೆ ಯಾಕೆ ? ಆ ತಿರುವಿಗೆ ಬಂದಾಗ ಅವನ ಮನ ಸಂಭ್ರಮಗೊಳ್ಳುತಿತ್ತು. ಅವಳನ್ನು ಕಾಣದೇ ನಿರಾಶೆಗೊಂಡರೂ ಮತ್ತೇಕೆ ಪ್ರಯತ್ನಿಸಬಾರದೆಂಬ ಹಂಬಲ. ಆಗ ಅವನಲ್ಲಿ ತೀರಾ ಹರೆಯದ ಹುಮ್ಮಸ್ಸು.

ಹಿಂದಿನ ಘಟನೆಗಳು ನೆನಪುಗಳಾಗಿ ಕಚಗುಳಿ ಇಡುತ್ತಿದ್ದವು. ತಾವು ಮತ್ತೊಮ್ಮೆ ಯಾಕೆ ಪ್ರೇಮಿಸಬಾರದು ಎನ್ನುವ ಗೀಳು ಕೂಡ ಅವನನ್ನು ಕಾಡದೇ ಬಿಟ್ಟಿರಲಿಲ್ಲ.

ಲೈಬ್ರರಿಯಲ್ಲಿ ಕೂತು ತೀರಾ ತುಂಟ ಯುವಕನಂತೆ ಪ್ರೇಮಪತ್ರಗಳನ್ನು ವಿರಹಗೀತೆಗಳನ್ನು ಬರೆದುದ್ದುಂಟು. ಅಲೌಕಿಕವಾದ ಸಂತೋಷ ಸಿಗುತಿತ್ತು ಅದರಿಂದ.

ಅಂದು ಬೀರುನಲ್ಲಿದ್ದ ಬಟ್ಟೆಗಳನ್ನೆಲ್ಲ ಕಿತ್ತೆಸೆದು ತೀರ ಹಳೆಯದಾದ ನಿವೇದಿತಾ ತಂದುಕೊಟ್ಟಿದ್ದ ಪ್ಯಾಂಟ್ ಪೂರ್ತಿ ತೋಳಿನ ಷರ್ಟು ತೊಟ್ಟು ಟರ್ಕ್ ಮಾಡಿ ಕನ್ನಡಿಯ ಮುಂದೆ ನಿಂತ.

"ಈ ಡ್ರೆಸ್....ನಿಮ್ಗೆ ಚೆನ್ನಾಗಿ ಕಾಣುತ್ತೆ" ವರ್ಷಗಳ ಮುನ್ನ ನಿವೇದಿತಾ ಹೇಳಿದ ಮಾತು "ಈಸ್ ಇಟ್ ?" ಎಂದ ಜೋರಾಗಿಯೇ.

ನೀಲಿಮಾ ಕಿವಿಗೆ ಬಿದ್ದಿರಬೇಕು "ಯಾವುದರ ಬಗ್ಗೆ ಕೇಳಿದ್ದು." ಒದ್ದೆ ಗೂದಲನ್ನೊರೆಸುತ್ತ ಬಂದವಳು ಕೇಳಿದಳು. "ಏನಿಲ್ಲ...." ಅತ್ತ ತಿರುಗಿದಾಗ ಡ್ರೆಸ್ ಅವಳನ್ನ ಎಚ್ಚರಿಸಿರಬೇಕು.

"ಛೆ, ಇದೇನಿದು ?" ನಕ್ಕುಬಿಟ್ಟಳು ಈಗ ಲೆಕ್ಚರರ್ ತರಹ ಅಲ್ಲ ಸ್ಟೂಡೆಂಟ್ ತರಹ ಕಾಣಿಸ್ತೀರಾ ! ನಿಮ್ಮನ್ನ ಕೂಡ್ಸಿ....ವಿದ್ಯಾರ್ಥಿಗಳು ಪಾಠ ಮಾಡ್ತಾರೆ."

ಪ್ರಸನ್ನನ ಎಲ್ಲಿಗೊ ಒಯ್ದಂತಾಯಿತು ಆಗ. ಎಂ.ಎಸ್.ಸಿ.ಯ ಸ್ಟೂಡೆಂಟ್ ಅವನು ಜೊತೆಗೆ ಒಂದು ಮಗುವಿನ ತಂದೆ.

"ಬೈ ಆಲ್ ಮೀನ್ಸ್, ಅದು ಚೆನ್ನಾಗಿರುತ್ತೆ, ಪ್ರಾಧ್ಯಾಪಕತ್ವದ ಜವಾಬ್ದಾರಿ ಹೊತ್ತು ಗಂಭೀರವಾಗಿರೋ ಬದ್ಲು ಸ್ಟೂಡೆಂಟ್ ಆಗಿ ಅಲೆಯೋದ್ರಲ್ಲಿ ....ಮಜಾ ಇರುತ್ತೆ" ಕಣ್ಣೊಡೆದ.

ನೀಲಿಮಾ ಚಕಿತಳಾದಳು.

"ಯೂ ನಾಟಿ...." ಬೆನ್ನು ಮೇಲೊಂದು ಗುದ್ದಿದಳು. ಅವನಿದ್ದುದ್ದು ನಿವೇದಿತಾಳ ಮಂಪರುನಲ್ಲಿ "ಸೀ ಯೂ...." ಹೊರಟೇಬಿಟ್ಟ.

ಇಂದು ಕಾರು ಗೋದಾವರಿಯವರ ಮನೆಯ ಮುಂದೆ ಹಾಯ್ದು ಹೋಯಿತು. ಅವನ ಕಣ್ಣುಗಳು ನಿವೇದಿತಾಳಿಗಾಗಿ ಅರಸುತಿತ್ತು. ಪ್ರೇಮಿಯ ಚಡಪಡಿಕೆ ಅವನಲ್ಲಿ.

ಗೋದಾವರಿಯವರಿಗೆ ಹುಷಾರಿಲ್ಲ, ಇನ್ನ ಯಾವುದೋ ಕಾರಣ,

ಅಂತೂ ಶಾಲೆಯ ಸಂಪೂರ್ಣ ಜವಾಬ್ದಾರಿ ಅವಳದು. ಇಂದು ಬೇಗನೆ ಮನೆ ಬಿಟ್ಟಳು ನಿವೇದಿತಾ.

ಟ್ರೈವರ್ ನೋಡುತ್ತ ಹೆಜ್ಜೆಯ ವೇಗ ಹೆಚ್ಚಿಸಿದಳು. ಹಿಂದಿನಿಂದ ಬರುತ್ತಿದ್ದ ಫಿಯೆಟ್ ಅವಳು ಪಕ್ಕಕ್ಕೆ ಸರಿದರೂ ಹಾರನ್ ಆಗುತ್ತಲೇ ಇತ್ತು. ನಿಂತು ಹಿಂದಿರುಗಿದಳು.

ಇಳಿದ ಪ್ರಸನ್ನನ ಕನ್ನಡಕದೊಳಗಿನ ಕಣ್ಣುಗಳು ಶುಭ್ರನಗೆ ಬೀರಿದವು. ನಗೆಗಾಗಿ ಕಾದು ಕಾತರಿಸಿದಾಗ ಮುಖ ತಿರುವಿದ್ದ.

"ಹಲೋ...." ಎಂದ.

ಕೈಕಟ್ಟಿ ಅವನ ಡ್ರೆಸ್ಸನ್ನ ಅವಲೋಕಿಸಿದಳು. ಅಂತು ಅವಳ ಗಮನವನ್ನ ತನ್ನತ್ತ ಸೆಳೆಯಲು ಸಮರ್ಥನಾದ.

"ಹಲೋ, ಗುಡ್‌ಮಾರ್ನಿಂಗ್, ಸರ್" ಅಂದಳು.

ಮತ್ತೇನು ಮಾತಾಡುವುದು ? ಇವನು ನಿಂತಿರು ಎಂದರೂ ಅವಳು ನಿಲ್ಲಲಾರಳು.

"ಏನಾದ್ರೂ ಮಾತಾಡೋದಿದ್ರೆ....ಶಾಲೆಗೆ ಬನ್ನಿ. ಗೋದಾವರಿ ಮೇಡಮ್ ಮನೆಯಲ್ಲೇ....ಇದ್ದಾರೆ. ಬೇಕಾದ್ರೆ....ಹೋಗಿ ನೋಡಿ" ತಣ್ಣಗೆ ಉಸುರಿ ನಡೆದುಬಿಟ್ಟಳು.

ಇಡೀ ಮೂರು ತಿಂಗಳಿನ ಹುಡುಗರ ಟ್ಯೂಷನ್ ಹಣದಿಂದ ಪ್ಯಾಂಟ್, ಷರಟು ಹೊಲಿಸಿ ತಂದಿದ್ದಳು. ಡಲ್ಲಾಗಿ ಎಂ.ಎಸ್.ಸಿ ಸ್ಟೂಡೆಂಟ್ ಯೂನಿವರ್ಸಿಟಿಗೆ ಹೋಗುವುದು ಇಷ್ಟವಾಗಿರಲಿಲ್ಲ.

ಆದರೆ ಕೆಲಸಕ್ಕೆ ಸೇರಿದ ಮೇಲೆ ಅದನ್ನು ಒಮ್ಮೆ ಕೂಡ ತೊಟ್ಟಿರಲಿಲ್ಲ. ನಿಕೃಷ್ಟವಾಗಿ ಕಂಡಿದ್ದ. ಇಂದು ಇಷ್ಟವಾಯಿತೇನೊ, ಅಥವಾ ನಟನೆಯೋ ? ಅದರ ಪ್ರಯೋಜನ ಯಾರಿಗೆ ?

ಕಣ್ಣಂಚು ಒದ್ದೆಯಾಗದಂತೆ ಸಂಯಮದಿಂದ ಹೆಜ್ಜೆಯ ವೇಗ ಹೆಚ್ಚಿಸಿದಳು. ಚಪ್ಪಲ್ಲಿ ಕಿತ್ತುಹೋಯಿತು, ಅತ್ತಿತ್ತ ನೋಡಿದಳು.

ಹತ್ತಿರದಲ್ಲಿ ಒಂದು ದೇವಸ್ಥಾನವಿತ್ತು. ಚಪ್ಪಲಿ ಕಾಯುವ ಜನರ ಮುಂದೆ ಚಪ್ಪಲಿ ಬಿಟ್ಟು ದೇವಸ್ಥಾನಕ್ಕೆ ಹೋದವಳು ಇನ್ನೊಂದು ಬಾಗಿಲಿನಿಂದ ಶಾಲೆಗೆ ಹೋಗಿಬಿಟ್ಟಳು.

ಸಂಜೆ ಅದೇ ಫಿಯೆಟ್ ಅವಳ ಮುಂದಿನಿಂದ ಹೋದಾಗ ಬೆಚ್ಚಿಬಿದ್ದಳು. ಏನಾಗಿದೆ ಪ್ರಸನ್ನನಿಗೆ ? ಅಂದು ಕೂಡ ಕಾಡಿ, ಬೇಡಿಯೆ ಅವಳನ್ನು ಪ್ರೇಮದಲ್ಲಿ ಸಿಲುಕಿಸಿಕೊಂಡಿದ್ದ. ಅಂದಿಗೆ ಹರೆಯದ ಹುಚ್ಚು ಪ್ರೇಮದ ಕಾರಣ ಇಂದು ....ವಿಮನಸ್ಕಳಾದಳು.

ರಾತ್ರಿ ಅದೇ ಯೋಚನೆ ಅವಳನ್ನು ಕಾಡಿತು. 'ನಿನ್ನ ಜೊತೆಗಿನ ಬದುಕು ಸಾಧ್ಯವಿಲ್ಲವೆಂದೆ' ಡೈವೋರ್ಸ್ ಪಡೆದದ್ದು. ಮತ್ತೇಕೆ ಇಂಥ ಸುತ್ತಾಟ ? ಅಲೋಕನನ್ನ ಕಾಣುವುದು, ಮಾತಾಡಿಸುವುದು ಸಹಜ.ರಕ್ತದ ತುಡಿತ. ಆದರೆ ಇದೆಂಥ ಹುಚ್ಚು ? ಅವಳಿಗೇನೂ ಅರ್ಥವಾಗಲಿಲ್ಲ.

ಅಲೋಕ್ ಮಲಗುವ ವೇಳೆಗೆ ಚೈತ್ರ ಬಂದಳು. ಅವಳ ಧುಮುಗುಟ್ಟುವ ಮುಖ ನೋಡಿ ನಿವೇದಿತಾ ನಕ್ಕಳು.

"ಭಾವಾಜೀ ಜೊತೆ ಜಗಳಾ ?"

"ಪ್ರೀತಿ, ಪ್ರೇಮವಿಲ್ಲದವ್ರ ಜೊತೆ ಮದ್ವೆ ಆಗ್ಬಾರ್ದು. ಸೋದರ ಸಂಬಂಧ ಅಂತ ನನ್ನ ಗಂಟು ಹಾಕಿದ್ರು" ದುಸದುಸನೆ ಬಂದು ಹಾಸಿಗೆ ಬಿಡಿಸಿಕೊಂಡು ಮಲಗಿದಳು.

ತಿಂಗಳಲ್ಲಿ ಒಂದು ಅಥವಾ ಎರಡು ಸಲ ಚೈತ್ರ ಈ ರೀತಿ ಬರುವುದು ಮಾಮೂಲು. ಮಾರನೆಯ ದಿನ ರಾಜಿ. ಇದರ ಬಗ್ಗೆ ನಿವೇದಿತಾ ಕೂಡ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ಚೈತ್ರ ಬಳಿ ಬಂದು ಕೂತವಳು "ನಾನು, ಇನ್ನು ಊಟ ಮಾಡಿಲ್ಲ. ಮಾಡೋಣ" ಬಲವಂತ ಮಾಡಿದಳು. "ನಂಗೆ....ಬೇಡ" ಮುಸುಕೆಳ್ದುಕೊಂಡಳು.

"ನಾನು ಹಾಗೆ....ಮಲಗಬೇಕಾಗುತ್ತೆ" ಎಂದಾಗ ಎದ್ದಳು.

ಇರೋ ಅನ್ನ, ಹುಳಿಯನ್ನು ಕಲೆಸಿ ಎರಡು ತಟ್ಟೆಗಳಿಗೆ ಹಾಕಿಕೊಂಡು ಬಂದಳು.

"ನಿಂದೆ ಆರಾಮ್ ಅನ್ನಿಸುತ್ತೆ. ಪ್ರತಿಯೊಂದಕ್ಕೂ....ನಿರ್ಬಂಧ. ಅದ್ಕಿಂತ ಡೈವೋರ್ಸ್....ತಗೊಂಡ್ ಆರಾಮಾಗಿರೋದೆ ಸರಿ" ಕೋಪದಿಂದ ಚೈತ್ರ ನುಡಿದಾಗ ನಿವೇದಿತಾ ನಿಸ್ತೇಜಳಾದಳು.

ತಟ್ಟೆ ಖಾಲಿ ಮಾಡಿದ ಚೈತ್ರ ಕಣ್ಣೀರು ಹಾಕಿಕೊಂಡಳು "ಪ್ರತಿ

ಯೊಂದೂ ಅವ್ರಿಗೆ ತಿಳಿ ಬೇಕು, ಅವ್ರು ಸಮಾಜಾಯಿಸಬೇಕು. ಹೇಗೂ.... ನಂಗೂ ಕೆಲ್ಸ ಇದೆ. ಅವ್ರು ಹಂಗೇ ಬೇಡ" ಇಂದು ತೀರಾ ಖಿನ್ನಳಾದಂತೆ ಕಂಡಳು.

ಎಲ್ಲಾ ದಂಪತಿಗಳ ಜೀವನದಲ್ಲಿ ಒಂದಲ್ಲ ಒಂದು ಕಾರಣಕ್ಕೆ ಇರುಸು, ಮುರುಸು. ಬಿಡುಗಡೆಯವರೆಗೂ ಯೋಚಿಸಿಯಾರು ! ಗಂಡು ಮಾತ್ರವಲ್ಲ ಇಪ್ಪತ್ತನೆ ಶತಮಾನದ ಹೆಣ್ಣು ಕೂಡ ಡೈವೋರ್ಸ್‌ವರೆಗೂ ಮಾತಾಡಬಲ್ಲಳು.

"ಇದೇನು....ಹುಚ್ಚುಚ್ಚು ಯೋಚ್ನೆಗಳು. ಬದ್ಕಿನಲ್ಲಿ ಸಣ್ಣ, ಪುಟ್ಟ ವಿರಸ ಸರ್ವೇ ಸಾಮಾನ್ಯ. ಅದೊಂದೇ ಕಾರಣವಾಗಿಟ್ಕೊಂಡ್ ಡೈವೋರ್ಸ್ ಬಗ್ಗೆ ಯೋಚಿಸೋದ್ರಲ್ಲಿ....ಅರ್ಥವಿದ್ಯಾ ? ಇಲ್ಲಿ ಬೇಕಾಗಿರೋದು ಸಾಮರಸ್ಯ. ಮಕ್ಕಳ ಭವಿಷ್ಯ ಕೂಡ ನಮ್ಮ ಮುಂದೆ ಬದ್ದಿದೆ. ಪ್ರೀತಿಯ ಉತ್ತಮ ಆಸರೆಯಲ್ಲಿ ಬೆಳೆಯುದಿದ್ರೆ....ಸಮಾಜಕ್ಕೊಂದು ಮುಳ್ಳಿನ ಗಿಡ ಗಳಾಗುತ್ತೆ. ಅದೇ ಪಾರ್ಥೇನಿಯಂ ಆದಾಗ ಇಡೀ ಪರಿಸರವೆ ಕೆಟ್ಟು ಹೋಗುತ್ತೆ." ಬುದ್ಧಿ ಹೇಳಿದಳು.

"ನೀನು, ಪ್ರಸನ್ನ....ಯಾಕೆ ಡೈವೋರ್ಸ್ ತಗೊಂಡ್ರಿ ? ನಿನ್ನಲ್ಲಿ ಏನು ಕೊರತೆ ಕಂಡ ?" ಅವಳ ಸವಾಲ್. ವಿವರಿಸುವುದು ಕಷ್ಟವೆನಿಸಿತು ನಿವೇದಿತಾಗೆ "ಇಲ್ಲಿ ಕೊರತೆ ಮುಖ್ಯವಲ್ಲ, ನೀಲಿಮಾಳಲ್ಲಿನ ಆಕರ್ಷಣೆಯೇ ಜಾಸ್ತಿ, ನನ್ನ, ನಿನ್ನ ಚಿಂತನೆ ಆ ಮಟ್ಟಕ್ಕೇರಲಾರ್ದು. ಆರಾಮವಾಗಿ.... ಮಲಕ್ಕೋ...." ಅಲೋಕ್‌ನ ಪಕ್ಕ ಉರುಳಿಕೊಂಡು ಕ್ರಾಪ್, ಹೊದ್ದಿಕೆ ಸರಿ ಮಾಡಿದಳು.

ಚೈತ್ರ ಏನೋ ಬೇಗ ನಿದ್ರಿಸಿಬಿಟ್ಟಳು. ನಿವೇದಿತಾ ಇಡೀ ರಾತ್ರಿ ಎಚ್ಚರವಾಗಿಯೇ ಇದ್ದಳು. ಬಿಡುಗಡೆಯ ಹಿಂದಿನ ಒಂಟಿತನ ಅದೆಷ್ಟು ಭಯಂಕರವೆಂದು ಅವಳ ಅರಿವಿಗೆ ಬಂದಿತ್ತು.

ಬೆಳಿಗ್ಗೆ ಅಲೋಕ್‌ಗೆ ಸ್ನಾನ ಮಾಡಿಸುವಾಗ "ಮಮ್ಮಿ, ಚೈತ್ರ ಆಂಟಿ ಡೈವೋರ್ಸ್ ತಗೋತಾರಂತೆ...." ರಾತ್ರಿ ಕೇಳಿಸಿಕೊಂಡಿದ್ದ. ಕ್ಷಣ ವಿಗ್ರಹ ವಾದಳು "ಅಂದರೇ....ಪಪ್ಪಿ ಡ್ಯಾಡಿ ಇನ್ನೊಂದು ಆಂಟೀ ಜೊತೆ ಮದ್ವೆ ಆಗ್ತಾರ...." ಅವನ ಮಸ್ತಿಷ್ಕದಲ್ಲಿ ಇಣಕಿದ ಪ್ರಶ್ನೆಗೆ ಉತ್ತರಿಸಲು ತಡ

ಬಡಿಸಿದಳು "ಎಂಥದ್ದೂ....ಇಲ್ಲ. ಬರೀ ತಮಾಷೆಗೆ ಅಂದಿದ್ದು. ನೀನು ಇದೆಲ್ಲ ಪಪ್ಪಿಗೆ ಹೇಳ್ಬಾರ್ದು" ಎಚ್ಚರಿಸಿದಳು.

ಮದುವೆ ಆಟ, ಮಕ್ಕಳ ಆಟ ಆಡುತ್ತಿದ್ದ ಪುಟಾಣಿಗಳು ಮುಂದೆ ಡೈವೋರ್ಸ್ ಆಟ ಆಡಬೇಕಾಗುತ್ತೇನೋ ! ಪಾಶ್ಚಾತ್ಯ ಸಂಸ್ಕೃತಿ ಇಲ್ಲಿಗೂ ತಲೆ ಹಾಕಿದರೆ....ಭಾರತದ ಭವ್ಯ ಪರಂಪರೆಯು ಕುಸಿದ. ಅಚ್ಚರಿಯಿಂದ ತಮ್ಮತ್ತ ಕಣ್ಣರಳಿಸಿ ನೋಡುತ್ತಿದ್ದ ಪಾಶ್ಚಿಮಾತ್ಯರು ಅಲಕ್ಷದಿಂದ ನಗೆ ತೋರ ಬಹುದು.

ಯೂನಿಫಾರಂ ತೊಟ್ಟ ಅಲೋಕ್ "ಗುಡ್ ಮಾರ್ನಿಂಗ್ ಹೇಳ್ಬರ್ತೀನಿ" ಗೋದಾವರಿಯವರ ಮುಂದಿನ ಮನೆಗೆ ಓಡಿದ ಆಕೆ ಕೂಡ ಅವನಿಗಾಗಿ ಕಾಯುತ್ತಿದ್ದರು.

ಬೇಗ ಬೇಗ ತನ್ನ ಕೆಲಸ ಮುಗಿಸಿ ಬೀಗ ಹಾಕಿ ಅಲೋಕ್‌ನ ಆ ತಿರುವಿಗೆ ಬಿಡಲು ಹೊರಗೆ ಬಂದಳು.

"ನಾನೇ....ಹೋಗ್ತೀನಿ, ಮಮ್ಮಿ" ಎದೆಯುಬ್ಬಿಸಿದ.

"ಈಗ....ನಡೀ...."ಗೋದಾವರಿಯವರತ್ತ ಕಿರುನಗೆ ಬೀರುತ್ತ ಅವನನ್ನ ಕರೆದು ರೋಡಿಗೆ ಇಳಿಯುವ ವೇಳೆಗೆ ಸ್ಕೂಟರ್ ನಿಂತಿತು "ನಾನು ಅಲೋಕ್‌ನ....ಶಾಲೆಗೆ ಬಿಡ್ತೀನಿ" ಪ್ರಸನ್ನ ಹೇಳಿದ. ನಿವೇದಿತಾ ತುಟಿಗಳು ಹೊರಳಲಿಲ್ಲ.

'ನಿನ್ನ ಪರ್ಮೀಷನ್ ಪಡದೇ ನಾನು ಅಲೋಕ್‌ಗೆ ತಂದೆಯಾಗಿರುವುದು. ಈಗ ಅದರ ಅಗತ್ಯವಿಲ್ಲ' ಪ್ರಸನ್ನನ ಕಣ್ಣುಗಳಲ್ಲಿ ಆ ಭಾವ ಇಣಕಿತು. ಹೋಗುವಂತೆ ಅಲೋಕ್‌ಗೆ ಸನ್ನೆ ಮಾಡಿ ಹಿಂದಕ್ಕೆ ತಿರುಗಿದಳು.

ಹಿಂದಿನ ದಿನ ಅಲೋಕ್‌ನ ಕಾನ್ವೆಂಟ್‌ನ ಟೀಚರ್ ಸಿಕ್ಕಿ ಪ್ರಸನ್ನ ಬಂದು ಮಗನ ಪ್ರೋಗ್ರೆಸ್ ಮತ್ತು ಆ್ಯಟಿಟ್ಯೂಡ್‌ನ ಬಗ್ಗೆ ವಿಚಾರಿಸಿಕೊಂಡು ಹೋದ ವಿಷಯ ತಿಳಿಸಿದಳು. ಅಂತು ಮಗನ ಮೇಲೆ ಆಸಕ್ತಿಯಿದೆಯೆಂದಾಯಿತೆಂದು ಕೊಂಡಳು.

ಕಾನ್ವೆಂಟ್‌ನ ಬಳಿ ಅಲೋಕ್‌ನ ಇಳಿಸಿದ ಪ್ರಸನ್ನ ಅವನಿಗೊಂದು ಪುಟ್ಟ ಬಾಲ್‌ಪೆನ್ ಕೊಟ್ಟ. "ತುಂಬ ಕಾಸ್ಟ್ಲೀದು. ಜೋಪಾನವಾಗಿಟ್ಕೊಂಡ್.... ಮನೆಯಲ್ಲಿ ಬಳಸ್ಕೋಬೇಕು" ತಲೆ ಸವರಿದ.

ಕೈ ಬೀಸಿ ಹೋದ ಅಲೋಕನ ಕಡೆಯೇ ನೋಡಿದ. ತೃಪ್ತಗೊಂಡಿತು ಅವನ ಮನ. ನಿರಾಸೆ, ಒಂದು ರೀತಿಯ ಡಿಪ್ರೆಷನ್ ಷುರುವಾದಾಗ ವ್ಯಕ್ತಿ ನಿಂತ ಕಡೆಯೇ ನಿಂತು ಅದಕ್ಕೆ ಕಾರಣ ಯಾಕೆ ಹುಡುಕಬಾರದು ?

ಸ್ಕೂಟರ್ ಹಿಂದಕ್ಕೆ ಬರುವ ವೇಳೆಗೆ ಡಾ॥ ಫಿಲೋಮಿನಾ ಕಾರು ಮನೆಯ ಮುಂದೆ ನಿಂತಿರುವುದನ್ನು ನೋಡಿ ಗಾಬರಿಯಾದ. ಅವನು ಹೊರಗೆ ಬಂದಾಗ ನೀಲಿಮಾ ಇನ್ನು ಎದ್ದಿರಲಿಲ್ಲ. ಪಾದರಸದಂತಿದ್ದ ಅವಳ ಮೈಯಲ್ಲಿ ಸೋಮಾರಿತನದ ಭೂತ ಹೊಕ್ಕಂತಿತ್ತು.

ಆದರೆ ಹೊರಗಿನ ಸಿಟ್ಟಿಂಗ್ ರೂಮಿನಲ್ಲಿಯೇ ಕೂತ ಆಕೆ ಸೊಮೇಶ್ವರರೊಂದಿಗೆ ನಗುತ್ತ ಮಾತಾಡುತ್ತಿದ್ದುದ್ದು ಅವನಿಗೆ ಒಂದಿಷ್ಟು ಸಮಾಧಾನ ತಂದಿತು.

"ಹಲೋ ಡಾಕ್ಟರ್....ಗುಡ್ ಮಾರ್ನಿಂಗ್...."ವಿಶ್ ಮಾಡಿ ಅಲ್ಲಿಯೇ ಕೂತ "ಮಾರ್ನಿಂಗ್....ನಿಮಗೋಸ್ಕರನೆ ಕಾಯ್ತಾ ಇದ್ದೆ." ಎಂದರು.

ಹದಿನೈದು ದಿನದಿಂದ ನರ್ಸಿಂಗ್ ಹೋಂಗೆ ನೀಲಿಮಾ ಹೋಗಿರಲಿಲ್ಲ ಮಾತ್ರವಲ್ಲ, ಅವರೇ ಬಾ ಅಂದಾಗಲೂ ನಿರಾಕರಿಸಿಬಿಟ್ಟಿದ್ದಳು.

"ಚೆಕ್‌ಅಪ್ ಮಾಡೋಣಾಂದ್ರೆ....ನೀಲಿಮಾ ಒಪ್ತಾ ಇಲ್ಲ, ಕಾರಣ ಏನೂಂತ ಗೊತಾಗ್ತಾ ಇಲ್ಲ" ವಿಷಯನ ಅವನ ಮುಂದಿಟ್ಟರು. ಅವನು ಕಣ್ಣು ಕಣ್ಣು ಬಿಟ್ಟ.

ಸೊಮೇಶ್ವರ್ ಕಡೆ ನೋಡಿದ "ಈಗ ಯಾವ್ದೇ ಚೆಕ್‌ಅಪ್ ಬೇಡಾಂತಾಳೆ. ಪ್ರೆಗ್ನೆನ್ಸಿ ಡೆಫಿನೆಟ್ ಅಂತಂದ್ಕೊಂಡಿದ್ದಾಳೆ. ಅದ್ನ ನಾವೇ ಹೇಳೋಕೆ ಅವಕಾಶ ಕೊಡ್ತಾ ಇಲ್ಲಾಂತ ಡಾಕ್ಟ್ರು....ಕಂಪ್ಲೇಂಟ್...." ನಕ್ಕರು ಅವರು.

"ಜಸ್ಟ್ ಎ ಮಿನಿಟ್...." ಎಂದವನು ಕೋಣೆಗೆ ಬಂದ ಮಗುವಿನ ದೊಡ್ಡ ಚಿತ್ರವಿದ್ದ ಪತ್ರಿಕೆ ಹಿಡಿದ ಅವಳ ಬಳಿಗೆ ಬಂದು ಕೂತ "ಡಾ॥ ಫಿಲೋಮಿನಾ....ಬಂದಿದ್ದಾರೆ"

"ಬರಲಿ, ನಂಗೂ ಗೊತ್ತು ಅವ್ರು ಬಂದಿರೋದು. ನಾನಂತು ಚೆಕ್‌ಅಪ್ ಮಾಡ್ಸಿಕೊಳ್ಳೋಲ್ಲ ಈಗ ಸಧ್ಯದಲ್ಲಿ, ಮೂರು ತುಂಬಿದ ನಂತರವೆ ಅವರ ಸಜೆಷನ್" ಉತ್ಪ್ರೇಕ್ಷೆಯಿಂದ ನುಡಿದಳು.

ಪ್ರಸನ್ನ ಉಗುಳು ನುಂಗಿದ "ಈಗೇನು....ಪ್ರಾಬ್ಲಮ್ ? ಅವ್ರು ನಿಮ್ಮ ಫ್ಯಾಮಿಲಿ ಡಾಕ್ಟ್ರು. ಕರೆಕ್ಟಾಗಿ ವಿಷ್ಯ ತಿಳ್ದುಕೊಳ್ಳೋದು ಒಳ್ಳೇದು"

ಕೈಯಲ್ಲಿದ್ದ ಮ್ಯಾಗಝೀನ್‌ನ ಅಷ್ಟು ದೂರಕ್ಕೆ ಎಸೆದಳು "ಸ್ಟುಪಿಡ್, ಎಮೋಷನ್ ಆಗೋದು ಈಗ ಸರಿಯಲ್ಲ. ನಾನು ಸಾಕಷ್ಟು ಓದಿಕೊಂಡಿದ್ದೀನಿ. ಈಗಂತು ಯಾವ್ದೇ ಟೆಸ್ಟ್‌ಗೆ ನಾನು ಸಿದ್ಧವಿಲ್ಲ" ಬಡಬಡಿಸಿದಳು.

ಅವಳಲ್ಲಿ ಯಾವುದೋ ಅಂಜಿಕೆ ಇದೆಯೆನಿಸಿತು ಅವನಿಗೆ. ಅತ್ಯಂತ ಸೂಕ್ಷ್ಮವಾಗಿ ಅವಳನ್ನ ಅವಲೋಕಿಸಿದ. ತಾರುಣ್ಯ ಪೂರ್ತಿ ಮಾಸಿದ ಮಧ್ಯ ವಯಸ್ಸಿನ ಹೆಂಗಸಿನಂತೆ ಕಂಡಳು. ವಯಸ್ಸು ಪ್ರಧಾನವಾದರೂ ಹತ್ತು ಹಲವು ಕಾರಣಗಳಿದ್ದವು.

ಬಳಕುವ ಶರೀರ, ತುಟಿಗೆ ರಂಗು, ಆತ್ಮವಿಶ್ವಾಸದ ಕಣ್‌ಬೆಳಕು, ಗಂಭೀರ ನಡೆನುಡಿಗಳು—ಇದು ನೀಲಿಮಾ ಪರ್ಸನ್ಸು.

ಕೇಳಿ ಡಾ|| ಫಿಮೋಮಿನಾ ಮುಗುಳ್ನಕ್ಕರು. ಇಂಥ ಸ್ಥಿತಿಯಲ್ಲಿನ ಹೆಣ್ಣುಗಳ ಮನದ ಸೈಕಾಲಜಿ ಅವರಿಗೆ ಗೊತ್ತು. ಸಾಕಷ್ಟು ಕೇಸ್‌ಗಳನ್ನ ಹ್ಯಾಂಡಲ್ ಮಾಡಿದ ಅನುಭವ ಅವರದು.

"ಐಯಾಮ್ ಹೆಲ್ಪ್‌ಲೆಸ್.... ವಿಷ್ಯ ನಿಮ್ಗೆ ತಿಳಿದಿರಲೀಯಂತಲೇ ಇಲ್ಲಿವರ್ಗೂ ಬಂದಿದ್ದು." ತಮ್ಮ ಮೇಲಿನ ಭಾರ ಕಳೆದುಕೊಂಡವರಂತೆ ಸೋಮೇಶ್ವರ್‌ಗೆ ತಿಳಿಸಿ ಮೇಲೆದ್ದರು.

ಅವರುಗಳದು ಇಪ್ಪತ್ತು ವರ್ಷದ ಪರಿಚಯ. ಒಂದು ರೀತಿ ಸ್ನೇಹಿತರಂತೆ.

ಸೋಮೇಶ್ವರ, ಪ್ರಸನ್ನ ಇಬ್ಬರು ಹೋಗಿಯೇ ಅವರನ್ನು ಕಾರಿನವರೆಗೂ ಬೀಳ್ಕೊಟ್ಟು ಬಂದರು.

ತೀರಾ ಕಂದಿದ ಸೋಮೇಶ್ವರ್ ಮುಖ ನೋಡಿ ನೊಂದ. ಆ ಮನೆಯಲ್ಲಿ ಆರ್ಥಿಕ ಸಮಸ್ಯೆಗಳಿರಲಿಲ್ಲ. ಜಗಳ, ಅಳು, ಬೇಸರಕ್ಕೆ ಆಸ್ಪದವೇ ಇರಲಿಲ್ಲ. ಈಗ ಮಗಳಿಗೆ ಮಗುವಾಗಲಿಲ್ಲವೆಂದು ಹಿರಿಯರು ಅಳರು. ಪ್ರಸನ್ನದು ಅಂಥ ಬೇಡಿಕೆ ಇಲ್ಲ. ಆದರೆ ನೀಲಿಮಾ ಸಮಸ್ಯೆ ಹುಟ್ಟಿ ಹಾಕಿಕೊಂಡು ಕಾಡಿಸುತ್ತಿದ್ದಳು.

ಮರುದಿನದಿಂದ ವಾಕರಿಕೆ, ವಾಂತಿಯೆಂದು ಸಿಂಕ್ ಬಳಿ ಓಡುತ್ತಿದ್ದಳು.

ತಲೆ ಸುತ್ತು ಎಂದು ನರಳುತ್ತಿದ್ದಳು. ಉಪ್ಪಿನಕಾಯಿ ಮಾವಿನಕಾಯಿಯ ಬಯಕೆ ಬೇರೆ.

ಆಕೆಗೆ ತಲೆ ತುರಿಸಿಕೊಳ್ಳುವಂತಾಯಿತು "ಇವೆಲ್ಲ ಸ್ವಲ್ಪ ನಿಧಾನವಾಗಿ ಶುರುವಾಯಿತೇನೋ, ಹೇಗೋ ಅವ್ನ ಆಸೆ ಪೂರೈಸಿ ಬಿಟ್ರೆ....ಸಾಕು" ಮಗಳನ್ನು ಅಕ್ಕರೆಯಿಂದ ನೋಡಿಕೊಳ್ಳತೊಡಗಿದರು.

ಮನೆಯ ಉಪ್ಪಿನಕಾಯಿಯ ಜೊತೆ ಮಾರುವ ಎಲ್ಲಾ ಉಪ್ಪಿನಕಾಯಿ ಬಾಟಲುಗಳು ಮನೆಗೆ ಬಂದವು. ಸಿಗದ ಮಾವಿನಕಾಯಿಗಾಗಿ ಅಳಿಯ, ಮಾವ ಮಾರ್ಕೆಟ್‌ಗಳನ್ನ ಜಾಲಾಡಿ ಕಡೆಗೂ ತಂದರು.

ನೀಲಿಮಾ ರಜ ಮುಂದುವರಿಯಿತು. ಪ್ರಸನ್ನ ಮನೆಗೆ ಬಂದರೆ ಮಡದಿಯ ಉಪಚಾರ. ಕೂತಿದ್ದ ಕಡೆಯಿಂದಲೇ, ಮಲಗಿದ್ದ ಕಡೆಯಿಂದಲೇ 'ಅದನ್ನ ಕೊಡಿ, ಇದನ್ನ ತನ್ನಿ, ಅದ್ನ ತೆಗೆದಿಡಿ' ಈ ಹುಕುಂಗಳನ್ನ ಪಾಲಿಸಿ ಪಾಲಿಸಿ ಅವನಿಗೆ ಸಾಕಾಯಿತು.

"ಸಂಜೆಯಾದ್ರೂ ಪ್ರಶಾಂತವಾದ ಕಡೆ ವಾಕ್ ಹೋಗಿ ಬರೋಣ" ಪ್ರಸನ್ನ ಸೂಚಿಸಿದ. ನೀಲಿಮಾ ಕೈ ಹೊಟ್ಟೆಯ ಮೇಲೆ ಹೋಯಿತು "ಆಗೋಲ್ಲ........ಆಗೋಲ್ಲ........ಇನ್ನೊಂದು ತಿಂಗ್ಳಾದ್ರೂ ರೆಸ್ಟ್‌ಬೇಕು" ಅವಳಿಗೆಲ್ಲಿ ತನ್ನ ಗರ್ಭ ಕರಗಿ ಬೀಳಬಹುದೋ ಎನ್ನುವ ಭಯ.

"ನಿನ್ನಿಷ್ಟ...." ಅಲ್ಲಿಗೆ ಬಿಟ್ಟ ಪ್ರಸನ್ನ.

ನಿವೇದಿತಾನ ನೆನಪಿಸಿಕೊಂಡು ಹೊರಗೆ ಬಂದ. ಎದುರಾದ ಪಟೇಲ್ ಬೆನ್ನಿಗೊಂದು ಗುದ್ದಿದ.

"ರೋಮಿಯೋ ಹಾಗೆ ಡ್ರೆಸ್ ಮಾಡ್ಕೊಂಡ್....ಶಿಕಾರಿಗೆ ಹೊರಟಂಗಿದೆ. ಮೇಡಮ್‌ನವರಿಲ್ವಾ !" ರೇಗಿಸಿದ.

ಅಂದಿನ ದಿನಗಳಲ್ಲೂ ಪಟೇಲ್ ಹೀಗೆಯೇ ರೇಗಿಸಿ ಗೋಳೋಯ್ದುಕೊಳ್ಳುತ್ತಿದ್ದ. ಕೋಪ ಬಂದರೂ ಹಿತವಾಗಿದ್ದ ದಿನಗಳು.

"ಷಿ ಈಸ್ ಆನ್ ಬೆಡ್....ಎಲ್ಲಾದ್ರೂ ಹೋಗೋಣ ನಡೀ" ತನ್ನ ಕಾರಿನ ಬೀಗದ ಕೈಯನ್ನ ಪ್ಯಾಂಟ್ ಜೇಬಿಗೆ ಸೇರಿಸಿ ಅವನನ್ನ ಬಳಸಿಯೇ ಮಾರುತಿಯತ್ತ ನಡೆದ.

"ಎಲ್ಲಿಗೆ...." ಪಟೇಲ್ ಅವನನ್ನೆ ಕೇಳಿದ.

"ಎಲ್ಲಿಗಾದ್ರೂ...ಸರಿ, ಒಂದಿಷ್ಟು ರಿಲ್ಯಾಕ್ಸ್ ಬೇಕು. ಒಂಬತ್ತು ತಿಂಗಳ ಬದ್ಲು ಒಂಬತ್ತು ದಿನಕ್ಕೆ ಹೆಂಗಸರಿಗೆ ಡಿಲಿವರಿ ಆಗಿದ್ರೆ....ಚೆನ್ನಾಗಿತ್ತು. ಅವ್ರ ಜೊತೆ ಗಂಡಸರ ಪಡಿಪಾಟಲು ಕೂಡ ತಪ್ತಾ ಇತ್ತು. ಒಂದು ಮಗು ವನ್ನು ಹೆರೋದಕ್ಕೆ ಇಷ್ಟೊಂದು ಧೀರ್ಘ ಅವದಿ ಬೇಕಾ ?" ಅವನು ಪ್ರಶ್ನೆ ಯನ್ನ ಪ್ರಕೃತಿಗೆ ಎಸೆದಂತಿತ್ತು.

ಪಟೇಲ್ ವಿಸ್ಮಯದಿಂದ ಅವನನ್ನು ನೋಡಿದ. ವಿದ್ಯಾವಂತ ಮಿದುಳು ಎಡವಿದ್ದೆಲ್ಲಿ ? ಅವನಿಗೆ ತಲೆ ಬಿಸಿಯಾಯಿತು.

ವೇದಿಕೆ ಹತ್ತಿದಾಗ ಮಾಡುವ ಭಾಷಣ, ದಿನನಿತ್ಯದ ಮಾತುಗಳು ಬೇರೆ ಬೇರೆನಾ ?

ಬೀದಿ ಬೀದಿ ಸುತ್ತಿಸಿ ಒಂದೆಡೆ ಕಾರು ನಿಲ್ಲಿಸಿದ. 'ಕರಾಟೆ ಶಾಲೆ' ಹೊರಗೆ ಬೋರ್ಡ್ ಇತ್ತು. ಅಲ್ಲಿ ಇದ್ದಿದ್ದು ಪುಟಾಣಿಗಳ ಹಿಂಡೇ. ಅವರ ನಡುವೆ ಅಭ್ಯಾಸ ಮಾಡುತ್ತಿದ್ದ ಅಲೋಕ್ ಕಣ್ಣಿಗೆ ಬಿದ್ದ. ಅವನ ಮುಖದ ಠೀವಿ, ಕೈಕಾಲು ಆಡಿಸುವ ಭಂಗಿ–'ವ್ಹಾ'. ಮಂತ್ರಮುಗ್ಧನಂತೆ ನಿಂತ ಪ್ರಸನ್ನ.

"ಅವ್ನು ಪೈಲೆಟ್ ಆಗೋಕೆ ಈಗಿನಿಂದ ತಯಾರಿ" ಎನ್ನುತ್ತ ಪಟೇಲ್ ಎದೆಯ ಮೇಲೆ ಕೈಕಟ್ಟಿದ "ಅವ್ನ ಆಸೆಗೆ ನಿವೇದಿತಾ ದೀಕ್ಷಾಬದ್ಧಳು". ತನ್ಮಯತೆಯಿಂದ ಆಡಿದ. "ಈಚೆಗೆ ಆರ್ಮಿಗೆ ಸೇರ್ತೀನಿ ಅಂತಾನೆ"

ಅಭ್ಯಾಸ ಮುಗಿಸಿ ಬಂದ ಅವನನ್ನು ಎತ್ತಿ ಒಂದು ರೌಂಡ್ ತಿರುಗಿಸಿ ಕೆಳಗೆ ಬಿಟ್ಟ ಪಟೇಲ್.

'ನಂಗೆ ಹೇಳಲೇ ಇಲ್ಲ' ! ಎನ್ನುವಂತಿತ್ತು ಪ್ರಸನ್ನನ ಆಕ್ಷೇಪಣೆಯ ನೋಟ. 'ಅಂಥ ಅಗತ್ಯವಿತ್ತಾ ?' ಅಂಥ ಭಾವವಿತ್ತು ಅಲೋಕ್‌ನ ಮುಖದ ಮೇಲೆ ಅರಗಿಸಿಕೊಳ್ಳಲಾರದೆ ಒದ್ದಾಡಿದ ಪ್ರಸನ್ನ.

ಇವರುಗಳು ಕಾಂಪೌಂಡ್ ದಾಟುವ ವೇಳೆಗೆ ನಿವೇದಿತಾ ವಾಚ್ ನೋಡುತ್ತ ನುಗ್ಗಿದಳು. ಹಾರಿ ಹೋದ ಅವನಮ್ಮನ ಹತ್ತಿರ ಅಲೋಕ್.

ಪಟೇಲ್, ಪ್ರಸನ್ನರ ಇಬ್ಬರ ನೋಟಗಳನ್ನು ಸಂಕೋಚವಿಲ್ಲದೇ ಸಮರ್ಥವಾಗಿ ಅರಗಿಸಿಕೊಂಡಳು.

"ಸರ್‌ಪ್ರೈಜ್...." ಇಬ್ಬರನ್ನ ಉದ್ದೇಶಿಸಿಯೇ ಹೇಳಿದಳು.

ಪ್ರಸನ್ನ ನೋಟವನ್ನ ಆಳಗೊಳಿಸಿದ, ಪ್ರಸನ್ನ ನಕ್ಕು ಆಲೋಕ್‌ನತ್ತ ಮೆಚ್ಚಿಗೆಯ ನೋಟ ಹರಿಸಿದ "ನಮ್ಮ ಮರಿ ಪೈಲೆಟ್‌ನ ನೋಡೋಕ್ಕಿಂತ.... ಅವಳ ಮುಖ ಅರಳಿತು "ಬರ್ತೀನಿ, ಈ ಬಸ್ಸು ಮಿಸ್ ಆದ್ರೆ....ಇನ್ನರ್ಧ ಗಂಟೆ ಕಾಯ್ಬೇಕಾಗುತ್ತೆ" ಬೀಳ್ಕೊಡುವ ಮಾತಾಡಿದಳು. ಪಟೇಲ್ ತಲೆ ಕುಣಿಸಿದ.

ಬೇಗ ಬೇಗ ಹೆಜ್ಜೆ ಹಾಕುತ್ತ ಹೋಗುತ್ತಿರುವ ತಾಯಿ, ಮಗನನ್ನ ನೋಡಿದರು. "ತನ್ನೆಲ್ಲ ಸಾಮರ್ಥ್ಯವನ್ನ ಹೇಗೆ ಧಾರೆಯೆರೆದು ಮಗನನ್ನ ತಾಯಿ ಬೆಳೆಸಬಹುದೋ, ಅದನ್ನು ಹೆಚ್ಚು ಸಮರ್ಪಕವಾಗಿ ಮಾಡ್ತಾ ಇದ್ದಾಳೆ ನಿವೇದಿತಾ" ಆರಾಧನಾಪೂರ್ವಕವಾಗಿ ನುಡಿದಂತಿತ್ತು ಪಟೇಲ್.

ಪ್ರಸನ್ನ ತುಟಿಕಚ್ಚಿ ಅವನ ಜೊತೆ ಹೆಜ್ಜೆ ಹಾಕಿದ.

"ನಿಮ್ಮ ಮನೆಗೆ ಹೋಗೋಣ...." ಪಟೇಲ್ ಕೇಳುವ ಮುನ್ನ ತಾನೇ ಹೇಳಿದ ಪ್ರಸನ್ನ. ಅವನೆದೆಯಾಳದಲ್ಲಿ ಧುಮ್ಮಿಕ್ಕುವ ಭಾವನೆಗಳನ್ನ ಗೆಳೆಯನ ಮುಂದೆಯಾದರೂ ಹೇಳಿಕೊಂಡು ಮನವನ್ನು ಹಗುರ ಮಾಡಿಕೊಳ್ಳ ಬೇಕೆಂಬುದು ಅವನ ಉದ್ದೇಶ.

ಬಲವಂತವಿಲ್ಲದೆ ಒಂದು ಪೆಗ್ ವಿಸ್ಕಿ ಹಾಕಿದ ಪ್ರಸನ್ನ. "ತೀರಾ ಮೆಂಟಲ್ ಟೆನ್ಷನ್....ಅದು ಹೌದಾ, ಅಲ್ಲವಾ ಎಂದು ಊಹಿಸುವ ಕಾನ್ಫಿ ಡೆನ್ಸ್ ಕೂಡ ನಂಗಿಲ್ಲದಾಗಿದೆ." ಗ್ಲಾಸ್ ಕೆಳಗಿಟ್ಟ.

ಪಟೇಲ್ ಹುಬ್ಬು ಕುಣಿಸಿ ನಕ್ಕ.

"ಒಂದು ನಾವೆಯಿಂದ ಇಳಿದು ಮತ್ತೊಂದು ನಾವೆ ಹತ್ತಿದ ಮೇಲೆ, ಆ ನಾವೆ... ಅದರಲ್ಲಿ ಕುಳಿತ ಕ್ಷಣಗಳನ್ನು ನೆನಸಿಕೊಳ್ಳುವುದು, ಅದಕ್ಕಾಗಿ ತವಕಿಸುವುದು ಮೂರ್ಖತನ. ನಿನ್ನ ಗಮನ ಪ್ರೆಸೆಂಟ್ ನಾವೆಯ ಬಗ್ಗೆ ಮಾತ್ರ ಇರಲಿ. ಈಗ ನೀಲಿಮಾ ಹೇಗಿದ್ದಾರೆ ?" ವಿವೇಕ ಹೇಳಿದ.

ಪ್ರಸನ್ನ ಎರಡು ಕೈ ಆಡಿಸಿ ಬಿಟ್ಟ.

"ಆ್ಯಸ್ ಇಟ್ ಈಸ್. ಈಗ ವಸ್ತುಸ್ಥಿತಿ ಹಾಗೇ ಇದ್ದರೂ ಮತ್ತೊಂದು ಪಟ್ಟು—ಚೆಕ್‌ಅಪ್, ಟೆಸ್ಟ್ ಯಾವ್ದು ಬೇಡ. ನೋಡ್ಬೇಕು...." ಕರಿಯ ನೆರಳಾಡಿತು ಪ್ರಸನ್ನನ ಮುಖದ ಮೇಲೆ.

ತನ್ನೆದೆಯಾಳದ ನೋವಿನ ಜೊತೆ ಸುಂದರವಾದ ಭಾವನೆಗಳನ್ನ ಕೂಡ ಹೊರ ಚೆಲ್ಲಿದ ಪ್ರಸನ್ನ.

"ನನಗೆ ನಾನೇ ಮೋಸ ಮಾಡ್ಕೊಂಡೇ, ಪಟೇಲ್. ಆ ದಿನಗಳಲ್ಲಿ ನನ್ನಲ್ಲಿ ಬೆಳೆದ ಭಾವನೆಗಳಿಗೆ ಕಾರಣವೇನು ? ಹೇಗೆ ಅದನ್ನ ವಿಶ್ಲೇಷಿಸಿದ್ದರೇ ಸರಿಯಿತ್ತು ? ಒಂದೂ ಗೊತ್ತಾಗ್ಲಿಲ್ಲ. ನಿವೇದಿತಾ ಮೇಲಿನ ಪ್ರೀತಿ ನನ್ನದೆಯಾಳದಲ್ಲಿ ಖಂಡಿತ ಸತ್ತಿಲ್ಲ. ಅದರ ಮೇಲೆ ಕವಿದುಕೊಂಡ ಪರೆ ಎಂಥದ್ದು ?" ಮುಖ ಹಿಂಡಿದ.

ಇದಕ್ಕೆ ಪ್ರೋತ್ಸಾಹಿಸಬಾರದೆಂದುಕೊಂಡ ಪಟೇಲ್.

"ನಡೆದು ಹೋಗಿದ್ದಕ್ಕೆ ಪಶ್ಚಾತ್ತಾಪ ಪಡು. ಕೊರಗೋದ್ಬೇಡ. ಮತ್ತೆ ಮತ್ತೆ ಅದೇ ತಪ್ಪುಗಳು ಆಗುತ್ತೆ. ನಿವೇದಿತಾನ ಮಾತ್ರವಲ್ಲ ಅಲೋಕನ್ನ ಕೂಡ ಮರ್ರುಬಿಟ್ಟರೆ....ನಿನ್ನ, ನೀಲಿಮಾ ದಾಂಪತ್ಯ ಜೀವನ ಆಶಾದಾಯಕ."

ಎರಡು ಕೈಯಿಂದ ಪ್ರಸನ್ನ ತಲೆ ಹಿಡಿದುಕೊಂಡ.

"ಇಂಪಾಜಿಬಲ್, ಅವಳಲ್ಲಿನ ಆಕರ್ಷಣೆ ಸೂಜಿಗಲ್ಲಿನಂತೆ ನನ್ನ ಸೆಳೆಯುತ್ತ ಇದೆ. ಅವಳನ್ನು ಕಾಡಬೇಕು, ಪ್ರೀತಿಸಬೇಕು, ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ನಿವೇದಿತಾಳ ಒಂದೇ ಒಂದು ಕಣ್ನೋಟಕ್ಕೆ ನನ್ನ ಮೈ ಪುಳಕಗೊಳ್ಳುತ್ತೆ"

"ಮೈ ಗಾಡ್....ಇದು ಚೈನ್ ಫೀವರ್‌ಗಿಂತ ಘೋರವಾದ್ದುದ್ದು. ಅತ್ಯಂತ ಕ್ರೂರವಾದ್ದುದ್ದು. ಹತೋಟಿ ಮೀರದ ಮುನ್ನವೇ ಎಚ್ಚೆತ್ತುಕೊಳ್ಳಬೇಕು" ರೇಗಿದ ಪಟೇಲ್.

ಒಂದು ಗಂಟೆ ಬುದ್ಧಿ ಹೇಳಿದ ಮೇಲೆಯೇ ತಂದು ಅವನನ್ನ ಮನೆಯ ಮುಂದೆ ಇಳಿಸಿ ಹೋಗಿದ್ದು.

"ಬೆಸ್ಟ್ ಆಫ್ ಲಕ್....ಹಿಂದಿನ ಜನ್ಮಗಳ ನೆನಪು ಮನುಷ್ಯರಿಗಿದ್ದಿದ್ದರೇ, ಅವರದು ನಿನ್ನದೇ ಪಾಡಾಗ್ತ ಇತ್ತು. ಇದು ಇರ್ಬಾರ್ದು—ದೈವದ ತಾಕೀತು. ಅದು ನಿನ್ನ ಬದ್ಕೀಗೂ ಅನ್ವಯವಾಗ್ಲಿ" ಹೊರಡುವ ಮುನ್ನ ಕಾರಿನಿಂದ ಇಳಿದು ಭುಜ ತಟ್ಟಿ ಹೇಳಿದ.

ಪಟೇಲ್‌ನ ಮಾತುಗಳನ್ನು ಮಸ್ತಿಷ್ಕದಲ್ಲಿ ಉಳಿಸಿಕೊಳ್ಳಲು ಎಡಬಿಡದ ಪ್ರಯತ್ನ ಮಾಡುತಲೇ ಇದ್ದ.

ರಾತ್ರಿ ನೀಲಿಮಾ ಒಂದು ವಿಷಯ ಮುಂದಿಟ್ಟಳು.

"ಅಲೋಕ್, ನಮ್ಮ ಬಳಿ ಒಂದಷ್ಟು ದಿನ ಇರಲಿ" ಅವನಿಗಂತು ತೀವ್ರತರ ಗಾಬರಿ

"ಪ್ಲೀಸ್, ನೀಲಿಮಾ ಏನೇನೋ....ಹೇಳ್ಬೇಡ. ನನ್ನಂಥ ಹೊಣೆ ಗೇಡಿ ತಂದೆಗಿಂತ ಜವಾಬ್ದಾರಿಯುತ್ತ ತಾಯಿಗೇನೆ ಮಗುವಿನ ಮೇಲೆ ಹಕ್ಕು. ಆ ವಿಷ್ಯ ಪೂರ್ತಿ ಬಿಡು" ಬೇಸರದಿಂದ ಏಳಲು ಹೋದ. ಕೈ ಹಿಡಿದು ಜಗ್ಗಿದಳು.

"ಅಲೋಕ್ ನಮ್ಗೆ ಬೇಡಾ, ಆದ್ರೆ...ಅವನಂಥ ಮಗು ಬೇಕು. ಇಲ್ಲೇ ಇದ್ದರೆ ಅವ್ನ ರೂಪವೇ ನನ್ನ ಮನಸ್ಸಿನಲ್ಲಿ ತುಂಬಿಕೊಳ್ಳುತ್ತೆ. ಕೆಲವು ದಿನ ಇರಲಿ... ನಮ್ಹತ್ರ...." ಬೇಡಿಕೊಂಡಳು.

ತುಸು ಒರಟಾಗಿಯೇ ಅವಳ ಕೈಯಲ್ಲಿದ್ದ ತನ್ನ ಕೈಯನ್ನು ಬಿಡಿಸಿಕೊಂಡ "ಇದೊಂದು ಕೆಟ್ಟ ಸೈಕಾಲಜಿ. ಅಲೋಕ್ ಇಲ್ಲಿಗೆ ಬರೋಲ್ಲ, ನಿವೇದಿತಾ ಒಪ್ಪೋದೂ ಇಲ್ಲ, ಕೆಲವು ಸಂಬಂಧಗಳನ್ನು ಹೆಣ್ಣು ಯಾರೊಂದಿಗೂ ಹಂಚಿಕೊಳ್ಳೋಲ್ಲ. ಅವಳನ್ನ ಆರಾಮಾಗಿರೋಕೆ ಬಿಡು" ತೀರಾ ಖಿನ್ನನಾದ.

ನಿವೇದಿತಾ ಮೇಲೆ ಅನುಕಂಪ ಮಾತ್ರವಲ್ಲ ಪ್ರೀತಿ, ಪ್ರೇಮ ಕೂಡ ಇದೆಯೆಂದು ಅವಳಿಗೆ ಮನದಟ್ಟಾಯಿತು.

"ನೀವು, ಈಗ್ಲೂ ನಿವೇದಿತಾನ ಪ್ರೀತಿಸ್ತೀರಾ ?"

ಅವಳ ಮಾತಿಗೆ ಪ್ರಸನ್ನ ಎಚ್ಚೆತ್ತುಕೊಂಡ

"ಅವ್ಳ ಬಗ್ಗೆ ಪ್ರೀತಿ ಇದ್ದಿದ್ರೆ....ನಿನ್ನನ್ನ ಯಾರು ಮದ್ವೆ ಆಗ್ತಾ ಇದ್ರು....?" ಸುಮ್ನೇ....ಮಲಕ್ಕೊ" ಮಲಗಿ ಬೇರೆಡೆ ತಿರುಗಿಕೊಂಡ.

ನವಿರಾದ, ಮಧುರವಾದ, ಅತ್ಯಂತ ಸಹನೀಯವಾದ ಬದುಕು ಕೂಡ ಆಗಲಿಲ್ಲ. ತನ್ನ ಸುಖ, ಚೈತನ್ಯದ ಅನ್ವೇಷಣೆಯೇನಾಯಿತು ?

ಬೆಳಗಿನ ಜಾವ ಅವನಿಗೆ ನಿದ್ದೆ ಬಂದಿದ್ದು. ನೀಲಿಮಾ ಕಿರುಚಿಕೊಂಡ ಸದ್ದು. ಬಾತ್‌ರೂಂಗೆ ಓಡಿದ. ಜಾರಿ ಬಿದ್ದು ಏಳಲಾರದೆ ನರಳುತ್ತಿದ್ದಳು.

ಕೈ ಹಿಡಿದು ಎಬ್ಬಿಸಲು ನೋಡಿದ. ಹೊಟ್ಟೆಯ ಮೇಲಿಂದ ಅವಳ ಕೈ ಸರಿಯಲಿಲ್ಲ.

"ನೀಲಿಮಾ, ಕೈ ನೆಲಕ್ಕೂರಿ ಏಳುವ ಪ್ರಯತ್ನ ಮಾಡು" ಮನವೊಲಿಸಲು ನೋಡಿದ.

"ನಂಗೆ ಭಯ ಆಗುತ್ತೆ" ಅದೇ ಆತಂಕ.

ಸೋಮೇಶ್ವರ್, ಅರುಂಧತಿ, ಅವನು ಸೇರಿಯೇ ಅವಳನ್ನು ಮಂಚದವರೆಗೂ ಕರೆ ತಂದಿದ್ದು.

"ಕಾಲಿಗೆ ಬಿಟ್ಟು ಬೇರೆಲ್ಲಿಗೂ ಪೆಟ್ಟು ಬೀಳಲಿಲ್ವಾ" ಅವಳಮ್ಮ ತಲೆ ಸವರಿದರು "ಗೊತ್ತಿಲ್ಲ...." ಅವಳ ಕೈ ಹೊಟ್ಟೆಯ ಮೇಲಿಂದ ಸರಿಯಲಿಲ್ಲ.

ಡಾಕ್ಟರಿಗೆ ಫೋನ್ ಹಚ್ಚಿದ.

"ಅವ್ರು, ನನ್ನ ಕಾಲು ಬಿಟ್ಟು ಏನು ಟೆಸ್ಟ್ ಮಾಡ್ಬಾರ್ದು. ಮೊದ್ಲು ತಿಳ್ಸಿ...." ನೀಲಿಮಾ ಕೂಗಾಡಿದಳು.

ಅದನ್ನೆ ಫೋನ್‌ನಲ್ಲಿಯೂ ಕೂಡ ಡಾ|| ಫಿಲೋಮಿನಾಗೆ ಹೇಳಬೇಕಾಯಿತು "ಬೇರೆ ಡಾಕ್ಟರನ್ನು ಸಂಪರ್ಕಿಸಿ" ಆಕೆ ಬೇಸರದಿಂದ ಫೋನಿಟ್ಟು ಬಿಟ್ಟರು.

ಸೋಮೇಶ್ವರ್ ಕಡೆ ನೋಡಿದ. ಅವರು ಹೆಂಡತಿಯ ಕಡೆಗೆ ನಿಸ್ಸಹಾಯಕ ನೋಟ ಬೀರಿದರು.

"ಡಾ|| ಫಿಲೋಮಿನಾ....ಬರೋಲ್ಲ ? ಈಗೇನು....ಮಾಡೋದು ?" ನೀಲಿಮಾ ಮುಖ ಪಕ್ಕಕ್ಕೆ ತಿರುಗಿಸಿಕೊಂಡು ಜೋರಾಗಿ ಅಳತೊಡಗಿದಳು. "ಎಲ್ಲಾ ಸೇರಿ ನಾನು ತಾಯಿ ಆಗೋದ್ನ ಹಾಳು ಮಾಡ್ತಾ ಇದ್ದೀರಾ ?"

ಮೂವರು ವಿಚಲಿತರಾದರು, ಇವಳಿಗೇನಾಗಿದೆ ? ವಿಚಾರವಂತಳಾಗಿದ್ದ ನೀಲಿಮಾ ಬರೀ ತನ್ನ ಹೆಣ್ತನ ಮಾತ್ರ ಗುರ್ತಿಸಿಕೊಂಡು ಈರೀತಿ ವರ್ತಿಸುವುದು ನಾಚಿಕೆಗೇಡಿನ ವಿಷಯವೆನಿಸಿತು.

ಅರುಂಧತಿ ಮಗಳ ಕೂದಲಲ್ಲಿ ಮಮತೆಯಿಂದ ಬೆರಳಾಡಿಸಿದರು.

"ಫಿಲೋಮಿನಾ....ಬೇಡ, ಹತ್ತಿರದಲ್ಲಿರೋ ಕ್ಲಿನಿಕ್ ಡಾಕ್ಟರನ್ನ ಕರಿಸೋಣ್ವಾ ?"

ಬಹಳ ಸಮಜಾಯಿಸಿದ ನಂತರ ಒಪ್ಪಿಕೊಂಡಳು.

ಅವರು ಎಕ್ಸ್‌ರೇ ಸಲಹೆ ಮಾಡಿ ಹೋದರು. ನೀಲಿಮಾ ಭಯ ಭಯಂಕರ. ಕಡೆಗೆ ನಾಟಿ ವೈದ್ಯನನ್ನು ಕರೆಸಿ ಕಾಲನ್ನ ನೀವಿಸಿದ್ದಾಯಿತು. ಸೋಮೇಶ್ವರ್‌ಗಂತು ತಲೆ ತಗ್ಗಿಸುವಂತಾಯಿತು.

ಡಾ॥ ಫಿಲೋಮಿನಾ ವಿಶ್ರಾಂತಿ ಅವಧಿಯಲ್ಲಿ ಮನೆಗೆ ಹುಡುಕಿಕೊಂಡು ಹೋದ. ಅವರ ಪತಿ ದೊಡ್ಡ ಕಾರ್ಡಿಯಾಲಜಿಸ್ಟ್. ಅವರ ಸೇವೆ ದೊಡ್ಡದೊಡ್ಡ ನರ್ಸಿಂಗ್ ಹೋಂನವರು ಕೂಡ ಇಂದಿಗೂ ಪಡೆಯುತ್ತಿದ್ದರು. ಆಕೆ ಹಿರಿಯ ತಜ್ಞ ಗೈನೋಕಾಲಜಿಸ್ಟ್.

"ನಮಸ್ತೆ....ಡಾಕ್ಟರ್" ಬಾಗಿಲು ತೆಗೆದಿದ್ದು ಆಕೆಯೆ.

"ನಮಸ್ತೆ....ನಮಸ್ತೆ....ಒಬ್ಬರೇನಾ ಬಂದಿದ್ದು?" ಅವನ ಪಕ್ಕ, ಹಿಂದೆ ನೋಟ ಹರಿಸಿದರು. "ಪೇಷಂಟ್ ಆಗಿ ಅಲ್ಲ, ಫ್ರೆಂಡ್ಲಿಯಾಗಿ ಯಾದ್ರೂ ನೀಲಿಮಾ ಬರಬಹುದಿತ್ತಲ್ಲ" ಎಂದರು.

"ಕಾಲಿನ ಊತ, ನೋವು....ಇನ್ನು ಸ್ವಲ್ಪ ಇದೆ. ರೆಸ್ಟ್‌ನ ವಿಷ್ಯ ನಿಮ್ಗೇ ಗೊತ್ತಲ್ಲ" ನಗಲಾರದೆ ನಕ್ಕ. ಹಾಸ್ಯಾಸ್ಪದ, ತೀರಾ ಪರಿಹಾಸ್ಯ ವಾಗಿ ಕಾಣುತ್ತಿತ್ತು ಅದೆಲ್ಲ ಅವನಿಗೆ.

ಏನು ಮಾತಾಡಬೇಕೆಂಬುದೇ ಅವನಿಗೆ ಗೊತ್ತಾಗಲಿಲ್ಲ. ಅವನ ಸಂಕೋಚ, ಹಿಂಜರಿಕೆ ಆಕೆಗೆ ಅರ್ಥವಾಯಿತು.

"ಡೋಂಟ್....ಫಿಯರ್, ನೀಲಿಮಾ ನಾರ್ಮಲ್ಲಾಗಿಯೇ ಇದ್ದಾಳೆ. ಅವ್ಳು ಗರ್ಭ ಧರಿಸಿಲ್ಲ. ಅಂಥ ಮನಸ್ಥಿತಿ ಅವಳದು ಅಷ್ಟೆ."

ಪ್ರಸನ್ನನ ತಿಳಿವಳಿಕೆಗೆ ಪೆಟ್ಟು ಬಿದ್ದಂತಾಯಿತು. ಸಣ್ಣಗೆ ಕಂಡು ಕಾಣ ದಂತೆ ಹಣೆಯ ಮೇಲೆ ಬೆವರೊಡೆಯಿತು.

"ವಾಂತಿ, ಬಯಕೆ ಸಂಕಟ ಎಲ್ಲಾ ಇದೆ. ಅವಳ ಹೊಟ್ಟೆ ಕೂಡ ಉಬ್ಬಿದೆಯೆನಿಸುತ್ತೆ. ಆಯಾಸ, ಬಳಲಿಕೆ...." ಮುಂದೆ ಹೇಳಲಾರದೆ ಹೋದ. ಆಕೆಯ ತುಟಿಯಂಚಿನಲ್ಲಿ ಸಣ್ಣನೆಯ ನಗು ತೇಲಿತು.

ಅಷ್ಟರಲ್ಲಿ ಫೋನ್ ಬಂದಿದ್ದರಿಂದ ಆಕೆ ಎದ್ದು ಹೋದರು. ಎರಡು ಸಲ ತಾನಾಗಿ ಗರ್ಭಪಾತ ಮಾಡಿಸಿಕೊಂಡಿದ್ದಾಳೆ ನೀಲಿಮಾ. ಗರ್ಭ ಧರಿಸಲು ಅವಳ ಮಡಿಲು ಯೋಗ್ಯ. ಅಂಥದ್ದರಲ್ಲಿ ಬರೀ ಮನಸ್ಥಿತಿಯಿಂದಲೇ ಗರ್ಭ

ವತಿಯಂತೆ ನಟನೆ....ಇತ್ಯಾದಿ....ಇತ್ಯಾದಿ....ತೀರಾ ತಲೆ ಕೆಟ್ಟಂತಾಯಿತು ಪ್ರಸನ್ನನಿಗೆ.

ಅಲ್ಲೇ ಟೀಪಾಯಿ ಮೇಲಿದ್ದ ಗಾಜಿನ ಹೂಜಿಯಿಂದ ಲೋಟಕ್ಕೆ ನೀರು ಬಗ್ಗಿಸಿಕೊಂಡು ಕುಡಿದ. ಮೈಯೆಲ್ಲ ಬಿಸಿಯೇರಿದಂತಾಯಿತು. ಕೆಲವು ನಿಮಿಷಗಳಲ್ಲಿ ಮೈಯ ಶಾಖ ಕಡಿಮೆಯಾದರೂ ತನ್ನ ಶಕ್ತಿಯೆಲ್ಲಾ ಹೀರಿ ಬಿಟ್ಟಿದೆಯೆನಿಸಿತು. ಮೈಯಲ್ಲಿ ವಿಪರೀತ ಸುಸ್ತು. ಎದ್ದು ಅಡ್ಡಾಡಲು ಕೂಡ ಸಾಧ್ಯವಾಗಲಿಲ್ಲ.

ಡಾ॥ ಫಿಲೋಮಿನಾ ರಿಸೀವರ್ ಇಟ್ಟು ಬರಲು ಐದು ನಿಮಿಷಗಳೇ ಆಯಿತು.

"ಈಗ್ಹೇಳಿ...." ಬಂದು ಕೂತರು.

"ನಾನು ಹೇಳೋದೇನಿಲ್ಲ, ನೀವು ಹೇಳ್ಬೇಕು....ನಾನು ಕೇಳ್ಬೇಕು.... ಕರ್ಚಿಫ್‌ನಿಂದ ಮುಖದ ಬೆವರನ್ನೊರೆಸಿಕೊಂಡ. ಯಾವ ಗಂಡಾದರೂ ಇಂಥದನ್ನು ಸಹಿಸಿಕೊಳ್ಳಲು ಕಷ್ಟವೆಂದು ಆಕೆಗೆ ಗೊತ್ತು.

"ಡೋಂಟ್ ಮೈಂಡ್, ಮಿಸ್ಟರ್ ಪ್ರಸನ್ನ. ನೀಲಿಮಾ ವರ್ತನೆ ಬಗ್ಗೆ ನಂಗೇನು ಬೇಸರವಿಲ್ಲ. ಅದರಿಂದ್ಲೇ ನಮ್ಮ, ಅವ್ರ ಮಧ್ಯದ ಸ್ನೇಹ ಕಳ್ದು ಹೋಗಿಲ್ಲ. ನಾನು ಹೇಳೋ ಮೊದ್ಲು ನಂಗೆ ನಿಮ್ಮ ಹಿಂದಿನ ಹಿಸ್ಟರಿ ಬೇಕು." ಪೂರ್ತಿ ಸೀಟಿನ ಬೆನ್ನಿಗೊರಗಿ ಅವನನ್ನ ಅವಲೋಕಿಸಿದರು.

ಪ್ರಸನ್ನ, ನೀಲಿಮಾ ಮಧ್ಯೆ ಏಳೆಂಟು ವರ್ಷ ಅಥವಾ ಅದಕ್ಕು ಸ್ವಲ್ಪ ಮಿಕ್ಕ ಅಂತರವಿದೆಯೆನಿಸಿತು. ಅದು ಕೂಡ ಸಮಸ್ಯೆಯೆಂದು ಆಕೆ ಭಾವಿಸ ಲಾರರು.

"ನೆಸಸರಿ ? ನಂಗೇನು ಅದ್ರ ಅವಶ್ಯಕತೆ ಇದೆಯೆನಿಸೋಲ್ಲ" ಏನು ಹೇಳಲು ಅವನಿಗೆ ಇಷ್ಟವಾಗಲಿಲ್ಲ. ಡಾ॥ ಫಿಲೋಮಿನಾ ನಕ್ಕು ಬಿಟ್ಟರು.

"ಯೆಸ್, ನಿಮ್ಮಲ್ಲಿ ಯಾವ್ದೇ ದೋಷವಿಲ್ಲವೆಂದು ಮೆಡಿಕಲ್ ರಿಪೋರ್ಟ್ ಸಾಬೀತು ಮಾಡಿದೆ. ಆದರೆ ನೀಲಿಮಾ ಸ್ಥಿತಿಯ ಹಿಂದು, ಮುಂದಿನ ಕಾರಣಗಳು ಅಗತ್ಯವಾಗಿದೆ. ಹೆಣ್ಣಿನ ಹಂಬಲ, ಬಯಕೆಗಳು ಯಾವ ಮಟ್ಟ ಮುಟ್ಟುತ್ತದೆಯೆನ್ನುವುದಕ್ಕೆ ಇದೊಂದು ಕಾರಣ."

ಇಂದು ಮನ ಬಿಚ್ಚಿ ನಿವೇದಿತಾ, ಅಲೋಕ್ ಬಗೆಗೆ ಹೇಳಬಹುದಾ ದಷ್ಟನ್ನ ಹೇಳಿಕೊಂಡ.

"ಓಕೇ....ಓಕೇ....ಅಲೋಕ್‌ನ ನೀಲಿಮಾ ನೋಡಿದ್ದಾಳೆ. ಎರ್ಡು ಸಲ ನೀಲಿಮಾ ಗರ್ಭಪಾತ ಮಾಡ್ಸಿಕೊಂಡ ವಿಷ್ಯ ನಿಮ್ಗೇ ಹೇಳಿದ್ದೀನಿ. ಅದ್ಕೆ ಯಾರು ಕಾರಣರು ಅನ್ನೋದು ನಂಗೇನು ಮುಖ್ಯವಾಗಲಿಲ್ಲ. ಅಂದು ಕೂಡ ನೀಲಿಮಾಗೆ ಬುದ್ಧಿ ಹೇಳಿದೆ. ಆದರೆ ಆ ಎರಡು ಸಲವು ಗರ್ಭ ಹೊರಲಾಗಲಿ, ಮಗುವನ್ನು ಹೆರಲಾಗಲಿ ಅವಳು ಸಿದ್ಧಳಿರಲಿಲ್ಲ. ರೀಸನ್ ಏನೇ ಇದ್ದರೂ ಅವ್ಳಿಗೆ ತಾಯ್ತನದ ಬಗ್ಗೆ ಅಂಥ ಅಕ್ಕರೆಯೇನೂ ಇರ್ಲಿಲ್ಲ" ಸ್ಪಷ್ಟಪಡಿಸಿದರು.

ಎಲ್ಲಾ ಅಯೋಮಯವೆನಿಸಿತು ಪ್ರಸನ್ನನಿಗೆ. 'ಚೈಲ್ಡ್ ಕೇರ್'ನ ಬಗೆಗಿನ ದೊಡ್ಡ ಪುಸ್ತಕ ಸಂಗ್ರಹವನ್ನು ತನ್ನ ರೂಮಿನಲ್ಲಿ ಶೇಖರಿಸಿಟ್ಟಿದ್ದಳು. ಮಗು ಮೂರು ವರ್ಷ ದಾಟುವವರೆಗಿನ ಎಲ್ಲಾ ಅಗತ್ಯಗಳನ್ನು ಕೂಡಿ ಹಾಕಿದ್ದಳು. ದೆಹಲಿಯಿಂದ ಅವನು ತಂದಿದ್ದು ಮಾತ್ರವಲ್ಲದೆ ಅವಳು ಷಾಪಿಂಗ್ ಸೆಂಟರ್‌ಗೆ ಹೋದಾಗಲೆಲ್ಲಾ ಅದು ಇದು ಸಂಗ್ರಹಿಸಿಟ್ಟಿದ್ದಳು. ಅಂಥದ್ದರಲ್ಲಿ ಅವಳಿಗೆ ಮಗುವಿನ ಹಂಬಲ ಇರಲಿಲ್ಲವೆಂದರೆ ಅವನಿಗೆ ತಲೆ ಕೆಟ್ಟಂತಾಯಿತು.

"ಐ ಕಾಂಟ್ ಅಂಡರ್ ಸ್ಟಾಡಿಂಗ್...." ಎರಡು ಕೈಯಲ್ಲು ತಲೆ ಹಿಡಿದುಕೊಂಡ. ಆಕೆ ಮೇಲೆದ್ದರು "ಸ್ವಲ್ಪ ರಿಲ್ಯಾಕ್ಸ್ ಮಾಡ್ಕೊಳ್ಳಿ...." ಒಳಗೆದ್ದು ಹೋದರು.

'ಸ್ಯೂಡೋಸಯಿಸಿನ್' ಸಂಬಂಧ ಪಟ್ಟ ಲೇಖನಮಾಲೆಗಳ ಹಲವಾರು ಕಟ್ಟಿಂಗ್‌ಗಳನ್ನು ತಂದು ಅವನ ಮುಂದೆ ಹಾಕಿದರು.

"ಇದನ್ನೆಲ್ಲ ನೋಡಿ, ಸ್ವಲ್ಪ ಅರ್ಥವಾದೀತು"

ಪ್ರಸನ್ನನನ್ನು ಒಂಟಿಯಾಗಿಸಿ ಆಕೆ ಒಳಗೆ ಹೋದರು. ನಡುಗುವ ಕೈಗಳಿಂದ ಕೈಗೆತ್ತಿಕೊಂಡ.

ಸ್ಯೂಡೋಸಯಸಿಸ್ ಸುಳ್ಳು ಬಸುರು. ಒಂದು ರೀತಿಯಲ್ಲಿ ಮಾನಸಿಕವಾದ ಕಲ್ಪನೆಯಲ್ಲಿ ಗರ್ಭ ಧರಿಸುವುದು. ಗರ್ಭಿಣಿಯೆಂಬ ಭ್ರಮೆಯಲ್ಲಿ ಬಸುರಿನ ಎಲ್ಲಾ ಅವಸ್ಥೆಗಳನ್ನು ದಾಟುವುದು. ಕಡೆಗೆ ಹೆರಿಗೆಯ ನೋವು ಅನುಭವಿಸಿದರೂ ಕೂಡ ಹೊಟ್ಟೆಯಲ್ಲಿ ಮಗುವಿರೋಲ್ಲ. ಇಂಥ ವಿಚಿತ್ರ ಕೇಸುಗಳ ಬಗೆಗೆ ಅವಲೋಕನವಿತ್ತು ಆ ಲೇಖನಗಳಲ್ಲಿ.

ನೀಲಿಮಾ ಬಗ್ಗೆ ಸಹಾನುಭೂತಿಯಿಂದ ಅವನ ಹೃದಯ ತುಂಬಿ ಹೋಯಿತು. ವಿಗ್ರಹದಂತೆ ಕೂತು ಬಿಟ್ಟ.

ಬಂದ ಫಿಲೋಮಿನಾ ಅವನತ್ತ ನಸು ನಗೆ ಬೀರಿದರು.

"ಈಗ ಅರ್ಥವಾಗಿರಬೇಕಲ್ಲ. ನೀಲಿಮಾದು ಸ್ಯೂಡೋಸೂಯೆಸಿಸ್ ಕೇಸು. ಡಾಕ್ಟರ್ ಬಳಿ ಟೆಸ್ಟ್ ಮಾಡಿಸಿಕೊಳ್ಳೋಕೂ ಅವಳಿಗೆ ಹಿಂಜರಿಕೆ. ತಾನು ಗರ್ಭಿಣಿಯಲ್ಲ ಎಂದುಕೊಳ್ಳುವುದು ಅವಳಿಗೆ ಇಷ್ಟವಾದ ವಿಷ್ಯವಲ್ಲ" ಅಲ್ಲೇ ಕೂತರು.

"ಮಿಸ್ಟರ್ ನೀವು ಅವ್ಳ ಬದ್ಕಿನೊಳಕ್ಕೆ ಬಂದ್ಮೇಲೆ. ನಿಮ್ಮ ಮಗು ವನ್ನು ನೋಡಿದ್ಮೇಲೆ ಅವಳಲ್ಲಿ ತಾಯ್ತನದ ಬಯಕೆ ಹುಟ್ಟಿಕೊಂಡಿದೆ. ಇದು ಸ್ವಲ್ಪ ತಡ. ನಲ್ವತ್ತರ ಮಧ್ಯ ವಯಸ್ಕ ಹೆಣ್ಣು ನೀಲಿಮಾ. ಕೆಲವಕ್ಕೆ ಮೆಡಿಕಲ್‌ನಲ್ಲಿ ಕೂಡ ಉತ್ತರ ಸಿಗೋಲ್ಲ. ಈ ವಿಷ್ಯ ಅವ್ಳ ಅರಿವಿಗೆ ಬರ ದಿದ್ದರೆ....ಹೊಟ್ಟೆ ದೊಡ್ಡದಾಗುತ್ತೆ. ಗರ್ಭಿಣಿಯ ಎಲ್ಲಾ ಅವಸ್ಥೆಗಳನ್ನು ಅನುಭವಿಸ್ತಾಳೆ. ಮಗು ಮಾತ್ರ ಇರೋಲ್ಲ." ಮುಂದಿನ ಸಂಪೂರ್ಣ ಚಿತ್ರ ವನ್ನೆ ಅವನ ಮುಂದೆ ಇಟ್ಟಿದ್ದರು.

ಪ್ರಸನ್ನ ಮೇಲೆದ್ದಾಗ ಒಂದು ಮಾತು ಹೇಳಿದ್ದರು.

"ಹೇಗೆ ನಿಬಾಯಿಸ್ತೀರೋ ಪರಿಸ್ಥಿತಿಯನ್ನು ? ನೀಲಿಮಾ ಮನಸ್ಥಿತಿ ತೀರಾ ಸೂಕ್ಷ್ಮವಾಗಿರ್ಬಹ್ದು ಬಿ ಕೇರ್ ಫುಲ್" ಎಚ್ಚರಿಕೆಯು ಇತ್ತು.

ಹೊರಗೆ ಬಂದಾಗ ಸುತ್ತಲೂ ಶೂನ್ಯ ಹರಡಿದೆಯೆನಿಸಿತು ಪ್ರಸನ್ನಗೆ. ನೀಲಿಮಾಗೆ ವಿಷಯ ಗೊತ್ತಿದ್ದೂ ಕೂಡ ಡಾಕ್ಟರ್ ಬಳಿ ಅದನ್ನು ನೇರವಾಗಿ ಹೇಳಲು ಬಯಸದೇ ದೂರವಿದ್ದಾಳೊ ! ಈಗ ಸೋಮೇಶ್ವರ್ ನೆರವು ಅಗತ್ಯ ವಾಗಿ ಕಂಡಿತು.

ಸಂಜೆ ಕ್ಲಬ್‌ನಲ್ಲಿಯೇ ಅವರನ್ನು ಮೀಟ್ ಮಾಡಿ ವಿವರಿಸಿದ. ಓದಿ ಕೊಂಡ ಜನ. ಒಂದು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಕೆಲಸ ಮಾಡಿದ ಅನುಭವ ಅವರದು. ಇದು ಮಾತ್ರ ತೀರಾ ವಿಚಿತ್ರದ್ದು. ನೊಂದುಕೊಂಡರು.

"ಈ ವಿಷ್ಯದಲ್ಲಿ ನಾವು ಹೆಲ್ಪ್‌ಲೆಸ್. ನೀನೇ ನೀಲಿಮಾಗೆ ತಿಳಿಸಿ ಹೇಳ್ಬೇಕು" ಆ ಭಾರವನ್ನು ಇವನ ಭುಜದ ಮೇಲೆಯೇ ಹೊರಿಸಿದರು.

ರಾತ್ರಿ ಎಂದಿನ ಗಾಂಭೀರ್ಯ ಬಿಟ್ಟು ನೀಲಿಮಾಳೊಂದಿಗೆ ಹುಡುಗಾಟ ವಾಡಿದ. "ನಮ್ಗೆ ಮಗೂನೆ ಬೇಡ. ಈಗ್ಲೇ ನನ್ನ ಬಗ್ಗೆ ನಿಂಗೆ ನಿರ್ಲಕ್ಷ" ರೇಗಿಸಿದ.

"ತೋಬಾ....ತೋಬಾ....ಏನೇನೋ ಮಾತಾಡ್ಬೇಡಿ. ಪತಿ, ಪತ್ನಿಯರ ಸಂಬಂಧ ಗಟ್ಟಿ ಮಾಡೋದೆ ಮಗು. ಅದು ಇಬ್ಬರಿಗೂ ಸೇರುತ್ತೆ....ಅದ್ಕೇ" ಆವನ ತಲೆಯ ಕೂದಲಿಡಿದು ಜಗ್ಗಿ ತಪ್ಪಾಯಿತೆಂದಳು.

ಮತ್ತೆ ಅದೇ ಜಾಡಿನಲ್ಲಿ ನೀಲಿಮಾ ಹೋಗುವುದು ಸರಿಯೆನಿಸಲಿಲ್ಲ "ಮಗುವಿಗಾಗಿ ಏನು ನಮ್ಮ ಮದ್ವೆಯಲ್ಲ. ನಮ್ಮಿಬ್ಬರದು ಬೌದ್ಧಿಕ ಸಮಾಗಮ" ಎಂದ.

"ಗೋ ಟು ಹೆಲ್....ಪ್ರಸನ್ನ ನೀನು ತುಂಬ ಇನ್ನೋಸೆಂಟ್ ಮಾತ್ರ ವಲ್ಲ ಸ್ವಾರ್ಥಿ ಕೂಡ" ಎಂದಳು ಕಹಿ ದನಿಯಲ್ಲಿ. ಒಂದೇ ವಾಕ್ಯದಲ್ಲಿ ಒಂದಕ್ಕೊಂದು ಸಂಬಂಧ ಪಡದ ಪದಗಳ ಪ್ರಯೋಗ.

ಬಹಳ ತಾಳ್ಮೆಯಿಂದ ನೀಲಿಮಾನ ಎದೆಗೊರಗಿಸಿಕೊಂಡು ಕೂದಲಲ್ಲಿ ಬೆರಳಾಡಿಸುತ್ತ "ಸ್ಯೂಡೋಸಯೆಸಿಸ್ ಅಂದರೆ ಗೊತ್ತಾ ? ಅದನ್ನು ಮೆಡಿಕಲ್‌ನಲ್ಲಿ ಸುಳ್ಳು ಬಸುರು ಅಂತಾರಂತೆ" ಅವನ ಕೈಯನ್ನು ಹಿಂದಕ್ಕೆ ತಳ್ಳಿ ಎದ್ದು ಕೂತಳು.

ಕಂಬನಿ ತುಂಬಿದ ಅವಳ ಕಣ್ಣುಗಳನ್ನು ನೋಡದಾದ. ಆದರೆ ಆ ಕಣ್ಣುಗಳಲ್ಲಿ ಯಾವುದೋ ಭಯ, ಅನಿಶ್ಚಯತೆ ಅಡಗಿದೆಯೆನಿಸಿತು.

ಅವನೆದೆಯ ಮೇಲೆ ತಲೆ ಇಟ್ಟು ಎಷ್ಟೋ ಹೊತ್ತು ಬಿಕ್ಕುತ್ತಿದ್ದಳು. "ನಮ್ಗೆ ಮಕ್ಳೇ....ಬೇಡ" ಸವರಿದ. "ನಿಮ್ಗೆ ಅಲೋಕ್ ಇದ್ದಾನೆ" ಅಳುವಿನಲ್ಲಿಯೇ ಉಸುರಿದಳು. ಅವನ ಪ್ರತಿರೂಪ ಅಲೋಕ್ ಇದ್ದಾನೆ, ಮೌನವಹಿಸಿದ.

ಬೆಳಕು ಹರಿಯುವವರೆಗೆ ಆವಳನ್ನು ಸಂತೈಯಿಸಬೇಕಾಯಿತು.

"ಬೇಗ ಸ್ನಾನ ಮುಗ್ಸಿಕೊಂಡ್ಲಾ....ನರ್ಸಿಂಗ್ ಹೋಂಗೆ ಹೋಗ್ಬರೋಣ ತೋಳು ತಟ್ಟಿದ. ನೀಲಿಮಾ ಯಾವುದೋ ನಿರ್ಧಾರಕ್ಕೆ ಬಂದಂತಿತ್ತು. "ಹೋಗೋಣ...." ಬಾತ್‌ರೂಂ ಹೊಕ್ಕು ಬಾಗಿಲು ಹಾಕಿಕೊಂಡಳು.

ಬಹಳ ನೊಂದ ಪ್ರಸನ್ನ. ಯಾವ ತಪ್ಪಿಗೆ ಶಿಕ್ಷೆ ? ಸೆಂಟಿಮೆಂಟಾಗಿ ಯೋಚಿಸಿದ. ತನ್ನ, ಗರ್ಭದಲ್ಲಿಯೇ ತುಳಿದ ಹೆಣ್ಣಿನ ಮೇಲೆ ಸೇಡು ತೀರಿಸಿ ಕೊಂಡಿವೆ. ಅಂದಿನ ಭ್ರೂಣಗಳು. ಅಥವಾ ತಾನು ಪಿತೃ ಸ್ಥಾನದಿಂದ ಸರಿದು ನಿರಪರಾಧಿ ಅಲೋಕ್‌ಗೆ ಮಾಡಿದ ದ್ರೋಹಕ್ಕೆ....ಈ ಶಿಕ್ಷೆ ?"

ಎದ್ದು ಡಾ॥ ಫಿಲೋಮಿನಗೆ ಫೋನ್ ಮಾಡಿ ತಿಳಿಸಿದ.

"ಗುಡ್, ಮಿಕ್ಕಿದೆಲ್ಲ ನಂಗಿರ್ಲಿ....ನೀಲಿಮಾನ ಕರ್ಕೊಂಡ್ಬನ್ನಿ" ಧೈರ್ಯ ಹೇಳಿದರು.

ಹೊರಗೆ ಬಂದ ಸೋಮೇಶ್ವರ್, ಅವರ ಪತ್ನಿಗೆ ವಿಷಯ ತಿಳಿಸಿದ. "ನೀಲಿಮಾ ಮುಂದೆ ಯಾವ್ದೇ ಸುದ್ದಿ ಎತ್ತಬೇಡಿ. ಅವ್ಳು ಹಿಂದಿನ ನೀಲಿಮಾ ಆಗ್ಬೇಕು. ಅದ್ಕೆ ಒಂದಿಷ್ಟು ವೇಳೆ ಕೊಡಬೇಕಾಗುತ್ತೆ."

ತಾನೇ ಕಾಫಿ ಒಯ್ದು ಕುಡಿಸಿದ. ವಾಕರಿಕೆಯೆನಿಸಿದಾಗ ಅವಳ ಕಣ್ಣು ಗಳಲ್ಲಿ ನೀರು ತುಂಬಿಕೊಂಡು ನೋವಿನಿಂದ ಕೂಡಿದ ಪರಿಹಾಸ್ಯದ ನಗು ತುಟಿ ಗಳ ಮೇಲೆ ಅರಳಿತು.

"ಒಂದು ರೀತಿ ತಮಾಷೆ" ಜೋರಾಗಿ ನಕ್ಕಳು.

ಪ್ರಸನ್ನ ಮಾತಾಡಲಿಲ್ಲ. ಕಣ್ಣುಗಳಲ್ಲಿಯೇ ಭರವಸೆ ತುಂಬಿದ.

ಇಬ್ಬರು ಕಾರು ಹತ್ತಿದಾಗ ಅರುಂಧತಿ ಕಣ್ಣೀರೊರೆಸಿಕೊಂಡರು.

"ಆರಾಮಾಗಿದ್ದವಳ ಬದುಕಿನಲ್ಲಿ ಈ ಪ್ರಸನ್ನ ಯಾಕೆ ಬಂದ ? ಮಗುವಿ ಗಾಗಿ ಹಂಬಲಿಸಿದ್ದೇಕೆ ?"

"ಹೆಣ್ತನ....ಪ್ರಕೃತಿಯ ಕೆಲವು ನಿಯಮ ಮೀರಿದ್ದರು, ಕೆಲವೊಮ್ಮೆ ನಮ್ಮ ಮೂರ್ಖತನದ ಕಡೆ ಬೆಟ್ಟು ಮಾಡುತ್ತೆ" ಎಂದು ಗೊಣಗಿದರು ಸೋಮೇಶ್ವರ್.

ನಗು ನಗುತ್ತಲೇ ಡಾ॥ ಫಿಲೋಮಿನಾ ಬರಮಾಡಿಕೊಂಡು ಒಳಗೆ ಕರೆ ದೊಯ್ದರು.

ಸಿಸ್ಟರ್ ಬಂದು ವಿಷಯ ತಿಳಿಸಿದರು. "ಸಂಜೆವರ್ಗೂ ಅವ್ರು ಇಲ್ಲೇ ಇರ್ತಾರೆ. ನೀವು ಸಂಜೆ ಬರ್ಬಹುದು" ಪ್ರಸನ್ನ ಹೊರಗೆ ಬಂದ.

ಹೊರಗೆ ನಿಂತ ಫಿಯೆಟ್ ಕಾರು, ಹೆಸರಾಂತ ನರ್ಸಿಂಗ್‌ಹೋಂ ಕಡೆ ಬದಲಿಸಿ ಬದಲಿಸಿ ನೋಡಿದ. ಅಂದು ಅಲೋಕ್‌ನ ಹೆರಿಗೆಯ ದಿನ ಸರ್ಕಾರಿ

ಆಸ್ಪತ್ರೆಯ ಲೇಬರ್ ವಾರ್ಡಿನ ಮುಂದೆ ಆತಂಕದಿಂದ ಜೀವ ಬಿಗಿ ಹಿಡಿದು ನಿಂತಿದ್ದ.

"ಪ್ಲೀಸ್, ನಂಗೇನು ಆಗೋಲ್ಲ, ನಿವೇನು ಧೈರ್ಯಗೆಡ್ಬೇಡಿ" ಲೇಬರ್ ವಾರ್ಡ್‌ಗೆ ಹೋಗುವ ಮುನ್ನ ಕೇಳಿಕೊಂಡಿದ್ದಳು. ಇಪ್ಪತ್ತು ದಾಟದ ಕೋಮಲ ಕೌಮಾರ್ಯ, ಸಾಮಾಜಿಕವಾಗಿ, ಆರ್ಥಿಕವಾಗಿ ಪರ ದಾಡುವಾಗಿನ ಸ್ಥಿತಿ–ಇಂದು ಕೂಡ ಆ ನೆನಪು ಅವನನ್ನು ಕಂಗೆಡಿಸಿ ಬಿಟ್ಟಿತು.

ಓಡಿ ಹೋಗಿ ನಿವೇದಿತಾ ಮಡಿಲಲ್ಲಿ ತಲೆ ಇಟ್ಟು ಅತ್ತು, ಬಿಡಬೇಕೆನಿಸಿತು. ಸಂಜೆಯವರೆಗೂ ಬರೀ ಅಲೆದಾಟ.

ಇವನು ಸಂಜೆ ಆರರ ವೇಳೆಗೆ ನರ್ಸಿಂಗ್ ಹೋಂಗೆ ಬಂದ. ಸೋಮೇಶ್ವರ್, ಅರುಂಧುತಿ ಅಲ್ಲೇ ಇದ್ದರು. ರಕ್ತದ ಸ್ಪರ್ಶವೇ ಇಲ್ಲವೆನ್ನುವಂತೆ ಮುಖಗಳು ಬಿಳುಚಿಕೊಂಡಿದ್ದವು.

"ಷಿ ಈಜ್ ಆಲ್ ರೈಟ್....ಒಂದಿಷ್ಟು ಸೆಡೆಟಿವ್‌ನ ಮಂಪರು. ಆರಾಮಾಗಿ ಕರ್ಕೊಂಡ್ಹೋಗಿ...." ಡಾಕ್ಟರ್ ಫಿಲೋಮಿನ ಹೇಳಿದರು.

ಸ್ಪೆಷಲ್ ವಾರ್ಡ್‌ನತ್ತ ನಡೆದ. ಹಾಸಿಗೆಯ ಮೇಲೆ ಮಲಗಿದ್ದ ನೀಲಿಮಾ ಮುಖ ಗೋಡೆಯ ಸುಣ್ಣದಷ್ಟು ಬೆಳಗಾಗಿತ್ತು. ಮೇಕಪ್ ಇಲ್ಲದ ಮುಖದಲ್ಲಿ ಗೆರೆಗಳು ಕಾಣುತ್ತಿದ್ದವು. ಒಣಗಿದ ತುಟಿಗಳು ನಿಸ್ತೇಜವಾಗಿದ್ದವು.

ಪಕ್ಕದಲ್ಲಿ ಕೂತು ಅವಳ ಕೈ ಹಿಡಿದುಕೊಂಡ. ನಿಧಾನವಾಗಿ ಕಣ್ತೆರೆದಳು.

"ಮನೆಗೆ....ಹೋಗ್ಬಿಡೋಣ" ಹೇಳಿದ.

ನಿರ್ಲಿಪ್ತವಾಗಿದ್ದಳು. ಕೈಯಾಸರೆ ನೀಡಿ ಎಬ್ಬಿಸಿದ.

"ನಂಗೇನಾಗಿದೆ ? ಐಯಾಮ್ ಆಲ್‌ರೈಟ್. ನಂಗೆ ಯಾರ ಸಹಾಯವು ಬೇಕಿಲ್ಲ" ಎಂದಳು ಅವನ ನೋಟವನ್ನೆದುರಿಸಲಾರದೆ.

ಅವಳ ಮಾತಿಗೆ ಪ್ರತಿಕ್ರಿಯೆ ತೋರದೇ ಬಳಸಿಕೊಂಡು ಬಂದ. ತಾಯ್ತಂದೆಯರತ್ತ, ಡಾಕ್ಟರತ್ತ ಕೂಡ ನೋಟ ಹರಿಸಲಿಲ್ಲ. ಕಾರಿನಲ್ಲಿ ಕೂತವಳು ಹಿಂದಕ್ಕೊರಗಿ ಕಣ್ಮುಚ್ಚಿಕೊಂಡಳು.

ಸೋಮೇಶ್ವರ್, ಅರುಂಧತಿ ಹತ್ತಿ, ಭಯಭೀತರಂತೆ ಬಾಯ್ಮುಚ್ಚಿ ಕೊಂಡು ಕೂತರು.

ಕಾರು ಮನೆಯ ಮುಂದೆ ನಿಂತ ಕೂಡಲೇ ತಾನೇ ಡೋರ್ ತೆಗೆದು ಕೊಂಡು ಕೋಣೆಗೆ ಹೋಗಿ ಬೆಡ್‌ರೂಂ ಸೇರಿ ಬಾಗಿಲು ಹಾಕಿಕೊಂಡಳು.

ಅರುಂಧತಿ ಕುಸಿದು ಕೂತರು. ಸೋಮೇಶ್ವರ್‌ಗೆ ದಿಕ್ಕು ತೋಚ ದಂತಾಯಿತು. ಪ್ರಸನ್ನ ಬಾಗಿಲ ಮೇಲೆ ಬೆರಳಿನಿಂದ ಸದ್ದು ಮಾಡಿದ.

"ನನ್ನ ಸುಮ್ನೇ ಡಿಸ್ಟರ್ಬ್ ಮಾಡ್ಬೇಡಿ. ಲೀವ್ ಮಿ ಅಲೋನ್" ಅಬ್ಬರಿಸಿದಳು ಆಯಾಸದ ದನಿಯಲ್ಲಿ.

ಮೂವರು ಸ್ವರವೇಳದೇ ಕೂತರು.

ಮರುದಿನ ಬೆಳಗಿನವರೆಗೆ ನೀಲಿಮಾ ಬಾಗಿಲು ತೆಗೆಯಲಿಲ್ಲ. ಭಯ, ಆತಂಕದಿಂದ ಕಳೆದ ರಾತ್ರಿಯನ್ನ.

ಸ್ನಾನ ಮುಗಿಸಿಯೇ ನೀಲಿಮಾ ಕೋಣೆಯಿಂದ ಹೊರಬಂದಿದ್ದು. ನೇರ ವಾಗಿ ಡೈನಿಂಗ್ ಹಾಲ್‌ಗೆ ಹೋಗಿ ಅಡಿಗೆಯವನನ್ನು ಕೇಳಿ ಬ್ರೇಕ್‌ಫಾಸ್ಟ್ ತಗೊಂಡಳು. ಯಾರಿಗೋ ಫೋನ್ ಮಾಡಿದ್ದಳು. ಕನ್ನಡಿಯ ಮುಂದೆ ಕೂತು ಮುಖಕ್ಕೆ ಮೇಕಪ್ ತಿದ್ದಿ, ತುಟಿಗಳಿಗೆ ನವಿರಾಗಿ ಕಂದು ಬಣ್ಣದ ಲಿಪ್‌ಸ್ಟಿಕ್ ಹಚ್ಚಿದಳು, ಶಾಂಪುನಿಂದ ತೊಳೆದ ಕೂದಲನ್ನು ಡ್ರಯರ್‌ನಿಂದ ಆರಿಸಿ ಬಾಚಿದಳು.

ಟೈಮ್ ನೋಡುತ್ತ ಬಂದವಳು "ನಾನು ಕಾಲೇಜ್‌ಗೆ ಹೋಗ್ತಾ ಇದ್ದೀನಿ. ನೀವು ಬರ್ತೀರಾ ?" ಪ್ರಸನ್ನನ್ನ ಕೇಳಿದಳು.

ಷೇವ್, ಸ್ನಾನವಿರಲಿಲ್ಲ 'ಹೂ'ಗುಟ್ಟಿ ಬಾತ್‌ರೂಂಗೆ ಹೋದ. ಅವನು ಹೊರ ಬರುವ ವೇಳೆಗೆ ಬಾಲ್ಕನಿ ಇಳಿಯುತ್ತಿದ್ದಳು ನೀಲಿಮಾ. ಕಾರು ಹತ್ತಿದವಳು ಇತ್ತ ನೋಡದೆಯೇ ಸ್ಟಾರ್ಟ್ ಮಾಡಿದಳು.

ಫಿಯೆಟ್‌ನ ಚಕ್ರಗಳು ಮುಂದಕ್ಕೆ ಉರುಳಿದವು.

* * *

ನಡೆದ ಘಟನೆಗಳ ಪತ್ರಿಕಾ ವರದಿಗಳನ್ನು ಆಧರಿಸಿ ನಿವೇದಿತಾ ಅತ್ಯಂತ ತೌಲನಾತ್ಮಕವಾಗಿ ಲೇಖನಗಳನ್ನು ರಚಿಸಿ ಪತ್ರಿಕೆಗಳನ್ನು ಕಳುಹಿಸ ತೊಡಗಿದಳು.

ಸಾಮಾನು ಖರೀದಿಸಿ ಮಾರ್ಕೆಟ್ ಸೆಂಟರ್‌ನಿಂದ ಹೊರಬರುವ ವೇಳೆಗೆ ಪ್ರಸನ್ನ ಎದುರಾದ, ಮುಗುಳ್ನಕ್ಕು, ನಗೆ ಬೀರಿದಳು.

"ಹೇಗಿದ್ದೀಯಾ ?" ಕೇಳಿದ.

"ಫೈನ್....ನೀವು ?" ಎಂದಳು.

"ನಿಜ ಹೇಳೋಕೆ ಇಷ್ಟವಿಲ್ಲ, ಸುಳ್ಳು ಹೇಳೋದು ಸರಿಯಲ್ಲ. ಅಲೋಕ್....ನೆನ್ನೆ, ಮೊನ್ನೆ, ಯಾಕೆ ಶಾಲೆಗೆ ಬಂದಿರಲಿಲ್ಲ ?" ಪ್ರಶ್ನಿಸಿದ.

ಅಂದರೆ ಎರಡು ದಿನ ಮಗನನ್ನು ಹುಡುಕಿಕೊಂಡು ಕಾನ್ವೆಂಟ್ ಹತ್ತಿರಕ್ಕೆ ಹೋಗಿದ್ದಾನೆಂದುಕೊಂಡಳು.

"ಒಂದಿಷ್ಟು ಇನ್‌ಫೆಕ್ಷನ್, ಜ್ವರ ಇತ್ತು" ಕೈಯಲ್ಲಿನ ಭಾರವಾದ ಬ್ಯಾಗನ್ನು ಮತ್ತೊಂದು ಕೈಗೆ ಬದಲಾಯಿಸಿಕೊಂಡಳು.

ಅದನ್ನು ಗಮನಿಸಿ ನೋವು ತಿಂದ. "ಇವತ್ತು....ಹೇಗಿದ್ದಾನೆ ?" ಮತ್ತೆ ಕೇಳಿದ.

"ಇವತ್ತು ಕಾನ್ವೆಂಟ್ ಹತ್ತಿರ ಹೋಗಿದ್ರಾ ?" ಆಶ್ಚರ್ಯದಿಂದ ಅವನತ್ತ ನೋಡಿದಳು.

"ಹೋಗಿದ್ದೆ. ಮಗುನ ಮನೆಯಲ್ಲಿ ಕೂಡಿ ಹಾಕಿ ಬಂದ್ಯಾ? ಸಾಮಾನು ನಾಳೆ ತರಬಹುದಿತ್ತು" ಎಂದ. ಅವನ ಅರಿವಿಗೆ ಬಾರದಂತೆಯೇ ಅಧಿಕಾರ ಅವನ ದನಿಯಲ್ಲಿತ್ತು.

"ಇವತ್ತು ಆರಾಮಾಗಿದ್ದಾನೆ. ತೀರಾ ಅಗತ್ಯದ ಸಾಮಾನುಗಳು" ಎಂದಳು. ಅಲೋಕನ ಬಗ್ಗೆ ನನ್ನನ್ನು ಪ್ರಶ್ನಿಸುವ ಅಧಿಕಾರ ನಿನಗಿದೆಯೇ ಎನ್ನುವ ಭಾವ ಅವಳ ಕಣ್ಣುಗಳಲ್ಲಿದ್ದುದು ಅವನಿಗೆ ಗೋಚರವಾಯಿತು. ಕ್ಷಣ ತಲೆ ತಗ್ಗಿಸುವಂತಾಯಿತು.

"ಹೇಗಿದೆ ತಲೆನೋವು ? ಫಾರ್ಮಸಿಗೆ ಹೋಗಿದ್ರಾ ?"

"ಶ್ಚೂ, ಒಂದು ರೀತಿ ಒಗ್ಗಿ ಹೋಗಿದೆ. ಮತ್ಯಾಕೆ ರಿಸ್ಕ್ ? ಸಾಧ್ಯವೆ ಇಲ್ಲವೆಂದುಕೊಂಡಾಗ....ನೋಡೋಣ" ಉದಾಸೀನ ವ್ಯಕ್ತಪಡಿಸಿದ.

ನಿವೇದಿತಾ ಮುಖ ಸಪ್ಪಗಾಯಿತು. "ಆರೋಗ್ಯದ ವಿಷ್ಯದಲ್ಲಿ ಇಷ್ಟೊಂದು ಉತ್ಪ್ರೇಕ್ಷೆ ಸಲ್ಲದು. ಈಗ್ಬರ್ತೀರಾ ?"

ವಾಚ್ ಕಡೆ ನೋಡಿ "ಅಂಥ ಬಿಜಿಯೇನು ಇರೋಲ್ಲ" ಹೇಳಿದಳು.

ಅಕ್ಕರೆಯಿಂದ ಅವಳತ್ತ ನೋಡಿದ. ಪ್ರೀತಿಯೆಂಬ ಅಮೃತದ ಕೊಡವನ್ನೆ ಒದ್ದು ಹೊರಗೆ ಬಂದಿದ್ದ. ಚೆಲ್ಲಿ ಹೋದುದನ್ನು ನೋಡಬೇಕಷ್ಟೆ.

"ಅಲೋಕ್‌ಗೆ ಹುಷಾರಿಲ್ಲ, ಇನ್ನೊಂದು ದಿನ ಹೋಗೋಣ ನನ್ನ ಜೊತೆ ಜ್ಯೂಸ್ ಕುಡ್ಯೋಕೆ ಮಾತ್ರ ಆಭ್ಯಂತರ ಹೇಳ್ಬೇಡ" ಒಂದು ರೀತಿಯ ಒತ್ತಾಯ. "ಓಕೆ...." ಸಮ್ಮತಿ ಸೂಚಿಸಿದಳು.

"ಒಂದು ಕಂಡೀಷನ್...." ಎನ್ನುತ್ತಲೇ ಅವಳ ಕೈಯಲ್ಲಿನ ಬ್ಯಾಗ್ ಕಿತ್ತುಕೊಂಡ. "ಪ್ಲೀಸ್, ಕೊಟ್ಟು ಬಿಡಿ...." ಕೈ ನೀಡಿದಳು.

ಮಾರ್ಕೆಟ್ ಸೆಂಟರ್‌ನಿಂದ ಹೊರಗೆ ಬಂದ ಶೆಟ್ಟರು ಹಲ್ಲು ಕಿರಿದರು. "ಬಹಳ ದಿನ ಆಯ್ತು, ದಂಪತಿಗಳನ್ನು ಒಟ್ಟಿಗೆ ನೋಡಿ. ಈಚೆಗೆ ಅಮ್ಮಾವ್ರು ಒಬ್ಬರೇ ಸಾಮಾನಿಗೆ ಬರೋದು" ವರ್ಷಗಳಷ್ಟು ಪರಿಚಯದ ವ್ಯಕ್ತಿ. ಇಬ್ಬರು ಪೆಚ್ಚು ನಗೆ ಬೀರಬೇಕಷ್ಟೆ.

ಆಮೇಲೆ ಅದರ ಸುದ್ದಿಯೇ ಎತ್ತಲಿಲ್ಲ ನಿವೇದಿತಾ. ಜ್ಯೂಸ್ ಕುಡಿದಾದ ಮೇಲೆ ಕೇಳಿದಳು "ನೀಲಿಮಾ ಅವ್ರು ಹೇಗಿದ್ದಾರೆ ?" ಉದ್ವೇಗ, ಕಂಪನವಿಲ್ಲದೇ ದನಿ ಸಹಜವಾಗಿತ್ತು.

"ಈಗ, ಪರ್ವಾಗಿಲ್ಲ...." ಎಂದ.

"ಹಾಗಾದ್ರೆ ಹುಷಾರು ತಪ್ಪಿತ್ತಾ ? ಏನಾಗಿತ್ತು ?" ಕೇಳಿದಳು. "ಮಾಮೂಲು....ಲೇಡೀಸ್‌ಗೆ ಬರೋ ಕಾಯಿಲೆ" ಅನಗತ್ಯವಾಗಿ ಅಂದ ಮಾತು.

"ಕಂಗ್ರಾಜುಲೇಷನ್...." ಶುಭ ಹಾರೈಸಿ ಮೇಲೆದ್ದಳು.

ಅವಳು ಯಾಕೆ 'ಕಂಗ್ರಾಜುಲೇಷನ್' ಅಂದಿದ್ದು ಎನ್ನುವುದು ರಾತ್ರಿಯೇ ಅವನಿಗೆ ಹೊಳೆದಿದ್ದು. ಮೊದಲು ಮಾತು ತಮಾಷೆಯೆಂದುಕೊಂಡರೂ ಅವನ ಮುಖದಲ್ಲಿ ಆಮೇಲೆ ನೋವು ತುಂಬಿಕೊಂಡಿತು.

ಮ್ಯಾಕ್ಸಿ ತೊಟ್ಟು ಮ್ಯಾಗಝೀನ್ ಹಿಡಿದಿದ್ದ ನೀಲಿಮಾ ಕಡೆ ನೋಡಿದ. ಅವರಿಬ್ಬರ ನಡುವೆ ಮಾತು ತೀರಾ ಕಡಿಮೆ ಆಗಿತ್ತು. ಎಷ್ಟೋ....ಅಷ್ಟು.

"ನಡೀ ಊಟ....ಮಾಡೋಣ" ನೀಲಿಮಾ ತೋಳಿನ ಮೇಲೆ ಕೈ ಹಾಕಿದ "ಊಟನೇ ಬೇಕೂಂತ ಅನ್ನಿಸೋಲ್ಲ. ನೀವ್ಹೋಗಿ...,ಊಟ ಮಾಡಿ",

ಹೊಟ್ಟೆಯಲ್ಲಿನ ಹಸಿವೆ ಸತ್ತು ಹೋದಂತಾಯಿತು. ಕೋಣೆಯಿಂದ ಹೊರ ಬಂದು ವರಾಂಡ ದಾಟಿ ಮುಂದಿನ ಕಾಂಪೌಂಡಿಗೆ ಬಂದ.

ಹಾಯಾದ ಗಾಳಿ, ಒಳ್ಳೆಯ ವಾತಾವರಣ. ಅಲ್ಲೆಲ್ಲ ಓಡಾಡಿದ. ಅರುಂಧತಿ, ಸೋಮೇಶ್ವರ್ ಮೊದಮೊದಲು ತಾವಾಗಿ ಮಾತಾಡಿಸುತ್ತಲೇ ಇರಲಿಲ್ಲ. ಆಮೇಲೆ ಮಗುವಿನ ಹಡಾವುಡಿಯಲ್ಲಿ ಅಷ್ಟಿಷ್ಟು ಮಾತಾಡು ವುದಿತ್ತು. ಈಚೆಗೆ ಒಂದು ರೀತಿಯಲ್ಲಿ ಪೂರ್ತಿ ಬಂದ್. ಎದುರು ಸಿಕ್ಕಾಗ 'ಒಂದ್ಮಾತು ಅಥವಾ ಒಂದು ಮುಗುಳ್ನಗುವಿನ ವಿನಿಮಯ ಅಷ್ಟೆ'. ಊಟ, ತಿಂಡಿ ಮಿಕ್ಕೆಲ್ಲವನ್ನು ವಿಚಾರಿಸುತ್ತಿದ್ದವನು ಆಳು, ಅಡಿಗೆಯವ ಮಾತ್ರ.

"ಊಟ...." ಅಡಿಗೆಯವನ ದನಿ ಕೇಳಿಸಿತು.

ಹಿಂದಕ್ಕೆ ತಿರುಗಿ "ನಂಗೇನು ಬೇಡ, ನೀವು ಮುಗ್ಸಿ ಮಲ್ಗಿ ಬಿಡಿ" ಹೇಳಿದ. ಅವನ ಪಾಡಿಗೆ ಅವನು ತಲೆ ಕೆರೆದುಕೊಂಡು ಹೋದ.

ಸಂಬಳಕಷ್ಟೇ ಕೆಲಸ. ನಿರ್ಲಿಪ್ತ ಮನುಷ್ಯ, ಅವನು ಯಾರ ಬಗ್ಗೆ ತಲೆ ಕೆಡಿಸಿಕೊಳ್ಳಲಾರ. ಉತ್ತಮ ವ್ಯಕ್ತಿ.

ಬಹಳ ಹೊತ್ತು ಅಡ್ಡಾಡಿ ಕೋಣೆಗೆ ಬಂದ. ನೀಲಿಮಾ ಬೇರೊಂದು ಪುಸ್ತಕ ಹಿಡಿದು ಕೂತಿದ್ದಳು. ಭಾರವಾದ ಉಸಿರನ್ನು ದಬ್ಬಿದ.

ನಿಧಾನವಾಗಿ ಡಯಲ್ ತಿರುಗಿಸಿದ "ಹಲೋ....ಅಮೀರ್...." ಮ್ಯೂಜಿಕ್ ಕೇಳಿಸುತ್ತಿತ್ತು "ಇಲ್ಲ ಸಾಬ್ ಯಜಮಾನ್ರು ಇನ್ನೂ ಬಂದಿಲ್ಲ ನಾಳೆ ಬರ್ಬಹುದ್ದು, ಬೆಳಿಗ್ಗೆ ನೀವಾದ್ರು ಮನೆ ಕಡೆ ಬನ್ನಿ. ಗಂಟಲಲ್ಲಿ ತಿಂಡಿ ಇಳಿಯೋಲ್ಲ" ಹೇಳಿದ.

"ಏನು, ಇನ್‌ಫರ್ಮೇಷನ್....ಕೊಟ್ಟಿಲ್ವಾ ?" ಕೇಳಿದ.

"ನೆನ್ನೆ ದಿನ ಫೋನ್ ಮಾಡಿದ್ರು ನಾಳೆ ಸಂಜೆ ಫ್ಲೈಟ್‌ಗೆ ಬರ್ತೀನಿಂತ. ನೀವು ಬಂದರೆ....ಏರ್‌ಪೋರ್ಟ್‌ಗೆ ಹೋಗೋಣ" ದೈನ್ಯದಿಂದ ಕೇಳಿಕೊಂಡ.

ಪಟೇಲ್‌ಗಾಗಿ ಮಿಡಿಯುವ ಒಬ್ಬ ವ್ಯಕ್ತಿ ಇದ್ದ.

ಇವನು ಏನಾದರೂ ಹೇಳುವ ಮುನ್ನವೇ "ಬ್ರೇಕ್‌ಫಾಸ್ಟ್‌ಗೆ ಇಲ್ಲೇ ಬನ್ನಿ, ಸಾಬ್...." ಅವನ ದನಿಯಲ್ಲಿ ಆತ್ಮೀಯತೆಯು ಮಿಡಿತವಿತ್ತು "ಷ್ಯೂರ್, ಡೆಫಿನಟ್ಲೀ....ಎಂಟಕ್ಕೆ ಅಲ್ಲಿರುತ್ತೀನಿ" ಎಂದ. ಅತ್ತ ಗಮನ ಕೊಟ್ಟಂತಿರಲಿಲ್ಲ ನೀಲಿಮಾ.

ಇವನು ಮಲಗಿದ ಎಷ್ಟೋ ಹೊತ್ತಿನ ಮೇಲೆ ಬಂದು ಮಲಗಿದಳು. ನಿದ್ರಿಸದೇ ಹೊರಳಾಡುತ್ತಿದ್ದ ಪ್ರಸನ್ನ ಎದ್ದು ಕೂತ.

ಹೂಜಿಯಲ್ಲಿನ ನೀರು ಬಗ್ಗಿಸಿಕೊಂಡು ಕುಡಿದು ಬಂದು ಮಲಗಿದವನು ಕೈಯನ್ನು ಅವಳ ತೋಳಿನ ಮೇಲೆ ಹಾಕಿದ "ಲೀವ್....ಮೀ...." ಎಂದವನಿ ಅತ್ತ ತಿರುಗಿ ಮಲಗಿದಳು. ಅವನು ಕೂಡ ರೊಮ್ಯಾನ್ ಮೂಡ್‌ನಲ್ಲೇನು ಇರಲಿಲ್ಲ.

"ಬೆಳಿಗ್ಗೆ ಅಮೀರ್ ಬ್ರೇಕ್‌ಫಾಸ್ಟ್‌ಗೆ ಕರ್ದಿದ್ದಾನೆ. ಹೋಗೋಣ್ವಾ ?" ಅವಳು ನಿದ್ರಿಸಿಲ್ಲವೆಂಬುದನ್ನು ಅರಿತೇ ಕೇಳಿದ "ಯಾವ ಅಮೀರ್" ಅವಳ ಹುಬ್ಬುಗಳು ಗಂಟಾದುದ್ದು ಅವನ ಗಮನಕ್ಕೆ ಬರದಿದ್ದರೂ ಸ್ವರ ಒರಟಾಗಿತ್ತು.

"ಪಟೇಲ್ ಮನೆ ಅಮೀರ್...." ಎಂದು

"ಅವ್ರ ಸರ್ವೆಂಟ್ ಬಗ್ಗೆ ತಾನೇ ನೀವು ಹೇಳ್ತಾ....ಇರೋದು. ಅವ್ನ ಫೋನ್‌ನಲ್ಲಿ ನಿಮ್ಮನ್ನ ಕರೆಯೋದು, ನಿಮ್ಮ ಜೊತೆ ನಾನು ಹೋಗೋದು" ಒಂದು ತರಹ ವ್ಯಂಗ್ಯವಾಗಿ ಹೇಳಿದಳು.

ಪ್ರಸನ್ನ ಸುಮ್ಮನೆ ಮಲಗಿದ. ಉಳಿದ ರಾತ್ರಿಯೇನು ಅವನು ನಿದ್ರಿಸಲಿಲ್ಲ. ಅವನು ನಿವೇದಿತಾಗಲ್ಲ ವಿಧಿಸಿದ್ದು ಶಿಕ್ಷೆ, ತನಗೇ ತಾನೇ ವಿಧಿಸಿಕೊಂಡಿದ್ದ. ಮಗನನ್ನು ತಬ್ಬಿ ಅವನ ಭವಿಷ್ಯದ ಕನಸು ಕಾಣುತ್ತ ನಿದ್ರಿಸಬಲ್ಲಳು ನಿವೇದಿತಾ. ತಾನು ? ಎದ್ದು ಹೋಗಿ ಮುಂದೆ ಕೂತ.

ಅದರ ಮೇಲಿಟ್ಟ ಕನ್ನಡಕವನ್ನು ಮುಟ್ಟಿ ನೋಡಿದ. ಮನ ಆಹ್ಲಾದಗೊಂಡಿತು. ಟೇಬಲಿನ ಮೇಲೆಯೇ ತಲೆ ಇಟ್ಟು ಮಲಗಿದ. ಎಚ್ಚರವಾದಾಗ ಕೂಡ ಅವನ ಕೈಯಲ್ಲಿ ಕನ್ನಡಕ ಇತ್ತು.

ನೀಲಿಮಾ ಆಗಲೇ ಎಚ್ಚರವಾಗಿದ್ದಳು. ಈಗ ನಿಯಮಿತವಾಗಿ ಎಕ್ಸ್‌ಸೈಜ್ ಮಾಡುತ್ತಿದ್ದಳು. ಟೆರಸ್ ಮೇಲೆ ಈಚೆಗೆ.

ಸ್ನಾನ ಮುಗಿಸಿ ಬಂದ. ಮಾತುಗಳ ಜೊತೆ ನಗು ಕೂಡ ಕೇಳಿಸುತ್ತಿತ್ತು. ಅಪ್ಪ, ಅಮ್ಮನ ಮಧ್ಯೆ ಕೂತು ನೀಲಿಮಾ ಕಾಫೀ ಕುಡಿಯುತ್ತಿದ್ದಳು.

ಅಡಿಗೆಯವನು ಕೋಣೆಗೆ ತಂದಿತ್ತ ಕಾಫೀ ಕುಡಿಯಲಾರದೇ ಕುಡಿದಿಟ್ಟ

ವನು ಉಡುಪು ತೊಟ್ಟು ವರಾಂಡ ಬಾಗಿಲಿನಿಂದಲೇ ಹೊರಗೆ ಬಂದು ಸ್ಕೂಟರ್ ಹತ್ತಿದ.

ಅವನೆದೆಯಲ್ಲಿ ಭಯಂಕರ ಭೋರ್ಗರೆತ. ಹೊಸ ಅರ್ಥಗಳ ಅನ್ವೇಷಣೆಯಲ್ಲಿ ಬದುಕಿನ ನಿಜವಾದ ಅರ್ಥವನ್ನು ಕಳೆದುಕೊಂಡಿದ್ದ.

ಬಾಲ್ಕನಿಯಲ್ಲಿ ನಿಂತು ದಾರಿ ಕಾಯುತ್ತಿದ್ದ ಅಮೀರ್ ಗೇಟಿಗೆ ಹಾರಿ ಬಂದ "ಅರ್ಧಗಂಟೆಯಿಂದ ನಿಮ್ಮ ದಾರಿ ಕಾಯ್ತ ಇದ್ದೆ" ವಿಶ್ವಾಸದಿಂದ ತಾನೇ ಸ್ಕೂಟರನ್ನ ಪಕ್ಕಕ್ಕೆ ನಿಲ್ಲಿಸಿ ಒಳಗೆ ಕರೆದೊಯ್ದು

ಬಿಸಿ ಉಪ್ಪಿಟ್ಟಿನ ಜೊತೆ ಆಮ್ಲೆಟ್ ಮಾಡಿಕೊಟ್ಟ. ಮಾತುಗಳೋ.... ಮಾತುಗಳು....ಎಡಬಿಡದೇ ಆಡಿದ.

"ಸಾಹೆಬ್....ಮನೆಯಲ್ಲಿಲ್ಲಾಂದ್ರೆ ನನಗೆ ತಲೆ ಚಿಟ್ಟು ಹಿಡಿದು ಹೋಗುತ್ತೆ" ತಾನು ಕೂಡ ಪ್ರಸನ್ನನ ಮುಂದೆ ತಿಂಡಿ ಹಾಕಿಕೊಂಡು ಬಂದು ಕೂತ. "ರಾತ್ರಿ....ಊಟನಾ ನಿವೇದಿತಾ ಮೇಡಮ್....ಅಂದವನು ತಿದ್ದಿಕೊಂಡ "ಬಹನ್ ಮನೆಯಿಂದ ತಂದಿದ್ದೆ. ಏನು ರುಚಿ ಆ ಸಾರಿನದು...." ಲೊಟ್ಟೆ ಹಾಕಿದವನು ಪಿಂಗಾಣಿ ಭರಣಿಯಲ್ಲಿದ್ದ ಉಪ್ಪಿನಕಾಯಿಯತ್ತ ತೋರಿಸಿದ "ಅವ್ರೆ....ಕೊಟ್ಟು ಕಳಿಸಿದ್ರು, ನಮ್ಮ ಸಾಬ್‌ಗೆ ಇಷ್ಟಾಂತ" ಎಂದ. ಸಣ್ಣ ಪಟಾಕಿ ಪ್ರಸನ್ನನ ಪಕ್ಕ ಸಿಡಿದಂತಾಯಿತು.

ಯಾಕೆ ? ಪಟೇಲ್‌ಗೆ ಉಪ್ಪಿನಕಾಯಿ ಕಳಿಸಿದ್ದರಲ್ಲಿ ಅಂಥಹ ಮಹತ್ವವೇನು ? ಅವನದು ಹೊಸದಾದ ಸ್ನೇಹ, ಆತ್ಮೀಯತೆಯಲ್ಲ.

ಇಷ್ಟೊತ್ತು ರುಚಿಯಾಗಿದ್ದ ತಿಂಡಿ ಕಡೇ ಗಳಿಗೆಯಲ್ಲಿ ಕಹಿಯೆನಿಸಿತು. ಮಾಮೂಲಿಗಿಂತ ಒಂದು ಸ್ಪೂನ್ ಸಕ್ಕರೆ ಹೆಚ್ಚಿಗೆ ಬೆರೆಸಿಕೊಂಡರೂ ಕಾಫಿ ಕಹಿಯೆನಿಸಿತು.

ಈಚೆಗೆ ಪಟೇಲ್‌ನಲ್ಲಿ ಮದುವೆಯ ಪ್ರಸ್ತಾಪ ಮಾಡಿರಲಿಲ್ಲ. ಒಮ್ಮೆ ಕೇಳಿದಾಗ "ಛೋಡೋ ಯಾರ್, ನಂಗೆ ಮೆಚ್ಚಿಗೆಯಾಗೋಂಥ ಹೆಣ್ಣು ಕಣ್ಣಿಗೆ ಬೀಳ್ಲಿಲ್ಲ. ಈಗ ಅಂಥ ಇಷ್ಟವೂ ಇಲ್ಲ. ಬಗೆ ಬಗೆಯ ಕನಸ್ಸಿನ ಲೋಕದಲ್ಲಿ ತೇಲುವ ಹೆಣ್ಣನ್ನು ಈ ಕುಂಟನಿಗೆ ಸಂಗಾತಿಯನ್ನಾಗಿ ಮಾಡ್ತಾರೆ" ಎಂದಿದ್ದ.

ಆದರೆ ಪಟೇಲ್‌ನಲ್ಲಿ ಒಂದು ಕಾಲು ಕಳೆದುಕೊಂಡ ಬಗೆಗೆ ನೋವಾಗಲಿ, ಕೀಳರಿಮೆಯಾಗಲಿ ಇರಲಿಲ್ಲ. ಮಾಮೂಲಿ ಮನುಷ್ಯನಿಗಿಂತ ಹೆಚ್ಚು ಚಟುವಟಿಕೆಯುಳ್ಳವನಾಗಿದ್ದ.

"ಯಾಕೆ ನಿಮ್ಮ ಸಾಬ್ ಮದ್ವೆ ಮಾಡಿಕೊಳ್ಳಿಲ್ಲ ?" ಪ್ರಶ್ನಿಸಿದ. ಇದು ಸರಿ ಕಾಣದಿದ್ದರೂ ಕೇಳಿದ್ದ. ಅಮೀರ್ ನಿಟ್ಟುಸಿರ ದಬ್ಬಿ ತಲೆಯಾಡಿಸಿದ. "ಗೊತ್ತಿಲ್ಲ ಸಾಬ್....ಅವ್ರ ತಂದೆಯುವ್ರು ಈಗ್ಲೂ ಬಂದು ರೇಗಾಡಿಕೊಂಡು ಹೋಗ್ತಾರೆ."

ಕಾಲೇಜಿನ ಸಮಯದವರೆಗೂ ಅಲ್ಲೇ ಇದ್ದ. ಅಂತು ಅಮೀರ್ ಪಟೇಲ್‌ಗಾಗಿ ತನ್ನ ಜೀವ ಕೊಡಲು ಕೂಡ ಸಿದ್ಧ ಎನ್ನುವುದನ್ನು ಮನಗಂಡ. ಪ್ರೀತಿ, ವಿಶ್ವಾಸ, ಅಭಿಮಾನದ ಜೊತೆ ತನ್ನ ಪಾಲಿಗೆ 'ಅಲ್ಲಾ' ಎನ್ನುವಂತೆ ಗೌರವಿಸುತ್ತಿದ್ದ.

ಹೊರಟು ನಿಂತಾಗ ಗೇಟಿನವರೆಗೂ ಬಂದ. "ಏರ್‌ಪೋರ್ಟ್‌ಗೆ...." ಹೇಳಿದ. ಸ್ಕೂಟರ್ ಸ್ಟಾರ್ಟ್ ಮಾಡುತ್ತ "ಖಂಡಿತ ಒರ್ತೀನಿ....ರೆಡಿಯಾಗಿರು" ಚಕ್ರಗಳು ಜೀವ ತುಂಬಿಕೊಂಡು ಉರುಳಿದವು.

ಲ್ಯಾಬ್‌ನಲ್ಲಿಯೇ ನೀಲಿಮಾ ಪ್ರಸನ್ನ ಮೀಟ್ ಆಗಿದ್ದು. "ಹಲೋ, ಹಲೋ...."ಗಳ ನಂತರ ಪ್ರಸನ್ನ ಹೇಳಿದ.

"ಪಟೇಲ್ ಮನೆಗೆ ಬ್ರೆಕ್‌ಫಾಸ್ಟ್‌ಗೆ ಹೋಗಿದ್ದೆ. ಸಂಜೆ ಅವ್ನು ಬರ್ತಾನೆ. ಏರ್‌ಪೋರ್ಟ್‌ಗೆ ಹೋಗೋಣ ಬರ್ತೀಯಾ ?" ಕೇಳಿದ.

ಕ್ಷಣ ಸುಮ್ಮನಿದ್ದ ನೀಲಿಮಾ "ವಿದ್ಯಾರ್ಥಿಗಳೊಂದಿಗೆ ಒಂದು ಡಿಸ್‌ಕಷನ್ ಇದೆ. ಡೋಂಟ್....ಮೈಂಡ್" ಸರಿದು ಹೋದಳು. ಐರನ್ ಮಾಡಿ ಉಟ್ಟ ಸೀರೆಯ ನೆರಿಗೆಗಳು ಹೆಚ್ಚು ಕಲಾತ್ಮಕವಾಗಿ ಕಂಡಿತು.

ನಮ್ಮಿಬ್ಬರ ಮಧ್ಯದ ಸಂಬಂಧದ ನವಿರುತನ ಕಳೆದುಕೊಂಡಿದೆ. ಈಗ ಅವನಿಗೆ ಅನ್ನಿಸಿತು. ಬಹುಶಃ ಒಂದು ಮಗುವಾಗಿದ್ದರೆ ಸರಿ ಹೋಗುತ್ತಿತ್ತೇನೋ ಎಂದುಕೊಂಡವನು ತಳ್ಳಿ ಹಾಕಿದ.

ಆಕರ್ಷಣೆ ವಯಸ್ಸಿನಲ್ಲಿ ಆದ ಮದುವೆಯಲ್ಲ. ವಂಶೋದ್ಧಾರಕನ ಕನಸಿನ ಜೊತೆ ಹಿರಿಯರು ನಡೆಸಿದ ವಿವಾಹವಲ್ಲ. ಬೌದ್ಧಿಕ ಸಮಾನತೆಯ ರೇಖೆಯಲ್ಲಿ ಒಂದಾದ ಸಂಗಾತಿಗಳು. ಇಲ್ಲು ಮಗುವೆನ್ನುವ ಪರದಾಟ ತೀರಾ ಹಾಸ್ಯಾಸ್ಪದವೆನಿಸಿತು.

ಸಂಜೆ ಸ್ಕೂಟರ್ ಪಟೇಲ್‌ನ ಮನೆ ದಾರಿ ಹಿಡಿಯಿತು, ಅಲ್ಲೇ ಪಾರ್ಕ್ ಮಾಡಿ ಅಮೀರ್‌ನೊಂದಿಗೆ ಕೆಂಪು ಮಾರುತಿ ಹತ್ತಿದ. ವೇಳೆಗೆ ಸರಿಯಾಗಿ

ವಿಮಾನ ಬಂದಿತ್ತು, ಇವರುಗಳು ಹೋಗಿದ್ದೆ ತಡ. ಪಟೇಲ್ ತನ್ನ ಲಗೇಜ್‌ನೊಂದಿಗೆ ಲೌಂಜ್‌ನಿಂದ ಹೊರಬರುತ್ತಿದ್ದ.

"ಹಾಯ್....ಫ್ರೆಂಡ್...." ಹಾರಿಯೇ ಅವನನ್ನ ಅಪ್ಪಿ ಸಂತೋಷ ವ್ಯಕ್ತಪಡಿಸಿದ.

"ಐಯಾವಮ್ ವೆರಿ ಹ್ಯಾಪಿ, ನಿನ್ನ ನಾನು ಎಕ್ಸ್‌ಪೆಕ್ಟ್ ಮಾಡಿರ್‍ಲಿಲ್ಲ" ಪ್ರಸನ್ನ ಬರೀ ಮುಗುಳ್ನಕ್ಕ.

ಮೂವರು ಕೂಡಿಯೇ ಲಗೇಜ್‌ನ ಕಾರಿಗೆ ಸಾಗಿಸಿದರು. ಸ್ಟೇರಿಂಗ್ ವ್ಹೀಲ್ ಮುಂದೆ ಕೂತ ಪಟೇಲ್ ಹರಟುತ್ತಲೇ ಎಲ್ಲರನ್ನ ವಿಚಾರಿಸಿದ. ತಂದೆ, ಅಣ್ಣ, ಅತ್ತಿಗೆ ಅವರ ಮಕ್ಕಳೊಂದಿಗೆ ನಿವೇದಿತಾ, ಅಲೋಕ್‌ನ ವಿಚಾರಿರಲೂ ಮರೆಯಲಿಲ್ಲ.

ಹಿಂದೆ ಏನು ಅನ್ನಿಸುತ್ತಿರಲಿಲ್ಲ. ಇಂದು ಪಟೇಲ್ ನಿವೇದಿತಾ, ಅಲೋಕ್‌ನ ಸುದ್ದಿ ಎತ್ತಿದಾಗ ಕಸಿವಿಸಿಗೊಂಡ. ಅವನಲ್ಲಿ ಖಂಡಿತ ಉತ್ತರ ವಿಲ್ಲ.

"ತುಂಬ ಮಾತಾಡ್ಬೇಕು. ಜೊತೆಯಲ್ಲಿ ಊಟ ಮಾಡೋಣ. ಮೇಮ್ ಸಾಬ್....ಪರ್ಮೀಷನ್ ಬೇಕಾ ?" ಒತ್ತಾಯದ ಜೊತೆ ಛೇಡಿಸಿದ.

"ಫೋನ್....ಮಾಡ್ತೀನಿ" ಅವನಿಗೂ ಕೂಡ ಇಲ್ಲೇ ಇರಬೇಕೆನಿಸಿತು. ಉಸಿರುಗಟ್ಟುವ ರಾತ್ರಿಗಳು ಅವನ ಪಾಲಿಗೆ ನರಕ.

ಡಿನ್ನರ್‌ನಂತರ ಲಗೇಜ್ ಬಿಚ್ಚಿ ಹರಡಿದ. ಪ್ರಸನ್ನನಿಗಾಗಿ ತಂದ ಸ್ವೆಟರ್‌ನ ಅವನಿಗೆ ಕೊಟ್ಟ. ತಂದೆ, ಅಣ್ಣ ಅತ್ತಿಗೆ ಪ್ರತಿಯೊಬ್ಬರಿಗೂ ಯಾವುದಾದರೊಂದು ವಸ್ತುವನ್ನು ತಂದಿದ್ದ. ನಿವೇದಿತಾ ಅಲೋಕ್‌ಗೆ ತಂದಿದ್ದ ಬಟ್ಟೆಗಳನ್ನು ಪ್ರತ್ಯೇಕವಾಗಿರಿಸಿದ.

"ಏಯ್ ಅಮೀರ್....ಬೆಳಿಗ್ಗೆ ಈ ಪ್ಯಾಕೆಟ್ ಕಾರಿನಲ್ಲಿ ಇಡೋದು ಮರೀಬೇಡ. ಅಲೋಕ್‌ನ ನೋಡ್ಕೊಂಡೇ ಫ್ಯಾಕ್ಟರಿಗೆ ಹೋಗೋದು...." ಸಹಜವಾಗಿ ಹೇಳಿದ.

ಅಮೀರ್‌ಗಾಗಿ ಒಂದು ಟೇಪ್‌ರೆಕಾರ್ಡರ್ ತಂದಿದ್ದ.

"ಅಡ್ಗೇ ಮನೆಯಲ್ಲಿಟ್ಕೋ....ಆದರೆ ಪರೋಟ, ರೊಟ್ಟಿ ಸೀದು ಹೋಗ್ತಾರ್‍ದು" ಎಚ್ಚರಿಸಿದ ಕೊಡುತ್ತಲೇ.

ಪ್ರಸನ್ನನ ನೋಟ ಸೀರೆಯ ಪ್ಯಾಕೆಟ್‌ಗಳ ಕಡೆ ಒಂದೆರಡು ಸಲವೇನು, ನಾಲ್ಕಾರು ಬಾರಿ ಹರಿಯಿತು. ಎದೆಯಲ್ಲಿ ಎಂತಹುದೋ ತಳಮಳ ಪ್ರತಿಯೊಂದಕ್ಕೂ ಉತ್ತರ ಹುಡುಕುವುದು ಕಷ್ಟ. ಹುಡುಕಿದರೂ ಸಿಗಲಾರದು.

ಅವನು ದೆಹಲಿಗೆ ಹೋಗಿ ಬರುವಾಗ ಅಲೋಕ್‌ಗೆ ಬೇಕಾದಷ್ಟು ಕೊಡಿಸಿದ್ದ. ನೀಲಿಮಾ ಕೊಟ್ಟಿದ್ದ ಪಟ್ಟಿಯ ಜೊತೆ ಅವಳಿಗಾಗಿ ಶಾಲು, ಸೀರೆ ಮುಂತಾದುವನ್ನು ಕೊಂಡುತಂದಿದ್ದ. ನಿವೇದಿತಾಗೆ ಬೇಕೆಂದು ಅವನಿಗೆ ಹೊಳೆಯಲಿಲ್ಲವೋ, ಅಥವಾ ತಂದರೂ ಪುರಸ್ಕರಿಸಲಾಗುವುದಿಲ್ಲವೆಂಬ ಭಯವೋ! ಅಂತು ಏನೂ ತಂದಿರಲಿಲ್ಲ.

ಡೈವೋರ್ಸ್ ಸಿಕ್ಕುವ ಮುನ್ನವೇ ಅವನ ಇಂಗಿತ ತಿಳಿದು ಬಿಡುಗಡೆ ಘೋಷಿಸಿದ ದಿಟ್ಟ ಹೆಣ್ಣು.

ಮಲಗಿದ್ದವನು ತಟ್ಟನೆ ಎದ್ದು ಕೂತ ಪಟೇಲ್ "ಮರ್ತೆ ಬಿಟ್ಟಿದ್ದೆ. ಹೇಗಿದ್ದಾರೆ....ನೀಲಿಮಾ ?" ಕೇಳಿದ.

ಮಲಗಿದ್ದ ಪ್ರಸನ್ನನ ದೃಷ್ಟಿ ಶೂನ್ಯದಲ್ಲಿ ನೆಟ್ಟಿತು. ಎಲ್ಲವನ್ನು ವಿವರಿಸಿದ.

"ಮಗು ಹಂಬಲಿಕೆ ಮಾನಸಿಕ ಸ್ಥಿತಿಯ ಮೇಲೆ ಹೆಚ್ಚು ಒತ್ತಡ ಬಿದ್ದಿತ್ತು. ಈಗ ನಾರ್ಮಲ್ಲಾಗಿದ್ದಾಳೆ. ಭ್ರಮೆಯಲ್ಲಿ ಒಂದಷ್ಟು ದಿನದ ನರಳಾಟ ಅಷ್ಟೆ."

ತೀರಾ ಕೆಡುಕೆನಿಸಿತು ಪ್ರಸನ್ನಗೆ. ಸಿಹಿ ಕೊಟ್ಟು ವಿಷಯ ತಿಳಿಸಿದ ಸಂದರ್ಭವನ್ನು ನೆನಪಿಗೆ ತಂದುಕೊಂಡ.

"ವೆರಿ ಸ್ಯಾಡ್....ಛೆ...."ಹಣೆಗೆ ಕೈಯೊತ್ತಿದ.

ನಿಶ್ಚಿಂತೆಯಿಂದ ಕಣ್ ಮುಚ್ಚಿಕೊಂಡ ಪ್ರಸನ್ನ. ಎದೆಯ ಭಾರ ಒಂದಿಷ್ಟು ಕಡಿಮೆಯಾಯಿತೆನಿಸಿತು.

ಅಷ್ಟರಲ್ಲಿ ಫೋನ್ ಬಂತು. ಅಲೋಕ್ ತಂತಿಯ ಆ ತುದಿಯಲ್ಲಿದ್ದ "ಹಲೋ ಅಮೀರ್, ಅಂಕಲ್....ಬಂದ್ರಾ ?" ಸರಿಯಾಗಿ ರಿಸೀವರ್ ಹಿಡಿದ "ಹೌದು ಬೇಟಾ, ಅಂಕಲ್ ಹತ್ರ ಅಂತ ಜರೂರು ಕೆಲ್ಸವೇನಿದೆ ?" ಕೇಳಿದ.

ದನಿ ಗುರುತು ಹಿಡಿದಿರಬಹುದು "ಓ ಅಂಕಲ್....ಹೌ ಡೂ ಯು ಡೂ? ಯಾವಾಗ್ಬಂದ್ರಿ ? ಇಲ್ಲೇ ಓದುಕೋತಾ ಇದ್ದೀನಿ. ಮಮ್ಮಿ ಮನೆಯಲ್ಲಿ

ಟೈಪ್ ಮಾಡ್ತಾ ಇದ್ದಾರೆ" ಒಂದೇ ಉಸುರಿನಲ್ಲಿ ಎಲ್ಲಾ ಹೇಳಿ ಮುಗಿಸಿ ಬಿಟ್ಟ.

"ಓಕೇ....ಫೈನ್, ಸಂಜೆ ಬಂದೆ. ಮಮ್ಮಿ ಹೇಗಿದ್ದಾರೆ? ಗೋದಾವರಿ ಮೇಡಮ್ ಏನ್ಮಾಡ್ತಾ ಇದ್ದಾರೆ?" ವಿಚಾರಿಸಿದ.

ಅಲೋಕ್ ಊಟದಿಂದ ಹಿಡಿದು ಅವನ ಪ್ರೊಗ್ರೆಸ್ ರಿಪ್ರೋರ್ಟ್, ಅವನ ಮಮ್ಮಿಗೆ ಆಗಿದ್ದ ನೆಗಡಿಯ ಬಗ್ಗೆ ಕೂಡ ಹೇಳಿಕೊಂಡುಬಿಟ್ಟ.

"ಗೋದಾವರಿ ಮೇಡಮ್ ಹಿಂದೆ ಔಟ್ ಹೌಸ್‌ನಲ್ಲಿದ್ದಾರೆ. ಅದ್ಕೇ.... ಫೋನ್ ಮಾಡ್ದೆ" ಉತ್ಸಾಹದ ಸ್ವರದಲ್ಲಿ ಉಸುರಿದ.

"ಮಮ್ಮಿಗೆ ಕೇಳ್ದೇಂತ ಹೇಳು. ಗೋದಾವರಿ ಮೇಡಮ್‌ಗೆ ನಮಸ್ಕಾರ ತಿಳ್ಸು. ನಿನ್ನ ಕೆನ್ನೆಗೆ....ಕಿಸ್....ಬೆಳಿಗ್ಗೆ....ಬರ್ತೀನಿ, ಗುಡ್‌ನೈಟ್...." ಫೋನಿಟ್ಟ.

ಆ ಬಗ್ಗೆ ಗೆಳೆಯ ಏನಾದರೂ ಹೇಳಬಹುದೆಂದುಕೊಂಡ ಪ್ರಸನ್ನ. ರಫಿಯ ಅತ್ಯಂತ ಜನಪ್ರಿಯ ಒಂದು ಹಾಡು ಗುನುಗುತ್ತ ಮಲಗಿದ ಅಷ್ಟೆ.

ಎದ್ದ ಪ್ರಸನ್ನ ಬಟ್ಟೆ ತೊಟ್ಟವನೆ "ಸಾರಿ ಫ್ರೆಂಡ್....ಮನೆಗೆ ಹೋಗ್ತೀನಿ" ಹೊರಟಾಗ ಪಟೇಲ್‌ಗೆ ಗಾಬರಿಯಾದರು ನಕ್ಕುಬಿಟ್ಟ "ನೀಲಿಮಾ, ನಿನ್ನ ನಡುವೆ ಇಂಥ ವಿಶ್ವಾಸವೆ ನನಗೆ ಬೇಕಿರೋದು....ನಾನೇ ಬಿಟ್ಟು ಬರ್ತೀನಿ...." ಎಂದ.

"ನೋ....ನೋ... ನೀನು ರೆಸ್ಟ್ ತಗೋ, ಸೀಯು ಟುಮಾರೋ...." ಸ್ಕೂಟರ್ ಹತ್ತಿಯೇಬಿಟ್ಟ. ಪಟೇಲ್ ಒಳಗೊಳಗೆ ನಕ್ಕು "ಆಲ್ ದಿ ಬೆಸ್ಟ್ ..." ಎಂದ.

ಹೊತ್ತು ಮೀರಿದ್ದರಿಂದ ಗೇಟಿಗೆ ಬೀಗ ಹಾಕಲ್ಪಟ್ಟಿತ್ತು. ಇವನು ಹತ್ತು ನಿಮಿಷ ಸದ್ದು ಮಾಡಿದ ಮೇಲೆಯೇ ಆಳು ಬಂದು ತೆಗೆದಿದ್ದು.

ಬಂದ ಸೋಮೇಶ್ವರ್ ಮುಖ ತಿರುವಿಕೊಂಡು ಹೋದರು. ಈ ಹೊತ್ತಿನಲ್ಲಿ ಬಂದಿದ್ದು ಅವರಿಗೆ ಸರಿ ಕಾಣಲಿಲ್ಲ. ತುಟಿಗಳ ಚಲನೆಯಿಂದಲೇ ಅವರ ಗೊಣಗಾಟ ಅರ್ಥ ಮಾಡಿಕೊಂಡ.

ಪ್ರಸನ್ನಗೆ ತಲೆ ತಗ್ಗಿಸುವಂತಾಯಿತು.

ಸ್ಕೂಟರ್ ತಳ್ಳಿ ವರಾಂಡ ಮೂಲಕವೇ ಕೋಣೆಗೆ ಹೋದ. ಒಳಗಿನ

ಬೆಡ್‌ರೂಂ ಒಳಗಿನಿಂದ ಲಾಕ್ ಆಗಿತ್ತು. ಬಟ್ಟೆಗಳು ಕೂಡ ವಾರ್ಡ್ ರೋಬ್‌ನಲ್ಲಿದ್ದುದ್ದರಿಂದ ಷೂ ಬಿಚ್ಚಿ ಸೋಫಾ ಮೇಲೆಯೇ ಉರುಳಿಕೊಂಡ. ಮೊದಲ ಸಲ ಬೇರೆ ಮನೆ ಮಾಡುವ ಅಗತ್ಯ ಪ್ರಸನ್ನನಿಗೆ ಕಂಡಿತು. ಸರಿಯಾದ ವೇಳೆ ನೋಡಿಕೊಂಡು ನೀಲಿಮಾಗೆ ತಿಳಿಸಬೇಕು. ಯಾವುದೇ ಮನುಷ್ಯನಿಗೆ ಸ್ವಂತ, ಸ್ವತಂತ್ರ ಅಸ್ತಿತ್ವದ ಬಯಕೆ ಸಹಜ.

ನಿದ್ದೆ ಇಲ್ಲದೆ ಹೊರಳಾಡುವ ರಾತ್ರಿಗಳೆ ಜಾಸ್ತಿಯಾದಂತೆ ಕಂಡಿತು. ನಿಶ್ಚಿಂತೆಯ ನಿದ್ದೆಯೊಂದು ಬರೀ ಕನಸು ಎಂದು ಕೊಂಡ.

ಬೆಳ್ಳಿಗೆ ನೀಲಿಮಾ ಎದ್ದು ಬಂದಾಗ ಅವನಿನ್ನು ಸೋಫಾ ಮೇಲೆಯೇ ಮಲಗಿದ್ದ.

"ಯಾವಾಗ್ಬಂದ್ರಿ ?" ಎಂದವಳು ಅವನ ಉತ್ತರಕ್ಕೆ ಕಾಯದೆ ವರಾಂಡ ದಾಟಿ ಮೆಟ್ಟಿಲುಗಳು ಹತ್ತಿ ಟೆರಸ್ ಮೇಲಕ್ಕೆ ಹೋದಳು. ಅವಳ ವ್ಯಾಯಾಮದ ಸಮಯ ಈಗ.

ಉರಿಯುವ ಕಣ್ಣುಗಳಿಗೆ ತಣ್ಣೀರನ್ನೆರಚಿಕೊಂಡವನು ಒಳಗೆ ಹೋಗಿ ಮಲಗದವನು ಎದ್ದು ಎರಡು ನಿದ್ದೆಯ ಗುಳಿಗೆ ನುಂಗಿಯೇ ಹಾಸಿಗೆ ಸೇರಿದ.

ಬಹಳ ಹೊತ್ತಿನ ಮೇಲೆ ಅದರ ಮಂಪರುನೊಳಗೆ ಸೇರಿಹೋದ. ಅದಕ್ಕೆ ಮುನ್ನ 'ಡೋಂಟ್ ಡಿಸ್ಟರ್ಬ್ ಮಿ' ಎನ್ನುವ ಚೀಟಿಯನ್ನು ಬರೆದಿಡುವುದು ಮರೆಯಲಿಲ್ಲ.

ಸ್ನಾನ, ಬ್ರೇಕ್‌ಫಾಸ್ಟ್ ಮುಗಿಸಿಕೊಂಡು ಬಂದೇ ನೀಲಿಮಾ ಆ ಚೀಟಿ ನೋಡಿದ್ದು. ಅವಳೇನು ತಲೆ ಕೆಡಿಸಿಕೊಳ್ಳದೆ ಕಾಲೇಜಿಗೆ ಹೋಗಲು ಸಿದ್ಧ ವಾದಳು.

ಫಿಯೆಟ್ ಹತ್ತುವ ಮುನ್ನ ಆಳಿಗೆ ಹೇಳುವುದನ್ನು ಮರೆಯ ಲಿಲ್ಲ "ಅವರಾಗಿ ಏಳುವ ಮೊದ್ಲು ಎಬ್ಬಿಸೋದ್ಬೇಡ. ಅಡಿಗೆಯ ಭರಣಿಗೂ.... ಹೇಳು" ಅಲ್ಲಿಗೆ ಬಹುಶಃ ಅವಳ ಕರ್ತವ್ಯ ಮುಗಿಯಿತು. ನಿವೇದಿತಾ, ಅವಳಲ್ಲಿನ ರೀತಿ, ರಿವಾಜ್‌ಗೆ ಅಗಾಧ ಅಂತರವಿತ್ತು.

ಕಾರು ಕಾಲೇಜಿನ ಹಾದಿ ಹಿಡಿಯಿತು. ನೀಲಿಮಾ ಬದುಕಿನಲ್ಲಿ ಮೊದಲಿನ ಚಟುವಟಿಕೆಯ ಪ್ರವೇಶ. ಅದೇ ಠೀವಿ, ಮೊದಲಿನ ದಿಟ್ಟತನವೇ

ಆದರೆ ಸ್ವಲ್ಪ ತನ್ನ ಕೋಲಿಗ್ಸ್‌ರಿಂದ ದೂರವಿರುತ್ತಿದಳು. 'ಸ್ಟ್ರಿಕ್ಟ್'

ಹಣ ಪಟ್ಟಹೊತ್ತ ಆಕೆಯಿಂದ ವಿದ್ಯಾರ್ಥಿಗಳು ಸ್ವಲ್ಪ ದೂರವೆ. ಎಲ್ಲಕ್ಕಿಂತ ತನ್ನ ಪ್ರೊಫೆಷನ್ ಬಗ್ಗೆ ಪ್ರಾಮಾಣಿಕತೆ ಇತ್ತು.

* * *

ಅಂದು ಮನೆಯಲ್ಲಿ ಊಟ ಮಾಡಿರಲಿಲ್ಲ ನೀಲಿಮಾ. ಎರಡು ಪಿರಿಯಡ್ ಮುಗಿಯುತ್ತಿದ್ದಂಗೆ ಹಸಿವು ಷುರುವಾಯಿತು. ಕ್ಯಾಂಟಿನ್ ಬೇಸರ ವೆನಿಸಿ ಹೊರಗೆ ಬಂದು ಕಾರು ಹತ್ತಿದಳು.

ಎರಡು ಪ್ಯಾಕೆಟ್‌ಗಳನ್ನು ಎದೆಗಾನಿಸಿಕೊಂಡ ನಿವೇದಿತಾ ಅಲೋಕ್‌ನ ಕೈಹಿಡಿದು ಹೋಟಲ್‌ನೊಳಕ್ಕೆ ಹೋಗುತ್ತಿದ್ದನ್ನು ಕಂಡಳು. ಕಾರು ಪಾರ್ಕ್ ಮಾಡಿ ತಾನು ಅಲ್ಲಿಯೇ ಇಳಿದಳು.

ಫ್ಯಾಮಿಲಿ ರೂಂ ಹೊಕ್ಕಳು. ನಿವೇದಿತಾ, ಅಲೋಕ್‌ನ ಮಾತು ಗಳನ್ನ ಕೇಳುತ್ತ ಮೆನು ಕಾರ್ಡ್ ನೋಡುತ್ತಿದ್ದಳು. ಮೃದುವಾದ ಮುಖದಲ್ಲಿ ತುಂಬು ಯೌವನ ಲಾಸ್ಯ ಮಾಡುತ್ತಿದ್ದರೂ, ಸ್ವಲ್ಪ ಗಾಂಭೀರ್ಯದ ಜೊತೆ ಸಂತೃಪ್ತ ಭಾವವು ಇತ್ತು.

ಖಾಲಿಯಿದ್ದ ಇನ್ನೊಂದು ಟೇಬಲ್ ಮುಂದೆ ಕೂತು ಆ ತಾಯಿ, ಮಗನನ್ನೆ ದಿಟ್ಟಿಸಿದಳು ಅಲೋಕ್ ಕೆನ್ನೆ, ಕೈ ಮುಟ್ಟಿ ವಿವಿಧ ಭಾವಾಭಿನಯ ದಿಂದ ಹೇಳುತ್ತಿದ್ದ.

ಊಟ ತರಿಸಿಕೊಂಡ ನೀಲಿಮಾ ನೋಟ ಅತ್ತಲೆ ಇತ್ತು. ಮಗನಿಗೆ ಪೂರಿ ತರಿಸಿ ಕೊಟ್ಟ ನಿವೇದಿತಾ ತನಗಾಗಿ ಬರೀ ಕಾಫೀ ತರಿಸಿಕೊಂಡಳು.

ಎರಡು ಸಲ ಬಲವಂತ ಮಾಡಿಅ ಲೋಕ್ ನಿವೇದಿತಾಗೆ ಪೂರಿ ತಿನ್ನಿಸಿದ. ಈ ದೃಶ್ಯ ತೀರಾ ಅಪ್ಯಾಯಮಾನವಾಗಿತ್ತು.

ಅಂದು ವರ್ಷಗಳಷ್ಟು ಹಿಂದೆ ಡಾ॥ ಫಿಲೋಮಿನಾ ಅಬಾರ್ಷನ್‌ಮಾಡಲು ನಿರಾಕರಿಸುತ್ತ, ಒಂದು ಮಾತು ಹೇಳಿದ್ದರು.

"ಮತ್ತೆ ಮತ್ತೆ ಇಂಥ ಪುನರಾವರ್ತನೆ ಒಳ್ಳೆದಲ್ಲ. ಹೇಗೂ ಎಂ.ಎಸ್.ಸಿ. ಕೊನೆಯ ವರ್ಷ ಆರಾಮಾಗಿ ಮದ್ವೆ ಆಗ್ಬಿಡು."

"ಬೇಡ ಡಾಕ್ಟ್ರೆ, ನಂಗೆ ಮಗು ಬೇಡ. ಆ ಬಗ್ಗೆ ನಾನು ಯೋಚ್ಸೇ ಇಲ್ಲ. ಮೈ ಮರೆತರೂ ದೊಡ್ಡ ರಿಸ್ಕ್ ತಗೊಳ್ಳೋ ಅಗತ್ಯವಿಲ್ಲ. ಪ್ಲೀಸ್...." ಆಕೆ ಸುಮ್ಮನಾಗಿದ್ದರು.

ಆ ಗರ್ಭವನ್ನ ಉಳಿಸಿಕೊಂಡಿದ್ದರೆ ಅಲೋಕನಷ್ಟೇ ವಯಸ್ಸಿನ ಅಥವಾ ಅದಕ್ಕಿಂತ ದೊಡ್ಡ ಮಗುವೇ ತನಗೆ ಇರುತ್ತಿತ್ತು. ಆಗ ಇಂಥ ಒಂಟಿತನ ವಿರುತ್ತಿರಲಿಲ್ಲ. ಆಗ ಡಾ॥ ಫಿಲೋಮಿನಾ ಮಾತು ತಾನು ಕೇಳಬೇಕಾಗಿತ್ತು ಎಂದು ಬಹಳ ತಡವಾಗಿ ಅಂದುಕೊಂಡಳು.

ತಾಯಿ, ಮಗ ಬಿಲ್‌ನ ಹಣತೆತ್ತು ಹೊರಟಾಗಲೂ ಅವಳ ಊಟವಿನ್ನು ಅರ್ಧಕ್ಕೆ ಬಂದಿರಲಿಲ್ಲ.

ನೀಲಿಮಾ, ನಿವೇದಿತಾ ನೋಟಗಳು ಕ್ಷಣ ಬೆರೆತವು. "ನಮಸ್ತೆ.... ಮೇಡಮ್...." ವಿಶ್ ಮಾಡಿದಳು ನಿವೇದಿತಾ. ಸ್ವಲ್ಪ ನೀಲಿಮಾನೇ ಗಲಿಬಿಲಿಗೊಂಡಳು. "ನಮಸ್ತೆ....ಹೇಗಿದ್ದಾನೆ ಮಗ ?" ಅಲೋಕ್‌ನತ್ತ ನೋಟ ಹರಿಸಿದಳು. ಬಹಳ ಇಷ್ಟವಾದ. "ಚೆನ್ನಾಗಿದ್ದಾನೆ...." ಎನ್ನುವುದರೊಳಗಾಗಿ ಅಲೋಕ್ ಅಲ್ಲಿಂದ ಹೊರಟುಬಿಟ್ಟ.

"ಬರ್ತೀನಿ...." ನಿವೇದಿತಾ ಹೊರಟುಬಿಟ್ಟಳು.

ಸ್ವಲ್ಪ ತಡವಾಗಿಯಾದರೂ ನೀಲಿಮಾಗೆ ಅರ್ಥವಾಯಿತು. ಅಲೋಕ್ ಅವಳನ್ನು ದ್ವೇಷಿಸುತ್ತಿದ್ದ. ವಿಶ್ವಾಸ ತೋರುವುದೇನು, ಅವನ ಕಣ್ಣುಗಳಲ್ಲಿ ಅವಳ ಬಗ್ಗೆ ಹಗೆ ಇತ್ತು.

ಕಲೆಸಿದ ಅನ್ನ ತಿನ್ನಲಾಗಲಿಲ್ಲ. ಕೈ ತೊಳೆದು ಒಂದು ಐಸ್‌ಕ್ರೀಮ್ ತರಿಸಿಕೊಂಡು ತುಸು ತಿಂದು ಹಾಗೇ ಬಿಟ್ಟು ಮೇಲೆದ್ದಳು.

ಪುಟ್ಟ ಹುಡುಗನ ಹೃದಯದಲ್ಲಿ ಕಹಿ ನೆಟ್ಟಂತಾಗಿತ್ತು ಅವಳ ಮದುವೆಯಿಂದ. ನಿವೇದಿತಾ ಎದೆಯಲ್ಲಿ ಭಯಂಕರ ಬಿರುಗಾಳಿ ಇದ್ದರೂ ಪರಿಸ್ಥಿತಿಯನ್ನ ಸಂಯಮದಿಂದ ಎದುರಿಸಿದ್ದಳು. ಅಂದು 'ಪೂರ್ ಗರ್ಲ್' ಎಂದಿದ್ದಳು. ಇಂದು ಆ ಮಾತು ತನಗೇ ಅನ್ವಯಿಸುತ್ತದೆಯೆಂದುಕೊಂಡಳು ನೀಲಿಮಾ.

ಮನೆಗೆ ಬಂದಾಗ ತೀರಾ ಸಪ್ಪಗಿದ್ದಳು. ಸಮಾಜದ ಕೆಲವು ಹೆದರಿಕೆಗಳಾದರೂ ಮನುಷ್ಯನಿಗೆ ಇರುವುದು ಒಳ್ಳೆಯದೆಂದುಕೊಂಡಳು. ಪ್ರಸನ್ನ ಮದುವೆಯಾದ ಗಂಡು. ಅವನಿಗೆ ಅವನದೇ ಆದ ಮಗುವಿದೆ—ಇದನ್ನು ಯಾಕೆ ತಾನು ಅಂದು ಯೋಚಿಸಲಿಲ್ಲ.

"ನಿವೇದಿತಾ ಜೊತೆಗಿನ ಜೀವನ ತನಗೆ ಕಷ್ಟ" ಪ್ರಸನ್ನ ಹೇಳಿಕೊಂಡಾಗ

ತಾನು ಅದರ ಉಪಯೋಗ ಪಡೆಯದೇ ಬುದ್ಧಿ ಹೇಳಿದ್ದರೇ, ಇಂದಿನ ಅಲೋಕ್‌ನ ಮನಸ್ಸಿನ ನೋವು, ದ್ವೇಷಕ್ಕೆ ತಾನು ಕಾರಣಳಾಗಬೇಕಿರಲಿಲ್ಲ. "ಓ ಮೈ ಗಾಡ್.... ನಾನು ತಪ್ಪು ಮಾಡ್ದೆ" ದಿಂಬಿನಲ್ಲಿ ಮುಖ ಹುದುಗಿಸಿದಳು.

ಇಂದು ನಿವೇದಿತಾಳ ದಿಟ್ಟತನ, ಒಳ್ಳೆಯ ಸ್ವಭಾವವನ್ನು ಮೆಚ್ಚಿಕೊಂಡಳು. ಆದರೆ ಅವಳೆದೆಯಲ್ಲಿ ಒಂದೇ ಒಂದು ಆಸೆ 'ಅಲೋಕ್‌ನಂಥ ಮಗು ತನಗಿದ್ದರೇ ? ಅವಳ ಮೈಯ ಅಂಗಾಂಗಳಲ್ಲಿ ಎಂತಹುದೋ ಬಿಗಿತ. ಬಿಸಿ ಇಡೀ ಮೈಗೆಲ್ಲ ಹರಡಿದಂತಾಯಿತು.

"ನೋ ಡೌಟ್, ನೀನು ಈಗ಼್್ಲೂ ತಾಯಿ ಆಗ್ಬಹುದ್ದು" ಡಾ॥ ಫಿಲೋಮಿನ ಬೆನ್ನು ತಟ್ಟಿ ಹೇಳಿದ್ದರು. ಅವಳಿಗೆ ನಂಬಿಕೆ ಬಂದಿರಲಿಲ್ಲ. ಇಂದು.... ದೂರದ ಆಸೆಯೊಂದು ಕೈ ಬೀಸಿ ಕರೆದಂತಾಯಿತು ಅವಳನ್ನ.

ಎದ್ದು ಬಾತ್ ರೂಂ ಹೊಕ್ಕು ಸ್ನಾನ ಮಾಡಿ ಬಂದು ಇಡೀ ವಾಡ್ ರೋಬ್‌ನ ಸೀರೆಗಳನ್ನ ಹರಡಿಕೊಂಡು ಒಂದೊಂದೆ ಮೈಮೇಲೆ ಹಾಕಿಕೊಂಡು ಮೈಯ ಮಾಟಕೆ, ಮುಖದ ಹೊಂಬಣ್ಣಕ್ಕೆ ಹೊಂದುವಂಥದ್ದನ್ನ ಆಯ್ಕೆ ಮಾಡಿಕೊಂಡಳು.

ಬಹಳ ಎಚ್ಚರದಿಂದ ಉಬ್ಬು, ತಗ್ಗುಗಳನ್ನು ಗಮನಕ್ಕೆ ತಂದುಕೊಂಡು ಸವರನ್ ಕಲರ್‌ನ ಗಾರ್ಡನ್ ಸೀರೆಗೊಪ್ಪುವಂಥ ಸ್ಲೀವ್‌ಲೆಸ್ ಬ್ಲೌಸ್ ತೊಟ್ಟು, ಹಿತ ಮಿತವಾಗಿ ಮುಖಕ್ಕೆ ಮೇಕಪ್ ಮಾಡಿಕೊಂಡು, ವಿದೇಶಿ ಪರಿಮಳವನ್ನು ಚಿಮುಕಿಸಿಕೊಂಡು ರೆಡಿಯಾಗಿ ಹಾಲ್‌ಗೆ ಬಂದಳು.

ಅರುಂಧತಿ ಮೆಚ್ಚಿಗೆಯಿಂದ ಕಣ್ಣರಳಿಸಿದರು "ಎಲ್ಲಿಗಾದ್ರೂ........ ಹೋಗೋದಿದ್ಯಾ ?" ಬಗ್ಗಿ ನೆರಿಗೆಗಳನ್ನ ಸರಿ ಮಾಡಿಕೊಳ್ಳುತ್ತ ಬಹಳ ಕಾಲಕ್ಕೆ ತಾಯಿಯನ್ನು ಕೇಳಿದಳು "ಈ ಸೀರೆ ನಂಗೆ ಹೇಗೆ ಕಾಣುತ್ತೆ ?"

"ಯಾವ್ದು ಉಟ್ಟರೂ ನೀನು ದಂತದ ಗೊಂಬೆಯೇ. ತುಂಬ ಚೆನ್ನಾಗಿ ಕಾಣ್ತೀಯಾ !" ಅಕ್ಕರೆಯಿಂದ ನುಡಿದರು. ನಲ್ವತ್ತು ದಾಟಿದರೂ ತಾಯಿ ಕಣ್ಣಿಗೆ ಮಗಳು ಇನ್ನು ಮಗುವೇ.

ಯಾಕೆ ಈ ಸಂಭ್ರಮ ? ಆಕೆ ಯೋಚಿಸದೇ ಹೋಗಲಿಲ್ಲ. ಹೊಸ ಹೊಸ ಸೀರೆಗಳನ್ನು ವಿನ್ಯಾಸವಾಗಿ ಉಡುವುದಾಗಲೀ, ಮೇಕಪ್ ಮಾಡಿ

ಕೊಳ್ಳುವುದಾಗಲಿ ಹೊಸದಾಗಿ ಕಾಣಲಿಲ್ಲ. ಆದರೆ ಕಣ್ಣೊಳಗಿನ ಮಿಂಚೇ.... ಅವರನ್ನು ಗೊಂದಲದೊಳಕ್ಕೆ ಕೆಡವಿದ್ದು.

"ಯಾರಿಗಾದ್ರೂ....ಕಾಯ್ತಾ ಇದ್ದೀಯಾ ?" ಕೇಳಿದರು.

ಅವರಿಗೆ ಉತ್ತರಿಸದೆ ಹೊರಗೆ ಬಂದು ಗಾರ್ಡನ್‌ನಲ್ಲಿ ಅಡ್ಡಾಡಿದಳು. ಎರಡು ಸಲ ಪಟೇಲ್ ಮನೆಗೂ ಫೋನ್ ಮಾಡಿ ವಿಚಾರಿಸಿದಳು. ಚಡಪಡಿಕೆ, ಉಲ್ಲಾಸ, ಉತ್ಸಾಹ ಕ್ಷಣಗಳು ಕೂಡ ದೀರ್ಘವೆನಿಸಿತು.

ಹತ್ತರನಂತರವೇ ಕ್ಲಬ್‌ನಿಂದ ಪ್ರಸನ್ನ ಮನೆಗೆ ಬಂದಿದ್ದು. ಅಷ್ಟರಲ್ಲಿ ನಾಲ್ಕು ಸಲವಾದರೂ ಮೇಕಪ್ ತಿದ್ದಿಕೊಂಡು ಬಂದಿದ್ದಳು. ಹದಿನಾರರ ಬೆಡಗು ಆವರಿಸಿತ್ತು ಅವಳನ್ನ.

ಅಲಂಕಾರ, ಕಣ್ಣುಗಳಲ್ಲಿನ ಕಾಯುವಿಕೆಗೆ ಬೇಸ್ತು ಬಿದ್ದ. "ಎಲ್ಲಾದ್ರೂ ಹೊರಟಿದ್ದೀಯಾ ? ಯಾರಾದ್ರೂ....ಬರೋರಿದ್ದಾ ?" ಕೇಳಿದ. "ನೋ, ನಾನು ನಿಮಗೋಸ್ಕರ ಕಾಯ್ತಾ ಇದ್ದಿದ್ದು" ಎಂದು ತೋಳಿಗೆ ತೆಕ್ಕೆ ಬಿದ್ದಾಗ ಹಠಾತ್ತಾಗಿ ನಿವೇದಿತಾ ಬಂದು ಎದುರು ನಿಂತಂತಾಯಿತು.

"ಬದ್ಕಿನುದ್ದಕ್ಕೂ....ನಿಮಗಾಗಿ ಕಾಯಲು ನಂಗಿಷ್ಟ". ನಿವೇದಿತಾ ಇವನು ತಡವಾಗಿ ಬಂದು ಆಕ್ಷೇಪಿಸಿದಾಗ ನುಡಿಯುತ್ತಿದ್ದಳು. ಅದರಲ್ಲಿ ನೂರು ಪರ್ಸೆಂಟ್ ಪ್ರಾಮಾಣಿಕತೆ ಇರುತಿತ್ತು.

ನೀಲಿಮಾ ಉತ್ಸಾಹಕ್ಕೆ ತಣ್ಣೀರು ಎರಚದೆ ಬಳಸಿಯೇ ಕೋಣೆಗೆ ಬಂದು ಬೊಗಸೆಯಲ್ಲಿ ಅವಳ ಮುಖವಿಡಿದು ಕಣ್ಣಲ್ಲಿ ಕಣ್ಣು ನೆಟ್ಟ. ಅಲ್ಲಿ ಪ್ರಾಮಾಣಿಕತೆಯ ಪರ್ಸೆಂಟೇಜ್‌ನ ಹುಡುಕುವ ಕಾತರ.

"ಸ್ಟುಪಿಡ್, ಯೂ ನಾಟಿ....ಯಾಕೆ ಹಾಗೇ ನೋಡ್ತೀರಾ ?" ಹುಸಿ ಮುನಿಸು ತೋರಿಸಿದಳು. ಕೈಗಳನ್ನು ಹಿಂದಕ್ಕೆ ತಂಗೊಂಡು ನಕ್ಕ "ನಿಜ ಹೇಳಿದ್ರೆ....ಕೋಪ ಮಾಡ್ಕೋತೀಯಾ ! ಏನು ಇಷ್ಟೊಂದು ಸಂತೋಷ ವಾಗಿದ್ದೀಯ ? ನಾನು ಕಲ್ಪನೆಯಲ್ಲಿ ಕೂಡ ಗುರ್ತಿಸೋಕಾಗೋಲ್ಲ" ಅವಳನ್ನೆ ನೋಡಿದ.

"ಊಟ....ಮಾಡೋಣ!" ಎಂದಳು ಅವನ ಷರಟಿನ ಗುಂಡಿಯೊಂದಿಗಾ ಡುತ್ತ. ತೀರ್ ವಿಸ್ಮಿತನಾದ. ಇವಳು ನೀಲಿಮಾನ ನಿವೇದಿತಾನ ? "ನನ್ನದು

ಊಟ ಆಯ್ತು. ನೀನ್ಹೋಗಿ....ಮಾಡ್ಕೊಂಡ್ಬಾ" ಬಟ್ಟೆ ಬದಲಾಯಿಸಲು ಹೋದ.

ಇಂಥ ಉಪಚಾರ ನೀಲಿಮಾ ಅಂಥವರಿಗೆ ಸಲ್ಲದು. ಅದನ್ನು ಊಹಿಸಲು ಕೂಡ ಸಾಧ್ಯವಿಲ್ಲ ಪ್ರಸನ್ನ.

ಎಂದಿನಂತೆ ನೀಲಿಮಾ ಸುಮ್ಮನಾಗಲಿಲ್ಲ. ತಾನೇ ಡೈನಿಂಗ್‌ಹಾಲ್‌ಗೂ, ರೂಮಿಗೂ ಸಡಗರದಿಂದ ಓಡಾಡಿದಳು. ಅಡಿಗೆಯವನು ಬಡಿಸಿ ಹೋದ ಮೇಲೆ ಪ್ರಸನ್ನನ ರಟ್ಟೆ ಹಿಡಿದು ತಂದು ಕೂಡಿಸಿದಳು. ತಾನೂ ಊಟಕೆ ಕೂತಳು. ಬಲವಂತವಾಗಿ ತಿನ್ನಿಸಲು ಹೋದಾಗ ನಿಜವಾಗಿ ಗಾಬರಿಯಾದ ಪ್ರಸನ್ನ. ಮತ್ತೆ ಯಾವುದಾದರೂ ಪ್ರಾಬ್ಲಮ್ ಕ್ರಿಯೇಟ್ ಮಾಡಿ ಕೊಳ್ಳುವ ಸಿದ್ಧತೆಯೆ ? ಗಂಟಲಲ್ಲಿ ಏನಾದರೂ ಇಳಿಯುವುದೇ ಅವನಿಗೆ ಕಷ್ಟವಾಯಿತು.

"ಖಂಡಿತ ಕ್ಲಬ್‌ನಿಂದ ಬರೋವಾಗ ಊಟ ಮುಗ್ಸಿಕೊಂಡು ಬಂದಿದ್ದೆ. ಹೊಟ್ಟೆ ಭಾರವಾಗಿ ರಾತ್ರಿಯೆಲ್ಲ ನಿದ್ದೆ ಇಲ್ಲದೇ ನರಳಬೇಕಾಗುತ್ತೆ" ಎದ್ದು ಹೋಗಿ ಕೈ ತೊಳೆದು ಬಂದ.

ಆದರೂ ನೀಲಿಮಾ ತಾಳ್ಮೆ ಕಳೆದುಕೊಳ್ಳಲಿಲ್ಲ. ತೆಳುವಾದ ಮಾಕ್ಸಿ ಧರಿಸಿ ಹಾಲಿಡಿದು ಬಂದು ಅವನ ಪಕ್ಕ ಕೂತಳು.

ಪ್ರಸನ್ನನ ಇಂದಿನ ಮೂಡೇ ಸರಿಯಿರಲಿಲ್ಲ. ಆಲೋಕ್‌ನ ಕಾನ್ವೆಂಟ್ ಬಿಡುವ ವೇಳೆಗೆ ಅಲ್ಲಿಗೆ ಹೋಗಿದ್ದ. ಆಗ ತಾನೇ ಬಸ್ಸು ಹತ್ತುತ್ತಿದ್ದ ಆಲೋಕ್ ತನ್ನನ್ನು ನೋಡಿಯು ಕೂಡ ಹತ್ತಿದ್ದನೆಂದು ಅವನಿಗೆ ಸಂದೇಹ. ಅವನ ಪ್ರೀತಿಯಲ್ಲಿ ಕೊರತೆ ಕಂಡರೂ ಆಲೋಕ್ ಅವನಲ್ಲಿಗೆ ಓಡಿ ಬರುತ್ತಿದ್ದ. ಮಾತಾಡುತ್ತಿದ್ದ ಜೊತೆಯಲ್ಲಿ ತಿರುಗಾಡುತ್ತಿದ್ದ. ಆಗಾಗ ಅವನೇ ತಂದು ಮನೆಯ ಬಳಿ ಇಳಿಸಿ ಹೋಗುತ್ತಿದ್ದ, ಇಂದಿನ ಅವನ ಉದಾಸೀನಕ್ಕೆ ಕಾರಣವೇನು ?

ಮಂಚದ ಮೇಲೆ ಉರುಳಿಕೊಂಡ. ಅವನೆದೆಯ ಮೇಲೆ ತಲೆ ಇಟ್ಟ ನೀಲಿಮಾ ಅವನ ಕೈಬೆರಳುಗಳೊಂದಿಗೆ ಆಟವಾಡುತ್ತಿದ್ದಳು. ಬಿಸಿ, ಬಿಗಿತ ಅವನನ್ನು ಎಚ್ಚರಿಸಿತು.

ಅಂದು ನೀಲಿಮಾ ಹುಚ್ಚಾಗಿದ್ದಳು. ಹಂತ ಹಂತವಾಗಿ ಅವನನ್ನು

ಮೂಡ್‌ನೊಳಕ್ಕೆ ತರಲು ಸಫಲವಾದಳು. ಇಂದಿನ ಗೆಲುವು ಅವಳ ಪಾಲಿಗೆ ಬಹಳ ದೊಡ್ಡದು.

ಇಂಥಹ ರಾತ್ರಿಗಳೇ ಜಾಸ್ತಿಯಾದವು. ಕೆಲವೊಮ್ಮೆ ಹಿಂಸೆಯೆನಿಸಿತು ಕೂಡ.

ಕಾನ್ವೆಂಟ್ ಲಂಚ್ ಬ್ರೇಕ್‌ನಲ್ಲಿಯೇ ಪ್ರಸನ್ನ ಮಗನನ್ನು ನೋಡಲು ಹೋದ.

"ನಿಮ್ಮ ಮಿಸ್ ಹತ್ರ ಪರ್ಮೀಷನ್ ತಗೊಂಡಿದ್ದೀನಿ. ಇವತ್ತು ಅನಿಮಲ್ ಮೂವೀ ನೋಡೋಣ" ಅವನ ಕ್ರಾಪ್ ಸರಿ ಮಾಡಿದ "ಓ, ಪಪ್ಪ....ಮಧ್ಯಾಹ್ನದ ಕ್ಲಾಸ್ ಹೋಗುತ್ತೆ. ನಂಗೆ ಲಾಸ್. ಮಮ್ಮಿ ಕೂಡ ಕಾಯ್ತ ಇರುತ್ತೆ" ತಲೆ ಕೊಡವಿದ.

ಪ್ರೀತಿಯಿಂದ ಅವನ ತಲೆಯ ಮೇಲೊಂದು ಮೊಟಕಿದ "ಇವತ್ತು ತುಂಬ ಬೋರಾಗಿದೆ. ನಂಗೆ ಕಂಪನಿ ಕೊಡು" ರಮಿಸಿದ ಕೂಡ.

ಷಾಪಿಂಗ್ ಸೆಂಟರ್‌ನಲ್ಲೆಲ್ಲ ಅಡ್ಡಾಡಿಸಿ ಪಬ್ಲಿಕ್ ಟೆಲಿಫೋನ್ ಬೂತ್ ನಿಂದ ನಿವೇದಿತಾ ಶಾಲೆಗೆ ಫೋನ್ ಮಾಡಿ ತಿಳಿಸಿದ. "ಅಲೋಕ್‌ನ ನಾನು ಕರ್ಕೊಂಡ್ಹೋಗ್ತಾ ಇದ್ದೀನಿ. ಬೆಳಿಗ್ಗೆ ತಂದು ಬಿಡ್ತೀನಿ" ಫೋನಿಟ್ಟು ಬಿಟ್ಟ. ಅವಳ ಪ್ರತಿಕ್ರಿಯೆ ಅವನಿಗೆ ಬೇಡವಾಗಿತ್ತು.

ರೆಡಿಮೇಡ್ ಷಾಪ್‌ಗೆ ಕರೆದೊಯ್ದು ಅಲ್ಲಿಂದ ಸಿನಿಮಾಗೆ ಕರೆದೊಯ್ದ.

'ಮಮ್ಮಿ'ಯ ನೆನಪಾಗಿ ಅಳುವಂತಾಗುತಿತ್ತು ಅಲೋಕ್‌ಗೆ. ಆದರೆ ನಿವೇದಿತಾ ಎಚ್ಚರಿಸಿದ್ದಳು "ನೀನು ಪಪ್ಪನ ಜೊತೆ ಇರೋವಾಗ ನನ್ನ ಬಗ್ಗೆ ಏನು ಮಾತಾಡ್ಬಾರ್ದು. ಅನಾವಶ್ಯಕವಾಗಿ ಏನೇನೋ ಕೇಳಿ ಬೇಜಾರು ಮಾಡ್ಬಾರ್ದು" ಮೌನವಾಗಿ ತಲೆದೂಗಿದ್ದ, ಅದನ್ನು ಜಾರಿಯಲ್ಲಿಡುವ ಅಗತ್ಯವಿತ್ತು.

ಫಿಲಂ ಮುಗಿದ ಮೇಲೆ ನೇರವಾಗಿ ಅವನನ್ನು ಕರೆದೊಯ್ದಿದ್ದು ಪಟೇಲ್‌ನ ಮನೆಗೆ "ನಿನ್ನ ಬೆಳಿಗ್ಗೆ ಮನೆಗೆ ಕರ್ಕೊಂಡ್ಹೋಗಿ ಬಿಡ್ತೀನಿ" ಅಲೋಕ್ ತೀರಾ ಡಲ್ಲಾಗಿ ಬಿಟ್ಟ.

ಪಟೇಲ್ ಅಪ್ಪ, ಮಗನನ್ನು ಒಟ್ಟಿಗೆ ನೋಡಿ ಖುಷಿಯಿಂದ

ಉದ್ಗರಿಸಿದ "ವ್ಹಾ, ಅಪರೂಪ ದೃಶ್ಯ....ಕ್ಯಾಮರದಲ್ಲಿ ಹಿಡಿದಿಡುವಂಥದ್ದು." ಆಮೇಲು ಸುಮ್ಮನೆ ಕೂಡಲಿಲ್ಲ. ನಾಲ್ಕಾರು ಫೋಟೋಗಳನ್ನು ತೆಗೆದ.

ಊಟ ಮುಗಿದ ಮೇಲೆ ಅಲೋಕ್‌ನ ಪಕ್ಕದಲ್ಲಿ ಮಲಗಿಸಿಕೊಂಡು ಮಲಗಿದ ಪ್ರಸನ್ನ. ಬಹಳ ತಾಳ್ಮೆಯಿಂದ ಮಗನ ಮನರಂಜಿಸುವ ಕತೆ ಹೇಳಿದ.

ಪಟೇಲ್‌ಗೆ ಅರ್ಥವಾಯಿತು. ಡಯಲ್ ತಿರುಗಿಸಿದ ಆ ತುದಿಯಲ್ಲಿ ಫೋನ್ ಎತ್ತಿದ್ದು ನಿವೇದಿತಾನೆ "ಹಲೋ. ನಿವೇದಿತಾ ಹೇಗಿದ್ದೀರಾ? ನಿಮ್ಮ ಮಗ ಇಲ್ಲೇ ಇದ್ದಾನೆ ಪ್ರಸನ್ನ ಜೊತೆ. ಅಲ್ಲೇ ಮೇಡಮ್ ಮನೆಯಲ್ಲಿಯೇ ಮಲ್ಗಿ. ಗುಡ್ ನೈಟ್" ಫೋನಿಟ್ಟ.

ಅವನಿಗೆ ಗೆಳೆಯನ ಮೇಲೆ ಕೋಪವೇ ಬಂತು. ಅವನು ನಿವೇದಿತಾಗೆ ತಿಳಿಸಿದ್ದ. ಅಂಥದ್ದರಲ್ಲಿ ಪಟೇಲ್‌ಗೆ ಕಳಕಳಿ ಯಾಕೆ? ಹಾಗೆಂದುಕೊಂಡರೂ ಅದನ್ನು ತೊಡೆದು ಹಾಕಿ ಆರಾಮಾಗಿ ನಿದ್ರಿಸಿದ. ಇಂದಿನ ನಿದ್ದೆಯಲ್ಲಿ ಒಂದು ತರಹ ತೃಪ್ತಿ ಇತ್ತು.

ನಿದ್ರಿಸುತ್ತಿರುವ ಪ್ರಸನ್ನ, ಅಲೋಕ್‌ನ ನೋಡಿ ಕ್ಷಣ ನೊಂದ ಕೂಡ ಪಟೇಲ್ "ಮನುಷ್ಯ ಕೆಲವದರ ಬೆಲೆ ತಿಳಿಯದೆ ಮೂರ್ಖನಾಗ್ತಾನೆ. ಅದನೆಂದು ಪೂರ್ತಿ ಪಡೆದುಕೊಳ್ಳಲಾರ." ಆಗಾಗ ಅಲೋಕ್ 'ಮಮ್ಮಿ' ಎಂದು ಕನವರಿಸಿಕೊಳ್ಳುತ್ತಿರುವುದನ್ನು ಗಮನಿಸಿದ್ದ.

ಬೆಳಿಗ್ಗೆ ಪ್ರಸನ್ನನೆ ಮಗನಿಗೆ ಸ್ನಾನ ಮಾಡಿಸಿ ಯೂನಿಫಾರಂ ಹಾಕಿ ಅಮೀರ್ ತಂದಿಟ್ಟ ಟೋಸ್ಟ್ ತಿನ್ನಿಸಿ ಹೊರಟು ನಿಂತ.

"ಥ್ಯಾಂಕ್ಯೂ ಮೈ ಫ್ರೆಂಡ್, ರಾತ್ರಿಯಂಥ ಸಂತೃಪ್ತಿಕರವಾದ ನಿದ್ದೆ ಮಾಡಿ ಯುಗಗಳೆ ಆಗಿತ್ತೇನೋ, ಅನ್ನಿಸಿತು. ಮತ್ತೆ ಮೀಟ್.... ಮಾಡೋಣ" ಮಗನನ್ನು ಸ್ಕೂಟರ್ ಮೇಲೆ ಹತ್ತಿಸಿಕೊಂಡಾಗ ಪಟೇಲ್ ಅವನನ್ನು ಪಕ್ಕಕ್ಕೆ ಕರೆದೊಯ್ದು "ರಾತ್ರಿ, ನೀಲಿಮಾ ಫೋನ್ ಮಾಡಿದ್ರು. ಎನಿ.... ಕಾಂಪ್ಲಿಕೇಟೆಡ್? ಬದ್ಕಿನಲ್ಲಿ ಕಾಂಪ್ರಮೈಸ್ ತೀರಾ ಅಗತ್ಯ. ನಮ್ಮ ಬಗ್ಗೆ ಸದಾ ಯೋಚ್ಸೋದ್ನ ಬಿಟ್ಟು ಬೇರೆಯವ್ರ ಬಗ್ಗೆಯು ಚಿಂತಿಸೋದನ್ನ ಕಲೀಬೇಕು. ನೀನೇನೊ ರಾತ್ರಿ ಆರಾಮವಾಗಿ ನಿದ್ದೆ ಮಾಡ್ದೆ.

ಆದರೆ ಇಡೀ ರಾತ್ರಿ ನೊಂದವರು ಇಬ್ಬರು. ನಿವೇದಿತಾ ಅಂತೂ ನಿದ್ರಿಸಿರಲಾರಳು, ಬಹುಶಃ ನೀಲಿಮಾ ಕೂಡ ಅಷ್ಟೆನೇನೋ" ಹೇಳಿದ.

"ಯು ಆರ್ ಕರೆಕ್ಟ್, ನೀಲಿಮಾ ಅಂಥ ಸೆನ್ಸಿಟಿವ್ ಹೆಣ್ಣಲ್ಲ. ಎರಡು ಮಾತ್ರೆ ನುಂಗಿ ಆರಾಮಾಗಿ ನಿದ್ದೆ ಹೋಗಿರ್ತಾಳೆ. ನಿವೇದಿತಾಗೂ ಇಂಥವು ಅಭ್ಯಾಸವಾಗ್ಬೇಕು. ಅಲೋಕ್ ನಂಗೂ ಮಗ" ಉಗುಳು ನುಂಗಿ ಸ್ಕೂಟರ್ ನತ್ತ ನಡೆದ.

ಕಾಂಪೌಂಡ್‌ನಲ್ಲಿ ನಿಂತಿದ್ದ ನಿವೇದಿತಾ ಕಣ್ಣುಗಳಲ್ಲಿ ಕಾತರವಿತ್ತು. ಸ್ಕೂಟರ್ ನಿಲ್ಲಿಸಿ ಅಲೋಕ್‌ನ ಇಳಿಸಿ ಅವಳತ್ತ ನೇರವಾಗಿ ನೋಡಿದ ಎರಡು ನಿಮಿಷ. ಕೈಯೆತ್ತಿ ಬೀಸಿದ. ಸ್ಕೂಟರ್ ಮುಂದಕ್ಕೆ ಹೋಯಿತು.

ಮನೆಗೆ ಬಂದಾಗ ನೀಲಿಮಾ ಇನ್ನು ಎದ್ದಿರಲಿಲ್ಲ. ಎರಡಕ್ಕೆ ಬದಲು ಮೂರು ನಿದ್ದೆ ಮಾತ್ರೆಗಳನ್ನು ನುಂಗಿರಬೇಕೆಂದುಕೊಂಡ. ಇದು ಒಂದು ಅಭ್ಯಾಸ. ಬಹಳ ವರ್ಷಗಳಿಂದಲು ಇರಬಹುದೆಂದುಕೊಂಡಿದ್ದ.

ಬ್ರೇಕ್ ಫಾಸ್ಟ್ ಬೇಡವೆಂದವನು ತನ್ನ ಸಬ್ಜೆಕ್ಟ್‌ಗೆ ಸಂಬಂಧ ಪಟ್ಟ ಯಾವುದೋ ಪುಸ್ತಕ ಹಿಡಿದು ಕುಳಿತ. ಬಂದ ನೀಲಿಮಾ ಹಿಂದಿನಿಂದ ಅವನ ಕುತ್ತಿಗೆ ಬಳಸಿದಳು.

"ಪಟೇಲ್, ಬಲವಂತ ಮಾಡಿ ರಾತ್ರಿ ಅಲ್ಲೇ ಇರಿಸಿಕೊಂಡ" ನೀಲಿಮಾ ನಕ್ಕು ಬಿಟ್ಟಳು "ಅಲ್ಲ, ನೀವೆ ಹೆದ್ರಿ ಅಲ್ಲೇ ಇದ್ದು ಬಿಟ್ರಿ. ನಿಮಗೊಂದು ಮಗು ಬೇಡ್ವಾ !"

ಹಳೆಯ ರಾಗ. ಹಿಂದಕ್ಕೆ ತಿರುಗಿ ಅವಳತ್ತ ನೋಡಿ. "ಯಾಕೆ ಸಿಲ್ಲಿಯಾಗಿ ಯೋಚಿಸ್ತೀಯಾ ! ನಲವತ್ತರದ ನಂತರದ ಪ್ರೆಗ್ನೆನ್ಸಿ ಒಂದು ವರವಲ್ಲ, ಹೊರೆ. ಅಪಾಯವು ಕೂಡ. ನಿನ್ನ ಮಗುವಿನ ಹಂಬಲಿಕೆ ಯಾವ ರೂಪ ತಾಳಿತೂಂತ ಅನುಭವಿಸಿದ್ದು ಸಾಕು. ಮಗುವಿನ ಆಸೆ... ಬೇಡ" ಸ್ಪಷ್ಟವಾಗಿಯೇ ತಿಳಿಸಿದ.

"ನೋ....ನೋ...." ಕಿರಿಚಿ ಕುಸಿದಳು.

ಆರಂಭದಲ್ಲಿಯೇ ಚಿವುಟುವುದು ಅವನಿಗೆ ಒಳ್ಳೆಯದೆನಿಸಿತು "ನಂಗೆ ಮಕ್ಕಳಾಗೋ ಸಾಧ್ಯತೇನೆ ಇಲ್ಲ. ಇಲ್ದ ಬಯಕೆಗೆ ಬೇರೊಂದು ರೂಪ ಕೊಡ್ಬೇಡ."

ಬಹಳ ಹೊತ್ತು ನೀಲಿಮಾ ನಿಸ್ತೇಜಳಾಗಿ ಕೂತಿದ್ದಳು. ನಲವತ್ತರ ನಂತರದ ವಯಸ್ಸು. ಅವಳಿಗೆ ಈಗ ನಲವತ್ತು ದಾಟಿತ್ತು. ಪ್ರಸನ್ನದು ಮುವತ್ತೆರಡರ ಹರೆಯ. ತಾನು ಎಂಟು ವರ್ಷದಷ್ಟು ಅವನಿಗಿಂತ ಹಿರಿಯಳು. ಅಂಥ ಅಸಡ್ಡೆಯನ್ನು ಪ್ರಸನ್ನ ಎಂದೂ ಪ್ರಕಟಪಡಿಸಿರಲಿಲ್ಲ. ಒಂದು ರೀತಿಯಲ್ಲಿ ಅಬ್‌ನಾರ್ಮಲ್ ವರ್ತನೆ ತನ್ನದೆ.

ಇಬ್ಬರು ಜೊತೆಗೂಡಿಯೇ ಕಾಲೇಜಿಗೆ ಹೋದರು. ಲೆಕ್ಚರರ್ ಕವಿತಾ ಒಂದು ಪತ್ರಿಕೆಯ ಪುಟವನ್ನು ತಂದು ನೀಲಿಮಾ ಮುಂದೆ ಹಿಡಿದು "ಒಂದಿಷ್ಟು ಓದಿ....ಲಾಜಿಕ್ಕಾಗಿ ಅನಾಲಿಸಿಸ್ ಮಾಡಿದ್ದಾರೆ ರೈಟರ್. ನಾನು ಸಂಜೆ ಇಸ್ಕೋತೀನಿ" ಅದನ್ನ ಬಿಟ್ಟು ಹೋದಳು.

ಡೈವೋರ್ಸ್ ಮೇಲಿನ ಲೇಖನ. ಕ್ಷಣ ನೀಲಿಮಾ ಮುಖ ಬಿಗಿದು ಕೊಂಡಿತು. ಕಾಲೇಜಿನಲ್ಲಿ ಯಾರೊಂದಿಗೂ ಅಷ್ಟೊಂದು ಸ್ನೇಹವಾಗಿ ಬೆರೆಯುತ್ತಿರಲಿಲ್ಲ ಅವಳು. ಈ ಪತ್ರಿಕೆ ತನಗೆ ಕೊಟ್ಟ ಉದ್ದೇಶ ?

ಸನಾತರ ಧರ್ಮ ಗ್ರಂಥಗಳಲ್ಲಿನ ಸ್ತ್ರೀ ಉಲ್ಲೇಖನದಿಂದ ಮೊಗಲರ ಕಾಲ, ಸ್ವತಂತ್ರ ಪೂರ್ವ, ಸ್ವತಂತ್ರ್ಯದ ನಂತರ ಮಹಿಳಾ ಚಳುವಳಿ, ಅವರ ಮೇಲಾಗುತ್ತಿರುವ ದೌರ್ಜನ್ಯ, ಮಹಿಳೆಯರ ಮಾನಸಿಕ ಸ್ಥಿತಿ, ರೂಪುಗೊಂಡ ಡೈವೋರ್ಸ್‌ಗಳು, ಅದರಿಂದ ಭಾವಿ ಭಾರತದ ಪ್ರಜೆಗಳಾದ ಮಕ್ಕಳಿಗೆ ಆಗುತ್ತಿರುವ ಹಿಂಸೆ, ಅನ್ಯಾಯದವರಿಗಿನ ಎಲ್ಲಾ ಹಂತಗಳ ಸೂಕ್ಷ್ಮ ವಿಶ್ಲೇಷಣೆ ಇತ್ತು. ಲೇಖಕಿ ನಿವೇದಿತಾ ಎಂದಿತ್ತು.

ಪತ್ರಿಕೆ ಮುಖದ ಮೇಲೆ ಬಿಸಾಡಿದಂತಾಯಿತು. ಕವಿತಾಳ ಉದ್ದೇಶ ಈಗ ಅರ್ಥವಾಯಿತು. ಆದರೆ ನೀಲಿಮಾ ಮಾನಸಿಕವಾಗಿ ದುರ್ಬಲವಾದ ಹೆಣ್ಣಲ್ಲವೆಂದು ಈ ಯೂನಿವರ್ಸಿಟಿಯು ಗೋಡೆಗಳಿಗೂ ಕೂಡ ಗೊತ್ತಿತ್ತು.

ಪ್ಯೂನ್ ಕರೆದು ಅವನ ಕೈಗೆ ಕೊಟ್ಟು "ಇದು ಕವಿತಾ ಅವರಿಗೆ ಕೊಡು. ಥ್ಯಾಂಕ್ಸ್ ಹೇಳ್ದೇಂತ ತಿಳ್ಸು" ಹೇಳಿ ಕಳಿಸಿದಳು.

ಮೊದಲು ತನ್ನ ಬಗೆಗೆ ಯೋಚಿಸಿಕೊಳ್ಳಬೇಕು ನಂತರವೆ ಬೇರೆಯವರ ಸುದ್ದಿ. ಮಗುವೆ ಇಲ್ಲವೆಂದುಕೊಂಡರೇ ಅವಳಿಗೆ ಪ್ರಸನ್ನನ ಬಗ್ಗೆ ಯಾವ ಆಕರ್ಷಣೆಯೂ ಇಲ್ಲ. ಅವನು ಮಾಮೂಲೆ.

ಮಧ್ಯಾಹ್ನ ಲಂಚ್ ಬ್ರೇಕ್‌ನಲ್ಲಿ ಅವಳನ್ನು ಹುಡುಕಿಕೊಂಡು ಬಂದ ಪ್ರಸನ್ನ. "ಕ್ಯಾಂಟೀನ್‌ನಲ್ಲಿ ಕೂತು ಮಾತಾಡೋಣ" ಕರೆದೊಯ್ದ.

ಆ ಮನೆಯಲ್ಲಿ ಪರಕೀಯತೆ ಅವನನ್ನು ಬಹಳವಾಗಿ ಕಾಡುತಿತ್ತು. ಯಾರು ಅವನನ್ನು ಉತ್ಪ್ರೇಕ್ಷಿಸಿಲ್ಲವೆಂದುಕೊಂಡರೂ ಆದರಿಸಿರಲು ಇಲ್ಲ. ಅಡಿಗೆಯವ, ಕೆಲಸದವ ವಿಚಾರಿಸಿ ಅವನ ಕೆಲಸಗಳನ್ನು ಮಾಡಿ ಕೊಡು ತ್ತಿದ್ದರು.

ಅರುಂಧತಿ ನೋಡಿದರೂ ನೋಡದಂತಿರುತ್ತಿದ್ದರು. ಅಂದಿನ ಘಟನೆಯ ನಂತರ ನೀಲಿಮಾ ಪ್ರೀತಿ ತಣ್ಣಗಾಗಿತ್ತು. ಕೆಲವೊಮ್ಮೆ ದಿನಕ್ಕೊಂದು ಮಾತು ಕೂಡ ಆಡುತ್ತಿರಲಿಲ್ಲ.

ಕಾಫೀ ತರಿಸಿದ. ಕುಡಿದು ಮುಗಿಸಿದರೂ ಹೇಗೆ ಪ್ರಾರಂಭಿಸಬೇಕೆಂಬುದೆ ಗೊತ್ತಿರಲಿಲ್ಲ. ಇಡೀ ಕ್ಯಾಂಟಿನ್‌ನ ಪ್ರಾಧ್ಯಾಪಕ ಕೋಣೆಯಲ್ಲಿ ಅವರಿಬ್ಬರೆ ಇದ್ದಿದ್ದು.

"ಬೇರೆ ಮನೆ ಮಾಡೋಣಾಂತ ಇದ್ದೀನಿ" ಹೇಳಿದ.

ಅವನತ್ತ ಕಣ್ಣು ಕಿರಿದುಗೊಳಿಸಿ ನೋಡಿದಳು "ಮನೆ, ಯಾರಿ ಗೋಸ್ಕರ?" ಅವಳ ಪಾಲಿಗೆ ಆಶ್ಚರ್ಯಕರವಾದ ಸುದ್ದಿ "ನಮ್ಗೇ...." ಎಂದ.

"ನಮಗ್ಯಾತಕ್ಕೆ ಮನೆ ? ಈಗಿರೋ ಮನೆ ಏನಾಗಿದೆ ? ಅದ್ಕಿಂತ ದೊಡ್ಡ, ಅನುಕೂಲವಾದ ಮನೆ ಬೇಕಾ ?" ಇಷ್ಟವಾಗದ ವಿಷಯವೆಂದು ಸ್ವರವೇ ಸೂಚಿಸಿತು.

ಪ್ರಸನ್ನ ಒಂದೆರಡು ನಿಮಿಷ ಮೌನವಹಿಸಿದ.

"ನಮ್ದೇ ಆದ ಮನೆ ನಮ್ಗೇ ಬೇಕು. ಅಲ್ಲಿ ಸ್ವತಂತ್ರದ ಹಕ್ಕಿ ಗಳಾಗ್ತೀವಿ. ಇಲ್ಲಿ ಒಂದು ರೀತಿಯ ಬಂಧನದ ಅನುಭವ" ತೋಡಿಕೊಂಡ.

ತಾವು ಕುಳಿತಿರುವ ಪರಿಸರವನ್ನು ಮರೆತು ಟೇಬಲ್ ಮೇಲೆ ಗುದ್ದಿದಳು ನೀಲಿಮಾ "ಡ್ಯಾಮಿಟ್, ಅಲ್ಲಿ ನಿಮ್ಗೇನು ತೊಂದರೆ ಆಗಿದೆ ? ಅನಾವಶ್ಯಕ ವಾಗಿ ಮೂಗು ತೂರಿಸಿ ಮಾತಾಡಿಸುವಂಥ ಜನ ಕೂಡ ಅಲ್ಲಿಲ್ಲ, ಯು ಬಿಕೆವ್ ಎ ಮ್ಯಾಡ್" ಕೋಪದಿಂದ ಅವಳ ಮೂಗು ಕೆಂಪಾಗಿತ್ತು.

"ಬಿ ಕಾಮ್...." ಅವಳ ಕೈ ತಟ್ಟಿದ "ಅಲ್ಲಿ ನಂಗೇನು ತೊಂದರೆ ಇಲ್ಲ,

ಅಫ್‌ಕೋರ್ಸ್ ಒಪ್ಪಿಕೋತೀನಿ ಬದ್ಕಿನಲ್ಲಿ ಆಸಕ್ತಿ ಹುಟ್ಟೋಕೆ....ಇಂಥ ಬದಲಾವಣೆಗಳು ಬೇಕಾಗುತ್ತೆ. ನಿಧಾನವಾಗಿ ಯೋಚ್ಸು...." ಮೇಲೆದ್ದ.

ಹೊರ ಬಂದಮೇಲೆ ಇಬ್ಬರೂ ಬೇರೆ ಬೇರೆಯಾದರು.

* * * *

ಪಟೇಲ್ ಬೆಳಿಗ್ಗೆಯೇ ನಿವೇದಿತಾ ಹುಡುಕಿಕೊಂಡು ಬಂದ "ಕಂಗ್ರಾಜು ಲೇಷನ್, ನಿಮ್ಮ ಲೇಖನ ಓದ್ದೆ" ಎಂದಾಗ ಆವಳು ಬರೀ "ಥ್ಯಾಂಕ್ಸ್...." ಎಂದಳು. ಯಾಕೋ ಆ ಬಗ್ಗೆ ಮಾತಾಡಲು ಅವಳು ಇಚ್ಛಿಸಲಿಲ್ಲ.

ಕಾಫೀ ಮಾಡಿ ತಂದಾಗ ಅವಳ ಮುಖವನ್ನು ಅವಲೋಕಿಸಿದ. "ಯಾಕೋ ಡಲ್ಲಾಗಿ ಕಾಣ್ತೀರಲ್ಲ, ನಿವೇದಿತಾ" ಕೇಳಿದ. ಕಣ್ಣೊತ್ತಿಕೊಂಡು ನಸು ನಗೆ ಬೀರಿದಳು "ಏನಿಲ್ಲ, ಕೊಶ್ಚನ್ ಪೇಪರ್ ಸೆಟ್ ಮಾಡುವ ಕೆಲ್ಸ. ಮೇಡಮ್ ರೆಸ್ಟ್‌ನಲ್ಲಿದ್ರಿಂದ, ಸ್ವಲ್ಪ ನನ್ಮೇಲೆ ಹೊರೆ ಬಿದ್ದಿದೆ ಅಷ್ಟೆ" ಅಲ್ಲೇ ಕೂತಳು.

ಅಂದು ತಂದುಕೊಟ್ಟ ಸೀರೆಗಳನ್ನು ಅವಳು ಉಟ್ಟಿರಲಿಲ್ಲ. ಇಂದು ನೆನಪಿಸಿದ "ಆ ಸೀರೆ ಉಡಬಾರ್ದೂಂತ ತೀರ್ಮಾನ ಮಾಡಿದ್ದೀರಾ !" ಇಲ್ಲ ವೆಂದು ತಲೆಯಾಡಿಸಿದಳು "ಏನಿಲ್ಲ, ಅವಕಾಶ ಕೂಡಿ ಬಂದಿಲ್ಲ, ಅಷ್ಟೆ. ನೀವು ಅಷ್ಟು ಆತ್ಮೀಯತೆಯಿಂದ ತಂದುಕೊಟ್ಟವು ತುಂಬ ಬೆಲೆ ಬಾಳುವಂಥದ್ದು" ಅಂದು ತಮ್ಮ ಮದುವೆಯ ಪುರೋಹಿತ್ಯ ವಹಿಸಿದ ಅವನ ಬಗೆಗಿನ ಕೃತಜ್ಞತೆ ಇನ್ನು ಕಿಂಚಿತ್ ಕೂಡ ಕಡಿಮೆಯಾಗಿರಲಿಲ್ಲ.

ಅಲ್ಲೇ ಪಟೇಲ್ ಊಟ ಮಾಡಿದ.

"ನಿಮ್ಮನ್ನ ಶಾಲೆಗೆ ಬಿಟ್ಟು ಹೋಗ್ತೀನಿ" ಎಂದು ಬಲವಂತಪಡಿಸಿದ. "ಬೇಡ, ನಾನ್ಹೊಗ್ತೀನಿ" ನಿರಾಕರಿಸಿದಳು. ಆದರೆ ಪಟೇಲ್ ಒಪ್ಪಬೇಕಲ್ಲ.

ಗೋದಾವರಿಯ ಬಲವಂತವೂ ಸೇರಿದ್ದರಿಂದ ಅವಳು ಕೆಂಪು ಮಾರುತಿ ಹತ್ತಬೇಕಾಯಿತು. ಆದರೆ ಅದನ್ನ ಪ್ರಸನ್ನ, ನೀಲಿಮಾ ನೋಡಿದ್ದು ಮಾತ್ರ ಆಕಸ್ಮಿಕ.

ಬಹಳ ಸೂಕ್ಷ್ಮವಾಗಿ ನೀಲಿಮಾ ಪತಿಯ ಮುಖಭಾವವನ್ನು ಅವ ಲೋಕಿಸಿದಳು. ಸಹಿಸಲಾರದ ಅಸಹನೆ, ಕೋಪವನ್ನು ತುಟಿ ಕಚ್ಚಿ ನುಂಗು ತ್ತಿದ್ದ.

"ನಿಮ್ಮ ಫ್ರೆಂಡ್ ಪಟೇಲ್...." ಕಾರನ್ನು ನಿಲ್ಲಿಸಿಬಿಟ್ಟಳು. ಟರ್ನಿಂಗ್‌ನಲ್ಲಿ ಕಾರನ್ನ ಸ್ಟಾರ್ಟಿಂಗ್‌ನಲ್ಲಿಯೇ ನಿಲ್ಲಿಸಿಕೊಂಡು ಯಾರೊಂದಿಗೊ ಮಾತಾಡುತ್ತಿದ್ದ ಪಟೇಲ್ ನಗೆ ಹಾರಿಸಿ ಇಂಜಿನ್‌ನ ಸ್ತಬ್ಧಗೊಳಿಸಿದ "ಒಂದ್ನಿಮ್ಷ........ ನಿವೇದಿತಾ...." ಡೋರ್ ತಳ್ಳಿಕೊಂಡು ಇಳಿದು ಅವರ ಕಾರಿನ ಬಳಿಗೆ ಬರುವ ವೇಳೆಗೆ ನೀಲಿಮಾ ಕೂಡ ಡ್ರೈವರ್ ಸೀಟ್‌ನಿಂದ ಇಳಿದಳು. ಮಾನಸಿಕ ಕ್ಲೇಶ ಅನುಭವಿಸಿದವನು ಪ್ರಸನ್ನ ಮಾತ್ರ. ನಿವೇದಿತಾ ಶಾಂತವಾಗಿಯೇ ಇದ್ದಳು.

"ವ್ಹಾ...."ಡೋರ್‌ನೊಳಗೆ ಬಗ್ಗಿ ಪ್ರಸನ್ನನಿಗೊಂದು ಗುದ್ದಿದ "ಏನು ವಿಶೇಷ ?" ಕಣ್ಣೊಡೆದು. ನೀಲಿಮಾ ಅತ್ತ ತಿರುಗಿದ "ಸಾರಿ, ಇನ್ನೊಮ್ಮೆ ಸಿಕ್ತೀನಿ. ನಿವೇದಿತಾ ಶಾಲೆಗೆ ಹೊತ್ತಾಗುತ್ತೆ" ಹಿಂದಕ್ಕೆ ತಿರುಗುವ ವೇಳೆಗೆ ಅವಳೇ ಇಳಿದು ಬಂದು "ನಮಸ್ತೆ ಮೇಡಮ್" ಎಂದಳು. ಪರಿಚಿತರನ್ನು ಮಾತಾಡಿಸುವಂತಿತ್ತು.

"ಹೇಗಿದ್ದೀರಾ ?" ನೀಲಿಮಾ ಕೇಳಿದಳು.

"ಫೈನ್, ಶಾಲೆಗೆ ಹೊತ್ತಾಗುತ್ತೆ. ದಂಪತಿಗಳು ಒಮ್ಮೆ ಬನ್ನಿ" ಆರಾಮಾಗಿ ಆಹ್ವಾನಿಸಿದಳು. "ಷ್ಯೂರ್...." ನೀಲಿಮಾ ತಲೆದೂಗಿದಳು.

ಕಾರು ವಿರುದ್ಧ ದಿಕ್ಕಿನತ್ತ ನಡೆದವು. ಅವಳು ಉಟ್ಟ ಗುಲಾಬಿ ಬಣ್ಣದ ಸೀರೆ ದೆಹಲಿಯಿಂದ ಪಟೇಲ್ ತಂದುಕೊಟ್ಟಿದ್ದು. ಪ್ರಸನ್ನನ ಹಲ್ಲುಗಳು ಬಿಗಿದುಕೊಂಡವು.

ಸ್ಟೀರಿಂಗ್ ವ್ಹೀಲ್ ತಿರುಗಿಸುತ್ತ "ನಿವೇದಿತಾ ನಮ್ಮಿಬರನ್ನ ಒಮ್ಮೆ ಬರ ಹೇಳಿದ್ದಾರೆ ಎಂದು ಹೋಗೋಣ ?" ಕೇಳಿದಳು.

"ಫ್ರೀ ಇದ್ದಾಗ....ನೋಡೋಣ" ಮುಖ ತಿರುಗಿಸಿಕೊಂಡ. ಪಟೇಲ್ ಕಾಲು ಕಳೆದುಕೊಳ್ಳುವ ಬದಲು ಸತ್ತಿದ್ದರೇ ಚೆನ್ನಾಗಿತ್ತು. ಸ್ನೇಹವನ್ನ ಮರೆತು ಯೋಚಿಸಿದ್ದ ಇಂದು.

ಮನೆಯು ಅವನ ನಿರ್ಧಾರ ಬದಲಾಗಿರಲಿಲ್ಲ. ಒಂದು ಮನೆಗೆ ಅಡ್ವಾನ್ಸ್ ಕೂಡ ಕೊಟ್ಟುಬಿಟ್ಟಿದ್ದ. ಅದಕ್ಕಾಗಿಯೇ ನೀಲಿಮಾನ ಕರೆದುಕೊಂಡು ಹೋಗುತ್ತಿದ್ದ.

ಒಳ, ಹೊರಗೆಲ್ಲ ನೀಲಿಮಾ ನೋಡಿದಳು. ಅಚ್ಚುಕಟ್ಟಾಗಿಯೇ ಇತ್ತು. ಆದರೆ ಅವರಿರುವ ಮನೆಗೆ ಹೋಲಿಸಿಕೊಳ್ಳುವಂತಿರಲಿಲ್ಲ.

"ನಾಳೆನೇ ಶಿಫ್ಟ್ ಮಾಡಿಬಿಡೋಣ" ಅವಳ ಭುಜದ ಮೇಲೆ ಗದ್ದ ವನ್ನೂರಿ ಕೇಳಿದ. "ಹೇಗೆ—ಸಾಧ್ಯ ? ಪಪ್ಪ, ಮಮ್ಮಿ ಏನು ಹೇಳ್ಬಹ್ದು ? ಅಂಥ ಅಗತ್ಯ ತಾನೇ ಏನಿತ್ತು ?" ಅಂತು ತನಗೆ ಇಲ್ಲಿಗೆ ಬರುವ ಮನಸ್ಸಿಲ್ಲ ವೆಂದು ಹೇಳಿದಂತಾಯಿತು.

"ಮದ್ವೆ ಅಂತ ವಿಷ್ಯದಲ್ಲೇ ಅಪ್ರ ಒಪ್ಪಿಗೆಯ ಅಗತ್ಯವಿಲ್ಲಾಂದೆ ? ಅವ್ರು ಕೂಡ ಬೇಡಾನ್ನೋಕೆ....ಹೋಗೋಲ್ಲ. ದಂಪತಿಗಳಿಗೆ ಪ್ರೈವೆಸ್ಸಿ ಬೇಕು" ನನ್ನ ಸೊಂಟವ ಸುತ್ತು ಕೈ ಹಾಕಿದ. ಮೆಲ್ಲಗೆ ಸರಿಸಿದಳು.

ಮತ್ತೊಮ್ಮೆ ಮನೆಯನ್ನು ನೋಡಿದಳು "ನಿಮ್ಮ ಲಗೇಜ್‌ನ ಬೇಕಾದ್ರೆ ಶಿಫ್ಟ್ ಮಾಡ್ಕೊಳ್ಳಿ. ಯಾವ್ದೇ ಕಾರಣಕ್ಕೆ ಪಪ್ಪ, ಮಮ್ಮಿ ಮನಸ್ಸು ನೋಯಿಸೋಕೆ ಇಷ್ಟಪಡೋಲ್ಲ." ಹೆಚ್ಚು ಸ್ಪಷ್ಟವಾಗಿಯೇ ಇತ್ತು ಅವಳ ಉದ್ದೇಶ.

"ಅಂತು ನೀನು ಇಲ್ಲಿಗೆ ಬರೋಲ್ಲ" ಎಂದ ತೀಕ್ಷ್ಣವಾಗಿ.

"ಹಾಗೇನೂ ಇಲ್ಲ. ಹೆಚ್ಚು ದೂರವು ಇಲ್ಲ. ನೀವು ಅಲ್ಲಿಗೆ ಬರ್ಬಹ್ದು. ನಾನು ಇಲ್ಲಿಗೆ ಬರ್ಬಹ್ದು" ತೇಲಿಸಿಬಿಟ್ಟಳು.

ಕಡೆಗೆ ಒಂದುತೀರ್ಮಾನಕ್ಕೆ ಬಂದ "ಆಗಾಗ ದಿನಕ್ಕೊಮ್ಮೆ ಕೂಡ ಅಲ್ಲಿಗೆ ಹೋಗ್ಬರೋಣ. ಅವ್ರಿಗೂ ಒಂದು ರೀತಿಯ ಛೇಂಜ್. ಮಗಳು ಮನೆಗೆ ಬಂದಿರ್ಲಿ. ನನ್ನ ಲಗೇಜ್ ಜೊತೆ ನಿನ್ದು ಇಲ್ಲಿಗೆ ಶಿಫ್ಟ್ ಆಗ್ಲಿ" ಅವಳೇನೂ ಹೇಳಲಿಲ್ಲ.

ಆದರೆ ಮಾರನೆಯ ದಿನ ಪ್ರಸನ್ನನ ವಸ್ತುಗಳು ಮಾತ್ರ ಪ್ಯಾಕ್‌ಆಗಿತ್ತು. ನಿವೇದಿತಾ ಮನೆಯಿಂದ ತಂದಿದ್ದು. ಆಗಾಗ ಕೊಂಡು ತಂದ ಬಟ್ಟೆಗಳು ಮಾತ್ರ ಅದಕ್ಕೆ ಸೇರ್ಪಡೆಯಾಗಿತ್ತು.

ನೀಲಿಮಾ ಅತ್ತ ನೋಡಿದ. "ಪ್ರತ್ಯೇಕವಾಗಿ ವಾಸಿಸುವ ಪತಿ, ಪತ್ನಿ ಯರ ಸಂಬಂಧಕ್ಕೆ ಅರ್ಥವೇನು ?" ಅವಳೇನು ಉತ್ತರಿಸಲಿಲ್ಲ. ನಿರ್ಲಕ್ಷವೆಂದು ಕೊಂಡ.

ಲಗೇಜನ್ನ ನೀಲಿಮಾ ಮನೆಯ ಆಳು ತಂದು ಜೋಡಿಸಿಕೊಟ್ಟು ಹೋದ. ನಿಶ್ಚಿಂತೆಯಿಂದ ಜದ್ದ ಬದುಕನ್ನ ಗೊಂದಲದೊಳಕ್ಕೆ ಕೆಡವಿಕೊಂಡ

ಹಾಗಿತ್ತು. ಆಹಾರದ ತಯಾರಿಕೆಯಿಂದ ಹಿಡಿದು ಸಮಸ್ತವನ್ನು ಇವನೇ ನಿರ್ವಹಿಸಬೇಕಿತ್ತು. ಹೇಗೆ ?

ಮರುದಿನ ಬೆಳಿಗ್ಗೆ ಎದ್ದಾಗ ಸ್ವತಂತ್ರದ ಗಾಳಿ ಕುಡಿದರೂ ಶೂನ್ಯ ಆವಾರಿಸಿತ್ತು ಎಲ್ಲೆಡೆ. ಮನೆಯಲ್ಲಿ ಏನೂ ಇರಲಿಲ್ಲ. ಅಡಿಗೆಗೆ ಬೇಕಾದ ಪಾತ್ರೆಗಳನ್ನು ಕೂಡ ಹೋಗಿ ಕೊಳ್ಳಬೇಕಿತ್ತು.

ಊಟ, ತಿಂಡಿಯೆಲ್ಲ ಮೆಸ್‌ನಲ್ಲಿ ಮಾಡಲು ಇಚ್ಛಿಸಿದ.

ಕಾಲೇಜಿಗೆ ಹೊರಟು ಗೇಟಿನಿಂದ ಹೊರಗೆ ಬಂದಾಗ ನೀಲಿಮಾ ಫಿಯೆಟ್ ಕಾರು ಬಂದು ನಿಂತಿತು "ಬನ್ನಿ....ಬನ್ನಿ...." ಡೋರ್ ತಳ್ಳಿದಳು. ವಿರಸ ಬೇಕಿರಲಿಲ್ಲ, ಹತ್ತಿ ಕೂತ. ಕಾರಿನ ಚಕ್ರಗಳು ಮುಂದಕ್ಕೆ ಉರುಳಿತು. ಅವಳೇನೂ ವಿಚಾರಿಸಲೂ ಹೋಗಲಿಲ್ಲ.

"ಸಂಜೆ ಮನೆಗೆ ಬಾ...." ಹೇಳಿದ.

"ಸೋ ಸಾರಿ, ಲೇಡಿಸ್ ಕ್ಲಬ್ ವಾರ್ಷಿಕೋತ್ಸವಕ್ಕೆ ಛೀಫ್ ಗೆಸ್ಟ್ ಆಗಿ ಇನ್ವೈಟ್ ಮಾಡಿದ್ದಾರೆ" ವಿದೇಶಿ ಪರ್‌ಫ್ಯೂಮ್ ಸುವಾಸನೆಯಂತೆ ನವಿರಾಗಿ ಹೇಳಿದಳು.

ಕಾರಿಡಾರ್‌ನಲ್ಲಿ ಇಬ್ಬರು ಬೇರೆ ಬೇರೆಯಾದರು. ಮಧ್ಯಾಹ್ನ ಹೋಟೆಲ್‌ನಲ್ಲಿ ಊಟ ಮಾಡಿದರೂ ಮನೆಯ ಎಲ್ಲಾ ಕೆಲಸಗಳು ತನ್ನಿಂದ ಸಾಗದೆನಿಸಿತು ಅವನಿಗೆ.

ಪಟೇಲ್‌ನ ಮನೆಗೆ ಹೋಗಲು ಕೂಡ ಇರುಸು ಮುರುಸು. ಆದರೆ ರಾತ್ರಿ ಆವನಾಗಿಯೇ ಹುಡುಕಿಕೊಂಡು ಬಂದ.

"ನಂಗೆ ಇನ್‌ಫಾರ್ಮ್ ಮಾಡದೇನೇ....ಬೇರೆ ಮನೆ ಮಾಡಿಬಿಟ್ಟಿದ್ದೀಯ? ಛೇಡಿಸಿದವನು ಮೆಲ್ಲಗೆ ಪ್ರಶ್ನಿಸಿದ "ಎಲ್ಲಿ....ನೀಲಿಮಾ ?" ಕಸಿವಿಸಿಯಾಯಿತು ಪ್ರಸನ್ನಗೆ "ಲೇಡಿಸ್ ಕ್ಲಬ್ ವಾರ್ಷಿಕೋತ್ಸವಕ್ಕೆ ಹೋಗಿದ್ದಾಳೆ. ತುರ್ತಾಗಿ ಒಂದು ಹೆಲ್ಪ್ ಬೇಕು. ಅಮೀರ್‌ನ ಕೆಲವು ದಿನ ಇಲ್ಲಿಗೆ ಕಳ್ಸು"

ಪಟೇಲ್ ನೆಲದಲ್ಲಿ ಕೂತು ಎದೆಯ ಮೇಲೆ ಕೈಯಿಟ್ಟುಕೊಂಡ. ಆಸನಗಳು ಇರಲಿಲ್ಲ ಅಲ್ಲಿ. ಇವನೇನು ನೀಲಿಮಾ ಮನೆಗೆ ಫರ್ನೀಚರ್‌ನ ಒಯ್ದಿರಲಿಲ್ಲ. ಅಂಥದ್ದರಲ್ಲಿ ಇವನ ಲಗೇಜ್‌ನ ಜೊತೆ ಹೇಗೆ ಅವು ಸೇರ್ಪಡೆಯಾದೀತು ?

"ನಾನೇನು ಮಾಡ್ಲೀ" ಎಂದವನು "ಓಕೇ, ನಾನು ಮ್ಯಾನೇಜ್

ಮಾಡ್ಕೋಬಲ್ಲೆ. ಈಗ ನಿಂಗೆ ತುರ್ತಾಗಿ ಬೇಕಾಗಿರೋದು ನನ್ನ ಹೆಲ್ಪ್. ಎಲ್ಲಾ ಸಾಮಾನು ತಂದು ಹಾಕಿದ್ದರೆ, ಅಮೀರ್ ಬಂದು ಜೋಡಿಸಿಯಾನು ವಾಚ್‌ನತ್ತ ನೋಡಿದವನು "ಈಗಿನ್ನು ಎಂಟು ಗಂಟೆ....ಹರಿ ಅಪ್....ಒಂಭತ್ತ ರೊಳಗೆ ಸಾಕಷ್ಟು ತರಬಹುದು" ಅವನೇ ಬಾಗಿಲಿಗೆ ಬೀಗ ತಗುಲಿಸಿ ಅವನನ್ನು ಎಳೆದೊಯ್ದ.

ಒಂದಷ್ಟು ಫರ್ನೀಚರ್ ಬುಕ್ ಮಾಡಿ ಪಾತ್ರೆ, ಪಡಗ ಎಲೆಕ್ಟ್ರಿಕ್ ಸ್ಟೋವ್ ಕೊಂಡು ಹತ್ತಕ್ಕೆ ಮನೆ ಸೇರಿದರು.

"ನೀಲಿಮಾ ಇನ್ನೂ ಬಂದೆ... ಇಲ್ವಲ್ಲ" ಅತ್ತಿತ್ತ ಕಣ್ಣಾಡಿಸಿದ. ಪ್ರಸನ್ನ ಮೌನವಹಿಸಿದ ಅಷ್ಟೆ "ನೀನು ಬೇರೆ ಮನೆ ಮಾಡಿರೋದು ನೀಲಿಮಾನೇ ಹೇಳಿದ್ದು. ಸೋಮೇಶ್ವರ್ ಮನೆಗೆ ಹೋಗಿಯೇ ಇಲ್ಲಿಗೆ ಬಂದಿದ್ದು" ವಿವರಿಸಿದ.

ಅಂದರೆ ನೀಲಿಮಾ ಯಾವ ಲೇಡಿಸ್ ಕ್ಲಬ್‌ಗೂ ಹೋಗಿರಲಿಲ್ಲ. ಬರಲಿಷ್ಟವಿಲ್ಲದೆ ಸುಳ್ಳು ಹೇಳಿದ್ದಾಳೆ. ಪಟೇಲ್ ಮುಂದೆ ತಲೆ ಎತ್ತಲಾಗ ಲಿಲ್ಲ ಅವನಿಗೆ.

"ಬೆಳಗ್ಗೆ ಅಲ್ಲಿಗೆ ಬ್ರೇಕ್‌ಫಾಸ್ಟ್‌ಗೆ ಬಾ. ನನ್ನ ಸಹಾಯ ಇನ್ನ ನಿಂಗೆ ಬೇಕು" ಬೀಳ್ಕೊಟ್ಟು ಕಾರು ಹತ್ತಿದ.

ಪಟೇಲ್ ಮನದಲ್ಲಿಯೇ ನಕ್ಕ. ಅವನ ಕಾರಿನಲ್ಲಿ ನಿವೇದಿತಾನ ನೋಡಿದ ಮೇಲೆ ಗೆಳೆಯನ ವರ್ತನೆಯೇ ಬದಲಾಗಿದೆಯೆನ್ನುವುದು ಅವನ ಅರಿವಿಗೆ ಬಂದಿತ್ತು. ಲಕ್ಷಿಸಬೇಕಾದ ವಿಷಯವೇನು ಅಲ್ಲ. ಆದರೆ ಪ್ರಸನ್ನನ ಗುಡ್ ಫ್ರೆಂಡ್, ವೆಲ್‌ವಿಷರ್ ಅವನು. ಮಾನಸಿಕವಾಗಿ ತೊಳಲಾಡುವುದು ಅವನಿಗಿಷ್ಟವಿಲ್ಲ.

ಇವನು ಹೋದಾಗ ಸೋಮೇಶ್ವರ್ ನ್ಯಾಯ ಒಪ್ಪಿಸಿದ್ದರು. "ಇಲ್ಲೇನು ತೊಂದರೆಯಾಗಿತ್ತು ನಿಮ್ಮ ಸ್ನೇಹಿತನಿಗೆ ? ಬೇರೆ ಮನೆಯ ಅಗತ್ಯ ವೇನು ?" ಸ್ವಲ್ಪ ಬೇಸರ ಕಂಡುಬಂತು ಅವರ ಸ್ವರದಲ್ಲಿ.

ಕಾಲು ಮೇಲೆ ಕಾಲು ಹಾಕಿ ಕೂತು ಇಂಗ್ಲೀಷ್ ಮ್ಯೂಜಿಕ್ ಕೇಳುತ್ತ ಕೂತಿದ್ದ ನೀಲಿಮಾ ಕಡೆ ನೋಡಿದ. ನಿರ್ಲಿಪ್ತವಾಗಿದ್ದಳು.

"ಈ ಪ್ರಶ್ನೆಗಳ್ನ ಪ್ರಸನ್ನನಿಗೆ ಹಾಕ್ಬೇಕಿತ್ತು" ಬಾಣವನ್ನ ಅವರಿಗೆ ಹಿಂದಿರುಗಿಸಿದ "ನಮ್ಗೆ ಅಂಥ ಅವಕಾಶವೇ ಇಲ್ವಲ್ಲ. ಮನೆ ಮಾಡೋಕೆ

ಮೊದ್ಲು ನೀಲಿಮಾ ಕೂಡ ಸುಳಿವು ಕೊಡ್ಲಿಲ್ಲ" ಅವರ ಪೇಚಾಟ ತೀರಾ ಪ್ರಾಮಾಣಿಕವಾಗೇನೂ ಕಾಣಲಿಲ್ಲ.

ನೀಲಿಮಾ ತಟಸ್ಥವಾಗಿದ್ದಳು. ಈ ಮಾತುಕತೆಗಳಲ್ಲಿ ಒಂದು ರೀತಿಯಲ್ಲಿ ದಿವ್ಯ ನಿರ್ಲಕ್ಷ.

ಬೆಳಿಗ್ಗೆ ಬಲವಂತಕ್ಕೆ ದೂಡಿಸಿಕೊಂಡಂತೆ ಬಂದಂತಿದ್ದ ಪ್ರಸನ್ನ.

"ಕಮಾನ್....ಯಾರ್" ಭುಜ ಬಳಸಿಯೇ ಒಳಗೆ ಕರೆದೊಯ್ದು. ಮಾತಿಲ್ಲ, ಕತೆಯಿಲ್ಲ ಪ್ರಸನ್ನನದು.

ಭರ್ಜರಿ ಬ್ರೇಕ್‌ಫಾಸ್ಟ್‌ನ ನಂತರ ಅವನನ್ನು ಕಾಂಪೌಂಡ್‌ನೊಳಕ್ಕೆ ಕರೆದೊಯ್ದು. ಅತ್ಯಂತ ಸುಂದರವಾಗಿದ್ದ ಗುಲಾಬಿಯ ಕುಂಡದ ಬಳಿ ನಿಲ್ಲಿಸಿದ ಪ್ರಸನ್ನನನ್ನು.

ಅತ್ಯಂತ ಮೃದುವಾಗಿ ಗುಲಾಬಿಯ ಕಾಂಡವನ್ನು ಹಿಡಿದುಕೊಂಡ "ಈ ಹೂ ಎಷ್ಟೊಂದು ಚೆನ್ನಾಗಿದೆ. ಇದಕ್ಕೆ ಸುಂದರವಾದ ಬಣ್ಣವಿದೆ. ಅಪರೂಪವಾದ ಆಕರ್ಷಣೆ ಇದೆ. ಬೆಸೆದ ಪಕಳೆಗಳ ಸುಂದರ ವಿನ್ಯಾಸ ಮನ ಸೆಳೆಯುವಂತಿದೆ. ನಾನು ಇದ್ನ ತುಂಬ ಪ್ರೀತಿಸ್ತೀನಿ. ನೋಡಲು ಬಯಸ್ತೀನಿ. ಆರಾಧಿಸ್ತೀನಿ. ಅದು ಕಾಲಕ್ಕೆ ಮುನ್ನ ಬಾಡಬಾರ್ದು. ನೀರಿನ ಜೊತೆ ಗೊಬ್ಬರ, ಉತ್ತಮ ಪರಿಸರ ಒದಗಿಸಲು ಶ್ರಮಿಸ್ತೀನಿ. ಇಷ್ಟಕ್ಕೆಲ್ಲ ಕಾರಣ ಪ್ರೀತಿ ಇರ್‍ಬಹ್ದು. ಆದರೆ ಅದ್ನ ಕಿತ್ತೋಕ್ಕಾಗ್ಲಿ, ಕನಿಷ್ಟ ಮುಟ್ಟೋಕ್ಕಾಗ್ಲಿ ನಾನು ಬಯಸೋದಿಲ್ಲ. ಅದು ಪ್ರಕೃತಿಯ ಸುಂದರ ಸೃಷ್ಟಿ" ಅರ್ಥಗರ್ಭಿತವಾಗಿ ಹೇಳಿದ.

ಅರ್ಥೈಸಿಕೊಳ್ಳಲು ಪ್ರಸನ್ನಗೆ ಕಷ್ಟವಾಯಿತು.

ಅಷ್ಟಕ್ಕೆ ಸುಮ್ಮನೇ ಬಿಡಲಿಲ್ಲ. ಆರ್ಮಿಯಿಂದ ರಿಟೈರ್ಡ್ ಆಗಿ ಹಿಂದಿರುಗುವಾಗ ಕಲಾತ್ಮಕ ಕುಸುರಿ ಕೆಲಸ ಮಾಡಿದ ಒಂದು ಜೊತೆ ಜ್ಯೋತಿಗಳನ್ನು ಅವನಿಗೆ ಪ್ರೆಸೆಂಟ್ ಮಾಡಿದ್ದರು. ಎಂದೂ ಅವನು ಅದನ್ನ ಉಪಯೋಗಿಸಿರಲಿಲ್ಲ.

ಇಂದು ಅವೆರಡನ್ನು ತಂದು ಅವನ ಮುಂದಿಟ್ಟವನು ಬತ್ತಿ ಹೊಸೆದು ತುಪ್ಪ ಹಾಕಿ ಹಚ್ಚಿದ. ಜ್ಯೋತಿಯ ನಿಲುವು ಸದೃಢವಾಗುವವರೆಗೂ ಕಾದ.

"ಈ ದೀಪದ ಬೆಳಕು ನೋಡು. ಪ್ರಕಾಶಮಾನವಾಗಿದ್ದರೂ

ಎಷ್ಟೊಂದು ಶಾಂತವಾಗಿದೆ. ಕಣ್ಣುಗಳಿಗೆ ಕೂಡ ತಂಪು. ಯಾರ ಆರೋಗ್ಯಕ್ಕೂ ಹಾನಿಯಿಲ್ಲ. ಅದರ ಸುತ್ತಮುತ್ತಲಿನ ಜನ ಅದೃಷ್ಟವಂತರು. ಕತ್ತಿತ್ತಿ ಅದರ ಪ್ರಕಾಶಮಾನವನ್ನು ಅನುಭವಿಸಬಹುದು. ಆದರೆ ಬೆರಳು ತಾಗಿಸಿದರೇ ಸುಟ್ಟು ಹೋಗುತ್ತೆ. ಯು ಅಂಡರ್‌ಸ್ಟ್ಯಾಂಡ್?" ಹುಬ್ಬು ಕುಣಿಸಿ ಕೇಳಿದ.

ಅರೆ ಬರೆ ಅರ್ಥವಾದರೂ ಒಂದು ರೀತಿಯ ಗೊಂದಲದಲ್ಲಿದ್ದ.

"ದೀಪ ಅತ್ಯಂತ ಪವಿತ್ರವಾದ್ದುದ್ದು. ಹೂ ಪ್ರಕೃತಿಯ ಅನನ್ಯ ಕೊಡುಗೆ. ಅದನ್ನು ಮುಟ್ಟುವ ಮೂರ್ಖತನವನ್ನು ಕೂಡ ಈ ಪಟೇಲ್ ಮಾಡೋಲ್ಲ. ಇನ್ನು ನಿಶ್ಚಿಂತೆಯಿಂದ ಇರು." ಅವನ ಕೈಮೇಲೆ ಕೈಯಿಟ್ಟು ನಗೆ ಬೀರಿದ.

ನೋವು, ವೇಗನೆ, ಪಶ್ಚಾತ್ತಾಪದಿಂದ ಕಂಗೆಟ್ಟು ಹೋದ ಪ್ರಸನ್ನ. ಇನ್ನೂ ಮುಂದಿದ್ದ ದೀಪಗಳು ಅತ್ಯಂತ ಶಾಂತವಾಗಿ ಉರಿಯುತ್ತಿದ್ದವು.

ನಾರ್ಮಲ್ ಸ್ಥಿತಿಗೆ ಬಂದ ಮೇಲೆ ಕೇಳಿದ "ಬೇರೆ ಮನೆ ಮಾಡೋದು ನೀಲಿಮಾಗೆ ಇಷ್ಟವಿರಲಿಲ್ವಾ?" ಪ್ರಸನ್ನ ತಲೆ ಕೊಡವಿದ "ಬಿಡು ಪಟೇಲ್, ನನ್ನ ಅಸ್ತಿತ್ವನ ಪೂರ್ತಿ ಕಳೆದುಕೊಂಡು ಬದುಕೋಕೇ ನನ್ನಿಂದ ಆಗ್ಲಿಲ್ಲ, ಒಳ್ಳೆ ಊಟ, ತಿಂಡಿ ಇತರೇ ಅನುಕೂಲಗಳು ಸಿಕ್ಕರೂ ಹಣ ಕೊಡದ ಒಬ್ಬ ಪೇಯಿಂಗ್ ಗೆಸ್ಟ್ ಅಷ್ಟೆ. ನೀಲಿಮಾ, ನಾನು ಬೇರೆ ಇರೋದು ಇಷ್ಟ ವಾಯ್ತು. ಅವಳದು ಕೂಡ ವಿರೋಧವಿಲ್ಲ. ತಾಯ್ತಂದೆಯರ ಮನಸ್ಸು ನೋಯಿಸ್ಲಾರ್ದೇ ಅಲ್ಲಿದ್ದಾಳೆ. ಎಷ್ಟು ದಿನ ಇರೋಕೆ....ಸಾಧ್ಯ?" ನೀಲಿಮಾ ತನ್ನ ಬಳಿ ಬರಬಹುದೆಂಬ ನಂಬಿಕೆಯ ಕನಿಷ್ಠ ಪಾಲು ಅವನಿಗೆ ಇದ್ದಿದ್ದು.

"ಯು ಆರ್ ಕರೆಕ್ಟ್, ಆಲ್ ದಿ ಬೆಸ್ಟ್...." ಕೈ ಕುಲುಕಿದ. ನಾಲ್ಕು ದಿನ ಅಮೀರ್‌ನ ಅಲ್ಲಿರಲು ಒಪ್ಪಿಸಿದ. ಊಟ, ತಿಂಡಿಗೆ ಅಲ್ಲೇ ಬರುವುದಾಗಿ ಪಟೇಲ್ ಕೂಡ ಭರವಸೆ ಕೊಟ್ಟ.

ಇಡೀ ವಾರ ಕಾದ ಪ್ರಸನ್ನ. ನೀಲಿಮಾ ಇತ್ತ ಬರಲಿಲ್ಲ. ಕಾಲೇಜಿನಲ್ಲಿ ಸಿಕ್ಕಾಗ ಮಾತಾಡಿಸುತ್ತಿದ್ದಳು. ಎರಡು ಸಲ ಕಾರಿನಲ್ಲಿ ತಂದು ಅವನನ್ನು ಡ್ರಾಪ್ ಮಾಡಿ ಹೋಗಿದ್ದಳು.

ಅಂದು ಸಾಯಂಕಾಲ ಕಾನ್ವೆಂಟ್‌ಗೆ ಹೋಗಿ ಅಲೋಕ್‌ನ ಮನೆಗೆ ಕರೆತಂದ. ಅವನ ವಿರೋಧ ಮೊದಲು ಇದ್ದೇ ಇತ್ತು. ಬಹಳ ಓಲೈಸಿದ ನಂತರವೇ ಅವನು ಕಾಂಪೌಂಡ್‌ನೊಳಕ್ಕೆ ಬಂದಿದ್ದು.

"ಈ ಮನೆ ಯಾರ್ದು ?" ಕೇಳಿದ.

"ನಮ್ದೇ...." ತಲೆ ಸವರಿ ಒಳಗೆ ಕರೆದುಕೊಂಡು ಬಂದು ಮುಂದಿನ ರೂಮನ್ನು ತೋರಿಸಿದ "ಈ ಕೋಣೆ ನಿಂಗೇ ಇರಲಾ?" ಕೇಳಿದ. ಅಲೋಕ್‌ನ ಮುಖ ಬಿಗಿದು ಕೊಂಡಿತು. "ನಂಗೆ ಬೇಡ, ಮಮ್ಮಿ ಜೊತೆಯಲ್ಲಿ ಇರ್ತೀನಿ."

ಮಗನ ಮಾತಿಗೆ ಪ್ರಸನ್ನ ಕೋಪಗೊಳ್ಳಲಿಲ್ಲ. ಅರ್ಧ ಗಂಟೆಯ ನಂತರ ಅವನನ್ನು ತಂದು ಮನೆಯ ಬಳಿ ಇಳಿಸಿ ಹೋದ.

ಅಮೀರ್ ಹೊರಟುಹೋದ ಮೇಲೆ ಒಬ್ಬ ಹುಡುಗನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ. ಅವನು ಹೊರಗಿನ ಕೆಲಸ ಮಾಡಿದರೇ ಊಟ, ತಿಂಡಿ ಯಲ್ಲಿ ಇವನೇ ಮಾಡುತ್ತಿದ್ದ. ಮೊದಮೊದಲು ಹಿಂಸೆಯೆನಿಸಿದರೂ ಆಮೇಲೆ ಸರಿಹೋಯಿತು.

ಅಂದು ಭಾನುವಾರವಾದ್ದರಿಂದ ಬೇಗ ಎದ್ದವನೇ ಆ ಮನೆಗೆ ಬಂದ. ವಾಕ್ ಹೊರಡಲು ಸಿದ್ಧವಾಗಿದ್ದ ಸೋಮೇಶ್ವರ್, ಅರುಂಧತಿ ಅಷ್ಟೇನು ಪ್ರಸನ್ನರಾಗಿ ಕಾಣದಿದ್ದರೂ ನಗು ನಗುತ್ತಲೇ ಸ್ವಾಗತಿಸಿದರು.

"ಇಲ್ಲೇನು ತೊಂದರೆ ಆಗಿತ್ತು ? ಬೇರೆ ಮನೆ ಮಾಡಿದ್ದ ನಮಗೆಲ್ಲ.... ಬೇಸರವೇ" ಅರುಂಧತಿ ಮಾತಾಡಿದರು. ಸೋಮೇಶ್ವರ್ ಕೂಡ ಒಂದು ಮಾತು ಸೇರಿಸಿದರು "ನಮ್ಗೇ ಸುಳಿವೇ ಸಿಕ್ಲಿಲ್ಲ. ಇಲ್ದಿದ್ರೆ ನಾವೇ........ ವಿರೋಧಿಸುತ್ತಿದ್ವಿ."

ಸ್ವಲ್ಪ ಮುಖ ತಗ್ಗಿಸಿದ "ಮನೆ ತುಂಬ ದೂರವೇನು ಇಲ್ಲ. ಮಗಳ ಮನೆಗೆ ಆಗಾಗ ಬಂದು ಇರ್ಬಹ್ದು. ನಿಮ್ಗೂ ಒಂದು ರೀತಿಯ ಬದಲಾವಣೆ. ಆ ಮನೆ ಬೇರೆಯೆಂದೇನೂ ಭಾವಿಸ್ಬೇಡಿ. ಅದು ನಿಮ್ಮ ಮನೆಗೇ" ವಿಶ್ವಾಸ ದಿಂದ ಹೇಳಿದ.

"ಹೌದೌದು....ನಾವು ವಾಕ್ ಮುಗ್ಸಿಕೊಂಡ್ಬರ್ತೀವಿ. ನೀಲಿಮಾ ಎದ್ದಿರಬೋದು, ನೋಡಿ" ಹೊರಟೇ ಬಿಟ್ಟರು.

ಅಡಿಗೆಯುವನು ಮಾತಾಡಿಸಿ ಕಾಫೀ ತಂದುಕೊಟ್ಟ. ಒಳಗಿನ ಬೆಡ್ ರೂಂ ಬೋಲ್ಟ್ ಹಾಕಿದ್ದುದ್ದರಿಂದ ಹೊರಗಡೆಗೆ ಕಾಯುತ್ತ ಕೂತ. ಅರ್ಧ ಗಂಟೆಯ ನಂತರ ಮೆಲ್ಲಗೆ ಬಾಗಿಲ ಮೇಲೆ ಸದ್ದು ಮಾಡಿದ.

ಐದು ನಿಮಿಷದ ನಂತರ ನೀಲಿಮಾ ಬಂದು ಬಾಗಿಲು ತೆಗೆದಳು "ಗುಡ್ ಮಾರ್ನಿಂಗ್...." ಎಂದ. ನಿದ್ದೆಯ ಮಂಪರಿನಿಂದ ಪೂರ್ತಿ ಹೊರಕ್ಕೆ ಬಂದಳು "ಪ್ರಸನ್ನ, ವೆರಿ ಗುಡ್ ಮಾರ್ನಿಂಗ್....ಬನ್ನಿ....ಒಳ್ಗೇ" ಬಾತ್‌ರೂಂ ಹೊಕ್ಕಳು.

ಹತ್ತು ನಿಮಿಷದ ನಂತರ ಫ್ರೆಷಾಗಿ ಬಂದಳು. ಇನ್ನಷ್ಟು ಕಿರಿಯ ಳನ್ನು ಕಂಡಂತಾಯಿತು ಅವನಿಗೆ. ಭುಜವನ್ನು ತಾಕುತ್ತಿದ್ದ ಕೂದಲು ಸ್ವಲ್ಪ ಮೇಲಕ್ಕೆಯೇ ಕತ್ತರಿಸಲ್ಪಟ್ಟಿತ್ತು.

ಭಾರವಾದ ರೆಪ್ಪೆಗಳನ್ನು ಕೈನಿಂದ ಒತ್ತಿಕೊಳ್ಳುತ್ತ "ರಾತ್ರಿ ಮಲಗಿದ್ದು ಲೇಟು. ವ್ಯಾಯಾಮಾ ಮಾಡೋಕೆ ಕೂಡ ಏಳ್ಲಿಲ್ಲ. ಕಾಫೀ ಆಯ್ತಾ ?" ಅಡಿಗೆಯುವನು ತಂದಿಟ್ಟ ಕಾಫೀಯ ಒಂದು ಕಪ್‌ನ ಅವನತ್ತ ಸರಿಸಿದಳು. "ಈಗ ಆಯ್ತು, ಬೇಡ...." ನಿರಾಕರಿಸಿದ.

ಪೇಪರ್ ನೋಡುತ್ತ ಕಾಫೀ ಕುಡಿದು ಮುಗಿಸಿದಳು.

"ಮನೆಗೆ ಬಂದೇ ಇಲ್ಲ" ನೆನಪಿಸಿದ.

ಕೂದಲನ್ನು ಬೆರಳುಗಳಿಂದ ಸರಿಪಡಿಸಿಕೊಳ್ಳುತ್ತ "ಎಲ್ಲಿ ಫ್ರೀನೇ ಇಲ್ಲ. ಸಾಧ್ಯವಾದ್ರೆ....ಸಂಜೆ ಬರೋಣಾ ಅಂದ್ಕೊಂಡಿದ್ದೆ." ವಿಷಯವನ್ನು ಹಗುರ ವಾಗಿ ತಗೊಂಡಳು.

"ಈಗ್ಲೇ....ಹೋಗೋಣ" ಉತ್ಸಾಹ ತೋರಿದ.

"ಈಗ್ಲಾ, ಮೈಗಾಡ್....ಸ್ನಾನ ಇಲ್ಲ. ಒಂದು ಆರ್ಟಿಕಲ್ ರೆಡಿ ಮಾಡಿ ಕೊಡ್ಬೇಕಿತ್ತು. ರಾತ್ರಿ ಸರ್ರ್ಯಾಗಿ ನಿದ್ದೆ ಇಲ್ಲದಿದ್ದರಿಂದ ಒಂದಿಷ್ಟು ರೆಸ್ಟ್ ಬೇಕು" ಬಡಬಡಿಸಿದಳು.

ನೀಲಿಮಾ ಕೈಯನ್ನು ತನ್ನ ಕೈಯೊಳಗೆ ತಗೊಂಡ್ ತುಟಿಗೊತ್ತಿಕೊಂಡ "ಇವೆಲ್ಲ ಅಲ್ಲೇ ಆಗುತ್ತೆ. ಕೆಲ್ಸಕ್ಕೆ ಒಬ್ಬ ಹುಡ್ಗ ಕೂಡ ಇದ್ದಾನೆ. ಯಾವ್ದೇ ಪ್ರಾಬ್ಲಮ್ ಇಲ್ಲ. ಹೋಗೋಣ....ನಡೀ...." ಹೊಸ ಅರ್ಥದ ಬದುಕಿನ

ಅನ್ವೇಷಣೆ ಅವನಲ್ಲಿ ಇನ್ನೂ ತಗ್ಗಿರಲಿಲ್ಲ. ಅಥವಾ ಅದನ್ನು ಜೀವಂತವಾಗಿಡಲು ಸತತ ಪ್ರಯತ್ನದ ಒಂದು ಬಗೆಯೇನೋ ಇದು.

"ಹೇಗೆ....ಸಾಧ್ಯ ಪ್ರಸನ್ನ" ಗೊಣಗಿದಳು.

"ಖಂಡಿತ ಸಾಧ್ಯವಾಗುತ್ತೆ. ನೀನು ಸಹಕರಿಸ್ಬೇಕು ಅಷ್ಟೆ. ಮನೆ ತನ್ನ ಒಡತಿಯ ಆಗಮನಕ್ಕಾಗಿ ತಹತಹಿಸುತ್ತಿದೆ." ಮತ್ತಷ್ಟು ಬಲವಂತ ಮಾಡಿದ.

ಸ್ನಾನ ಮಾಡಿ ಬ್ರೇಕ್‌ಫಾಸ್ಟ್‌ಗೆ ಅಲ್ಲಿಗೆ ಹೋಗೋಣವೆಂಬ ತೀರ್ಮಾನವನ್ನು ಅವನ ಮುಂದಿಟ್ಟಳು. ಅದಕ್ಕೂ ಒಪ್ಪಿಕೊಂಡ.

ನೀಲಿಮಾ ಸ್ನಾನ, ಸಿದ್ಧತೆ ಮುಗಿಯುವ ವೇಳೆಗೆ ಒಂದು ಗಂಟೆ ಮೂವತ್ತಾರು ನಿಮಿಷಗಳು ಆಗಿ ಹೋದವು. ಇದು ಅವನ ತಾಳ್ಮೆಗೆ ಸವಾಲ್.

ಅಡಿಗೆಯವನು ತಿಂಡಿ ತಂದಿಟ್ಟು ಬಿಟ್ಟ.

"ಮುಗ್ಸಿಕೋಡೇ....ಹೋಗೋಣ" ನೀಲಿಮಾ ಹೇಳಿದಾಗ ತುಟಿಕ್ ಪಿಟಕ್ ಎನ್ನಲಿಲ್ಲ. ತಿಂಡಿ ಗಂಟಲಲ್ಲಿ ಇಳಿಯೋಕೆ ಪ್ರಯಾಸ ಪಟ್ಟಿತು ಅಷ್ಟೆ.

ಕಾಫಿ ಪಕ್ಕಕ್ಕೆ ಸರಿಸಿ ನೀರು ಕುಡಿದು ಏಳುವ ವೇಳೆಗೆ ಕೆಲಸದವನು ಬಂದು ಸೋಮೇಶ್ವರ್ ಕರೆಯುತ್ತಾರೆಂಬ 'ಬುಲಾವ್' ಮುಟ್ಟಿಸಿ ಹೋದ.

"ಈಗ್ಬಂತ್ಬಿನೀ...." ಹೋದಳು.

ಹತ್ತು ನಿಮಿಷದ ನಂತರ ಆಳು ಬಂದು ತಿಳಿಸಿದ "ಯಜಮಾನರ ಸ್ನೇಹಿತರು ಬಂದಿದ್ದಾರೆ. ಅಮ್ಮಾವ್ರು ಮಾತಾಡ್ತಾ ಇದ್ದಾರೆ" ಅವನ ಉತ್ಸಾಹ ಪಾತಾಳ ತಲುಪಿದಂತಾಯಿತು. ಸಹನೆಯಿಂದ ಬಹಳಷ್ಟು ಹೊತ್ತು ಕಾದ.

ಸ್ವಲ್ಪ ಸ್ವತಂತ್ರ ವಹಿಸಿ ಸೂಟ್‌ಕೇಸ್‌ಗೆ ಅವಳ ಬಟ್ಟೆಗಳನ್ನು ತುಂಬಿ ಸಿದ್ಧಪಡಿಸಿಟ್ಟ.

ಬಂದ ನೀಲಿಮಾ ಆಶ್ಚರ್ಯಗೊಂಡಳು "ನೀವು ಇಲ್ಲೇ ಇದ್ದೀರಾ ನಾನು ಹೊರಟು ಹೋಗಿರಬಹುದೆಂದು ಕೊಂಡೆ" ಉದ್ಗರಿಸಿದಳು. ಆ ಮಾತಿನತ್ತ ಗಮನ ಕೊಡಲಿಲ್ಲ ಪ್ರಸನ್ನ.

"ಎಲ್ಲಾ ಮುಗೀತಲ್ಲ, ಹೋಗೋಣ" ಮೇಲೆದ್ದ.

ವಾಚ್ ಕಡೆ ನೋಡಿದ ನೀಲಿಮಾ "ಸಂಜೆ ಬರ್ತೀನಿ ಪ್ರಸನ್ನ. ಕೆಲವು ಸ್ಟೂಡೆಂಟ್ಸ್‌ನ ಬರೋಕೆ ಹೇಳಿದ್ದೀನಿ." ನಿಸ್ಸಾಯಕತೆ ವ್ಯಕ್ತಪಡಿಸಿದಳು. ಅಂತು ಅವಳಿಗೆ ಅಲ್ಲಿಗೆ ಬರುವ ಮನಸ್ಸಿಲ್ಲ.

"ಹಾಗೇ....ಮಾಡು. ಬರುವಾಗ ಸೂಟ್‌ಕೇಸ್ ತಗೊಂಡ್ಬಾ ಅಥವಾ ನಾನೇ ತಗೊಂಡ್ಹೋಗ್ತೀನಿ" ಎಂದು ಸಿದ್ಧ ಮಾಡಿಟ್ಟ ಸೂಟ್‌ಕೇಸ್‌ನತ್ತ ಅವಳ ಗಮನ ಸೆಳೆದ. ಕ್ಷಣ ಅವಳ ರೆಪ್ಪೆಗಳು ಅಚಲವಾದವು.

"ನೆಸೆಸರಿನಾ ? ಯಾಕೆ ಸುಮ್ನೆ ರಿಸ್ಕ್ ?" ತಳ್ಳಿ ಹಾಕಿದಳು.

"ಥ್ಯಾಂಕ್ಯೂ...." ಹೊರಟು ಬಿಟ್ಟ ಪ್ರಸನ್ನ.

ಅಂದಿನ ಸಾಯಂಕಾಲ ನೀಲಿಮಾ ಬಂದಳು. ಆದರೆ ಇದ್ದಿದ್ದು ಹತ್ತು ನಿಮಿಷ ಮಾತ್ರ.

ಅವನೇ ಬಿಸ್ಕತ್, ಟೀ ಕೊಟ್ಟ. ಬೇರೇನೋ ವಿಷಯ ಮಾತಾಡಿದವಳು ಮೇಲೆದ್ದಳು.

"ಬರ್ತೀನಿ....ಪಪ್ಪ ಕಾಯ್ತ ಇರ್‍ತಾರೆ" ಎಂದಾಗ ಅವನೇನೂ ತಡೆಯಲಿಲ್ಲ.

"ಇಲ್ಲೇ ಇರ್ತೀಯಾ ಅಂದ್ಕೊಂಡಿದೆ. ಇಷ್ಟವಿಲ್ಲವೆಂದರೆ ಬಲವಂತ ಇಲ್ಲ."

ನಾಲ್ಕು ಹೆಜ್ಜೆ ಮುಂದಕ್ಕೆ ಹೋದ ನೀಲಿಮಾ ಹಿಂದಕ್ಕೆ ಬಂದಳು.

"ಟಿ.ವಿ.ಯಲ್ಲಿ ಹದಿನೆಂಟರ ನಂತರ ಮದುವೆ ಅನ್ನುವ ಸರ್ಕಾರದ ಅಡ್ವರ್ಟೈಸ್‌ಮೆಂಟ್ ಬರುತ್ತೆ....ನೋಡಿರಬೇಕಲ್ಲ. ಅದರಲ್ಲಿ ಅಜ್ಜಿ 'ಮಗು ಚಿಕ್ಕದಾಗಿದ್ದಾಗ ಮದ್ವೆ ಮಾಡಿದ್ರೆ ಹೋದ ಕಡೆ ಹೊಂದಿಕೊಳ್ಳುತ್ತೋ' ಅನ್ನುವ ಮಾತ್ಹೇಳಿದೆ. ಅದು ಕೂಡ ನಿಜ. ಈಗ ನನ್ನದು ಹೊಂದಿಕೊಳ್ಳುವ ವಯಸ್ಸಲ್ಲ. ಸಿ.ಯೂ...." ನಡೆದುಬಿಟ್ಟಳು.

ಬಹಳ ಹೊತ್ತು ಅಲ್ಲೇ ನಿಂತಿದ್ದು ಒಳಗೆ ಬಂದ. ಒಳಗಿನ ನಿಶ್ಯಬ್ದ ಹೊರಗೆ ತಳ್ಳುವಂತಿತ್ತು. ಆರಾಮಾಗಿ ಮಲಗಿ ಸೂರಿನತ್ತ ನೋಡತೊಡಗಿದ ಗಿದ. ಎಲ್ಲಿಂದ....ಎಲ್ಲಿಗೆ ? ನಿಧಾನವಾಗಿ ಕಣ್ಮುಚ್ಚಿಕೊಂಡ.

ಪ್ರಸನ್ನನ ದಿನಚರಿಯೇ ಬದಲಾಯಿತು. ಬೆಳಿಗ್ಗೆ ಅಥವಾ, ಅಲೋಕ್‌ನ ಲಂಚ್ ಬ್ರೇಕ್‌ನಲ್ಲಿ ಒಮ್ಮೆ ಹೋಗಿ ಅವನನ್ನು ನೋಡುತ್ತಿದ್ದ. ಕೋಲಿಗ್ಸ್

ಗಿಂತ ವಿದ್ಯಾರ್ಥಿಗಳ ನಡುವೆ ಇರಲು ಹೆಚ್ಚು ಇಷ್ಟಪಡುತ್ತಿದ್ದ. ನೀಲಿಮಾ ಸಿಕ್ಕಾಗ ಮುಗುಳ್ನಗೆಯ ಜೊತೆ 'ಹಲೋ'ಗಳ ವಿನಿಮಯ.

ಅಂದು ಕಾಲೇಜಿನಿಂದ ಹೊರಬಂದಾಗ ಪಟೇಲ್ ಸಿಕ್ಕಿದ.

"ಅರರೇ, ಏನಿಂಥ ಬದಲಾವಣೆ ಮುಖದಲ್ಲಿ ? ಬಹಳ ಸೀರಿಯಸ್ಸಾಗಿ ಕಾಣ್ತೀಯಲ್ಲ" ಛೇಡಿಸಿದ. ಪ್ರಸನ್ನ ಮುಗುಳ್ನಕ್ಕವನು ಅವನ ಭುಜದ ಮೇಲೆ ಕೈ ಹಾಕಿದ.

ಕೆಂಪು ಮಾರುತಿಯನ್ನು ನೋಡಿ "ವಾಹನವಿಲ್ದೇ ರೋಡಿಗೆ ಇಳಿಯೋಂಗೆ ಇಲ್ಲ. ಈಗ ಏನ್ಮಾಡೋಣ ? ಸ್ಕೂಟರ್‌ನಲ್ಲಿ ಹೋಗೋಣ್ವಾ ಅಥವಾ ಮಾರುತಿ ಹತ್ತುವುದಾ ?" ಪಟೇಲ್‌ನತ್ತ ತಿರುಗಿದ.

ಸ್ಕೂಟರನ್ನು ಒಯ್ದು ಅಲ್ಲಿಯೇ ಹತ್ತಿರದ ಗ್ಯಾರೇಜ್‌ನಲ್ಲಿ ನಿಲ್ಲಿಸಿ ಬಂದ ಪಟೇಲ್ "ಈಗ ಹತ್ತು...." ಎಂದ.

ಬೆಲ್ ಒತ್ತಿದಾಗ ಕೆಲಸದ ಹುಡುಗ ಬಂದು ಬಾಗಿಲು ತೆಗೆದ. ಪಟೇಲ್ ಪ್ರಸನ್ನನ ಭುಜದ ಮೇಲೆ ಕೈಯಿಟ್ಟ.

"ಎಲ್ಲಿ....ನೀಲಿಮಾ ?" ಅವನ ಸ್ವರ ಒರಟಾಗಿತ್ತು. ಇಂಥ ಸೋಲು ಹೆಚ್ಚು ಭಯಂಕರ.

"ಕಾಲೇಜಿನಲ್ಲೇ ಇದ್ಲು. ಯಾವ್ದೋ ಡಿಸ್‌ಕಷನ್‌ನಲ್ಲಿ ಪಾಲ್ಗೊಂಡಿದ್ದಳು. ನೋ ಪ್ರಾಬ್ಲಮ್...." ಆ ಮಾತುಗಳು ತನಗೆ ಇಷ್ಟವಿಲ್ಲ ಎನ್ನುವಂತೆ ಕೋಣೆಗೆ ಹೋಗಿಬಿಟ್ಟ.

ಕಿಟಕಿಯ ಸರಳುಗಳನ್ನು ಒತ್ತಿ ಹಿಡಿದು ಹಲ್ಕುಡಿ ಕಚ್ಚಿ ಎದೆಯ ಕೋಲಾಹಲವನ್ನು ನುಂಗಿಕೊಂಡ. ಒಳಗಿನ ಅಗ್ನಿಯ ಜ್ವಾಲೆ ಭುಗಿಲೆದ್ದು ಅವನ ಇಡೀ ಮೈಯನ್ನು ಸುಡುವಂತೆ ಭಾಸವಾಗುತ್ತಿತ್ತು.

"ಪಪ್ಪ...." ಅಲೋಕ್‌ನ ಕೂಗು. ಮಂಜು ಸುರಿದಂತಾಯಿತು ಅವನ ಮೈಮೇಲೆ. "ನಾನು ...ಬಂದೆ...." ಓಡಿ ಬಂದ. ಅವನನ್ನು ಅಪ್ಪಿಕೊಂಡು ಮುಖದ ತುಂಬ ಮುತ್ತಿನ ಮಳೆಗರೆದ. ಒಳಗಿನ ತಾಪ ಕಡಿಮೆಯಾಗಿಹೋಯಿತು.

ಮಗನೊಂದಿಗೆ ಹೊರಗೆ ಬಂದಾಗ ಪ್ರಸನ್ನ ಹಸನ್ಮುಖನಾಗಿದ್ದ.

"ನೀನು ಅಂಕಲ್ ಹತ್ರ ಮಾತಾಡ್ತಾ ಇರು. ನಾನು ಟೀ ಮಾಡ್ಕೊಂಡ್ಬ ರ್ತೀನಿ" ಅವನನ್ನು ಕಳಿಸಿ ಅಡಿಗೆಯ ಮನೆಗೆ ಹೋದ.

ಪಟೇಲ್ ಅಲೋಕ್ ಇಬ್ಬರು ಅಡುಗೆಯ ಮನೆಗೆ ಬಂದರು. ಮರಳುವ ಹಿಟರ್ ಮೇಲಿನ ನೀರನ್ನೆ ನೋಡುತ್ತ ನಿಂತಿದ್ದ ಪ್ರಸನ್ನ.

"ಬರಿ ಟೀನಾ....ಮತ್ತೇನು ಇಲ್ವಾ ?" ಪಟೇಲ್ ಛೇಡಿಸಿದ.

ಎರಡು ಬಿಸ್ಕತ್ ಪ್ಯಾಕೆಟ್‌ಗಳನ್ನೊಡೆದು ಟ್ರೈಗೆ ಸುರಿದ.

ಮೂವರು ಕೂಡಿಯೇ ತಿಂದರು. ಪ್ರಸನ್ನ ಜ್ಞಾಪಿಸಿಕೊಳ್ಳುವ ಮೊದಲೇ ಕಾನ್ವೆಂಟ್ ಚೀಲ ಕೈಗೆತ್ತಿಕೊಂಡ ಅಲೋಕ್. "ಮಮ್ಮಿ....ಕಾಯ್ತಾ ಇರ್ತಾಳೆ" ಪಟೇಲ್ ಅವನ ಬೆನ್ನು ತಟ್ಟಿ "ನಾನೇ ಬಿಟ್ಟು ಹೋಗ್ತೀನಿ. ಡೋಂಟ್‌ವರೀ. ನೀನು ರಾತ್ರಿ ಅಡ್ಗೆ ಮಾಡ್ಕೋ" ತಮಾಷೆ ಮಾಡಿಯೇ ಅಲೋಕ್‌ನೊಂದಿಗೆ ಪಟೇಲ್ ಕಾರು ಹತ್ತಿದ್ದು.

ಇದೇನಾಯಿತು ? ಇವನು ನಿವೇದಿತಾಗೆ ಬಿಡುಗಡೆ ಕೊಟ್ಟ. ನೀಲಿಮಾ ಇವನನ್ನು ಬಂಧ ವಿಮೋಚನೆಗೊಳಿಸಿದಳು.

ಗೋದಾವರಿ, ನಿವೇದಿತಾ ಕಾಂಪೌಂಡ್‌ನಲ್ಲಿಯೇ ನಿಂತಿದ್ದರು. ಇಳಿದ ಅಲೋಕ್ ಓಡಿದ ತಾಯಿಯ ಬಳಿಗೆ.

"ಯೂ ನಾಟಿ, ಎಲ್ಲಿಗೆ ಹೋಗಿದ್ದೆ ?" ಗೋದಾವರಿ ಪ್ರೀತಿಯಿಂದ ರೇಗಿದರು. ಅಲೋಕ್ ಹಲ್ಲು ಬಿಟ್ಟ "ಸಾರಿ...." ತಾಯಿಯ ಕೈಗೆ ಜೋತು ಬಿದ್ದ.

"ಬನ್ನಿ...." ಪಟೇಲ್‌ನ ಔಟ್‌ಹೌಸ್‌ಗೆ ಕರೆದೊಯ್ದಳು. "ನಂಗೇನು ಬೇಡ. ಪ್ಲೇ ಗ್ರೌಂಡ್‌ಗೆ ಹೋಗ್ತೀನಿ...." ಬ್ಯಾಗನ್ನು ಅಲ್ಲಿಟ್ಟು ಓಡಿದ ಅಲೋಕ್.

ಅಡಿಗೆಯ ಮನೆಯತ್ತ ಹೊರಟವಳನ್ನು ತಡೆದ. "ಈಗೇನು....ಬೇಡ ಎಲ್ಲಾ ಆಯ್ತು ಫ್ರೆಂಡ್ ಮನೆಯಲ್ಲಿ" ಕೂತು ಅಲ್ಲೇ ಇದ್ದ ಪುಸ್ತಕಗಳನ್ನು ತಿರುವಿದ. ಬಿ. ಎ. ಕರಸ್ಪಾಡೆನ್ಸ್ ಕೋರ್ಸ್‌ಗೆ ಸಂಬಂಧಪಟ್ಟವು. ಪುಟ ಗಳನ್ನು ತಿರುವಿ ಮೊದಲಿನ ಸ್ಥಾನದಲ್ಲಿಟ್ಟ.

"ಅಲೋಕ್ ಎಲ್ಲಿಗೆ ಹೋಗಿದ್ದ ಗೊತ್ತಾ ?" ಕೇಳಿದ.

"ಅಪ್ರು ಪಪ್ಪನನ್ನ ನೋಡೋಕೆ ಇರ್ಬೇಕು. ಕಾನ್ವೆಂಟ್‌ಗೆ ತುಂಬ ನಿಯರ್ ಅಂತೆ. ಆಗಾಗ ಹೋಗ್ಬರ್ತಾನೆ" ಅವಳ ಪ್ರತಿಕ್ರಿಯೆ ಅಂಥ ಖಾರವಾಗೇನು ಇರಲಿಲ್ಲ.

"ಇದು ನಿಮ್ಗೇ....ಇಷ್ಟಾನಾ ?" ಅವನ ಪ್ರಶ್ನೆಗೆ ಮುಕ್ತವಾಗಿ ನಕ್ಕು ಬಿಟ್ಟಳು. "ಇಲ್ಲಿ ಇಷ್ಟ, ಕಷ್ಟಗಳ ವಿಷ್ಯ ಮುಖ್ಯವಲ್ಲ. ನನ್ಮಗ ಮಾನಸಿಕವಾಗಿ, ಸಾಮಾಜಿಕವಾಗಿ ಹಿಂದೆ ಉಳಿಯಬಾರ್ದು. ನಂಗೆ ಅವ್ನ ಉಜ್ವಲ ಭವಿಷ್ಯ ಮುಖ್ಯ. ಬೆಳೆಯುವ ಹಂತದಲ್ಲಿ ಮಕ್ಕಳಿಗೆ ತಂದೆಯ ಪ್ರೀತಿಯು ಅಗತ್ಯ. ಇದು ಹುಟ್ಟಿನ ಸಂಬಂಧ. ಯಾವ ಕೋರ್ಟಿನಲ್ಲೂ ಬಿಡುಗಡೆಗಾಗಿ ಕೇಸ್ ಫೈಲ್ ಮಾಡೋಕಾಗೋಲ್ಲ" ಮಾತಾಡಿದ ಮೇಲೆ ಅಂದುಕೊಂಡಳು ಹೆಚ್ಚು ಮಾತಾಡಿದನೇನೋ, ಎಂದು.

ಅವಳಲ್ಲಿನ ಬೌದ್ಧಿಕ ಬೆಳವಣಿಗೆಯನ್ನು ಗುರ್ತಿಸಿದ ಪಟೇಲ್. "ಗುಡ್ ನಿಮ್ಮ ವಿಚಾರ ದೃಷ್ಟಿ ಹೊಳ್ಳೇದು" ಶಬಾಷ್‌ಗಿರಿ ಕೊಟ್ಟ. ನಂತರ ಒಂದು ಮಾತನ್ನೂ ಪ್ರಸನ್ನ ಬಗ್ಗೆ ಪ್ರಸ್ತಾಪಿಸಲಿಲ್ಲ.

ಆದರೆ ಪಟೇಲ್ ಹೊರಟಾಗ ಹೇಳಿದಳು. "ಡೈವೋರ್ಸ್ ವಿಷ್ಯ ಬಂದಾಗ ಆಲೋಕನನ್ನ ಪೂರ್ತಿ ನಂಗೆ ಬಿಟ್ಟಿದ್ದರು. ಅದು ಅವ್ರ ಭವಿಷ್ಯದ ದೃಷ್ಟಿಯಿಂದ ಒಳ್ಳೇದೆ ಆಗ್ತಿತ್ತು. ಆ ಮೇಲಿನ ಬದಲಾವಣೆ ಮತ್ತೆ ಉಸಿರುಗಟ್ಟಿಸುವಂತಾಗ್ಬಾರ್ದು ಜೀವನ. ಇದನ್ನೆಲ್ಲ ನಾನು ಆಲೋಕ್‌ಗೆ ಹೇಳೋಕ್ಕಾಗೋಲ್ಲ. ಅಷ್ಟೊಂದು ತಿಳುವಳಿಕೆಯ ವಯಸ್ಸು ಅಲ್ಲ. ನೀವು ಅವ್ರ ಏಕೈಕ ಫ್ರೆಂಡ್, ಅವ್ರ ಉತ್ತಮ ಭವಿಷ್ಯಕ್ಕಾಗಿ ಎರ್ಡು ಮಾತು ಹೇಳ್ಬಹ್ದು."

ಪಟೇಲ್ ಅವಳ ದೂರ ದೃಷ್ಟಿಗೆ ಮೆಚ್ಚಿಕೊಂಡ.

"ಹೃದಯ, ಮನಸ್ಸಿಗೆ ಸಂಬಂಧಪಟ್ಟ ವಿಷ್ಯಗಳಿಗೆ ಅವ್ರೇ....ಅವರಿಗೆ ಕ್ಯಾಪ್ಟನ್ ಎಂಥ ಫ್ರೆಂಡ್ ಏನೂ ಹೇಳಲಾರದೆ ಹೋಗ್ಬಹ್ದು. ನನ್ನ ಪ್ರಯತ್ನವಂತು....ಮಾಡ್ತೀನಿ" ಭರವಸೆ ಕೊಟ್ಟ.

ಹಾಗೆಯೇ ಹಿಂದಕ್ಕೆ ಬಂದವನು ಪ್ರಸನ್ನನ ತರಾಟೆಗೆ ತಗೊಂಡ. "ಮತ್ತದೆ ಪುನರಾವರ್ತನೇನಾ ? ನೀಲಿಮಾ ಜೊತೆಗಿನ ವೈವಾಹಿಕ ಬದ್ಕು ಅಗ್ಲೇ ಕಷ್ಟವಾಯ್ತು ? ದಂಪತಿಗಳಲ್ಲಿ ಇರಬೇಕಾದ್ದು ಸಾಮರಸ್ಯ. ನೀಲಿಮಾನ

ಬಲವಂತವಾಗಿಯಾದ್ರೂ....ಇಲ್ಲಿಗೆ ಕರ್ಕೊಂಡ್ಬಾ. ಕ್ರಮೇಣವಾಗಿ ಹೊಂದಿ ಕೋತಾಳೆ ? ಮೊದ್ಲು ನೀನು ಸೋತು ಆಮೇಲೆ ಗೆಲ್ಲು. ಪೂರ್ತಿ ಗೆಲುವು ನಿನ್ನ ಪಾಲಿಗೇನೆ" ಹುರಿದುಂಬಿಸಿ ತಂದು ಸೋಮೇಶ್ವರ್ ಮನೆಯ ಮುಂದೆ ಇಳಿಸಿ ಹೋದ.

ಅವನಲ್ಲಿ ಕೆಟ್ಟ ಹಿಂಜರಿಕೆ. ಪ್ರಯಾಸದಿಂದಲೇ ಒಳಗೆ ಹೋದ. ಎದುರಾದ ಅರುಂಧತಿ "ನೀಲಿಮಾ ಇನ್ನೂ ಬಂದಿಲ್ಲ...." ತಮ್ಮ ಪಾಡಿಗೆ ತಾವು ಹೋದರು.

ಕೋಣೆಗೆ ಬಂದು ಕುಕ್ಕರಿಸಿದ. ಅಡಿಗೆಯವನು ವಿಚಾರಿಸಿಕೊಂಡು ಹೋದ. ಕೆಲಸದಾಳು ಎರಡು ನಿಮಿಷ ಬಂದು ನಿಂತು ಓಂದಿರುಗಿದ.

ಕೂತು ಸುತ್ತಲೂ ನಿರುಕಿಸಿದ. ಅವನದೇ ಆದ ಒಂದು ಸಾಮಾನು ಕೂಡ ಇಲ್ಲಿರಲಿಲ್ಲ. ಇದ್ದ ಕೆಲವನ್ನು ಆಳಿನ ಕೈಯಲ್ಲಿ ನೀಲಿಮಾ ಕೊಟ್ಟು ಕಳುಹಿಸಿ ಬಿಟ್ಟಿದ್ದಳು.

ನೀರವತೆ ಎಲ್ಲಿ ತನ್ನನ್ನು ನುಂಗಿ ಹಾಕುವುದೋ ಎಂದು ಮುಚ್ಚಿದ ಕಿಟಕಿಗಳನ್ನು ತೆರೆದು ಅಲ್ಲಿಯೇ ನಿಂತ. ಎಷ್ಟೋ ಹೊತ್ತು ಅದೇ ಸ್ಥಿತಿಯಲ್ಲಿ ನಿಂತಿದ್ದ.

ವಾಚ್ ಕಡೆ ನೋಡಿದ. ಅವನು ಬಂದು ಒಂದು ಗಂಟೆಯೇ ಕಳೆದು ಹೋಗಿತ್ತು. ಒಳಗಿನ ಶೂನ್ಯ ಸಹಿಸಲಾರದೇ ಹೊರಗೆ ಬಂದ.

ಯಾರನ್ನೋ ಬೀಳ್ಕೊಟ್ಟು ಬಂದ ಸೋಮೇಶ್ವರ್ ಕಣ್ಣರಳಿಸಿದರು. ವಯಸ್ಸು ಹೆಚ್ಚಿದ ಮೇಲೆ ಮಗಳು ಮದುವೆಯಾದರೂ ವಿಚ್ಛೇದನದ ದಾರಿ ಹಿಡಿಯುವುದು ಅವರಿಗೆ ಬೇಕಿರಲಿಲ್ಲ.

"ಯಾವಾಗ್ಬಂದಿದ್ದು ? ನೀಲಿಮಾ....ಇಲ್ವಾ?" ಅವರೇ ವಿಚಾರಿಸಿದರು.

"ಒಂದ್ಗಂಟೆ ಆಯ್ತು. ನೀಲಿಮಾ....ಇನ್ನು ಬಂದಂಗಿಲ್ಲ" ಇಲ್ಲಿ ವಿರಸ ಅವನಿಗೆ ಬೇಕಿರಲಿಲ್ಲ. "ನೀವು ಮನೆ ಕಡೆ ಬರಲೇ ಇಲ್ಲ...." ಆತ್ಮೀಯತೆಯಿಂದಲೇ ವಿಚಾರಿಸಿದ.

"ನೀಲಿಮಾ ನೆನಪಿಸಲೇ....ಇಲ್ಲ. ಬರೋಣಾ....ಬರೋಣಾ....ಬನ್ನಿ ಒಳ್ಗೆ...." ಹಾಲ್‌ಗೆ ಕರೆದೊಯ್ದರು. ಒಂದಿಷ್ಟು ಬಾಯಿ ಉಪಚಾರವು ಮಾಡಿದರು.

ಇದು ಸೂಕ್ತ ಸಮಯವೆನಿಸಿತು ಪ್ರಸನ್ನನಿಗೆ. "ನೀಲಿಮಾನ ಕಳುಹಿಸಿ ಕೊಡಿ" ಅವನ ಕೇಳಿಕೆಗೆ ಅವರಲ್ಲಿ ಬೆರಗು ಮೂಡಿತು.

ನಕ್ಕು ಬಿಟ್ಟರು. "ದಯವಿಟ್ಟು ನಮ್ಮನ್ನ ಇದ್ರಲ್ಲಿ ಸಿಕ್ಕಿಸ್ಬೇಡಿ. ಎಂಟು ವರ್ಷದ ಮಗುವಿನವರೆಗೂ ಏಟು ಕೊಟ್ಟು ಬುದ್ಧಿ ಹೇಳ್ಬಹ್ದು, ಹದಿನಾರರ ವಯಸ್ಸಿನಲ್ಲಿ ಸೂಕ್ತವಾದದ್ದು ತಿಳಿಸಿ ಹೇಳ್ಬಹ್ದು. ಇಪ್ಪತ್ತರ ನಂತರ ಗೈಡ್ ಮಾಡ್ಬಹ್ದು. ಆಮೇಲೆ....ಬಹುಶಃ ಏನು ಮಾಡೋಕಾಗೋಲ್ಲ. ಪ್ರಜೆಂಟ್ ನಾರ್ಮಲ್ ಸ್ಥಿತಿ ಇದು. ಅಪರೂಪಕ್ಕೆ ಅಬ್‌ನಾರ್ಮಲ್ ಅನ್ನಿಸುವ ಕೇಸ್ ಗಳು ಸಿಗಬಹುದು. ನಾವು ಈಗ ನೀಲಿಮಾಗೆ ಏನು ಹೇಳೋಕ್ಕಾಗೋಲ್ಲ" ತಮ್ಮ ಪರಿಸ್ಥಿತಿಯನ್ನು ಅತ್ಯಂತ ಸೂಕ್ಷ್ಮವಾಗಿ ಅವನ ಮುಂದೆ ಬಿಡಿಸಿಟ್ಟರು.

ಸ್ತಬ್ಧವಾಗಿಬಿಟ್ಟ ಪ್ರಸನ್ನ. ಸ್ವರವೆತ್ತಲು ಅವಕಾಶವನ್ನೇ ಕೊಡಲಿಲ್ಲ. ಅವರು.

ಇಂದು ಅವರಿಗೆ ನಿವೇದಿತಾಳ ನೆನಪಾಯಿತು.

"ನೀವು ನೀಲಿಮಾನ ಪ್ರೀತಿಸಿದ್ದು ಸಹಜ ತಪ್ಪಾದರೂ, ನಿವೇದಿತಾಗೆ ಡೈವೋರ್ಸ್ ಕೊಟ್ಟಿದ್ದು ಭಯಂಕರ ತಪ್ಪು. ನಿವೇದಿತಾ ಅಂಥ ಮುಗ್ಧ, ಸುಂದರ, ಸರಳ ಹೆಣ್ಣಿನೊಂದಿಗೆ ಬದುಕು ಸಹ್ಯವಿಲ್ಲವೆಂದುಕೊಂಡಾಗ.... ನೀಲಿಮಾ...." ಅವನನ್ನು ಯೋಚಿಸಲು ಬಿಟ್ಟು ಎದ್ದು ಹೋದರು.

ಹತ್ತು ನಿಮಿಷದಲ್ಲಿಯೇ ಬಂದ ನೀಲಿಮಾ ಹುಬ್ಬು ಹಾರಿಸಿ ನಗೆ ಬೀರಿದಳು.

"ಸರ್‌ಪ್ರೈಜ್....ಬಂದ್ಬಿಡ್ತೀನಿ" ಒಳಗೆ ಹೋದಳು.

ಪತ್ನಿಯ ಕೋಣೆಗೆ ಹೋಗಲು ಪತಿಗೆ ಆಹ್ವಾನಬೇಕೆ ? ಹಿಂಬಾಲಿಸಿದ. ಹೊರ ಕೋಣೆಯಲ್ಲಿಯೇ ಕೂತ. ಬಟ್ಟೆ ಬದಲಾಯಿಸಿ ಮುಖ ತೊಳೆದು ಬಂದಳು. ಒದ್ದೆಯ ಮುಖವನ್ನೊತ್ತುತ್ತ....

"ಬಂದು ಎಷ್ಟೊತ್ತು....ಆಯ್ತು ?" ಅವನ ಎದುರಿನಲ್ಲಿಯೇ ಕೂತಳು.

ವಾಚ್ ಕಡೆ ನೋಡಿದ. "ನೂರಾ ಇಪ್ಪತ್ತಾರು ನಿಮಿಷಗಳು ಆಯ್ತು" ಲೆಕ್ಕಾಚಾರವಾಗಿ ನಗುತ್ತ ಹೇಳಿದ. ನೀಲಿಮಾ ಕೂಡ ನಕ್ಕು ಬಿಟ್ಟಳು.

ಕಾಲೇಜಿನ ಬಗ್ಗೆಯಲ್ಲ ಮಾತಾಡಿದಳು. ಇಂದಿನ ಕಮಿಟಿ ಮೀಟಿಂಗ್‌ನಲ್ಲಿ ಚರ್ಚಿತವಾದ ವಿಷಯಗಳನ್ನೆಲ್ಲ ಹೇಳಿಕೊಂಡಳು. ಅವಳು ಸರ್ವಿಸ್‌ನಲ್ಲಿ ಮಾತ್ರ ಸಿನಿಯರ್ ಅಲ್ಲ, ಡಾಕ್ಟರೇಟ್ ಪಡೆದುಕೊಂಡಿದ್ದಳು. ಸೋಮೇಶ್ವರ್ ಮಗಳೆಂಬ ಗೌರವದ ಜೊತೆ ಕೆಲವು ಕಮಿಟಿಗಳಿಗೆ ಅವಳು ಸದಸ್ಯಳು. ಇವನಿಗಿಂತ ಅವಳು ಕಾಲೇಜಿನಲ್ಲಿ ಗೌರವಾನ್ವಿತಳು.

"ನಿನ್ನ ಕರ್ಕೊಂಡ್ಹೋಗೋಣಾಂತ್ಬಂದೆ" ಎಂದಾಗತಣ್ಣಗೆ ಪ್ರಶ್ನಿಸಿದಳು. "ಏನು ವಿಶೇಷ ? ನಾನು ತುಂಬ ಟಯರ್ಡ್....ಬೆಡ್ ಮೇಲೆ ಬಿದ್ದರೆ ಬೆಳಿಗ್ಗೆವರೆಗೂ ಏಳೋಲ್ಲ" ತಲೆ ಬಾಚಲು ಎದ್ದು ಹೋದಳು.

ನವಿರಾದ ಮೇಕಪ್ ಮುಗಿಸಿದವಳು ಹೋಗಿ ಮಲಗಿಬಿಟ್ಟಳು. ಅವಳ ಪಕ್ಕದಲ್ಲಿಯೇ ಹೋಗಿ ಕೂತ. ಅವಳ ಕೈಯನ್ನು ತನ್ನ ಕೈಯೊಳಗೆ ತಗೊಂಡ. ದುಂಡಗಿರಲಿಲ್ಲ. ಮುಖದ ಮೇಕಪ್, ಮೈಮಾಟದಿಂದ ವಯಸ್ಸನ್ನು ತಗ್ಗಿಸಿದ್ದರೂ ಕೈಗಳಲ್ಲಿ ನರ, ಗಂಟು, ಮೂಳೆಗಳು ಎದ್ದು ಕಾಣುತ್ತಿದ್ದವು.

"ನೀನು ಆ ಮನೆಗೆ ಬರೋದಿಕ್ಕೆ ನಿನ್ನ ತಂದೆಯು ವಿರೋಧವಿಲ್ಲ" ಉಸುರಿದ.

ಅವಳು ಕಣ್ಣು ಮುಚ್ಚಿಕೊಂಡು ಆರಾಮವಾಗಿ ಉಸಿರಾಡತೊಡಗಿದಳು. ಅನಾಮತ್ತಾಗಿ ಅವಳು ಮೇಲೆ ಬಗ್ಗಿ ತುಟಿಗಳ ಬಳಿ ತುಟಿಯನೊಯ್ದು "ಅಲ್ಲಿಗೆ ಬರೋಕೆ ನಿಂಗೆ ಇಷ್ಟವಿಲ್ಲಾಂದ್ರೆ....ನಾನು ಇಲ್ಲೇ ಇರ್ತೀನಿ...." ಪಿಸುಗುಟ್ಟಿದ.

"ಬೇಡ....ಪ್ರಸನ್ನ !" ಎರಡು ಕೈಗಳಿಂದ ಕತ್ತನ್ನು ಬಳಸಿದಳು. ಕಪಕಳಕ್ಕೆ ಬೀಸಿದಂತಾಯಿತು. ಕೈಗಳನ್ನು ಕಿತ್ತೆಸೆದ.

"ನೀಲಿಮಾ ನಿನ್ನ ಉದ್ದೇಶವೇನು ?" ಒರಟಾಗಿ ಪ್ರಶ್ನಿಸಿದ.

"ಅಂದು ನಾನು ಹೇಳಿದ್ದು....ನಿಂಗೆ ಅರ್ಥವಾಗಿರಬೇಕೂಂತ ಅಂದ್ಕೊಂಡೆ, ಹೊಂದಿಕೊಳ್ಳೋದು ನಂಗೆ ಕಷ್ಟ. ನಿನ್ನ ಮನಕ್ಕೆ ಕಷ್ಟವಾಗೋದ್ಬೇಡ. ಆಗಾಗ....ಬರೋಕೆ ಇಲ್ಲೇನು ಅಡ್ಡಿ ಇಲ್ಲ."

ಕತ್ತಿಡಿದು ಏಕಾಏಕಿ ಹೊರದಬ್ಬಿದಂತಾಯಿತು. ಬಲ ಪ್ರಯೋಗದಿಂದ ಅವನನ್ನ ದೂಡಲಿಲ್ಲ. ಮಾತಿನ ವರಸೆ ಅವನನ್ನ ಹೊರದಬ್ಬಿತು.

ಅವನ ತಲೆಯಲ್ಲಿ ಸುತ್ತಿಗೆಯಲ್ಲೊಡೆದಂತೆ ಸದ್ದು. ಎಲ್ಲಾ ಗೊಂದಲ ವೆನಿಸಿತು. ನೀಲಿಮಾನ ಮದುವೆಯಾದ ಕಾರಣವೇನು ? ಬೇರೆ ಬೇರೆ ಕಾರಣಗಳನ್ನು ಕೊಟ್ಟರೂ ಅವ್ಯೊಂದು ನಿಜವಲ್ಲ, ಸತ್ಯವಲ್ಲ—ಕೂಗಿ ಹೇಳ ಬೇಕೆನಿಸಿತು.

ಕತ್ತಲಲ್ಲಿ ಹೆಜ್ಜೆ ಹಾಕುತ್ತ ನಡದೇ ಹೊರಟ. ಬಹಳ ಎತ್ತರಕ್ಕೇರಿದ ನಿವೇದಿತಾ ಅತ್ತ ದಿಟ್ಟಿಸುವುದು ಕೂಡ ಅವನಿಂದ ಸಾಧ್ಯವಿಲ್ಲ.

ಬೆಳಿಗ್ಗೆ ಬಂದ ಪಟೇಲ್ ಅವನನ್ನು ನೋಡಿ ಬೆಚ್ಚಿದ. ಸಮಸ್ತವನ್ನು ಕಳೆದುಕೊಂಡ ನಿರ್ಲಿಪ್ತನಂತೆ ಕಂಡ.

ರಟ್ಟೆ ಹಿಡಿದು ಅಲುಗಿಸಿದ. "ಪೇಷನ್ಸ್....ಕಳೆದುಕೊಂಡ್ಯಾ ? ಈ ಮನೆ ನಿಮ್ಮಿಬ್ಬರ ಮಧ್ಯೆ ಗೋಡೆ. ನೀನು ಅಲ್ಲಿಗೆ ಹೋಗಿ ಅವಕಾಶಕ್ಕಾಗಿ ....ಕಾಯಿ" ಬೇಡವೆಂದು ತಲೆಯಾಡಿಸಿದ.

ಒಂದಷ್ಟು ಹೇಳಿದ. ಪಟೇಲ್‌ಗೇನು ಅನಿರೀಕ್ಷಿತವಲ್ಲ.

"ನಿನ್ನ ಮದ್ವೆಯ ಉದ್ದೇಶವೇನೋ. ಆಕೆಯದಂತು ಸ್ಪಷ್ಟ. ನಿನ್ನ ಪ್ರೀತಿ ಪ್ರೇಮವಲ್ಲ ಆಕೆ ಬಯಸಿದ್ದು. ತನಗಾಗುವ ಮಗುವಿಗೆ ಒಬ್ಬ ತಂದೆ" ಜಾಡಿಸಿ ಒದ್ದಂತೆ ಹೇಳಿದ.

ಪಟೇಲ್ ಕರುಣೆಯಿಂದ ಅವನತ್ತ ನೋಡಿದ.

"ಸಾಮಾಜಿಕವಾಗಿ, ಆರ್ಥಿಕವಾಗಿ ಪ್ರಬಲವಾಗಿರುವ ಪ್ರಬುದ್ಧತೆಯ ಹೆಣ್ಣು ನೀಲಿಮಾ. ಆಕೆಯ ಅನುಭವದಲ್ಲಿ ಹರೆಯದ ಪ್ರೀತಿ, ಪ್ರೇಮಗಳು ಕಾಲಡಿಯ ತೊರೆಯಂತೆ ಹರಿದು ಹೋಗಿರಬಹುದು. ಮದುವೆಯ ಬಂಧ ನವೇ ಬೇಡವೆಂದುಕೊಂಡ ಆಕೆಯಲ್ಲೂ ಕೂಡ ಹೆಣ್ತನ ಇತ್ತು. ಅದರ ತೀವ್ರತೆಯ ಬಯಕೆಯಲ್ಲಿ ಮಿಲಿ ಮಿಲಿ ಒದ್ದಾಡುವ ಸಮಯದಲ್ಲೇ....ನೀನು ಸಿಕ್ಕಿದ್ದು" ಪ್ರಸನ್ನ ತಲೆ ಎತ್ತಲಿಲ್ಲ.

"ನಮ್ಮಲ್ಲಿ ಪ್ರೀತಿ ಮೊಳೆತಾಗ ನೀಲಿಮಾ ಎಂದೂ ಮಗುವಿನ ಬಗ್ಗೆ ಮಾತಾಡಿರಲಿಲ್ಲ" ಎಂದ ಮೆಲುವಾಗಿ.

"ಯೂ ಈಡಿಯಟ್, ಆಗ ನೀನೇನು ಗುರ್ತಿಸುವ ಸ್ಥಿತಿಯಲ್ಲಿರಲಿಲ್ಲ. ಅವಳಲ್ಲಿ ಮುಖ್ಯವಾಗಿದ್ದ ದಾಹ ಅದೇ. ಪ್ರಕಟಗೊಂಡಿದ್ದು ಅಲೋಕ್‌ನ ಹುಟ್ಟಿದ ಹಬ್ಬದ ನಂತರ. ಗರ್ಭ ಹುಸಿಯಾದ ಮೇಲೆ ತನಗಿನ್ನು ಮಕ್ಕಳಾಗುವ ಸಾಧ್ಯತೆ ಇಲ್ಲವೆಂದುಕೊಂಡಾಗ ನಿನ್ನಲ್ಲಿನ ಆಕರ್ಷಣೆ ಕರಗಿ ಹೋಯಿತು. ಈಗ ಅವಳು ತನ್ನ ವೃತ್ತಿ, ಕಾಲೇಜು ಅಲ್ಲಿಗೆ ಹೊಂದಿಕೊಂಡ ಡಾ. ನೀಲಿಮಾ ಮಾತ್ರ.

ಪ್ರಸನ್ನ ಕಣ್ಮುಂದೆ ಹರಡಿಕೊಂಡಿದ್ದ ಮಬ್ಬು ನಿಧಾನವಾಗಿ ಸ್ವಲ್ಪ ಸ್ವಲ್ಪವೇ ಕರಗಿ ಇಲ್ಲವಾಗುತ್ತಿತು. ಅಲ್ಲಿ ಬೆಳಕಿನ ಪ್ರವೇಶ.

ಹಣೆ ಹಿಡಿದುಕೊಂಡು ಕೂತುಬಿಟ್ಟ.

"ಥ್ಯಾಂಕ್ಯೂ ವೆರಿಮಚ್, ಲೀವ್ ಮಿ ಅಲೋನ್" ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡ. ಪಟೇಲ್ ಒಂದೇ ಒಂದು ಮಾತು ಜೋರಾಗಿ ಹೇಳಿದ. "ನಿನ್ನಲ್ಲಿ ಜಡತ್ವ, ಉದಾಸಭಾವ ಉಂಟಾದಾಗ ಅಲೋಕ್‌ನಲ್ಲಿ ಅದ್ನ ಹುಡ್ಕಿಕೊಳ್ಳಬೇಕಿತ್ತು. ಆಗ ನೀನು ಡೈವೋರ್ಸ್‌ಗಾಗಿ ವಕೀಲರ ಬಳಿಗಲ್ಲ ಹೋಗಬೇಕಾಗಿದುದ್ದು ! ಒಬ್ಬ ಒಳ್ಳೆಯ ಸೈಕ್ರಿಯಾಟಿಸ್ಟ್ ನಿನ್ನ ಕಾಯಿಲೆಯನ್ನ ವಾಸಿ ಮಾಡುತ್ತಿದ್ದ...." ಟಪ ಟಪ ಸದ್ದು ಮಾಡುತ್ತ ಹೊರಟುಬಿಟ್ಟ.

ವಕೀಲ–ಸೈಕ್ರಿಯಾಟಿಸ್ಟ್....ನಾನಂದು ಮಾನಸಿಕ ತಜ್ಞರನ್ನೇ ಭೇಟಿ ಮಾಡಬೇಕಿತ್ತು !

* * *

ಅಂದು ಬೆಳಗಿನಿಂದ ಒಂದೇ ಸಮ ಮಳೆ ಸುರಿಯುತ್ತಿದ್ದರಿಂದ ಪ್ರಸನ್ನ ಸ್ಕೂಟರ್ ಆಚೆ ತೆಗೆಯಲಿಲ್ಲ, ಕಾಲೇಜಿಗೆ ಹೊರಡುವ ವೇಳೆಗೆ ನೀಲಿಮಾ ಕಾರು ಬಂತು. ಇಳಿಯದೆಯೇ ಹಾರನ್ ಮಾಡಿದಾಗ ವರಾಂಡದಲ್ಲಿದ್ದ ಪ್ರಸನ್ನ ಒಳಗೆ ಹೋದ.

ಕೆಲಸದ ಹುಡುಗ ಕಾರಿನ ಬಳಿಗೆ ಬಂದ.

"ಅವ್ರು ಬರೋದು....ಇನ್ನು ತಡ ಆಗುತ್ತೆ."

ತುಟಿ ಕಚ್ಚಿ ನೀಲಿಮಾ ಕೆಳಗಿಳಿದಳು, ಯಾರ ಮಾತಿಗೂ ಕೇರ್

ಮಾಡದಂಥ ಸ್ವಭಾವದವಳೇ ಅವಳು. ಆದರೆ ಕ್ಯಾಂಟೀನ್ ಮುಂದಿನಿಂದ ಹಾದು ಹೋಗುತ್ತಿದ್ದಾಗ ಕಿವಿಗೆ ಬಿದ್ದ ಮಾತುಗಳು ಅವಳ ಮೇಲೆ ಮುಳ್ಳೆ ರಚಿದಂತಾಗಿತ್ತು.

"ಫಿಯೆಟ್, ಸ್ಕೂಟರ್ ಸಪರೇಟ್ ಅಗ್ಬಿಟ್ಟಿದೆ" ಒಬ್ಬ ವಿದ್ಯಾರ್ಥಿಯ ಮಾತು. "ಮೈ ಗಾಡ್, ಆ ಹೆಣ್ಣಿನ ಜೊತೆ ಸಂಸಾರ....ಪೂರ್ತಿ ಸವೆದು ಹೋಗಿದ್ದಾಳೆ. ಕಣ್ಣಿನ ಕೂಲಿಂಗ್ ಗ್ಲಾಸ್, ತುಟಿಯ ಬಣ್ಣ, ಮುಖದ ಮೇಕಪ್ ತೆಗ್ದು ನೋಡು. ಸರ್ಯಾದ ವಯಸ್ಸಿಗೆ ಮದ್ವೆಯಾಗಿದ್ರೆ....ಪ್ರಸನ್ನ ಲೆಕ್ಚರರ್‌ಗೆ ಅತ್ತೆ ಆಗಬೋದಿತ್ತು" ಹಿಂಡು ಘೊಳ್ಳೆಂದಿತು. ಇಂಥ ಉಡಾಫೆ ಮಾತಾಡಲೇ ಕೆಲವು ಯುವಕರು ಕಾಲೇಜಿಗೆ ಬರುತ್ತಿದ್ದರು.

ಎಷ್ಟೇ ಕಡೆಗಾಣಿಸಿದರೂ ಆ ಮಾತುಗಳನ್ನು ಮರೆಯಲಾಗಲಿಲ್ಲ ನೀಲಿ ಮಾಗೆ. ಮಗುವಿನ ಕನಸ್ಸೊಡೆದ ಮೇಲೆ ಗಂಡಿನ ಬಗೆಗಿನ ಆಸಕ್ತಿಯೇ ಕಮರಿ ಹೋಗಿತ್ತು. ಆದರೆ ಪ್ರಸನ್ನ ಇನ್ನು ಯುವಕ. ಹೆಣ್ಣುಗಳನ್ನು ಸೆಳೆಯು ವಂಥ ರೂಪು, ದೇಹದಾರ್ಢ್ಯ—ತಲೆ ಕೆಟ್ಟಂತಾಗಿತ್ತು.

ಕಾರಿನಿಂದಿಳಿದು ತಾನೇ ಒಳಕ್ಕೆ ಬಂದಳು. ಷೂಗೆ ಲೇಸು ಬಿಗಿಯುತ್ತಿದ್ದ ಪ್ರಸನ್ನ ಯಾವುದೇ ಭಾವೋದ್ವೇಗಕ್ಕೆ ಒಳಗಾಗದಂತೆ ಕಿರುನಗು ಬೀರಿದ. "ಹಲೋ....ನೀಲಿಮಾ ಇವತ್ತೇನು ವಿಶೇಷ ?" ಈ ಅವಮಾನವನ್ನು ಸಹಿಸು ವುದು ಅವಳಿಗೆ ಕಷ್ಟವಾಯಿತು.

"ಅಂಥದೇನಿಲ್ಲ, ಮಳೆ ಇತ್ತಲ್ಲ....ನಿನ್ನ ಕರ್ಕೊಂಡ್ಹೋಗೋಣಾಂತ್ಬಂದೇ" ಕೋಪವನ್ನು ನುಂಗಿದಳು. ಇನ್ನೊಂದು ಕಾಲಿನ ಷೂ ಲೇಸನ್ನು ಬಿಗಿದು "ಆಟೋ....ಬಸ್ಸು....ಎಲ್ಲಾ ಇದೆ. ನೀನ್ಯಾಕೆ ತೊಂದರೆ ತಗೋತೀಯಾ ?" ಸರಳವಾಗಿ ಹೇಳಿದ.

ಅತ್ತಿತ್ತ ನೋಡಿ ಅಲ್ಲೇ ಇದ್ದ ಛೇರ್ ಮೇಲೆ ಕೂತಳು. "ಮನೆಗೆ ಬರಲೇ ಇಲ್ಲ" ಟೇಬಲ್ಲು ಮೇಲಿದ್ದ ಪುಸ್ತಕಗಳನ್ನು ಸರಿ ಮಾಡಿ ಅವಳತ್ತ ತಿರುಗಿದ. "ಫ್ರೀ....ಇಲ್ಲ, ಒಂದಿಷ್ಟು ಬೇರೆ ಕೆಲ್ಸಾನೂ ಹಚ್ಚಿಕೊಂಡಿದ್ದೀನಿ."

ಎದ್ದು ಬಂದ ನೀಲಿಮಾ ಅವನ ಗುಂಡಿಗಳನ್ನು ಒಮ್ಮೆ ಹಾಕಿ ತೆಗೆದು ಮತ್ತೆ ಹಾಕಿದಳು.

"ಅಲ್ಲಿಂದ ಊಟ ಕಳಿಸೋ ಏರ್ಪಾಟು ಮಾಡ್ತೀನಿ."

ಪಟೇಲ್‌ನ ಮಾತುಗಳು ನೆನಪಾಯಿತು. ಅವಕಾಶವನ್ನು ನಾಜೂಕಾಗಿ ಬಳಸಿಕೊಳ್ಳಬಲ್ಲಳು.

"ಎಕ್ಸ್‌ಕ್ಯೂಜ್ ಮಿ. ನಾನು ಈಗ ಒಳ್ಳೆ ಗುಡ್ ಕುಕ್. ಪಟೇಲ್ ವಾರಕ್ಕೆರಡು ಸಲ ಇಲ್ಲಿಗೆ ಊಟಕ್ಕೆ ಹಾಜರಾಗ್ತಾನೆ. ಫ್ರೀ ಇದ್ದಾಗ ...ಎಂದಾದ್ರೂ ಒಮ್ಮೆ ಊಟಕ್ಕೆ ಬಾ" ಅವಳ ಕೈಗಳನ್ನು ಮೆಲ್ಲಗೆ ಸರಿಸಿದ. ಬೆಂಕಿಯ ಉಂಡೆಗಳ ಸ್ಪರ್ಶದ ಅನುಭವ ಅವನಿಗೆ.

ಪಟ್ಟಾಗಿ ಮಂಚದ ಮೇಲೆ ಕೂತಳು ನೀಲಿಮಾ.

"ನಮ್ಮ ಬಗ್ಗೆ ಕಾಲೇಜಿನಲ್ಲಿ ಇಲ್ಲದ ಅಪಪ್ರಚಾರ" ಎಂದಾಗ ನೀಲಿಮಾ, ಆಶ್ಚರ್ಯದ ನೋಟ ಅವಳತ್ತ ಹರಿಸಿದ. "ಏನು ಅಪಪ್ರಚಾರ, ಅದ್ಕೆ ಬೆಲೆ ತಾನೆ ಯಾಕೆ ಕೊಡ್ಬೇಕು ? ನಾವೇನು ಸಮಾಜಕ್ಕೆ ಹೆದರೋ ಜನವಲ್ಲ." ಉದಾಸೀನವಾಗಿ ನುಡಿದು ಕನ್ನಡಿಯ ಮುಂದೆ ನಿಂತು ಕ್ರಾಪ್ ಸರಿ ಮಾಡಿಕೊಂಡ.

ನೀಲಿಮಾ ಮುಖ ಒಂದು ತರಹ ಆಯಿತು. "ಗೋ ಟು ಹೆಲ್. ಆದರೆ ಅಂಥದಕ್ಕೆ ಯಾಕೆ ಅವಕಾಶ ಮಾಡಿಕೊಡ್ಬೇಕು ? ಕಾಲೇಜಿಗೆ ನೀವು ನನ್ನ ಕಾರಿನಲ್ಲೇ ಬನ್ನಿ" ಆದೇಶಿಸಿದಂತಿತ್ತು.

ನೇರವಾಗಿ ಅವಳತ್ತ ನೋಡಿ ಮುಗುಳ್ನಕ್ಕ.

"ನೀಲಿಮಾ ಸುಮ್ನೆ ತಲೆ ಕೆಡಿಸ್ಕೋಬೇಡ. ಅಂದು ಕಿವುಡಾಗಿದ್ದವರು ಇಂದು ಬೇರೆಯವ್ರ ಮಾತುಗಳಿಗೆ ಹೆದರೋದ್ಬೇಡ. ಕೆಲವು ತೀರಾ ಪರ್ಸನಲ್. ಮನಸ್ಸು, ಹೃದಯಗಳ ಸಂಬಂಧವನ್ನು ಹೊರಗ್ಗಿನ ವಿಚಾರಗಳಿಗೆ ಗಂಟು ಹಾಕೋದ್ಬೇಡ. ಪ್ಲೀಸ್, ಯು ಕೇನ್ ಗೋ...." ಬಾಗಿಲತ್ತ ಬೆಟ್ಟು ತೋರಿಸಲಿಲ್ಲ.

"ನಿಮ್ಮ ಉದ್ದೇಶ ನಂಗೆ ಅರ್ಥವಾಗ್ಲಿಲ್ಲ" ಹ್ಞೂಂಕರಿಸಿದಳು. "ಅಂಥ ಘನವಾದ ಉದ್ದೇಶವೇನಿದೆ ? ಹೊಂದಿಕೆಯ ಬಾಳ್ವೆ ನಿನ್ನ ಕೈಯಲ್ಲಾಗೋಲ್ಲ. ನಿನ್ನ ಇಷ್ಟ ಪ್ರಕಾರದ ಸಾಮರಸ್ಯ ನನ್ನಿಂದಾಗೋಲ್ಲ. ದಾರಿಗಳು ಬೇರೆ ಬೇರೆಯಾಗಿಯೇ ಇದೆ."

"ಅಂದರೆ....ಡೈವೋರ್ಸ್...." ಭಯಗೊಂಡಳು.

"ನೀನು ಇಷ್ಟಪಟ್ಟರೆ ಮಾತ್ರ. ಮದ್ವೆ, ಡೈವೋರ್ಸ್‌ಗಳ್ನ ನನ್ನ

ಜೀವನದಿಂದ ದೂರ ಇಡಬೇಕೆಂದು ನಿಶ್ಚಯಿಸಿದ್ದೀನಿ. ನಿನ್ನ ಪ್ರಕಾರ ನೀನು ಹೆರೋ ಮಗುವಿಗೆ ತಂದೆಯಾಗಲಾಗಲಿಲ್ಲ. ಕಾನೂನಿನ ಪ್ರಕಾರ ನಿನ್ನ ಗಂಡನಾಗಿರುವುದಕ್ಕೆ ನನ್ನ ಅಭ್ಯಂತರವೇನಿಲ್ಲ. ಆಯ್ಕೋ....ನಿನ್ನದೇ" ದೃಢತೆ ಇತ್ತು ಪ್ರಸನ್ನನ ಸ್ವರದಲ್ಲಿ ಷರಟಿನ ಮೇಲೆ ಸ್ವೆಟರ್ ತೊಟ್ಟ.

ಅಡಿಗೆಯ ಮನೆಗೆ ಹೋಗಿ ಕಾಫಿ ಬೆರೆಸಿ ತಂದುಕೊಟ್ಟ ನೀಲಿಮಾಗೆ" ಅಂದು ನನ್ನ ಉತ್ಸಾಹಕ್ಕೆ, ಹೊಸ ಅರ್ಥಕ್ಕೆ ನಿನ್ನಲ್ಲಿ ಪರಿಹಾರ ಕಾಣೋ ಯತ್ನ ಮಾಡಿದ್ದು ತೀರಾ ಮೂರ್ಖತನ. ಪಟೇಲ್ ಹೇಳ್ದ ಪ್ರಕಾರ ಒಬ್ಬ ಸೈಕ್ರಿಯಾಟಿಸ್ಟ್‌ನ ಭೇಟಿಯಾಗ್ಬೇಕಿತ್ತು. ಬದ್ಕಿನಲ್ಲಿ ಮಾಡಿದ ದೊಡ್ಡ ತಪ್ಪು ನಿವೇದಿತಾ ಅಂಥ ಹೆಣ್ಣನ್ನು ಕಳೆದುಕೊಳ್ಳೋದು ತೀರಾ ದುರಾದೃಷ್ಟ" ಭಾರವಾದ ಉಸಿರೆಳೆದು ದಬ್ಬಿದ.

ಕೂತೇ ಇದ್ದಳು ನೀಲಿಮಾ. ಇನ್ನು ಮಾತುಗಳು ಬೇಡವೆನಿಸಿತು ಪ್ರಸನ್ನಗೆ ವರಾಂಡದಲ್ಲಿ ನಿಂತು ಸುರಿಯುವ ಮಳೆಯನ್ನು ನೋಡತೊಡಗಿದ.

ಬಂದ ನೀಲಿಮಾ ಅವನ ಎದುರು ನಿಂತಳು. "ಅಲ್ಲಿಂದ್ಲೇ ಕ್ಯಾರಿಯರ್ ಕಳ್ಸಿಕೊಡ್ತೀನಿ." ಅವಳತ್ತ ತಿರುಗದೆಯೇ ಹೇಳಿದ "ಬೇಡ ನೀಲಿಮಾ.... ನನ್ನ ಕೈ ಅಡ್ಗೆ ನಂಗೆ ಒಗ್ಗಿ ಹೋಗಿದೆ. ನೀನು ಆ ಪ್ರಯತ್ನ ಮೊದಲೇ ಮಾಡಿದ್ದರೇ....ಮನಸ್ಸು ಕಾಂಪ್ರಮೈಸ್ ಆಗಿ ಬಿಡ್ತಾ ಇತ್ತು. ಈಗ.... ಆಗೋಲ್ಲ." ಎದೆಯ ಮೇಲೆ ಕೈ ಕಟ್ಟಿ ಸುರಿಯುವ ಮಳೆಯನ್ನೆ ನೋಡ ತೊಡಗಿದ.

"ನೀನು ಕಾಲೇಜ್‌ಗೆ....ಬರೋಲ್ವಾ ?" ಉದ್ವಿಗ್ನಳಾದಳು.

ಅವಳತ್ತ ತಿರುಗಿದ "ಬಿ ಕಾಮ್, ಯಾಕೆ ಬರೋಲ್ಲಾ ? ಸ್ವಲ್ಪ ತಡ ವಾಗುತ್ತೆ, ನಿಂಗೆ ತೊಂದರೆ ಬೇಡ" ನವಿರಾಗಿಯೇ ನಿರಾಕರಿಸಿ ಬಿಟ್ಟ.

"ನನ್ನ, ನಿಮ್ಮ....ಭೇಟಿ...." ಸ್ವರ ಸತ್ತಂತಿತ್ತು.

"ಕಾಲೇಜಿನಲ್ಲಿ ಭೇಟಿ ಆಗ್ತೀವಿ. ಷಾಪಿಂಗ್‌ಸೆಂಟರ್, ಮಾರ್ಕೆಟಿಂಗ್ ಸೆಂಟರ್ ಎಲ್ಲಿ ಬೇಕಾದ್ರೂ ಭೇಟಿ ಆಗ್ಬಹುದು, ಕಾನೂನು ಪ್ರಕಾರ ನಾವಿಬ್ರೂ ಗಂಡ, ಹೆಂಡತಿ ತಾನೇ. ಇಷ್ಟವೆನಿಸಿದಾಗ ನೀನು ಬರ್ಬಹುದು. ನನಗೂ ಮನಸ್ಸಾದಾಗ ಬರ್ಬಹುದು. ಆದರೆ ಯಾವ ನಿರ್ಬಂಧನೆಗಳೂ ಇಲ್ಲ" ಅವನೆದೆಯ ಭಾವನೆಗಳು ಚೂರಾಗಿ ಅತ್ತ, ಬೇಸತ್ತ ನುಡಿಗಳಂತೆ ಕಂಡವು.

ಬಾಗಿಲಲ್ಲಿ ನುಗ್ಗಿದ ಅವಳನ್ನು ರೆಟ್ಟೆ ಹಿಡಿದು ನಿಲ್ಲಿಸಿದ. "ಮಳೆ ಬರ್ತಾ ಇದೆ" ಕೊಡೆ ಹಿಡಿದು ಬಂದು ಕಾರಿನ ಡೋರ್ ತೆಗೆದು ಹತ್ತಿಸಿದ. "ಬೈ.... ಸೀ ಯೂ...." ಡೋರ್ ಹಿಡಿಯ ಮೇಲಿದ್ದ ಕೈಯನ್ನು ಹಿಂದಕ್ಕೆ ತಗೊಂಡ. ರಸ್ತೆಯ ನೀರನ್ನು ಎರಚಾಡುತ್ತ ಬಿಳಿಯ ಫಿಯೆಟ್‌ನ ಚಕ್ರಗಳು ಮುಂದಕ್ಕೆ ನುಗ್ಗಿದವು.

ಕೊಡೆ ಮಡಚಿ ಬಾಗಿಲ ಬಳಿ ಇದ್ದ ಮೂಲೆಯಲ್ಲಿಟ್ಟು ಒಳಕ್ಕೆ ಹೋದ.

* * *

ಬೆಳಿಗ್ಗೆ ಬೆಳಿಗ್ಗೆ ಬಂದ ಪಟೇಲ್ ಪತ್ರಿಕೆಯನ್ನು ಅವನ ಮುಂದೆ ಹಾಕಿ ಪ್ರಸನ್ನನ ಗಮನ ಸೆಳೆದ. "ಇದ್ನ ಸ್ವಲ್ಪ....ಓದು" ಪಕ್ಕಕ್ಕೆ ಎತ್ತಿಟ್ಟ ಅವನು "ಸಂಜೆ....ಓದ್ತೀನಿ ಅಂಥ....ವಿಶೇಷವೇನು ?" ಮೇಲೆದ್ದವನನ್ನು ಕೈ ಹಿಡಿದು ಕೂಡಿಸಿದ.

"ನಿವೇದಿತಾ....ಲೇಖನ" ಎತ್ತಿ ಮತ್ತೆ ಅವನ ಮುಖದ ಮುಂದಿಡಿದ. ಒಮ್ಮೆ ಕಣ್ಣಾಡಿಸಿ ತೆಗೆದಿಟ್ಟ "ಬೇಡ ಪಟೇಲ್, ನನ್ನ ಪರಿಹಾಸ್ಯ ಮಾಡ್ಬೇಡ. ದೊಡ್ಡ ತಪ್ಪು ಮಾಡ್ದೆ" ಮೇಲೆದ್ದು ಹೋದ.

ನೀಲಿಮಾ, ಪ್ರಸನ್ನ ಮಧ್ಯೆ ಒಂದಾಗದಷ್ಟು ದೊಡ್ಡ ಬಿರುಕುವುಂಟಾಗಿದೆ ಯೆಂದು ಅವನಿಗೆ ಅರಿವಾಗಿತ್ತು. ಇವನು ಅಲ್ಲಿಗೆ ಹೋಗಿಲ್ಲ. ಅವಳು ಇಲ್ಲಿಗೆ ಬಂದಿಲ್ಲ. ಆಗಾಗ ಸಂಬಂಧಿಸುವುದು ಕಾಲೇಜಿನಲ್ಲಿ.

ಇಬ್ಬರು ಕೆಂಪು ಮಾರುತಿ ಹತ್ತಿ ಸಿಟಿ ಪಾರ್ಕಿನ ಬಳಿಯಲ್ಲಿ ಇಳಿದರು. ಅಲೋಕ್ ಓಡಿ ಬಂದ. ಚೈತ್ರ ಜೊತೆಗಿದ್ದ ನಿವೇದಿತಾ ಮೌನವಾಗಿ ಹುಲ್ಲಿನ ಮೇಲೆ ಕೂತಿದ್ದಳು.

ಚೈತ್ರ ಮೊಣಗೈಯಿಂದ ಅವಳನ್ನು ತಿವಿದಳು. "ಅಲೋಕ್....ಪಪ್ಪ ....ಬಂದಿದ್ದಾರೆ ನೋಡು" ಅವಳೇನು ಅಂಥ ಉತ್ತೇಜನಕಾರಿ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. "ಇರಲೀ....ಅಲ್ಲಿ ನೋಡು" ದೂರದಲ್ಲಿ ಕಿತ್ತಾಡುತ್ತಿದ್ದ ಅವಳಿ ಮಕ್ಕಳತ್ತ ಗಮನ ಸೆಳೆದಳು.

ಅವಳು ಇನ್ನಷ್ಟು ಹತ್ತಿರ ಸರಿದಳು.

"ಮತ್ತೆ....ಪ್ರಸನ್ನ, ನೀಲಿಮಾ ಬೇರೆ ಬೇರೆ ಇದ್ದಾರಂತಲ್ಲ."

"ಚೈತ್ರ, ನಿಂಗೆ ಮಾತಾಡೋಕೆ ವಿಷ್ಯವಿಲ್ಲವಾ ? ಅದು ನಮ್ಗೆ ಸಂಬಂಧಿಸಿದ್ದಲ್ಲ" ಕೊಸರಿಕೊಂಡಳು.

ವಿಷಯ ಅವಳ ಕಿವಿಗೆ ಬಿದ್ದಿದ್ದರೂ ನಿರ್ಲಿಪ್ತೆ. ಅದನ್ನು ತನ್ನ ಸ್ವಂತ ವಿಷಯವಾಗಿ ಭಾವಿಸಳು. ಅಷ್ಟರಲ್ಲಿ ಚೈತ್ರಳ ಪತಿ ಬಂದಿದ್ದರಿಂದ ಮೇಲೆದ್ದಳು.

"ಹೇಗೂ ನಿಮ್ಮವರು ಬಂದಿದ್ದಾರೆ. ಒಂದಿಷ್ಟು ಪರ್ಚೆಸಿಂಗ್ ಇದೆ. ಮುಗಿಸಿಕೊಂಡು....ಮನೆಗೆ ಹೋಗ್ತೀನಿ." ಚೈತ್ರ ಏನಾದರೂ ಹೇಳುವ ಮುನ್ನ ನಾಲ್ಕು ಹೆಜ್ಜೆ ಮುಂದಕ್ಕೆ ಹೋದಳು.

ಪಟೇಲ್, ಪ್ರಸನ್ನ ನಡುವೆ ಇದ್ದ ಅಲೋಕ್ ಓಡಿಬಂದ. 'ಪಪ್ಪ....ನ' ಜೊತೆ ಹೋಗಿ ಬಂದಾಗಲೇ 'ಅಮ್ಮ' ಮೌನವಾಗಿರುತ್ತಿದ್ದುದ್ದು ಅವನ ಎಳೆಯ ಮನಸ್ಸಿನವರೆಗೂ ಬಂದಿತ್ತು. ತಪ್ಪು ತಂದೆಯದೆಂದು ಬೆಟ್ಟು ಮಾಡಬಲ್ಲ.

"ಮಮ್ಮಿ....ನೀಲಿಮಾ ಆಂಟೀ ಮನೆಯಲ್ಲಿ ಪಪ್ಪ, ಈಗ ಇಲ್ಲ" ಬೂಟಿಗೆ ಸಿಕ್ಕ ಕಲ್ಲನ್ನು ದೂರಕ್ಕೆ ಒದ್ದ "ಪಪ್ಪನ ಮನೆ ಚೆನ್ನಾಗಿದೆ" ಅವಳು 'ಹ್ಞೂ' 'ಊಹ್ಞೂ' ಎರಡೂ ಹೇಳಲಿಲ್ಲ.

ಪ್ರಸನ್ನ ಕೊಟ್ಟ ಪೆಟ್ಟಿನ ನೋವಂತು ಅವಳಿಂದೂ ಮರೆಯಲು ಸಾಧ್ಯವಿಲ್ಲ. ಮರೆಯಕೂಡದು ಕೂಡ, ಯಾವ ಆತ್ಮಾಭಿಮಾನವುಳ್ಳ ಮಹಿಳೆ.

"ಮಮ್ಮಿ...." ಮತ್ತೆ ಏನೋ ಹೇಳಲು ಹೋದ.

"ಕೀಪ್ ಕ್ವಯಟ್, ದಾರಿಯಲ್ಲಿ ಹೆಚ್ಚು ಮಾತಾಡ್ಬಾರ್ದು" ಗದರಿಯೇ ಬಾಯಿ ಮುಚ್ಚಿಸಿದ್ದು.

ಸಿಡಿಯುವ ತಲೆಯನ್ನು ಹೊತ್ತು ನಡೆದಂತ್ತಿತ್ತು ಅವಳಿಗೆ. ಗೋದಾವರಿ ಒಂದು ಮಾತು ಹೇಳಿದರು.

"ಮೊನ್ನೆ ಪ್ರಸನ್ನ ಸಿಕ್ಕಿದ್ರು. ತುಂಬ ಬಡವಾಗಿದ್ದಾರೆ. ತಪ್ಪಿಗೆ ಪಶ್ಚಾತ್ತಾಪ ಪಟ್ಟಂಗೆ ಕಾಣ್ತಾರೆ".

"ಎಕ್ಸ್‌ಕ್ಯೂಜ್....ಮಿ, ಮೇಡಮ್" ಸರಿದು ಬಂದಿದ್ದಳು. ಚೈತ್ರ ಒಂದು ಸಂದರ್ಭದಲ್ಲಿ "ಪ್ರಸನ್ನ ದಿನಕೊಮ್ಮೆಯಾದ್ರೂ ಶಾಲೆಯ ಮುಂದೆ

ಹೋಗ್ತಾರೆ. ಎಡವಿದ್ರೂ ನಿನ್ನ ಮೇಲೆ ಪ್ರೀತಿ, ಪ್ರೇಮ ಸತ್ತು ಹೋಗಿರ ಲಾರ್ದು" ಎಂದಾಗ ದೃಷ್ಟಿ ಎತ್ತಲಾರದೆ ಬಂದಿದ್ದಳು.

ಏನು ಇವರೆಲ್ಲರುಗಳ ಉದ್ದೇಶ ? ಅವಳ ತಲೆ ಹೋಳಾಗುವಂತೆ ಸಿಡಿಯತೊಡಗಿತು.

ಮನೆಗೆ ಬಂದ ಕೂಡಲೇ ಎರಡು ನವಾಲಜಿನ್ ನುಂಗಿ ಹಾಸಿಗೆಯ ಮೇಲೆ ಉರುಳಿಕೊಂಡಳು.

"ಮಮ್ಮಿ...." ಅಲೋಕ್ ಬಂದು ಅವಳ ಬಳಿಯಲ್ಲಿ ಕೂತ

"ಹೋಗಿ ಓದ್ಕೋ....ಬೇಗ ಅನ್ನ ಮಾಡ್ತೀನಿ" ಎದ್ದು ಅಡಿಗೆಯ ಮನೆಗೆ ಹೋದಳು.

ಬಾಗಿಲು ಬಡಿದ ಸದ್ದು. ಹಿಂದೆಯೇ ಪಟೇಲ್‌ನ ದನಿ ಕೇಳಿಸಿತು. ಈಗ ಯಾರೊಂದಿಗೂ ಮಾತಾಡಲು ಅವಳಿಗೆ ಇಷ್ಟವಿಲ್ಲ.

"ನಿವೇದಿತಾ...." ಅಡಿಗೆಯ ಮನೆಯೊಳಕ್ಕೆ ಬಂದ. "ನೀವಿಲ್ಲದಿದ್ದರೆ ....ಅನ್ನ ಬೇಯೋಲ್ವಾ ?" ಹಾಸ್ಯ ಮಾಡಿದ. ಮುಗುಳ್ನಗಲು ಕೂಡ ಅವಳಿಂದಾಗಲಿಲ್ಲ.

"ಆಗುತ್ತೆ. ಅದ್ರೂ ಇಲ್ಲೇ ಇದ್ರೆ ಅನ್ಕೂಲವೆನಿಸಿತು. ಹೇಗಿದ್ದಾನೆ ....ಅಮೀರ್ ?" ಹೊರಗೆ ಬಂದಳು. ಪುಟಾಣಿ ಪಾತ್ರೆಯಲ್ಲಿ ಕುದಿಯುವ ಅನ್ನವನ್ನ ನೋಡಿದ. "ಛೆ...." ಮುಖ ಮೇಲೆತ್ತಿ ನಿಟ್ಟುಸಿರು ದಬ್ಬಿದ.

ಭಯ, ಆತಂಕದಿಂದ ಓಡಿ ಬಂದ ದಿನವನ್ನು ನೆನಪು ಮಾಡಿಕೊಂಡ. ಆ ಸ್ಥಿತಿಯಲ್ಲಿ ಸಮಸ್ತವು ಪ್ರಸನ್ನನ ಪ್ರೇಮವೇ ಆಗಿತ್ತು. ಅಂದು ಇಷ್ಟೆ ಅಕ್ಕಿ, ಇಷ್ಟೆ ಪುಟ್ಟ ಪಾತ್ರೆಯಲ್ಲಿ ಪುಟಾಣಿ ಎಲೆಕ್ಟ್ರಿಕ್ ಸ್ಟೋವ್ ಮೇಲೆ ತೊಳೆದಿಟ್ಟು ಇಬ್ಬರು ಅದನ್ನೆ ನೋಡುತ್ತ ಕೂಡುತ್ತಿದ್ದ ಸಮಯ ಇನ್ನು ಹಚ್ಚ ಹಸಿರು.

"ನಾಳೆ ಶಾಲೆಗೆ ರಜ ಅಲ್ವಾ, ನಿವೇದಿತಾ ? ಮಧ್ಯಾಹ್ನದ ಊಟಕ್ಕೆ ಅಲ್ಲಿಗೆ ಬರ್ಬೇಕು" ಎಂದು ಹೊರಬಂದ, ಅವನತ್ತ ನೇರವಾಗಿ ನೋಡಿದಳು.

"ಏನಾದ್ರೂ....ವಿಶೇಷನಾ ?" ಆ ಸೊಂಪಿನ ಮುಖವನ್ನೆ ಪಟೇಲ್

ಕಣ್ಣರಳಿಸಿ ನೋಡಿದ. ಈ ದಂತದ ಬೊಂಬೆ ಒಂಟಿಯಾಗಿ ಕರಗಿ ಹೋಗ ಬಾರದೆಂದುಕೊಂಡ.

"ಅಲ್ಲಿಗೆ....ಬಂದ್ಮೇಲೆ ಗೊತ್ತಾಗುತ್ತೆ. ಖಂಡಿತ ನೀವು, ಅಲೋಕ್ ರೆಡಿಯಾಗಿರಿ. ನಾನೇ ಬಂದು ಕರ್ಕೊಂಡ್ಹೋಗ್ತೀನಿ" ಎಂದ.

ಬೇಡವೆನಿಸಿತು ಅವಳ ಮನಸ್ಸಿಗೆ "ಸಾರಿ, ನಾಳೆ ಮಧ್ಯಾಹ್ನ ಚೈತ್ರ ಇಲ್ಲಿಗೆ ಬರ್ತಾಳೆ. ಇನ್ನೊಂದು ದಿನ ಬರ್ತೀನಿ. ನಿಮ್ಮ ಮನೆಗೆ ಬರೋಕೆ ನಂಗೆ ಆಹ್ವಾನವೇ ಬೇಕಿಲ್ಲ," ನಯವಾಗಿ ತಳ್ಳಿ ಹಾಕಲು ನೋಡಿದಳು.

ಪಟೇಲ್‌ದು ಒಂದೇ ಪಟ್ಟು. ಕಡೆಗೆ ಒಪ್ಪಿಸಿಯೇ ಹೋಗಿದ್ದ.

ಅಲೋಕ್‌ಗೆ ಊಟ ಹಾಕಿ ಮಲಗಿಸಿ ಒಂದು ಕಡೆ ಮೊಣಕಾಲಿನ ಮೇಲೆ ಗದ್ದವನ್ನೂರಿ ಕೂತು ಬಿಟ್ಟಳು. ಆಂದೋಳನ, ಆರ್ಭಟ ನಂತರ ಶಾಂತ ವಾಗಲು ಅವಳ ಮನಸ್ಸಿಗೆ ಬಹಳ ಹೊತ್ತೆ ಬೇಕಾಯಿತು.

ಪ್ರಸನ್ನ ಬೇರೆ ಮನೆ ಮಾಡಿದರೂ ನೀಲಿಮಾ ಜೊತೆಯಲ್ಲಿ ವಾಸಿಸು ತ್ತಿಲ್ಲವೆಂಬುದು ಅವಳಿಗೆ ಗೊತ್ತಿತ್ತು. ಈಗೀಗ ಅಲೋಕ್ ರೋಷ ಕಮ್ಮಿ ಯಾದವನಂತೆ ಆಗಾಗ ಹೋಗಿ ಬರುತ್ತಿದ್ದ.

ಫಿಯೆಟ್‌ನಲ್ಲಿ ನೀಲಿಮಾ ಒಂಟಿಯಾಗಿ ಓಡಾಡುವುದನ್ನು ನೋಡಿದ್ದಳು. ಅವಳೇನು ಅವರ ಮಧ್ಯದ ವಿವಾದ, ತಪ್ಪು, ಒಪ್ಪುಗಳನ್ನು ವಿಶ್ಲೇಷಿಸಲು ಹೋಗಳು. ಅವಳಿಗೆ ಸಂಬಂಧಪಟ್ಟದ್ದು ಅಲ್ಲ.

ಒಮ್ಮೆ ಶಾಲೆಯಿಂದ ಬರುವಾಗ ನೀಲಿಮಾ ಕಾರು ಅನಿರೀಕ್ಷಿತ ವಾಗಿ ಸಿಕ್ಕಿತ್ತು. ಆಕಸ್ಮಿಕವೆನಿಸುವಂತೆ ನಿಲ್ಲಿಸಿ ಇಳಿದು ಬಂದು ಮಾತಾಡಿ ಸಿದ್ದಳು.

"ನಿಮ್ಮ ಲೇಖನ ಓದ್ದೆ. ಸಮಸ್ಯೆಗಳನ್ನು ಬಹಳ ಜಾಣ್ಮೆಯಿಂದ ವಿಶ್ಲೇ ಷಿಸಿದ್ದೀರಾ. ಐಯಾಮ್ ಪ್ರೌಡ್ ಆಫ್ ಯು. ಲೇಡಿಸ್ ಕ್ಲಬ್‌ನಲ್ಲಿ ನಿಮ್ಮ ಭಾಷಣ ಇಡಿಸುವ ಮಾತು ನಡೀತಾ ಇದೆ."

ನಿವೇದಿತಾ ತಬ್ಬಿಬ್ಬಾದರೂ ಸುಧಾರಿಸಿಕೊಂಡಳು.

"ಎಕ್ಸ್‌ಕ್ಯೂಜ್ ಮಿ....ನಂಗೆ ಭಾಷಣ, ಘೋಷಣೆ, ಹೋರಾಟ ಇವೆಲ್ಲ ಒಂದೂ ಗೊತ್ತಿಲ್ಲ. ನನ್ನಿಂದ ಯಾವ್ದೇ ಹೆಣ್ಣಿಗೆ ಅನ್ಯಾಯವಾಗ್ದಂತೆ

ನಡೆದುಕೊಂಡರೆ....ಸಾಕು" ಅವಳು ಚುಚ್ಚಿ ನುಡಿಯದಿದ್ದರೂ ನೇರವಾಗಿ ನೀಲಿಮಾಗೆ ತಾಕಿತ್ತು. ವಿವರ್ಣವಾಯಿತು ಅವಳ ಮುಖ.

ತಕ್ಷಣ ತನ್ನ ತಪ್ಪಿನ ಅರಿವಾಯಿತು ನಿವೇದಿತಾಗೆ. "ಸಾರಿ ಮೇಡಮ್ ಬೇರೆ ಯಾರನ್ನು ಉದ್ದೇಶದಲ್ಲಿಟ್ಕೊಂಡ್ ಆಡಿದ್ದಲ್ಲ" ಕ್ಷಮೆ ಯಾಚಿಸಲು ಕೂಡ ಹಿಂಜರಿಯಲಿಲ್ಲ.

ನೀಲಿಮಾ ಸ್ನೇಹದಿಂದ ಅವಳ ಕೈ ತಟ್ಟಿ ಬಲವಂತದಿಂದ ಕಾರಿನಲ್ಲಿ ಕೂಡಿಸಿಕೊಂಡು ಬಂದು ಮನೆಯ ಮುಂದೆ ಇಳಿಸಿದಲ್ಲದೇ ಒಳಗೆ ಹತ್ತು ನಿಮಿಷ ಕೂತು ಕಾಫಿ ಕುಡಿದು ಹೋಗಿದ್ದಳು. ಆಗಿನ ಮಾತುಗಳು ಅವಳಿಗೆ ನೆನಪಾಯಿತು.

ಅವಳ ಮನಸ್ಸು ಒಂದು ದೃಢ ನಿಲುವಿಗೆ ಬದ್ಧವಾಗಿತ್ತು.

ಡೈವೋರ್ಸ್ ಪಡೆದ ನಂತರದ ದಿನಗಳಲ್ಲಿ ಬಾಯಿ ಬಡುಕಿ ಚೈತ್ರ ಅಂದು ಬಿಟ್ಟಿದ್ದಳು. "ಪಟೇಲ್‌ಗೆ ನಿನ್ನ ಬಗ್ಗೆ ತುಂಬ ಅಕ್ಕರೆ. ನೀನ್ಯಾಕೆ ಅವ್ರನ್ನ ಮದುವೆಯಾಗಿ ಬಿಡ್ಬಾರ್ದು."

"ಪ್ರೀತಿ, ಪ್ರೇಮ, ವೈವಾಹಿಕ ಸಂಬಂಧವನ್ನು ಅಷ್ಟು ಕೆಳಮಟ್ಟಕ್ಕೆ ಇಳಿಸ್ಲಾರೆ. ಪಟೇಲ್‌ನಲ್ಲಿ ಪತಿಯೆಂಬ ಭಾವ ಬಿಟ್ಟು ಎಲ್ಲ ಸಂಬಂಧಗಳನ್ನು ಕಾಣ್ತೀನಿ. ಆದರಿಸಿದಾಗ ತಾಯಿಯಂತೆ, ಹುಸಿ ಮುನಿಸು ತೋರಿಸಿದಾಗ ಒಡ ಹುಟ್ಟಿದವರಂತೆ, ಕೋಪಗೊಂಡಾಗ ತಂದೆಯಂತೆ, ಜೊತೆಯಲ್ಲಿ ನಡೆದಾಗ ಒಬ್ಬ ಒಳ್ಳೆಯ ಸ್ನೇಹಿತನಂತೆ. ಇಷ್ಟು ಎತ್ತರದಲ್ಲಿಟ್ಟು ನೋಡುವ ಪಟೇಲ್‌ನ....ಛೆ...." ಮುಖ ತಿರುಗಿಸಿದ್ದಳು.

ಸಂಘರ್ಷದ ನಡುವೆ ಬೆಳಕು ಹರಿದಾಗ ಇನ್ನಷ್ಟು ಆತ್ಮವಿಶ್ವಾಸದಿಂದ ಅವಳ ಮುಖ ಬೆಳಗುತ್ತಿತ್ತು.

ತಿಂಡಿ ಮಾಡಿ ಆಲೋಕ್‌ಗೆ ಡ್ರೆಸ್ ಮಾಡುವ ವೇಳೆಗೆ ಪಟೇಲ್‌ನ ಕಾರು ಬಂತು. ನೇರವಾಗಿ ಇಲ್ಲಿಗೆ ಬರದೇ ಮುಂದಿನ ಗೋದಾವರಿ ಮೇಡಮ್ ಮನೆಗೆ ಹೋದವನು ಹತ್ತು ನಿಮಿಷದ ನಂತರವೇ ಬಂದಿದ್ದು.

"ರೆಡಿನಾ...." ಉತ್ಸಾಹದಿಂದ ಒಳಗೆ ಬಂದ.

"ಮಧ್ಯಾಹ್ನ ಒಂದ್ಗಂಟೆಯ ಊಟಕ್ಕೆ ಈಗ್ಲೇ........ಬರ್ಬೇಕಾ ?

ಅಲೋಕ್‌ನ ಕರ್ಕೊಂಡ್ಹೋಗಿ ಪಟೇಲ್....ನಾನು ಒಂದಿಷ್ಟು ನಿಧಾನಿಸಿ ಬರ್ತೀನಿ" ಮುಂದಿದ್ದ ಪೇಪರನ್ನ ಪಕ್ಕಕ್ಕೆ ಸರಿಸಿದಳು.

"ಇಲ್ಲ, ಈಗ್ಲೇ....ಬರ್ಬೇಕು" ತೋಳಿಡಿದು ಎಬ್ಬಿಸಿದ. "ಬೇಗ ರೆಡಿ ಯಾಗ್ಬೇಕು...." ಅವಸರಿಸಿದ. "ರೆಡಿಯಾಗೋಕೇನಿದೆ, ಹೋಗೋಣ" ಪೇಪರನ್ನ ತೆಗೆದು ಟೇಬಲ್ಲು ಮೇಲಾಕಿದಳು.

ಪಟೇಲ್ ನೋಟ ಆಳವಾಯಿತು. ಸರಳವಾಗಿ ಹೊರಟರೂ ಅವಳ ರೂಪಿಗೇನು ಧಕ್ಕೆ ಇಲ್ಲ. ಅಂದು ಪ್ರಸನ್ನನ ಮುಂದೆ ಹಚ್ಚಿಟ್ಟು ವಿವರಿಸಿದಂತೆ 'ದೀಪ'ದಂತೆ ಕಂಡಳು.

ಮೂವರು ಹೊರಟಾಗ ಗೋದಾವರಿ ಬಂದು "ಆಲ್ ದಿ ಬೆಸ್ಟ್...." ಅಂದರು. ಅವಳಿಗೇನು ಅರ್ಥವಾಗಲಿಲ್ಲ.

ಮನೆ ತಲುಪಿದಾಗ ಅಮೀರ್ ಖುಷಿಯಿಂದ ಬಾಗಿಲಿಗೆ ಬಂದ. ಕ್ಯಾರೆಟ್ ಹಲ್ವಾ ಘಮಲು ಎಲ್ಲೆಡೆ ಸುತ್ತಿಕೊಂಡಿತ್ತು. ಪ್ರಶ್ನಾರ್ತಕವಾಗಿ ಪಟೇಲ್ ಕಡೆ ನೋಡಿದಳು.

"ನಿಮ್ಮ ಹುಟ್ಟಿದ ಹಬ್ಬನಾ ? ಮತ್ತೇನಾದ್ರೂ ಎಂಗೇಜ್‌ಮೆಂಟ್ ವಿಶೇಷಾನಾ ?" ಕೇಳಿದಾಗ ತಲೆಯಾಡಿಸಿದ.

"ಅವೆರಡು ಅಂಥ ವಿಶೇಷಗಳಲ್ಲ, ಅದಕ್ಕೂ ಮೀರಿದ್ದು...." ಕ್ರಾಪ್ ಹಾರಿಸಿ ನಗೆ ಬೀರಿದ.

ಮತ್ತೆ ಕೆದಕಲು ಅವಳು ಇಷ್ಟಪಡಲಿಲ್ಲ. ಬ್ಯಾಂಕ್ ಬಳಿ ಪ್ರಸನ್ನ ತನ ಗಾಗಿ ಕಾಯುವುದು, ಕಣ್ಣಲ್ಲಿ ಕಣ್ಣಿಟ್ಟು ನೋಡುವುದು. ಆಗಿನ ಹೊಳಪಿ ನಲ್ಲಿ ಒಂದು ರೀತಿಯ ಪ್ರಜ್ಞಲನೆ ಇತ್ತು. ಎದೆಯಲ್ಲಿ ಏಳುವ ಅನುರಾಗದ ತಂತಿಗಳನ್ನು ತುಂಡರಿಸುವಷ್ಟು ಸಮರ್ಥಳಾಗಿದ್ದಳು.

ಅಡಿಗೆ ತಯಾರಾಗುವ ವೇಳೆಗೆ ಪ್ರಸನ್ನ ಬಂದ.

"ಯಾಕೆ, ನೀಲಿಮಾ ಅವ್ರು ಬರ್ಲಿಲ್ವಾ ?" ಅವಳ ಮೊದಲ ಪ್ರಶ್ನೆ.

"ಅವ್ಳು ಫ್ರೀಯಾಗಿರಲಿಲ್ಲ" ಅವನ ಉತ್ತರಕ್ಕೆ ಸುಮ್ಮನಾದಳು.

ಊಟ, ನಗು, ಮಾತಿನೊಂದಿಗೆ ಸಾಗಿದಾಗ ಮಧ್ಯೆ ಎರಡು ಸಲ

ನೀಲಿಮಾ ಪ್ರಸ್ತಾಪವೆತ್ತಿದಳು. "ಅವ್ರು ಬಂದಿದ್ರೆ ಈ ಟೇಬಲ್‌ಗೆ ಮತ್ತಷ್ಟು ಕಳೆಯಾಗಿ ಇರ್‍ತಾ ಇತ್ತು" ಆಗ ಪ್ರಸನ್ನನ ನೋಟ ಕೆಳಗಾಯಿತು. ಮುಖದ ರಕ್ತವೆಲ್ಲ ಹೀರಿ ಹೋದಂತೆ ಬಿಳುಚಿಕೊಂಡ.

ಎಲ್ಲಾ ಮುಗಿದಾಗ ಪಟೇಲ್ ಅವಳ ಕೈ ಹಿಡಿದು ಕರೆತಂದು ತೋರಿಸಿದ "ಅಪ್ಪ, ಮಗ ಎಷ್ಟು ಸಂತೋಷವಾಗಿದ್ದಾರೆ ನೋಡಿ, ನಿವೇದಿತಾ. ನಿಮಗೆ ಇಷ್ಟವಾಗೋಲ್ಲವಾ ?" ಹೌದೆಂದು ಹ್ಞೂಗುಟ್ಟಿದಳು.

ಅಲೋಕ್, ಪ್ರಸನ್ನ ಕೇರಂ ಆಡುತ್ತಿದ್ದ ಸಮೀಪದಲ್ಲಿಯೇ ಪಟೇಲ್, ನಿವೇದಿತಾ ಕೂತರು.

"ನೋಡಿ, ಸೀತೆನ ರಾಮ ಪ್ರೀತಿಸುತ್ತಿದ್ದರೂ ಆರಾಧಿಸುತ್ತಿದ್ದರೂ ಯಾವುದೋ ಒಂದು ಕಾರಣಕ್ಕೆ ನಿಶ್ಚಿಂತೆಯಿಂದ ಕಾಡಿಗೆ ಕಳುಹಿಸಿ ಬಿಟ್ಟ. ಆಗ ಅವಳ ಕೋಮಲತ್ವ, ಒಂಟಿ ಹೆಣ್ಣು ಕಾಡಿನಲ್ಲಿ ಹೇಗೆ ಬದುಕಿಯಾಳೆಂಬುದನ್ನು ಕೂಡ ಯೋಚಿಸಿರಲಿಲ್ಲ. ಇದು ನಮ್ಮ ಎಪಿಕ್ ರಾಮಾಯಣದ ಉಲ್ಲೇಖ. ಇದು ತ್ರೇತಾಯುಗಕ್ಕೆ ಸಂಬಂಧಪಟ್ಟಿದ್ದು. ಮತ್ತೆ ವರ್ಷಗಳ ನಂತರ ರಾಮನನ್ನ ಸಂಧಿಸಿದರೂ ಅವನೊಬ್ಬ ಪುರುಷೋತ್ತಮ, ಅವನ ತಪ್ಪೇನಿಲ್ಲ ವೆಂಬುದನ್ನು ಅರಿತಿದ್ದರೂ ಭೂಗರ್ಭ ಸೇರಿ ಹೋದಳೇ....ಹೊರತು ಪುನ್ಹ ರಾಮನೊಂದಿಗೆ ಬದುಕಲು ಇಚ್ಛಿಸಲಿಲ್ಲ. ಸೀತೆ ಆತ್ಮಾಭಿಮಾನವುಳ್ಳ ಹೆಣ್ಣು. ಏಕಪತ್ನಿವ್ರತಸ್ಥನಾದ ರಾಮನೊಂದಿಗೆ ವೈವಾಹಿಕ ಜೀವನ ನಡೆಸಲು ಇಷ್ಟಪಡ ಲಿಲ್ಲ. ಅದೇ ಆತ್ಮಾಭಿಮಾನ ಈಗಿನ ಹೆಣ್ಣುಗಳಲ್ಲು ಕೂಡ ಇರುತ್ತೆ" ಅವಳ ದೀರ್ಘ ಪೀಠಿಕೆಗೆ ಬೆಚ್ಚಿದ ಪಟೇಲ್. ಪ್ರಸನ್ನನ ಕೈಯಲ್ಲಿನ ಸ್ಟ್ರೈಕರ್ ಸ್ಥಬ ವಾಯಿತು.

"ಅರ್ಥವಾಗಿರಬೇಕಲ್ಲ! ನಿವೇದಿತಾ ಕೂಡ ಆತ್ಮಾಭಿಮಾನವುಳ್ಳ ಹೆಣ್ಣು. ದಯವಿಟ್ಟು ನನಗೆ ಅವಮಾನ ಮಾಡ್ಬೇಡಿ" ಮೇಲೆದ್ದಳು.

ಪಟೇಲ್‌ಗೆ ಏನು ಹೇಳಲು ತೋಚಲಿಲ್ಲ.

"ಬರ್ತೀನಿ...." ಎಂದವಳು ಎರಡು ಕೈ ಜೋಡಿಸಿ "ಬರ್ತೀನಿ ಪ್ರಸನ್ನ ಅವರೇ, ನಮ್ಮ ಮನೆಗೆ ಊಟಕ್ಕೆ ಬರೋವಾಗ ಸತಿ ಸಮೇತ ಬರ್ಬೇಕು. ಖಂಡಿತ ಬರ್ತೀರಲ್ಲ...." ಎಂದವಳು ವರಾಂಡ ಮೂಲೆಯಲ್ಲಿದ್ದ ಚಪ್ಪಲಿ

ಮೆಟ್ಟಿ ಇವರುಗಳ ಸ್ವರ ಚೇತರಿಸಿಕೊಳ್ಳುವ ವೇಳೆಗೆ ಗೇಟು ದಾಟಿ ಬಿಟ್ಟಿದ್ದಳು.

ಆಲೋಕ್ ಷೂಗಳನ್ನು ಕೈಯಲ್ಲಿಡಿದು "ಮಮ್ಮಿ...." ಎಂದೇ ಓಡಿದ. ಅವರಿಬ್ಬರು ಕೂಡಿ ನಡೆಯುವುದನ್ನು ಪಟೇಲ್, ಪ್ರಸನ್ನ ನೋಡುತ್ತ ನಿಂತರು. ಭೂಗರ್ಭದಲ್ಲಿ ಸೇರಿಹೋದ ಸೀತೆಯು ನೆನಪಾಯಿತು ಅವರುಗಳಿಗೆ. ಬಣ್ಣಗಳ ಆಕರ್ಷಣೆಗೆ ಅವಳು ಸೋಲಲಾರಳು.

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು —— (ಸಾಮಾಜಿಕ, ಐತಿಹಾಸಿಕ ಪತ್ತೇದಾರಿ)
ಸಣ್ಣ ಕಥೆಗಳು
ಕವನ ಸಂಗ್ರಹಗಳು
ನಾಟಕಗಳು
ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು
ವಿಶ್ವವಿದ್ಯಾಲಯದ ಪ್ರಕಟಣೆಗಳು
ಸಂಗೀತ ಪುಸ್ತಕಗಳು
ಶಿಶು ಸಾಹಿತ್ಯ
ಪ್ರಬಂಧ ಹಾಗೂ ಪ್ರೌಢಗ್ರಂಥಗಳು
ಜ್ಯೋತಿಷ್ಯ ಶಾಸ್ತ್ರಗ್ರಂಥಗಳು
ವೈಜ್ಞಾನಿಕ ಪುಸ್ತಕಗಳು

*ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ*

*ಅಥವಾ*

*ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ*

**ಗೀತಾ ಏಜನ್ಸೀಸ್**
ಬಳೇಪೇಟೆ ಕ್ರಾಸ್ • ಬೆಂಗಳೂರು ೫೩